ಸಂವಾದ

ಫೆಬ್ರವರಿ ೨೦೦೮ ರೂ. ೨೦

ವೇದಿಕೆ, ದಳ, ಸೇನೆಗಳ

ರಾಜ್ಯಕ್ಕೆ ಹೀಗೆ ಬನ್ನಿ...

ಕನ್ನಡ ಮನಸ್ಸು
ಮತ್ತು
ಅನಂತಮೂರ್ತಿ

ಚಿದಾನಂದಮೂರ್ತಿ
ಪತನಗೊಂಡ
ಸಂಶೋಧಕ

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೪
ಫೆಬ್ರವರಿ ೨೦೦೮

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೪೮೦೨೭೮/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23480278, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ



❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಅಂತರಂಗ ೦೫
❑ ಮೋದಿ ಗೆಲುವು:
ಸೆಕ್ಯುಲರಿಸಂಗೆ ಸವಾಲು ೦೬
○ ನಾ. ದಿವಾಕರ
❑ ವೇದಿಕೆ, ದಳ, ಸೇನೆಗಳ
ರಾಜ್ಯಕ್ಕೆ ಹೀಗೆ ಬನ್ನಿ ೦೮
○ ಡಿ.ಎಸ್. ನಾಗಭೂಷಣ
❑ ಕನ್ನಡ ಮನಸ್ಸು ಮತ್ತು ಯು.ಆರ್.ಎ ೧೨
○ ಡಾ॥ ಬಿ.ಸಿ. ನಾಗೇಂದ್ರಕುಮಾರ್



❑ ಬೆನಝಿರ್ ಹತ್ಯೆ: ೧೪
○ ನಾಡಿ ಬಂಗಾರಪೇಟೆ
❑ ಶಿಕ್ಷಣ ಪ್ರಕ್ರಿಯೆಯಲ್ಲಿ ಕನ್ನಡ ಭಾಷೆ ೧೮
○ ಮೇಟಿ ಮಲ್ಲಿಕಾರ್ಜುನ
❑ ಶ್ರೀನಿವಾಸರಾಜು ಮೌನದ ಮೆರಗು ೨೨
○ ಎಂ.ಜಿ. ಚಂದ್ರಶೇಖರಯ್ಯ
❑ ಶ್ರೀನಿವಾಸಕುಮಾರ್
ಎಂಬ ಮೌನ ಮುನಿ ೨೪
○ ಅಪೂರ್ವ ಡಿ' ಸಿಲ್ವ
❑ ರಾಜಕಾರಣ ಚರ್ಚೆ ೨೬
○ ಡಾ॥ ನಾ. ಡಿಸೋಜ
○ ಎಲ್.ಎನ್ ಗೋಪಾಲಕೃಷ್ಣ
○ ದು. ಸರಸ್ವತಿ
○ ವಿ. ಚಂದ್ರಶೇಖರ ನಂಗಲಿ
❑ ದೇವರ ಹೂವು (ಕಥೆ) ೩೦
○ ಡಾ॥ ಬೆಸಗರಹಳ್ಳಿ ರಾಮಣ್ಣ
❑ ಮಾತಿನ ಹಂಗು ೩೪
○ ರಹಮತ್ ತರೀಕೆರೆ
❑ ದಲಿತ ಕ್ರೈಸ್ತ ಚಳವಳಿ ೩೮
○ ವೈ. ಮರಿಸ್ವಾಮಿ
❑ ಪರಿವರ್ತನೆಯ ಆಶಾಕಿರಣ ೪೦
○ ರಮೇಶ್ ಟ
❑ ಬರಗೂರರ ಶಬರಿ ಕಟ್ಟಿದ ಕನಸು ೪೨
○ ಡಾ॥ ಸಣ್ಣರಾಮ
❑ ದಲಿತ್ ಡೈರಿ ೪೬
○ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
❑ ಬುದ್ಧಾಯಣ ೫೦
○ ಸಿ.ಎಚ್ ರಾಜಶೇಖರ್
ಕವನಗಳು : ❑ ಕಾಲವಾದ ಕಾಲುಗಳು ೪೫





ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಮೌಲ್ಯಗಳೇ ಇಲ್ಲದ 'ಶಿಕ್ಷಣ' ಪಡೆದೊಡೇನು ಫಲವಯ್ಯ?

ಪ್ರೀತಿಯ ಸಂಪಾದಕರೇ,

ಒಂದು ದೇಶದ ಅಭಿವೃದ್ಧಿಗೆ ಅಲ್ಲಿನ 'ಶಿಕ್ಷಣ' ಬಹಳ ಮಹತ್ವದ್ದಾಗಿರುತ್ತದೆ. ಒಬ್ಬ ವ್ಯಕ್ತಿಯನ್ನು ವಿಚಾರವಂತನಾಗಿ ಸುಸಂಸ್ಕೃತನಾಗಿ ಮಾಡುವುದು ಮತ್ತು ಸಮಾಜದ ಕಲ್ಪನೆ ಸ್ವಾಲಂಬನೆಯನ್ನು ಬೆಳೆಸುವುದು- 'ಶಿಕ್ಷಣದ ಉದ್ದೇಶ'

ಇಂದಿನ ಶಿಕ್ಷಣದ ಸ್ಥಿತಿಯನ್ನು ನೋಡಿದರೆ ಮೌಲ್ಯವುಳ್ಳ ಶಿಕ್ಷಣ 'ಗೊತ್ತು ಗುರಿ ಯಾವುದೂ ಇಲ್ಲದೆ ಅದರ ಪಯಣ ಅಂಬಿಗನಿಲ್ಲದ ನೌಕೆಯಂತಾಗಿಬಿಟ್ಟಿದೆ. ಈ ಶಿಕ್ಷಣಕ್ಕೊಂದು ನಿರ್ದಿಷ್ಟ ಗುರಿಯೆ ಇಲ್ಲ.

ಯಾವ ಶಿಕ್ಷಣ ಒಬ್ಬ ವ್ಯಕ್ತಿಯನ್ನು ತನ್ನ ಕಾಲ ಮೇಲೆ ತಾನು ನಿಂತು ಅಭಿವೃದ್ಧಿಯಾಗಬೇಕಿತ್ತೊ ಅದೇ ಶಿಕ್ಷಣ ಆ ವ್ಯಕ್ತಿಯನ್ನು 'ಪರಾವಲಂಬನೆಗೆ ದಾರಿ ಮಾಡಿಕೊಡುತ್ತಿದೆ. ತನ್ನತನವನ್ನ ಮರೆಸುತ್ತಿದೆ. ಬಂಡವಾಳಶಾಹಿಗಳಿಗೆ ಬಂದು ದೊಡ್ಡ ಮಾರುಕಟ್ಟೆಯಾಗಿ ಬಿಟ್ಟಿದೆ. ಬಡವರು-ಬಡವರಾಗಿ ಶ್ರೀಮಂತ-ಶ್ರೀಮಂತನಾಗಿಯೇ-ಮುಂದುವರಿಯುತ್ತಿದ್ದಾನೆ. ಯಾವ ಶಿಕ್ಷಣ ವರ್ಗ-ಭೇದವನ್ನು ಮರೆಸುಬೇಕಿತ್ತೊ ಅದೆ ಶಿಕ್ಷಣ ಸಮಾಜದಲ್ಲಿ ವರ್ಗಭೇಧವನ್ನ ಸೃಷ್ಟಿಸಿ ಬಿಟ್ಟಿದೆ.

ಇಂದು ಜಾತಿ ವ್ಯವಸ್ಥೆ ಬಲವಾಗಲು-ಈ ಶಿಕ್ಷಣದ ಕೊಡುಗೆಯೇನು ಕಡಿಮೆಯಿಲ್ಲ-ಒಂದು ಸಮಾಜದಲ್ಲಿ ಆರೋಗ್ಯಕರ ವಾತಾವರಣ ಮೂಡಲು ಅಲ್ಲಿನ ಪ್ರಜ್ಞಾವಂತಿಕೆ ಕಾರಣ. ಆದರೆ ಪ್ರಜ್ಞಾವಂತಿಕೆ ಎಲ್ಲಿಂದ ಬರಬೇಕು. ಈ ಶಿಕ್ಷಣದಿಂದ ತಾನೆ? ಸಮಾಜದಲ್ಲಿ ಎಲ್ಲ ವರ್ಗದವರಿಗೂ ಈ ಶಿಕ್ಷಣ ಸಿಗುತ್ತಿಲ್ಲ. ಬಡವರ ಪಾಲಿಗೆ ಅದೊಂದು 'ಗಗನ ಕುಸುಮ'ವಾಗಿಬಿಟ್ಟಿದೆ. ನಮ್ಮ ಈ ಶಿಕ್ಷಣ ವ್ಯವಸ್ಥೆ ಉಳ್ಳವರ ಆಸ್ತಿಯಾಗಿದೆ. ನಮ್ಮ ಈ ಶಿಕ್ಷಣ ವ್ಯವಸ್ಥೆಯಿಂದಲೆ ನಾವಿಂದು ಬಡತನ ನಿರುದ್ಯೋಗದಂತಹ ಜಟಿಲ ಸಮಸ್ಯೆಗಳನ್ನು ಸೃಷ್ಟಿಸಿಕೊಂಡು ಪರಕೀಯರನ್ನ ಅವಲಂಬಿಸಬೇಕಾಗಿರುವುದು.

ಕೆಲವರು ಹೇಳುತ್ತಾರೆ. ಪುಸ್ತಕದ ಬದನೆಕಾಯಿ ಸಾಂಬಾರಿಗೆ ಬರುವುದಿಲ್ಲ.- ಹೌದು ಇದು ನಿಜ-ನಾವು ರಾಮಾಯಾಣ ಮಹಾಭಾರತ ಓದಿ. ಏನ್ರಿ ಪ್ರಯೋಜನ?

ಒಬ್ಬ ವಿದ್ಯಾರ್ಥಿ ಒಂದನೇ ತರಗತಿಯಿಂದ ಹತ್ತನೇ ತರಗತಿಗೆ ಬರುವ ಹೊತ್ತಿಗೆ ಅವನಲ್ಲಿ ತನ್ನತನ, ಸ್ವಸಾಮರ್ಥ್ಯ ಸ್ವಾವಲಂಬನೆ ಅಂದರೆ ತನ್ನ ದಾರಿಯನ್ನೆ ತಾನೇ ಸೃಷ್ಟಿಸಿಕೊಳ್ಳುವಂತಹ ಶಿಕ್ಷಣ ನಮ್ಮದಾಗಬೇಕು. ಅವನಿಗೆ ಸಮಾಜದಲ್ಲಿ ಗೌರವಯುತವಾಗಿ ಬಾಳುವಂತಹ- ಸ್ವಉದ್ಯೋಗ ಮಾಡವಂತಹ ವ್ಯವಹಾರಿಕ, ಔದ್ಯೋಗಿಕ ಶಿಕ್ಷಣವನ್ನು ಕೊಡಬೇಕು. ಬರೀ ಡಿಗ್ರಿ ಪಡೆದು, ಸರ್ಟಿಫಿಕೆಟ್‌ಗಳನ್ನ ಹಿಡಿದು, ಸರ್ಕಾರಿ ಸೌಕರ್ಯ ಬೇಕು ಎಂದು ಹಂಬಲಿಸುವ ಶೈಕ್ಷಣಿಕ ವ್ಯವಸ್ಥೆ ಬದಲಾಗಲೇಬೇಕಿದೆ.

ಅವರಲ್ಲಿರುವ ನೈಜ ಕೌಶಲತೆಗನು ಗುಣವಾಗಿ ಅವರಿಗೆ ವೃತ್ತಿ ತರಬೇತಿ ನೀಡಿದರೆ ಅವರು ಯಾರನ್ನು ಅವಲಂಬಿಸುವುದಿಲ್ಲ- ಒಂದು ಆರೋಗ್ಯಕರ ಸಮಾಜದ ಅಡಿಗಲ್ಲು ಆಗಬೇಕು.-ಸರ್ಕಾರದ ವತಿಯಿಂದ ಅವರಿಗೆ ಸೂಕ್ತ ಪ್ರೋತ್ಸಾಹ ನೀಡಬೇಕು.

'ನಮ್ಮೂರು ನನಗೆ ಸವಿಬೆಲ್ಲ' ಅನ್ನುವ ಹಾಗೆ, ಗೊತ್ತಿಲ್ಲದೆ ಇರುವ ತಾಂತ್ರಿಕತೆಗಳನ್ನು ಹೇಳಿಕೊಡುವುದರ ಬದಲು ಆಯಾ ಪ್ರದೇಶಗಳನ್ನ ನೈಪುಣ್ಯತೆಯನ್ನ ಬಳಸಿಕೊಂಡು ನಾವು ಯಾರಿಗೇನೂ ಕಡಿಮೆಯಲ್ಲ ಅನ್ನುವ ಬದುಕುವ ದಾರಿಯನ್ನ ನಮ್ಮ ಈ ಶಿಕ್ಷಣ ನೀಡುವಂತಾಗಬೇಕು.

ನಮ್ಮ ಸರ್ಕಾರದ ರೀತಿ ನೀತಿಗಳು ಹೆಂಗಪ್ಪ ಅಂದ್ರೆ ಪರಕೀಯರಿಗೆ ರತ್ನ ಗಂಬಳಿ ಹಾಸಿ ಇಲ್ಲಿನವರ ಬಾಳಿಗೆ ವಿಷದ ಮುಳ್ಳುಗಳಾಗಿ ಬಿಟ್ಟಿವೆ- ಉದಾಹರಣೆಗೆ- ಬೆಂಗಳೂರಿನಲ್ಲಿ 'ಮೆಟ್ರೊ' ಎನ್ನುವ 'ಫ್ರೆಂಚ್ ಕಂಪನಿಯೊಂದು ಬಂದು ಬೆಂಗಳೂರಿನಲ್ಲಿ 'ತನ್ನ ಮಾರಾಟ ಮಳಿಗೆಯನ್ನು ಆರಂಭಿಸಿಬಿಟ್ಟಿತು. ಇದರಿಂದ ಹಲವಾರು ಕುಟುಂಬಗಳು ತಮ್ಮ ಅಂಗಡಿ ಮುಗ್ಗಟ್ಟುಗಳನ್ನೆ ನಂಬಿ ಜೀವನ ಸಾಗಿಸುತ್ತಿದ್ದವರು ಹಲವಾರು ಜನ ಬೀದಿ ಪಾಲಾದರು - 'ಈ ಮೆಟ್ರೊ ಮಾರಾಟದ ಮಳಿಗೆ' ಅವಶ್ಯಕತೆ ಇಲ್ಲಿ ಬೇಕಾಗುತ್ತಾ?

ನಮ್ಮಲ್ಲಿ ನೈಜ ನೈಪುಣ್ಯ ಹೊಂದಿರುವವರು ಅಧಿಕ ಸಂಖ್ಯೆಯಲ್ಲಿದ್ದಾರೆ. ಆದರೆ ಅವರಿಗೆ ಬಂಡವಾಳದಾರರ ಪೈಪೋಟಿಗೆ ಸ್ಪರ್ಧೆ ನೀಡಲಾಗದೆ, ಸುಮ್ಮನೂ ಇರಲಾರದೆ ಬದುಕುವ ಭರವಸೆಯನ್ನೆ ಕಳೆದುಕೊಂಡಿದ್ದಾರೆ. ಅಂತಹವರಲ್ಲಿ ಬದುಕುವ ಧೈರ್ಯ ತುಂಬಿಸುವ ಕೆಲಸ ನಮ್ಮ ಈ ಶಿಕ್ಷಣದ್ದಾಗಬೇಕು.

ನಮ್ಮ ಶಿಕ್ಷಣ ಪಾಶ್ಚಾತ್ಯ ಮಾದರಿ ಶಿಕ್ಷಣವನ್ನು ಸಂಪೂರ್ಣವಾಗಿ ತ್ಯಜಿಸಿ ನಮ್ಮತನವನ್ನ, ಬದುಕುವ ಭರವಸೆ ಮೂಡಿಸುತ್ತ ಇನ್ನೊಬ್ಬರ ಅವಲಂಬನೆ ಬಿಟ್ಟು-ಸ್ವಾಲಂಬನೆಯತ್ತ ಜನತೆಯನ್ನ ತರಬೇಕಾಗಿದೆ. ಮತ್ತು ವಿಚಾರವಂತಿಕೆಯನ್ನ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಬೇಕಾಗಿದೆ. ಜಾತಿ, ಧರ್ಮ, ಮತಭೇದವನ್ನು ಭೋದಿಸುವ ಶಿಕ್ಷಣ ಸಮಾಜದಲ್ಲಿ ಯಾವುದೇ ಬದಲಾವಣೆ ತರಲು ಸಾಧ್ಯವಿಲ್ಲ. ಶಿಕ್ಷಣದಲ್ಲಿ ಈ ಬದಲಾವಣೆಯನ್ನ ತಂದದ್ದೇ ಆದರೆ ಈ ತಾರತಮ್ಯದಿಂದ ದೇಶ ಹೊರಬರಲು ಸಾಧ್ಯವಾಗುತ್ತದೆ. ಇದಕ್ಕೆ ಪ್ರಮುಖವಾಗಿ ಬೇಕಾಗಿರುವುದು ರಾಜಕೀಯ ಇಚ್ಛಾಸಕ್ತಿ ಮುಖ್ಯವಾಗುತ್ತದೆ ಯಲ್ಲವೇ?

ಸುರೇಶ್ ಎಂ. ಸಮತಳ
ಚಿಕ್ಕಮಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ

ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ

ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ

ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-

ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಪತ್ರಗಳು



ಭಯೋತ್ಪಾದನೆ: ಬೆಳಕು ಬೇಕು

ಮಾನ್ಯ ಸಂಪಾದಕರೇ,

'ಭಯೋತ್ಪಾದನೆ' ಕುರಿತಂತೆ 'ಸಂವಾದ'ದಲ್ಲಿ ನಡೆಯುತ್ತಿರುವ ಚರ್ಚೆ ಅತ್ಯಂತ ಗಂಭೀರವೂ ಸ್ವಾರಸ್ಯವೂ ಆಗಿದೆ. ಆದರೆ ನಿಮ್ಮ ಚರ್ಚೆಯಲ್ಲಿ ಭಾಗವಹಿಸಿದ್ದ ಬಹುತೇಕರು ಭಯೋತ್ಪಾದನೆಗೆ ಅಮೆರಿಕಾದಂತ ಬಂಡವಾಳಶಾಹಿ ರಾಷ್ಟ್ರಗಳು ಕಾರಣವೆಂದೇ ವಾದಿಸುತ್ತಿದ್ದಾರೆ. (ಡಾ॥ ವಸು, ಬಿಳಿಗೆರೆ ಮುಂತಾದವರನ್ನು ಬಿಟ್ಟು)

ಈ ಕುರಿತು ನಮ್ಮ ಗೆಳತಿಯರ ನಡುವೆ ದೊಡ್ಡ ಚರ್ಚೆಯೇ ನಡೆಯಿತು. ನಾವೂ ಪ್ರಗತಿಪರ ಚಳವಳಿಗಳಲ್ಲಿ ಭಾಗವಹಿಸಿದವರಾದ್ದರಿಂದ ನಮ್ಮ ಚಿಂತನೆಯೂ ಅದೇ ಆಗಿತ್ತು. ಆದರೆ ನನ್ನ ಗೆಳತಿ ಅನು, ಪಾಕಿಸ್ಥಾನ ಮತ್ತಿತರ ದೇಶಗಳಲ್ಲಿ ನಡೆಯುತ್ತಿರುವ ಭಯೋತ್ಪಾದನೆಗೆ ಯಾರು ಕಾರಣ? ಎಂದು ಪ್ರಶ್ನಿಸಿದಾಗ ನಮಗೆ ಉತ್ತರ ಹೊಳೆಯಲಿಲ್ಲ. ಜಾತ್ಯಾತೀತತೆ ಮತ್ತು ಪ್ರಗತಿಪರ ವಿಚಾರ ನಮ್ಮ ತಲೆಗೇರಿ ನಾವೂ ಪೂರ್ವಾಗ್ರಹ ಪೀಡಿತರಾಗಿ ಯೋಚಿಸುತ್ತಿರಬಹುದೇ ಎಂಬ ಅನುಮಾನ ಮೂಡಿತು. ಭಯೋತ್ಪಾದನೆ ಒಂದೇ ಜನಾಂಗದವರಿಂದ ಮತ್ತೆ ಮತ್ತೆ ನಡೆಯುತ್ತಿರುವುದನ್ನು ನಾವು ಪ್ರತಿ ದಿನ ಕಾಣುತ್ತಿದ್ದೇವೆ. ಹಾಗಾಗಿ ನಾವುಗಳು ಗೊಂದಲಗೊಂಡಿದ್ದೇವೆ. ದಯವಿಟ್ಟು ಈ ಕುರಿತು ಬೆಳಕು ಚೆಲ್ಲಬೇಕೆಂದು ವಿನಂತಿಸುತ್ತೇವೆ.

(ನಾವ್ಯಾರೂ ಮುಸ್ಲಿಂ ವಿರೋದಿಗಳಲ್ಲ)

ನೇತ್ರಾವತಿ ಆರ್.ವಿ,
ಚೈತ್ರ ಕೆ.ಆರ್.
ಬೆಂಗಳೂರು.

ಹೊಸ ಪುಸ್ತಕ

ಬಿಸ್ಲು ಬಾಳೇಹಣ್ಣು ಮತ್ತು ಇತರ ಪ್ರಬಂಧಗಳು
ಲೇ: ಕೃಷ್ಣಮೂರ್ತಿ ಬಿಳಿಗೆರೆ
ಬೆಲೆ: ರೂ. ೮೦/-

ಮಳೆ ನೀರಿನ ಕೊಯ್ಲು ಆಂದೋಲನ ಹಾಗೂ ಸಹಜ ಕೃಷಿ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಕೃಷ್ಣಮೂರ್ತಿ ಬಿಳಿಗೆರೆಯವರ ದೇಸಿ ಪ್ರಬಂಧಗಳ ಸಂಕಲನ ಇದು. ತನ್ನ ಶಿಕ್ಷಕ ವೃತ್ತಿ ಜತೆಗೆ ತತ್ವಪದ ನೀರಪದಗಳನ್ನು ಹಾಡುತ್ತ ಊರೂರನ್ನು ಅಲೆಯುವ ಬಿಳಿಗೆರೆಯವರ ಈ ಪ್ರಬಂಧಗಳಲ್ಲಿ ಅಪ್ಪಟ ಗ್ರಾಮೀಣ ಸೊಗಡು ತನ್ನ ಮೂಲ ರೂಪ-ಲಾವಣ್ಯದಲ್ಲೇ ಓದುಗರ ಮುಂದೆ ತೆರೆದುಕೊಳ್ಳುತ್ತದೆ. ಇಂದಿನ ಸಾಹಿತ್ಯ ಸಂದರ್ಭದ ಉತ್ತಮ ಕೃತಿ ಇದು.

ಪ್ರಕಾಶಕರು. ಕ್ರೈಸ್ತ ಕಾಲೇಜು ಕನ್ನಡ ಸಂಘ
ಹೊಸೂರು ರಸ್ತೆ, ಬೆಂಗಳೂರು

ನೀರಗಂಧ
ಲೇ: ಜಿ.ವಿ. ಆನಂದ ಮೂರ್ತಿ
ಬೆಲೆ: ರೂ. ೬೦/-

ಬರೆದದ್ದೆಲ್ಲ ಪ್ರಕಟವಾಗಬೇಕೆಂದು ಕೆ.ಜಿ. ಲೆಕ್ಕದಲ್ಲಿ ಪುಸ್ತಕ ಬರೆವವರೂ ಪ್ರಕಟಿಸುವವರೂ ಇರುವ ಈ ಹೊತ್ತಿನಲ್ಲಿ ತಮ್ಮ ಹದಿನೈದು ಇಪ್ಪತ್ತು ವರ್ಷಗಳ ದೀರ್ಘಕಾಲದ ಕವಿತೆಗಳನ್ನೆಲ್ಲ ಜರಡಿ ಹಿಡಿದು ಗಟ್ಟಿಯಾಗಿ ಉಳಿದವುಗಳನ್ನು ಮಾತ್ರ ಆಯ್ಕೆ ಮಾಡಿ ಪ್ರಕಟಿಸಿರುವ ಅಪರೂಪದ ಕವನ ಸಂಕಲನ ಇದು. ಆನಂದ ಮೂರ್ತಿ ಅವರ ಇಲ್ಲಿನ ಕವಿತೆಗಳು ಜೀವಪರ ಕಾಳಜಿಯಿಂದ ತುಡಿಯುತ್ತಿವೆ. ಕಾವ್ಯ ಕೇವಲ ಅವಾಸ್ತವ ಭಾವ ಸಂಬಂಧಗಳ ಅಕ್ಷರ ರೂಪ ಎನ್ನುವ ಮಿಥ್ಯೆಯನ್ನು ಕವಿ ಒಡೆದು ಹಾಕಿದ್ದಾರೆ.

ಪ್ರಕಾಶಕರು. ಬೋಧಿಶ್ರೀ ಪ್ರಕಾಶನ
ತುಮಕೂರು-೫೭೨೧೦೩



ಅಧ್ಯಾಪಿಕೆಯ ಅಧ್ವಾನಗಳು
ಲೇ: ಬಿ.ಎಂ. ರೋಹಿಣಿ
ಬೆಲೆ: ರೂ. ೩೦/-

ಶಿಕ್ಷಕಿಯೊಬ್ಬರ ವೃತ್ತಿ ಜೀವನದ ಅನುಭವಗಳು ಹಾಗೂ ಅವುಗಳನ್ನು ಎದುರಿಸಿದ ರೀತಿ ಇಲ್ಲಿನ ಬರಹದ ಪ್ರಮುಖ ಅಂಶ. ಲೇಖಕಿ ಒಬ್ಬ ಜವಾಬ್ದಾರಿಯುತ ಅಶಿಕ್ಷಕಿಯಾಗಿರುವುದು ಹಾಗೂ ಮಕ್ಕಳ ಮನಸ್ಸನ್ನು ಅರಿತು ತನ್ನಲ್ಲೇ ಬದಲಾವಣೆಗಳನ್ನು ತಂದುಕೊಳ್ಳುವುದು ಈ ಕೃತಿಯ ವಿಶೇಷ. 'ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿ ಗುರುತಿಸುವ ಶಕ್ತಿ ಶಿಕ್ಷಕರಿಗಿದ್ದರೆ ಯಾವ ವಿದ್ಯಾರ್ಥಿಯ ಬಾಳೂ ಬರಡಾಗದು' ಎಂಬ ಲೇಖಕಿಯ ಆಶಯ ಇತರೆ ಎಲ್ಲಾ ಶಿಕ್ಷಕರಿಗೆ ಆದರ್ಶವಾಗಬೇಕೆಂಬ ಸಂದೇಶ ಈ ಕೃತಿಯಲ್ಲಿದೆ. ಪ್ರತಿ ಶಿಕ್ಷಕರೂ ಓದಬೇಕಾದ ಕೃತಿ ಇದು.

ಪ್ರಕಾಶಕರು: ಶಿಕ್ಷರ ಸಂಗತಿ ಬಳಗ
ಸುಂದರಿ ಬಾಗ್, ಉಲ್ಲಾಳ
ಮಂಗಳೂರು-೫೭೫೦೨೦

ದುಬೈ ಎಂಬ ಮಾಯಾನಗರಿ
ಲೇ: ಸಂಗಮೇಶ ಕೋಟಿ
ಬೆಲೆ: ರೂ. ೬೦/-

ಸಾಹಿತ್ಯ ಸಂಘಟನೆ ಎರಡೂ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಸಂಗಮೇಶ್ ಮೂಲತಃ ಕವಿ. ಅವರ ಸೃಜನಶೀಲತೆ ಕುಡಿಯೊಡೆದು ಪ್ರವಾಸ ಕಥನಕ್ಕೆ ತಿರುಗಿದ್ದೇ 'ದುಬೈ ಎಂಬ ಮಾಯಾನಗರಿ'ಗೆ ಕಾರಣ. ವಿದೇಶ ಪ್ರವಾಸದ ಕಥನಗಳು ನಮ್ಮಲ್ಲಿ ಅಪರೂಪವೇನಲ್ಲ, ಬರವಣಿಗೆ ಬಲ್ಲ ಪ್ರತಿಯೊಬ್ಬರೂ ತಮ್ಮ ವಿದೇಶ ಪ್ರವಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಆದರೆ ದುಬೈ ಪ್ರವಾಸ ಕೃತಿ ತನ್ನ ವಿಶಿಷ್ಟ ಶೈಲಿಯಿಂದಾಗಿ ವಿಶೇಷದ್ದಾಗಿದೆ.

ಪ್ರಕಾಶಕರು: ಸಂಗಮ ಪ್ರಕಾಶನ, ನವನಗರ
ಹುನಗುಂದ-೫೮೭೧೧೮



ಸುವರ್ಣ ಕಾವ್ಯ
ಸಂ: ಎಸ್ಕೆ. ಕೊನೆ ಸಾಗರ
ಬೆಲೆ: ರೂ. ೪೫/-

ಬಾಗಲ ಕೋಟಿ ಜಿಲ್ಲೆಯ ಐವತ್ತು ಕವಿಗಳ ಐವತ್ತು ಕವನಗಳು ಈ ಸಂಕಲನದಲ್ಲಿವೆ. ಇವೆಲ್ಲ ಸುವರ್ಣ ರಾಜ್ಯೋತ್ಸವ ಕಾರ್ಯಕ್ರಮದ ನಿಮಿತ್ತ ಬರೆದ ಕವಿತೆಗಳಾದ್ದರಿಂದ ಬಹುತೇಕ ಕವನಗಳಿಗೆ ಮಿತಿಗಳಿವೆ. ಈ ಮಿತಿಗಳ ಹೊರತಾಗಿಯೂ ಕೆಲ ಸಾಲುಗಳು ಅದ್ಭುತ ಹೊಳಹನ್ನು ನೀಡುತ್ತವೆ. ಕೆಲ ಕವಿತೆಗಳಂತೂ ಆಯಾ ಸಂದರ್ಭಕ್ಕೆ ಬರೆದ ಪ್ರತಿಕ್ರಿಯೂ ರೂಪದವಾಗಿವೆ. ಅದೇನೇ ಇದ್ದರೂ, ಹಿಂದುಳಿದ ಜಿಲ್ಲೆವೊಂದರ ಈ ಪ್ರಯತ್ನ ಸ್ತುತ್ಯರ್ಹ.

ಪ್ರಕಾಶಕರು: ಸಾಹಿತ್ಯ ಸಮಾವೇಶ
ಹುನಗುಂದ-೫೮೭೧೧೮
ಬಾಗಲ ಕೋಟ್ಲೆ





ತುರ್ತು ಪರಿಸ್ಥಿತಿಯ ಕರಾಳ ಮುಖ
ಲೇ: ಪ್ರೊ॥ ಈಚರ ವಾರಿಯಾರ್
ಅನು: ಸಾರಾ ಅಬೂಬಕ್ಕರ್
ಬೆಲೆ: ರೂ. ೫೦/-

ಸುಮಾರು ೨೫ ವರ್ಷಗಳ ಹಿಂದೆ ರಾಷ್ಟ್ರದಲ್ಲಿ ವಿಧಿಸಲಾಗಿದ್ದ ಕರಾಳ ಶಾಸನ 'ತುರ್ತುಪರಿಸ್ಥಿತಿ' ಸಂದರ್ಭದಲ್ಲಿ ನಡೆದ ಪೊಲೀಸ್ ದೌರ್ಜನ್ಯ ಕುರಿತ ಕೃತಿ ಇದು. ಕೇರಳದ ಇಂಜಿನಿಯರಿಂಗ್ ವಿದ್ಯಾರ್ಥಿ ರಾಜನ್ ಎಂಬಾತ ಪೊಲೀಸ್ ದೌರ್ಜನ್ಯಕ್ಕೆ ಬಲಿಯಾದಾಗ ಆತನ ತಂದೆ ಈಚರ ವಾದಿಯರ್ ಸರ್ಕಾರದ ವಿರುದ್ಧ ನಿಂತು ಹೋರಾಡಿದ ಕಥೆ ಈ ಕಥನದಲ್ಲಿದೆ. ತುರ್ತು ಪರಿಸ್ಥಿತಿಯನ್ನು ಕಣ್ಣಾರೆ ಕಾಣದ ಹೊಸ ಪೀಳಿಗೆ ಇದನ್ನು ಓದಲೇಬೇಕು.

ಪ್ರಕಾಶಕರು: ಚಂದ್ರಗಿರಿ ಪ್ರಕಾಶನ, ಸೂಕ್ಷ್ಮ
ತರಂಗ ನಿಲಯ ರಸ್ತೆ, ಮಂಗಳೂರು

ಸಂಪಾದಕೀಯ

ನಿಮ್ಮ ಓಟು ಯಾರಿಗೆ...?

ಕರ್ನಾಟಕ ಮತ್ತೊಮ್ಮೆ ಚುನಾವಣೆಗೆ ಅಣಿಯಾಗುತ್ತಿದೆ. ಸರ್ಕಾರ ತನ್ನ ಪೂರ್ಣ ಅವಧಿಯನ್ನು ಪೂರೈಸದೆ ಕುಸಿದು ಬೀಳುತ್ತಿದ್ದಂತೆ ಚುನಾವಣೆಯ ಗುಮ್ಮ ಕಾಲಿಟ್ಟಿತು. ಯಾರಿಗೂ ಬೇಕಿಲ್ಲದಿದ್ದರೂ ಅನಿವಾರ್ಯ ಸೈತಾನನಂತೆ ಬಂದ ಚುನಾವಣೆ ಈಗ ಎಲ್ಲರನ್ನೂ ತುದಿಗಾಲ ಮೇಲೆ ನಿಲ್ಲಿಸಿದೆ. ಈಗಲೇ ಚುನಾವಣೆ ನಡೆದು ಬಿಟ್ಟರೆ ವಿಧಾನಸೌಧವೇ ತಮ್ಮದಾಗುತ್ತದೆಂದು ಬಿ.ಜೆ.ಪಿಗಳು ಬೀಗುತ್ತಿದ್ದರೆ, ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂದು ಜೆಡಿಎಸ್‌ನ ಅಪ್ಪ ಮಕ್ಕಳೂ ಮೈಕೊಡವಿಕೊಂಡು ಓಡಾಡುತ್ತಿದ್ದಾರೆ. ಈ ಇಬ್ಬರ ನಡುವೆ ಇದ್ದೂ ಇಲ್ಲದಂತಿರುವ ಕಾಂಗ್ರೆಸ್ ನಾಯಕರು ಆಗೊಮ್ಮೆ-ಈಗೊಮ್ಮೆ ಮುಖ ತೋರಿಸುತ್ತ ಜನರಲ್ಲಿ ಅಳಿದುಳಿದ ಉತ್ಸಾಹವನ್ನೂ ತಣ್ಣಗಾಗಿಸುತ್ತಿದ್ದಾರೆ.

೨೦೦೪ರ ಚುನಾವಣಾ ಫಲಿತಾಂಶ ಕರ್ನಾಟಕವನ್ನು ರಾಜಕೀಯ ಅತಂತ್ರ ಸ್ಥಿತಿಗೆ ತಳ್ಳಿದ್ದಂತೂ ನಿಜ. ಆದರೆ ಜನ ನೀಡಿದ ಎಡಬಿಡಂಗಿ ತೀರ್ಪಿನಿಂದಾಗಿ ನಮ್ಮ ರಾಜಕಾರಣಿಗಳು ಎಚ್ಚೆತ್ತುಕೊಳ್ಳಬೇಕಾಗಿತ್ತು. ಮೂರು ಪ್ರಮುಖ ಪಕ್ಷಗಳಲ್ಲಿ ಯಾವ ಪಕ್ಷವನ್ನೂ ಜನ ಮನಸಾರೆ ಬೆಂಬಲಿಸಿಲ್ಲವಾದ್ದರಿಂದ ಅತ್ಯಂತ ಜವಬ್ದಾರಿಯಿಂದ ಅವರು ನಡೆದುಕೊಳ್ಳಬೇಕಾಗಿತ್ತು. ಪ್ರತಿ ರಾಜಕೀಯ ನಡೆಯಲ್ಲಿ ಜನರ ಪ್ರೀತಿ-ವಿಶ್ವಾಸ ಗಳಿಸುವ ಜಾಣ್ಮೆ ತೋರಬೇಕಾಗಿತ್ತು. ಹೆಜ್ಜೆ ಹೆಜ್ಜೆಯಲ್ಲೂ ಜನಾಶಯಗಳನ್ನು ಬಿಂಬಿಸುವ ಪ್ರಯತ್ನ ಮಾಡಬೇಕಾಗಿತ್ತು.

ಆದರೆ ಆದದ್ದೇನು?

ಚುನಾವಣೆ ಮುಗಿದದ್ದೇ ಪರಸ್ಪರ ವೈರಿಗಳಾಗಿದ್ದವರು ದೋಸ್ತಿಗಳಾಗಿ ಸರ್ಕಾರ ರಚಿಸಲು ಮುಂದಾದರು. ಜಾತ್ಯಾತೀತ ಹೆಸರಿನ ಜೆಡಿಎಸ್ ಪಕ್ಷ ಬಿಜೆಪಿಯಂಥ ಕೋಮುವಾದಿಗಳೊಂದಿಗೆ ಸೇರಿ ಸರ್ಕಾರ ರಚಿಸಲೂ ಪ್ರಯತ್ನಿಸಿತು. ಆದರೆ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಫಲಿಸಿದ್ದರಿಂದ ಅದು ಯಶಸ್ವಿಯಾಗಲಿಲ್ಲ. ಕನಿಷ್ಟ ಜಾತ್ಯಾತೀತ ಮನೋಭಾವದಲ್ಲಾದರೂ ಒಂದೇ ವಿಚಾರಧಾರೆ ಹೊಂದಿದ್ದ ಎರಡು ಪಕ್ಷಗಳು ಒಂದಾಗಿ ಸರ್ಕಾರ ರಚಿಸಿದ್ದೇ ಆ ಸಂದರ್ಭದ ಸಾಧನೆಯಾಗಿತ್ತು. ಆದರೆ ಅದೂ ಬಹಳ ದಿನ ಉಳಿಯಲಿಲ್ಲ. ಕುಮಾರ ಸ್ವಾಮಿಯ ಅವಿವೇಕದಿಂದಾಗಿ ಇಪ್ಪತ್ತು ತಿಂಗಳು ತುಂಬುವಷ್ಟರಲ್ಲಿ ಅದಕ್ಕೊದಗಿದ ಗತಿ ಈಗ ಇತಿಹಾಸ!

ನಂತರದ ಇಪ್ಪತ್ತು ತಿಂಗಳು ಜೆಡಿಎಸ್, ಬಿಜೆಪಿ ಜತೆ ಸೇರಿ ಸರ್ಕಾರ ಮಾಡಿತು. ಕೆಲವೇ ದಿನಗಳಲ್ಲಿ ಇವರು ಸರ್ಕಾರ ರಚಿಸಿದ್ದೇ ಸುಲಿಗೆಗಾಗಿ ಎಂಬಂತಾಯಿತು. ಎಲ್ಲ ಇಲಾಖೆಗಳಲ್ಲಿ ಸುಲಿಗೆ-ಸ್ವಜನ ಪಕ್ಷಪಾತ ಅವ್ಯಾಹತವಾಗಿ ನಡೆಯಿತು. ಮುಖ್ಯಮಂತ್ರಿ ಕುಮಾರಸ್ವಾಮಿಯೇ ಆದರೂ ಅವರ ಇಡೀ ಕುಟುಂಬವೇ ದಂಧೆಗೆ ಇಳಿಯಿತು. ಬಹುಷಃ ಹಿಂದೆಂದೂ ಕಂಡಿರದಷ್ಟು ವ್ಯಾಪಕ ಭ್ರಷ್ಟಾಚಾರ ಕುಮಾರಸ್ವಾಮಿ ಅವಧಿಯಲ್ಲಿ ನಡೆಯಿತು. ಹೊಸದಾಗಿ ಮೊಟ್ಟಮೊದಲಿಗೆ ಅಧಿಕಾರ ಕಂಡ ಬಿಜೆಪಿ ನಾಯಕರಂತೂ ತಮ್ಮ ಹಲವು ದಶಕಗಳ ಹಸಿವನ್ನು ಒಮ್ಮೆಗೇ ತೀರಿಸಿಕೊಳ್ಳುವವರಂತೆ ಸುಲಿಗೆಗೆ ನಿಂತರು. ಇಡೀ ನಾಡಿಗೆ ನಾಡೇ ಈ ಎರಡು ಪಕ್ಷಗಳ ಹೀನಾಯ ನಡವಳಿಕೆ ಗಳಿಂದ ಬೇಸತ್ತು ಹೋದರು.

ಇಪ್ಪತ್ತು ತಿಂಗಳನಂತರ ಈ ಸರ್ಕಾರವೂ ಬಿದ್ದು ಹೋಯಿತು. ಈ ಸಂದರ್ಭದಲ್ಲಿ ನಡೆದ ವಿದ್ಯಮಾನಗಳಂತೂ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿನ ಕರಾಳ ಅದ್ಯಾಯಗಳು. ಸಾರ್ವಜನಿಕ ಜೀವನದಲ್ಲಿರಬೇಕಾದ ಕನಿಷ್ಟ ಘನತೆ ಗೌರವಗಳಾವುವೂ ಇಲ್ಲದವರಂತೆ ಎರಡೂ ಪಕ್ಷಗಳ ನಾಯಕರು ಕಚ್ಚಾಡಿಕೊಂಡರು. ನಾಡಿನ ಘನತೆಯನ್ನೇ ಬೀದಿಪಾಲು ಮಾಡಿದರು. ರಾಜಕಾರಣಿಗಳೆಂದರೆ ಅಯೋಗ್ಯರು ಮತ್ತು ಸಮಾಜ ದ್ರೋಹಿಗಳೆಂದು ಜನ ಬೀದಿಯಲ್ಲಿ ಹೀಯಾಳಿಸುವ ಸ್ಥಿತಿ ಉಂಟಾಯಿತು.

ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರ ದೋಸ್ತಿ ಮತ್ತು ಜಂಗೀ ಕುಸ್ತಿ ಎರಡೂ ಮುಗಿದ ನಂತರ ಈಗ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಾಗಿದೆ. ರಾಷ್ಟ್ರಪತಿ ಆಡಳಿತವೆಂದರೆ ಅದು 'ಬಿಳಿ ಕಾಲರಿನವರ ದರ್ಬಾರು' ಎಂದೇ ಅರ್ಥ. ಮೊದಲೇ ಜನಶತೃಗಳಾಗಿರುವ ಅಧಿಕಾರಿಗಳು ಈಗ ಎಲ್ಲವನ್ನೂ ನಿಭಾಯಿಸಬೇಕು. ಜನಪ್ರತಿನಿಧಿಗಳಿದ್ದಾಗಲೇ ಜನರ ಮಾತು ಕೇಳದ ಅಧಿಕಾರಿ ವರ್ಗ ಜನಪ್ರತಿನಿಧಿಗಳಿಲ್ಲದಿದ್ದಾಗ ಅವರ ನೋವಿಗೆ ಸ್ಪಂದಿಸುವರೇ? ಸಾಧ್ಯವೇ ಇಲ್ಲ. ಹೆಸರಿಗೆ ಮಾತ್ರ ಸರ್ಕಾರವಿರುವುದಾದರೂ ಯಾವುದೇ ರೀತಿಯ 'ಜನಪರ' ಕೆಲಸಗಳಿಗೂ ಅಲ್ಲಿ ಜಾಗವಿಲ್ಲ ಎಲ್ಲ 'ಟಿಪಿಕಲ್ ಬಿಳಿಕಾಲರ್' ದರ್ಬಾರು. ಜನರಾರೂ ಅಧಿಕಾರಿಗಳನ್ನು ಕಾಣಲು ಆಗುತ್ತಿಲ್ಲ. ಅವರ ಕೆಲಸಗಳನ್ನು ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಪರಿಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ.

ಇದಕ್ಕೆ ಈಗ ಚುನಾವಣೆಯೊಂದೇ ಪರಿಹಾರ!

ಚುನಾವಣೆ ಆದಷ್ಟೂ ಬೇಗ ನಡೆಯಬೇಕು. ಆದರೆ ಚುನಾವಣೆಗೆ ಬೇಕಾದ ಸಿದ್ಧತೆಗಳೇ ಇಲ್ಲ, ಕಳೆದ ಚುನಾವಣೆ ಯಲ್ಲಿದ್ದ ಮತದಾರನ ಹೆಸರು ಈಗ ನಾಪತ್ತೆ! ಚುನಾವಣಾ ಆಯುಕ್ತರೇ ಹೇಳುವಂತೆ ಸುಮಾರು ೩೬ ಲಕ್ಷ ನಕಲಿ ಮತದಾರರು ಪಟ್ಟಿಯಲ್ಲಿ ಸೇರಿದ್ದಾರೆ! ಅಂದರೆ ಈ ಕುಕೃತ್ಯ ಬಹಳ ವ್ಯವಸ್ಥಿತವಾಗಿ ಹಿಂದಿನ ಸರ್ಕಾರದಲ್ಲಿ ನಡೆದಿದೆ. ಇಂಥ ಘನಂದಾರಿ ಕೆಲಸ ಮಾಡುವಲ್ಲಿ ಬಿಜೆಪಿ ಅಪಾರ ಶ್ರಮ ವಹಿಸಿದೆ. ಒಂದು ಮಾಹಿತಿಯ ಪ್ರಕಾರ ಕಾಂಗ್ರೆಸ್‌ನ ಖಾಯಂ ಮತದಾರರೆಲ್ಲ ಪಟ್ಟಿಯಿಂದ ಕಾಣೆಯಾಗಿದ್ದು, ಆಜಾಗಕ್ಕೆ ಬಿಜೆಪಿಯ ನಕಲಿ ಮತದಾರರು ಬಂದು ಕೂತಿದ್ದಾರೆ. ಎಂಥ 'ಪವಾಡ' ನೋಡಿ! ಬಹುಷಃ ಇಂಥ ಪವಾಡ ಹಿಂದೆಂದೂ ರಾಜ್ಯದಲ್ಲಿ ನಡೆದಿರಲಿಲ್ಲ.

ಈಗ ಮತದಾರರ ಪಟ್ಟಿ ಪರಿಷ್ಕರಣೆ ಆಗುತ್ತಿದೆ. ಅದು ಆದ ಮೇಲೆ ಚುನಾವಣೆ. ಇಂದಲ್ಲ ನಾಳೆ ಚುನಾವಣೆ ನಡೆಯಲೇಬೇಕಾದ್ದರಿಂದ ಅದನ್ನು ಮುಂದೂಡಬಹುದೇ ಹೊರತು ನಿಲ್ಲಿಸಲಾಗುವುದಿಲ್ಲ. ಆದರೆ ಹೀಗೆ ನಡೆಯುವ ಚುನಾವಣೆಯಲ್ಲಿ ಮತದಾರ ಯಾರಿಗೆ ಮತ ನೀಡಬೇಕು? ಒಬ್ಬರು ಸಾಂಪ್ರದಾಯಿಕ ರಾಜಕಾರಣ ಮಾಡುವವರು. ಮತ್ತೊಬ್ಬರು ಜಾತಿ ಮತ್ತು ದಬ್ಬಾಳಿಕೆಯ ದರ್ಬಾರು ಮಾಡುವವರು. ಮಗದೊಬ್ಬರ ರಾಜಕೀಯಕ್ಕೆ ಜನಾಂಗ ದ್ವೇಷವೇ ಆಧಾರ. ಇಂಥ ಮೂರು ಅಪಾತ್ರರಲ್ಲಿ ಯಾರನ್ನು ತಮ್ಮ ಪ್ರತಿನಿಧಿಗಳಾಗಿ ಜನ ಆಯ್ಕೆ ಮಾಡಿಕೊಳ್ಳಬೇಕು?

ಜನಪರ ಆಶಯಗಳನ್ನು ಪ್ರತಿನಿಧಿಸುವ ಜನಪರ ಚಳವಳಿಗಳು ದಿಕ್ಕೆಟ್ಟವರಂತಾಗಿದ್ದಾರೆ. ಬಸವಳಿದು ಹೋಗಿದ್ದಾರೆ. ಯಾರಿಗೂ ಮತ್ತೊಬ್ಬರ ಮೇಲೆ ನಂಬಿಕೆ ಇಲ್ಲದಂತಾಗಿದೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಿ ಅಪಾತ್ರರನ್ನು ದೂರ ವಿಡುವ ಪ್ರಯತ್ನ ಮಾಡಲು ಸಾಧ್ಯವಾಗುತ್ತಿಲ್ಲ. ಇಂಥ ಹತಾಷ ಸ್ಥಿತಿ ನಮ್ಮ ಕಣ್ಣ ಮುಂದಿದೆ.

ಇಂಥ ಸ್ಥಿತಿಯಲ್ಲಿ ನೀವು ಯಾರಿಗೆ ಓಟು ಹಾಕುತ್ತೀರಿ?

○ ಇಂದೂಧರ ಹೊನ್ನಾಪುರ

ಮೋದಿ ಗೆಲುವು: ಸೆಕ್ಯುಲರಿಸಂಗೆ ಸವಾಲು

ಉದ್ಯೋಗವಿಲ್ಲದೆ ಪರಿತಪಿಸುತ್ತಿರುವ ಯುವಜನತೆ, ಕೃಷಿ ಬಿಕ್ಕಟ್ಟಿನಿಂದ ಕಂಗೆಟ್ಟು ಆತ್ಮಹತ್ಯೆಗೆ ಶರಣಾಗುತ್ತಿರುವ ಲಕ್ಷಾಂತರ ರೈತರು, ಜಾಗತೀಕರಣ ಪ್ರಕ್ರಿಯೆಯಿಂದ ಮತ್ತು ಕೃಷಿ ಗ್ರಾಮೀಣ ಕ್ಷೇತ್ರದ ಯಾಂತ್ರೀಕರಣದಿಂದ ಅಸಹಾಯಕತೆಯ ಕೂಪಕ್ಕೆ ತಳ್ಳಲ್ಪಡುತ್ತಿರುವ ಮಹಿಳೆಯರು, ಸೂಕ್ತ ರೀತಿಯ ಪ್ರಾಥಮಿಕ ಶಿಕ್ಷಣವಿಲ್ಲದೆ ಸಮಾಜ ಘಾತುಕ ಶಕ್ತಿಗಳಿಗೆ ಬಲಿಯಾಗುತ್ತಿರುವ ಗ್ರಾಮೀಣ-ನಗರ ಯುವಶಕ್ತಿ, ಗಗನ ಕುಸುಮವಾಗಿರುವ ಉನ್ನತ ಶಿಕ್ಷಣದಿಂದ ವಂಚಿತ ಸಮುದಾಯಗಳು, ಸಾಮಾಜಿಕ-ಆರ್ಥಿಕ ಶೋಷಣೆಗೆ ಒಳಗಾಗಿರುವ ದಲಿತ-ಆದಿವಾಸಿ ಸಮುದಾಯಗಳು, ಭಾರತೀಯ ಸಮುದಾಯದ ಬಹುಸಂಖ್ಯಾತರಾದ ಈ ಜನಸಮೂಹಗಳು ಈ ಬಂಡವಾಳಶಾಹಿ ಸಂವಾದದಿಂದ ಹೊರಗೇ ಉಳಿದಿರುವುದು ಭಾರತೀಯ ಸಮಾಜದ ದುರಂತವೆಂದೇ ಹೇಳಬಹುದು.

ನಾ ದಿವಾಕರ

ಗುಜರಾತ್‌ನ ವಿಧಾನಸಭಾ ಚುನಾವಣೆಗಳಲ್ಲಿ ಎಲ್ಲಾ ಚುನಾವಣಾ ಪೂರ್ವ ವಿಶ್ಲೇಷಣೆಗಳನ್ನೂ ಹುಸಿಗೊಳಿಸಿ ಭಾ.ಜ.ಪ ಗೆಲುವು ಸಾಧಿಸಿರುವುದು ಜಾತ್ಯತೀತ ಶಕ್ತಿಗಳ ಸೋಲು ಎಂದೇ ಹೇಳಬಹುದು. ನರೇಂದ್ರ ಮೋದಿಯವರ ಗೆಲುವು ಒಂದು ರೀತಿಯಲ್ಲಿ ಕೋಮುವಾದಿ ಫ್ಯಾಸಿಸಂನ ಹೊಸ ಸ್ವರೂಪದ ಗೆಲುವಾಗಿದೆ. ಕಾಂಗ್ರೆಸ್ ವಕ್ತಾರರು ಮತ್ತು ಚುನಾವಣಾ ವಿಶ್ಲೇಷಕರು ಗುಜರಾತ್‌ನ ಪರಿಣಾಮಗಳನ್ನು, ಮೋದಿಯವರ ವೈಯಕ್ತಿಕ ಗೆಲುವು ಭಾಜಪದ ಗೆಲುವಲ್ಲ ಎಂದು ಅರ್ಥೈಸುತ್ತಿರುವುದು ಮೋದಿಯವರನ್ನು ಭಾಜಪದ ಕೋಮುವಾದಿ ಫ್ಯಾಸಿಸಂನಿಂದ ಬೇರ್ಪಡಿಸುವ ಯತ್ನವಾಗಿದೆಯಷ್ಟೆ. ಇದು ಒಂದು ರೀತಿಯಲ್ಲಿ ಮೋದಿಯವರ ಬಲವರ್ಧನೆಗೆ ಮೂಲವಾಗುವ ಸಾಧ್ಯತೆಗಳಿವೆ. ಸಂಘಪರಿವಾರದ ಒಡನಾಟದಲ್ಲೇ ಬೆಳೆದು ಗುಜರಾತಿನ ಹಿಂದುತ್ವವಾದಿಗಳಿಗೆ ನಾಯಕತ್ವ ಒದಗಿಸಿರುವ ನರೇಂದ್ರ ಮೋದಿ ಭಾಜಪದ ಹೊಸ ಮುಖವಾಡ ಎಂದು ಅರ್ಥೈಸುವುದು ಸೂಕ್ತವೆನಿಸುತ್ತದೆ. ಪ್ರಸಕ್ತ ಗುಜರಾತಿನ ಚುನಾವಣಾ ಫಲಿತಾಂಶದ ಶ್ರೇಯಸ್ಸು ಭಾಜಪಕ್ಕೆ ಸಲ್ಲುವುದಿಲ್ಲವೆಂದಲ್ಲಿ, ೨೦೦೨ರ ನರಮೇಧದ ಕಳಂಕವೂ ಸಲ್ಲುವುದಿಲ್ಲ. ಕಾಂಗ್ರೆಸ್ ಪಕ್ಷವು ತನ್ನ ಹತಾಶೆಯನ್ನು ಮೀರಿ ವರ್ತಿಸಲು ವಿಫಲವಾಗಿರುವುದು ಈ ರೀತಿಯ ವಿಶ್ಲೇಷಣೆಗೆ ಕಾರಣವಾಗಿದೆ. ಕೆಲವು ಮಾಧ್ಯಮಗಳು ಸಹ ಭಾಜಪವನ್ನು ಕೋಮುವಾದಿ ರಾಜಕಾರಣದಿಂದ ಮುಕ್ತಗೊಳಿಸುವ ಹುನ್ನಾರ ನಡೆಸಿರುವುದು ಈ ವಿಶ್ಲೇಷಣೆಯಲ್ಲಿ ಸ್ಪಷ್ಟವಾಗಿದೆ.

ಗುಜರಾತಿನ ಚುನಾವಣೆಗಳಲ್ಲಿ ಮೋದಿಯವರು ಕೋಮುವಾದೀ ಕಾರ್ಯಸೂಚಿಯ ಪ್ರಸ್ತಾಪ ಮಾಡದೆಯೇ ತಮ್ಮ ಪ್ರಚಾರದಲ್ಲಿ ತೊಡಗಿದ್ದು ಒಂದು ರೀತಿಯ ರಣತಂತ್ರವಾಗಿತ್ತು. ಗೋಧ್ರಾ ಮತ್ತು ತದನಂತರದ ಘಟನೆಗಳನ್ನು, ಮುಸ್ಲಿಂ ಅಲ್ಪಸಂಖ್ಯಾತರ ಮಾರಣ ಹೋಮವನ್ನು ಒಂದು ಅಪಭ್ರಂಶದಂತೆ ಪರಿಗಣಿಸಿದ ಮೋದಿ, ತಮ್ಮ ಆಡಳಿತಾವಧಿಯಲ್ಲಿ ಕೈಗೊಂಡ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳನ್ನೇ ತಮ್ಮ ಸಾಧನೆಗಳಾಗಿ ಜನರ ಮುಂದಿಟ್ಟಿದ್ದು ಅವರ ಗೆಲುವಿಗೆ ಮುಖ್ಯ ಕಾರಣವಾಗಿದೆ. ಜರ್ಮನಿಯಲ್ಲಿ ಹಿಟ್ಲರ್ ಸಹ ತನ್ನ ಫ್ಯಾಸಿಸ್ಟ್ ರಾಜಕೀಯವನ್ನು ಅನಾವರಣಗೊಳಿಸುವ ಮುನ್ನ ಸಮಾಜವಾದದ ಬಗ್ಗೆ ಪ್ರಚಾರ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಮೋದಿಯವರ ಈ ತಂತ್ರವನ್ನು ಎದುರಿಸಲು ಕಾಂಗ್ರೆಸ್ ಪಕ್ಷಕ್ಕೆ ಧೃಡವಾದ ನಾಯಕತ್ವ ಮತ್ತು ಒಂದು ನಿರ್ದಿಷ್ಟ ಆರ್ಥಿಕ-ಸಾಮಾಜಿಕ ನಿಲುವಿನ ಅಗತ್ಯವಿತ್ತು. ಆದರೆ ಆರ್ಥಿಕ ನೀತಿಗಳ ಮಟ್ಟಿಗೆ ಮೋದಿಯವರ ನೀತಿಗಳು ಕೇಂದ್ರ ಸರ್ಕಾರಕ್ಕಿಂತ ಭಿನ್ನವಾಗಿರಲಿಲ್ಲ. ಜಾಗತೀಕರಣ ಪ್ರಕ್ರಿಯೆಗೆ, ವಿದೇಶಿ ಬಂಡವಾಳಕ್ಕೆ, ವಿಶೇಷ ಆರ್ಥಿಕ ವಲಯಗಳಿಗೆ, ಕಾರ್ಪೋರೇಟ್ ಉದ್ಯಮಿಗಳಿಗೆ ರತ್ನಗಂಬಳಿ ಹಾಸಿ ಸ್ವಾಗತ ನೀಡುವಲ್ಲಿ ಕಾಂಗ್ರೆಸ್-ಭಾಜಪಗಳ ನಡುವೆ, ಪೈಪೋಟಿ ಇರುವುದೇ ಹೊರತು ಭಿನ್ನಾಭಿಪ್ರಾಯಗಳಿಲ್ಲ. ಕೆಲವು ಸಂದರ್ಭಗಳಲ್ಲಿ ಎಡ ಪಕ್ಷಗಳೂ ಈ ಸ್ಪರ್ಧಾತ್ಮಕ ಜಾಗತೀಕರಣಕ್ಕೆ ಬಲಿಯಾಗಿರುವುದು ಭಾರತೀಯ ರಾಜಕಾರಣದ ದುರಂತ. ಜಾಗತೀಕರಣ ಪ್ರಕ್ರಿಯೆಯ ಪ್ರತಿಫಲಗಳನ್ನೇ ಅಭಿವೃದ್ಧಿಯ ಸಂಕೇತವೆಂದು ಬಿಂಬಿಸುವಲ್ಲಿ, ಉಳ್ಳವರ ಪರವಾದ ಪ್ರಗತಿಯನ್ನೇ ನಿಜವಾದ ಆರ್ಥಿಕ ಅಭಿವೃದ್ಧಿ ಎಂದು ಪ್ರಚಾರ ಮಾಡುವಲ್ಲಿ, ವಿದೇಶಿ ಬಂಡವಾಳ, ಶೇರು ಮಾರುಕಟ್ಟೆಯ ಸಂವೇದಿ ಸೂಚ್ಯಂಕ ಮತ್ತು ಜಿ.ಡಿ.ಪಿ ಅಭಿವೃದ್ಧಿಯೇ

ದೇಶದ ಮುನ್ನಡೆಯ ಸೂಚಕ ಎಂದು ಪ್ರತಿಪಾದಿಸುವಲ್ಲಿ ದೇಶದ ಪ್ರಮುಖ ಪಕ್ಷಗಳಲ್ಲಿ ಯಾವುದೇ ಭಿನ್ನಾಭಿಪ್ರಾಯ ಕಂಡುಬರುತ್ತಿಲ್ಲ. ಪ್ರಗತಿಯ ಪರಿಕಲ್ಪನೆಯೇ ಸಂಪೂರ್ಣ ಹೊಸ ಅವತಾರ ತಾಳುತ್ತಿರುವ ಈ ಸಂದರ್ಭದಲ್ಲಿ ಸಾಮಾನ್ಯ ಜನತೆಯೂ ಗೊಂದಲದ ಗೂಡಿನಲ್ಲಿ ಸಿಲುಕಿರುವುದು ಸ್ಪಷ್ಟವಾಗಿದೆ. ಅಮಾರ್ತ್ಯ ಸೇನ್‌ರವರಂತಹ ನೊಬೆಲ್ ಪ್ರಶಸ್ತಿ ವಿಜೇತ ಅರ್ಥ ಶಾಸ್ತ್ರಜ್ಞರೂ ಸಹ ಸಿಂಗೂರ್ ಮತ್ತು ನಂದಿಗ್ರಾಮಗಳ ಸಂದರ್ಭದಲ್ಲಿ, ವಿಶೇಷ ವಿತ್ತವಲಯಗಳನ್ನು ಸಮರ್ಥಿಸಿರುವುದು ಈ ಬೆಳವಣಿಗೆಗೆ ಸ್ಪಷ್ಟ ನಿದರ್ಶನವಾಗಿದೆ.

ಗುಜರಾತಿನ ಚುನಾವಣೆಗಳಲ್ಲಿ ದೇಶವನ್ನು ಕಾಡುತ್ತಿರುವ ಕೃಷಿ ಬಿಕ್ಕಟ್ಟು, ಆದಿವಾಸಿಗಳ ಬವಣೆ, ಕಾರ್ಮಿಕರ ದುಸ್ಥಿತಿ, ಮಹಿಳೆಯರ ಸಮಸ್ಯೆಗಳು, ಬೆಳೆಯುತ್ತಿರುವ ಜಾತಿ ವೈಷಮ್ಯ, ಧೃವೀಕರಣಗೊಳ್ಳುತ್ತಿರುವ ಜಾತಿ ರಾಜಕೀಯ, ಇವಾವುದೂ ಪ್ರಮುಖ ವಿಷಯಗಳಾಗಲೇ ಇಲ್ಲ. ಭಾ.ಜ.ಪ ಮತ್ತು ಸಂಘಪರಿವಾರಕ್ಕೆ ಪ್ರಿಯವಾದ ಭಯೋತ್ಪಾದನೆಯೂ ಪ್ರಮುಖವಾಗಲಿಲ್ಲ. ಮೋದಿಯವರನ್ನು ಸೋಲಿಸುವ ಏಕಮುಖ ಧ್ಯೇಯ ಹೊಂದಿದ್ದ ಕಾಂಗ್ರೆಸ್ ಪಕ್ಷಕ್ಕೆ ಕನಿಷ್ಟ ಈ ಸಮಸ್ಯೆಗಳನ್ನು ಜನರ ಮುಂದಿಡುವುದು ಅವಶ್ಯವಾಗಿತ್ತು. ನರ್ಮದಾ ಅಣೆಕಟ್ಟಿನ ಹೋರಾಟವನ್ನು ಹತ್ತಿಕ್ಕುವಾಗ ಕೈ ಮಿಲಾಯಿಸುವ ಪಕ್ಷಗಳಿಗೆ ಆದಿವಾಸಿಗಳ ಬಗ್ಗೆ, ಕೃಷಿ ಬಿಕ್ಕಟ್ಟಿನ ಬಗ್ಗೆ ಮಾತನಾಡುವ ನೈತಿಕ ಹಕ್ಕು ಇರುವುದೂ ಇಲ್ಲ ಅಲ್ಲವೇ? ಗುಜರಾತಿನ ಚುನಾವಣೆಗಳಲ್ಲಿ ನರೇಂದ್ರ ಮೋದಿಯವರ ಅಭಿವೃದ್ಧಿ ರಾಜಕಾರಣಕ್ಕೆ ಸ್ಪಷ್ಟ ನಿದರ್ಶನವಾಗಿದ್ದು ನರ್ಮದಾ ಅಣೆಕಟ್ಟು ಮತ್ತು ವಿದೇಶಿ ಬಂಡವಾಳ.

ಮೇಧಾ ಪಾಟ್ಕರ್‌ರವರ ಸಂಗಾತಿಗಳ ನಿರಂತರ ವೀರೋಚಿತ ಹೋರಾಟಗಳ ನಡುವೆಯೂ ಗುಜರಾತಿನ ಬಂಡವಾಳಶಾಹಿ ಪಕ್ಷಗಳು ನರ್ಮದಾ ಅಣೆಕಟ್ಟಿನ ಉಪಯುಕ್ತತೆಯನ್ನು(?) ಜನತೆಗೆ ಮನದಟ್ಟು ಮಾಡುವಲ್ಲಿ ರಾಜಕೀಯ ಪಕ್ಷಗಳು ಯಶಸ್ವಿಯಾಗಿರುವುದು ಸ್ಪಷ್ಟವಾಗಿದೆ. ಇಲ್ಲಿ ಮೇಧಾ ಪಾಟ್ಕರ್‌ರವರ ಹೋರಾಟದ ಮಾರ್ಗ ಪ್ರಶ್ನಾರ್ಹವಾಗುತ್ತದೆ. ನರ್ಮದಾ ಕಣಿವೆಯ ನಿರಾಶ್ರಿತ, ಅಸಹಾಯಕ ಜನತೆಯ ಆಕ್ರಂದನಕ್ಕೆ ರಾಜಕೀಯ ಲೇಪನ ನೀಡುವಲ್ಲಿ ಚಳುವಳಿ ವಿಫಲವಾಗಿರುವುದು ಸ್ಪಷ್ಟವಾಗುತ್ತದೆ. ಇನ್ನೊಂದೆಡೆ ಜನಪರ ಚಳವಳಿಗಳ ಮುಂಚೂಣಿಯಲ್ಲಿರಬೇಕಾದ ಎಡ ಪಕ್ಷಗಳು ಪಶ್ಚಿಮ ಬಂಗಾಳದಲ್ಲಿ ಅನುಸರಿಸುತ್ತಿರುವ ಆರ್ಥಿಕ ನೀತಿ ಮತ್ತು ನಂದಿಗ್ರಾಮದ ಸಂದರ್ಭದಲ್ಲಿ ಮೇಧಾ ಪಾಟ್ಕರ್‌ರವರನ್ನು ನಿಂದಿಸಿದ ರೀತಿ, ಸಾಮಾನ್ಯ ಜನರ ಮೇಲೆ ನೇರ ಪರಿಣಾಮ ಬೀರಿರುವ ಸಾಧ್ಯತೆಗಳಿವೆ. ಬಂಡವಾಳಶಾಹಿಗಳು ಪ್ರತಿಪಾದಿಸುತ್ತಿರುವ ಪ್ರಗತಿಯ ಮಾರ್ಗಕ್ಕೆ ಪರ್ಯಾಯವಾದ ಮಾರ್ಗವನ್ನು ಸೂಚಿಸುವುದರಲ್ಲಿ ಪುರೋಗಾಮಿ ಪಕ್ಷಗಳು, ಎಡಪಂಥೀಯ ಪಕ್ಷಗಳು ವಿಫಲಗೊಂಡಿರುವುದು ಗುಜರಾತಿನ ಚುನಾವಣೆಗಳಲ್ಲಿ ವ್ಯಕ್ತವಾಗಿದೆ.

ವಿಪರ್ಯಾಸವೆಂದರೆ ಈ ಎಲ್ಲಾ ವಿಷಯಗಳಲ್ಲೂ ಭಾಜಪದೊಂದಿಗೆ ಸಾಮ್ಯತೆಯನ್ನೇ ಹೊಂದಿರುವ ಕಾಂಗ್ರೆಸ್ ಮತ್ತಿತರ ಪಕ್ಷಗಳಿಗೆ ಗೋದ್ರಾ ಮತ್ತು ಸೊಹ್ರಾಬುದ್ದೀನನ್ನು ದಾಟಿ ಆಲೋಚನೆ ಮಾಡುವ ನೈತಿಕತೆ ಉಳಿದಿರಲಿಲ್ಲ. ಗುಜರಾತಿನ ಅಲ್ಪಸಂಖ್ಯಾತರಿಗೆ, ಆದಿವಾಸಿಗಳಿಗೆ, ದಲಿತ ಸಮುದಾಯಗಳಿಗೆ ಒಂದು ಪರ್ಯಾಯ ಸರ್ಕಾರದ ಅವಶ್ಯಕತೆ ಇದ್ದಲ್ಲಿ, ಅದರೊಂದಿಗೆ ಪರ್ಯಾಯ

ರಾಜ್ಯದಲ್ಲಿ ವಿದೇಶಿ ಬಂಡವಾಳ ಯಾವ ಪ್ರಮಾಣದಲ್ಲಿ ಹರಿದುಬರುತ್ತದೆ, ಎಷ್ಟು ಚತುಷ್ಪಥ-ಷಟ್ಪಥ ರಸ್ತೆಗಳಾಗಿವೆ, ಎಷ್ಟು ನಗರ-ಪಟ್ಟಣಗಳಲ್ಲಿ ಫ್ಲೈಓವರ್‌ಗಳ ನಿರ್ಮಾಣವಾಗಿವೆ, ಗಗನ ಚುಂಬಿ ಕಟ್ಟಡಗಳ ಸಂಖ್ಯೆ ಎಷ್ಟಿವೆ, ಎಷ್ಟು ಕಾರುಗಳು ಮಾರಾಟವಾಗಿವೆ, ಇವೆಲ್ಲವೂ ರಾಜ್ಯಗಳ-ದೇಶದ ಪ್ರಗತಿಯನ್ನು ಅಳೆಯುವ ಮಾಪಕಗಳಾಗಿವೆ. ಬೆಂಗಳೂರು, ಹೈದರಾಬಾದ್, ಮುಂಬೈ, ಅಹಮದಾಬಾದ್‌ಗಳನ್ನು ಸಿಂಗಪೂರ್ ಮಾಡುವ ಮುಖ್ಯಮಂತ್ರಿ ಮಾಧ್ಯಮಗಳ ಕಣ್ಮಣಿಯಾಗಿಬಿಡುತ್ತಾರೆ. ಹಾಗಾಗಿಯೇ ರಾಜೀವ್‌ಗಾಂಧಿ ಪ್ರತಿಷ್ಠಾನವೂ ಸಹ ಮೋದಿಯವರ ಸಾಧನೆ(?)ಯನ್ನು ಮುಕ್ತ ಕಂಠದಿಂದ ಪ್ರಶಂಸಿಸುತ್ತದೆ. ಮೋದಿ ಬಂಡ ವಾಳಶಾಹಿ ಅಭಿವೃದ್ಧಿಯ ಹರಿಕಾರರಾಗುತ್ತಾರೆ.

ನೀತಿಗಳ ಅವಶ್ಯಕತೆಯೂ ಇರುತ್ತದೆ ಎಂಬ ಅಂಶವನ್ನು ಕಾಂಗ್ರೆಸ್ ಪಕ್ಷ ಪರಿಗಣಿಸಬೇಕಿತ್ತು. ೨೦೦೨ರ ನರಮೇಧವನ್ನೇ ೨೦೦೭ರ ಚುನಾವಣಾ ಪ್ರಣಾಳಿಕೆಯಾಗಿ ಪರಿಗಣಿಸಿದ್ದು ಕಾಂಗ್ರೆಸ್ ಪಕ್ಷದ ಸೋಲಿಗೆ ಪ್ರಮುಖ ಕಾರಣವಾಗಿದೆ. ಜಾಗತೀಕರಣ ಪ್ರಕ್ರಿಯೆಯನ್ನು ನಿಷ್ಠೆಯಿಂದ ಅನುಸರಿಸುತ್ತಿರುವ ಎಲ್ಲಾ ರಾಜ್ಯಗಳೂ ಮಾಧ್ಯಮಗಳಿಗೆ ಡಾರ್ಲಿಂಗ್‌ಗಳಂತೆ. ಆ ರಾಜ್ಯಗಳ ಸಾಧನೆ(?)ಗಳನ್ನು ವೈಭವೀಕರಿಸಲು ಕಾರ್ಪೋರೇಟ್‌ಗಳ ಹಿಡಿತದಲ್ಲಿರುವ ದೃಶ್ಯ ಮಾಧ್ಯಮಗಳು ಸಾಲುಗಟ್ಟಿ ನಿಂತಿರುತ್ತವೆ. ಒಂದು ಕಾಲದಲ್ಲಿ ಆಂಧ್ರದ ಚಂದ್ರಬಾಬು ನಾಯ್ಡು, ಕರ್ನಾಟಕದ ಎಸ್.ಎಂ. ಕೃಷ್ಣ ಇದ್ದರೆ, ಪ್ರಸ್ತುತ ಸಂದರ್ಭದಲ್ಲಿ ನರೇಂದ್ರ ಮೋದಿ ಆ ಸ್ಥಾನವನ್ನು ಆಕ್ರಮಿಸಿದ್ದಾರೆ.

ರಾಜ್ಯದಲ್ಲಿ ವಿದೇಶಿ ಬಂಡವಾಳ ಯಾವ ಪ್ರಮಾಣದಲ್ಲಿ ಹರಿದುಬರುತ್ತದೆ, ಎಷ್ಟು ಚತುಷ್ಪಥ-ಷಟ್ಪಥ ರಸ್ತೆಗಳಾಗಿವೆ, ಎಷ್ಟು ನಗರ-ಪಟ್ಟಣಗಳಲ್ಲಿ ಫ್ಲೈಓವರ್‌ಗಳ ನಿರ್ಮಾಣವಾಗಿವೆ, ಗಗನ ಚುಂಬಿ ಕಟ್ಟಡಗಳ ಸಂಖ್ಯೆ ಎಷ್ಟಿವೆ, ಎಷ್ಟು ಕಾರುಗಳು ಮಾರಾಟವಾಗಿವೆ, ಇವೆಲ್ಲವೂ ರಾಜ್ಯಗಳ-ದೇಶದ ಪ್ರಗತಿಯನ್ನು ಅಳೆಯುವ ಮಾಪಕಗಳಾಗಿವೆ. ಬೆಂಗಳೂರು, ಹೈದರಾಬಾದ್, ಮುಂಬೈ, ಅಹಮದಾಬಾದ್‌ಗಳನ್ನು ಸಿಂಗಪೂರ್ ಮಾಡುವ ಮುಖ್ಯ ಮಂತ್ರಿ ಮಾಧ್ಯಮಗಳ ಕಣ್ಮಣಿಯಾಗಿಬಿಡುತ್ತಾರೆ. ಹಾಗಾಗಿಯೇ ರಾಜೀವ್‌ಗಾಂಧಿ ಪ್ರತಿಷ್ಠಾನವೂ ಸಹ ಮೋದಿಯವರ ಸಾಧನೆ(?)ಯನ್ನು ಮುಕ್ತ ಕಂಠದಿಂದ ಪ್ರಶಂಸಿಸುತ್ತದೆ. ಮೋದಿ ಬಂಡವಾಳಶಾಹಿ ಅಭಿವೃದ್ಧಿಯ ಹರಿಕಾರರಾಗುತ್ತಾರೆ.

ನರ್ಮದಾ ಕಣಿವೆಯಿಂದ ನಿರಾಶ್ರಿತರಾಗಿರುವ ಲಕ್ಷಾಂತರ ಬಡ ಕುಟುಂಬಗಳು, ಶಾಪಿಂಗ್‌ಮಾಲ್‌ಗಳ ಆಕ್ರಮಣದಿಂದ ತತ್ತರಿಸುತ್ತಿರುವ ಸಣ್ಣ ವ್ಯಾಪಾರಿಗಳು, ಉದ್ಯೋಗವಿಲ್ಲದೆ ಪರಿತಪಿಸುತ್ತಿರುವ ಯುವಜನತೆ, ಕೃಷಿ ಬಿಕ್ಕಟ್ಟಿನಿಂದ ಕಂಗೆಟ್ಟು ಆತ್ಮಹತ್ಯೆಗೆ ಶರಣಾಗುತ್ತಿರುವ ಲಕ್ಷಾಂತರ ರೈತರು, ಜಾಗತೀಕರಣ ಪ್ರಕ್ರಿಯೆಯಿಂದ ಮತ್ತು ಕೃಷಿ ಗ್ರಾಮೀಣ ಕ್ಷೇತ್ರದ ಯಾಂತ್ರೀಕರಣದಿಂದ ಅಸಹಾಯಕತೆಯ ಕೂಪಕ್ಕೆ ತಳ್ಳಲ್ಪಡುತ್ತಿರುವ ಮಹಿಳೆಯರು, ಸೂಕ್ತ ರೀತಿಯ ಪ್ರಾಥಮಿಕ ಶಿಕ್ಷಣವಿಲ್ಲದೆ ಸಮಾಜಘಾತುಕ ಶಕ್ತಿಗಳಿಗೆ ಬಲಿಯಾಗುತ್ತಿರುವ ಗ್ರಾಮೀಣ-ನಗರ ಯುವಶಕ್ತಿ, ಗಗನಕುಸುಮವಾಗಿರುವ ಉನ್ನತ ಶಿಕ್ಷಣದಿಂದ ವಂಚಿತ ಸಮುದಾಯಗಳು, ಸಾಮಾಜಿಕ-ಆರ್ಥಿಕ ಶೋಷಣೆಗೆ ಒಳಗಾಗಿರುವ ದಲಿತ-ಆದಿವಾಸಿ ಸಮುದಾಯಗಳು, ಭಾರತೀಯ ಸಮುದಾಯದ ಬಹುಸಂಖ್ಯಾತರಾದ ಈ ಜನಸಮೂಹಗಳು ಈ ಬಂಡವಾಳಶಾಹಿ ಸಂವಾದದಿಂದ ಹೊರಗೇ ಉಳಿದಿರುವುದು ಭಾರತೀಯ ಸಮಾಜದ ದುರಂತವೆಂದೇ ಹೇಳಬಹುದು. ಇನ್ನೂ ಹೆಚ್ಚಿನ ದುರಂತವೆಂದರೆ, ಗುಜರಾತಿನಲ್ಲಾಗಲೀ, ಹಿಮಾಚಲದಲ್ಲಾಗಲೀ, ಈ ಜನ ಸಮುದಾಯಗಳ ಆಶೋತ್ತರಗಳು ಚುನಾವಣಾ ಕಣದಲ್ಲಿ ಮೊಳಗದೆಯೇ ಹೋದದ್ದು ದೇಶದ ರಾಜಕಾರಣದ ದಿಕ್ಕನ್ನು ಸೂಚಿಸುತ್ತದೆ.

ಈ ಸಂದರ್ಭದಲ್ಲಿ ನರೇಂದ್ರ ಮೋದಿಯನ್ನು **'ಸಾವಿನ ದಲ್ಲಾಳ'** ಎಂದು ಟೀಕಿಸುವ ಮುನ್ನ ಕಳೆದ ಇಪ್ಪತ್ತು ವರ್ಷಗಳ ದೇಶದ ರಾಜಕಾರಣದಲ್ಲಿ ಜನಸಮುದಾಯಗಳ ದೃಷ್ಟಿಯಲ್ಲಿ ಯಾವ ರಾಜಕೀಯ ಪಕ್ಷ ಈ ಆರೋಪದಿಂದ ಮುಕ್ತವಾಗಿದೆ ಎಂಬ ಆತ್ಮವಿಮರ್ಶೆ ಇಂದು ಎಲ್ಲಾ ಪಕ್ಷಗಳಿಗೂ ಅನಿವಾರ್ಯವಾಗಿದೆ. ೧೯೮೪ರ ಸಿಖ್ ಗಲಭೆ, ೯೧-೯೨ರ ಅಯೋಧ್ಯ, ೯೩ರ ಮುಂಬೈ-ಸೂರತ್, ೨೦೦೨ರ ಗುಜರಾತ್, ೨೦೦೭ರ ನಂದಿಗ್ರಾಮ, ಕಳಿಂಗನಗರ, ಸಿಂಗೂರು, ಹರಿಯಾಣ, ಆಂಧ್ರ ಪ್ರದೇಶದ ರೈತರ ಹೋರಾಟ ಹೀಗೆ ಸರಣಿ ಬೆಳೆಯುತ್ತಾ ಹೋಗುತ್ತದೆ. ಈ ಗಲಭೆಗಳಲ್ಲಿ ಮಡಿದವರ ಬಂಧುಗಳ ದೃಷ್ಟಿಯಲ್ಲಿ ಇಡೀ ರಾಜಕೀಯ ವ್ಯವಸ್ಥೆಯೇ ಸಾವಿನ ದಲ್ಲಾಳಿಯಂತಾಗಿರುವುದು ದೇಶದ ವಿಪರ್ಯಾಸವಲ್ಲವೇ. ಏತನ್ಮಧ್ಯೆ ಕೇವಲ ತಮ್ಮ ಒಂದು ಹಸ್ತಾಕ್ಷರದಿಂದ ಗ್ಯಾಟ್ ಒಪ್ಪಂದಕ್ಕೆ ಶರಣಾಗಿ, ದೇಶದ ಅಭಿವೃದ್ಧಿಯ ದಿಕ್ಕನ್ನೇ ಬದಲಾಯಿಸಿ, ೧೨೫೦೦೦ ರೈತರ ಸಾವಿಗೆ, ಲಕ್ಷಾಂತರ ಕಾರ್ಮಿಕರ ನಿರ್ಗತಿಕ ಸ್ಥಿತಿಗೆ, ಆದಿವಾಸಿಗಳ, ಕೃಷಿ ಕಾರ್ಮಿಕರ ದಾರುಣ ಸ್ಥಿತಿಗೆ ಕಾರಣರಾಗಿರುವ ರಾಜಕೀಯ ವ್ಯವಸ್ಥೆಯನ್ನು ಹೇಗೆ ಬಣ್ಣಿಸಬೇಕು ಎಂಬ ಜಿಜ್ಞಾಸೆಯಲ್ಲಿರುವ ಜನಸಾಮಾನ್ಯರ ದೃಷ್ಟಿಯಲ್ಲಿ ಎಲ್ಲ ಪಕ್ಷಗಳು ಸಾವಿನ ದಲ್ಲಾಳಿಗಳೇ ಆಗಿರುವುದು ಇಪ್ಪತ್ತೊಂದನೆಯ ಶತಮಾನದ ಭಾರತೀಯ ಸಮಾಜದ ಒಂದು ದುರಂತವಷ್ಟೆ.

ಚುನಾವಣಾ ಕಣದಲ್ಲಿ ಮೋದಿಯನ್ನು ಸೋಲಿಸುವುದರಿಂದ ಕೋಮುವಾದವನ್ನು ಅಳಿಸಲಾಗುವುದಿಲ್ಲ ಎಂಬ ಅಂಶವನ್ನು ಇನ್ನಾದರೂ ಪ್ರಗತಿಪರ ಶಕ್ತಿಗಳು ಗ್ರಹಿಸಬೇಕಾಗಿದೆ. ತಮ್ಮ ರಾಜಕೀಯ ಇಚ್ಛಾಶಕ್ತಿಗಳನ್ನು ಸ್ವಹಿತಾಸಕ್ತಿಗಳಿಗೆ ಒತ್ತೆ ಇಟ್ಟು ರಾಜಕೀಯ ಮಾಡುವ ಪಕ್ಷಗಳಿಗೆ ಧರ್ಮ, ಜಾತಿ, ಪಂಗಡ, ಜನಾಂಗ ಇವೆಲ್ಲವೂ ಮತಪೆಟ್ಟಿಗೆಗಳ ಕೀಲಿಕೈಗಳಂತಾಗಿವೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವಲಿ, ಜನಪರ ಹೋರಾಟಗಳನ್ನು ಹತ್ತಿಕ್ಕುವಲ್ಲಿ, ಹಿಂಸಾತ್ಮಕ ರಾಜಕಾರಣವನ್ನು ಪ್ರಚೋದಿಸುವಲ್ಲಿ,

(೧೧ನೇ ಪುಟಕ್ಕೆ)

ವೇದಿಕೆ, ದಳ, ಸೇನೆಗಳ ರಾಜ್ಯಕ್ಕೆ ಹೀಗೆ ಬನ್ನಿ

ಭಾರತದ ಸ್ವತಂತ್ರ ಪ್ರಜೆಗಳಾಗಿ ಕನ್ನಡಿಗರ-ಕರ್ನಾಟಕದವರ ಹಕ್ಕುಗಳನ್ನು ಎತಿ ಹಿಡಿಯಲು ಎಷ್ಟೆಲ್ಲ ವೇದಿಕೆಗಳನ್ನು ನಮ್ಮ ಪ್ರಜಾಪ್ರಭುತ್ವ ಕಲ್ಪಿಸಿಕೊಟ್ಟಿದ್ದರೂ-ಸಂಸತ್ತು, ರಾಜ್ಯ ಶಾಸನ ಸಭೆ, ನ್ಯಾಯಾಂಗ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಇತ್ಯಾದಿಗಳು-ಕನ್ನಡಿಗರು ಯಾವಾಗಲೂ ಸಾರ್ವಜನಿಕ ಜೀವನವನ್ನು ಅಸ್ತವ್ಯಸ್ತಗೊಳಿಸುವ ದುಂಡಾವರ್ತಿಯ ಮೂಲಕವೇ ಮತ್ತು ಅನ್ಯ ಭಾಷಿಕ ಸಮುದಾಯಗಳ ವಿರುದ್ಧ ಕಹಿ ಹುಟ್ಟಿಸುತ್ತಲೇ, ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವ ಅನಿವಾರ್ಯತೆ ಉಂಟಾಗಿರುವ ಬಗ್ಗೆ ನಮಗೆ ವಿಷಾದ ಉಂಟಾಗಬೇಕು. ರಕ್ಷಣಾ ವೇದಿಕೆಯ ಹೋರಾಟ ದೊಡ್ಡ ಸುದ್ದಿಯಾಗಿ ಸಾರ್ವಜನಿಕರ ಗಮನ ಸೆಳೆದ ಮೇಲೇ ಅಲ್ಲವೇ, ಈ ಎಲ್ಲ ಅಧಿಕೃತ ವೇದಿಕೆಗಳ ಸದಸ್ಯರು ಹೋರಾಟದಲ್ಲಿ ತಾವೂ ಇದ್ದೇವೆ ಎಂದು ಮುಖ ತೋರಿಸ ಹೋಗಿದ್ದು?

ಡಿ.ಎಸ್.ನಾಗಭೂಷಣ

ಸಮಾಜವಾದಿ ಗೆಳೆಯ ಶ್ರೀನಿವಾಸ ಕುಮಾರ್ ಇನ್ನಿಲ್ಲ ಎಂದರೆ ನಂಬುವುದು ಕಷ್ಟ. ಇನ್ನೂ ಮಧ್ಯ ವಯಸ್ಸಿನಲ್ಲಿದ್ದ ಅವರು ಮೊನ್ನೆ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಶ್ರೀನಿವಾಸ ಕುಮಾರ್ ಮೂಲತಃ ತುಮಕೂರು ಜಿಲ್ಲೆಯವರಾದರೂ ಉದ್ಯೋಗ ನಿಮಿತ್ತ ದೂರದ ಚಾಮರಾಜ ನಗರದಲ್ಲಿ ನೆಲೆಸಿದ್ದು, ಅಲ್ಲಿ ಅಪೂರ್ವ ಡಿಸಿಲ್ವ, ಬಿ.ರಾಜೇಶ್ ಮುಂತಾದ ಯುವ ಗೆಳೆಯರೊಡಗೂಡಿ ಸಮಾಜವಾದಿ ಅಧ್ಯಯನ ಕೇಂದ್ರವೆಂಬುದೊಂದನ್ನು ಕಟ್ಟಿಕೊಡಿದ್ದರು, ಅದರಡಿಯಲ್ಲಿ ಅವರು ತಮ್ಮ ಮಿತಿಗಳಲ್ಲೇ ಅನೇಕ ರೀತಿಯ ಸಮಾಜವಾದಿ ಚಟುವಟಿಕಗಳಲ್ಲಿ ತೊಡಗಿಕೊಂಡಿದ್ದರು: ತಮ್ಮ ಗೆಳೆಯರನ್ನು ಅಂತರ್ಜಾತಿ ಹಾಗೂ ಅಂತರ್ಧರ್ಮೀಯ ಮದುವೆಗಳಿಗೆ ಪ್ರೋತ್ಸಾಹಿಸಿ, ಸ್ಥಳೀಯವಾಗಿ ಅದನ್ನೊಂದು ಸಣ್ಣ ಚಳುವಳಿಯಾಗಿ ರೂಪಿಸಿದ್ದರು. ಸಮಾಜವಾದಿ ಸಾಹಿತ್ಯವನ್ನು ಕನ್ನಡಕ್ಕೆ ತರುವ ಪ್ರಯತ್ನವನ್ನೂ ಅವರು ಮಾಡಿದ್ದರು. ಕಂಪ್ಯೂಟರ್ ನಿರ್ವಹಣೆಯಲ್ಲಿ ಪರಿಣತಿ ಹೊಂದಿದ್ದ ಶ್ರೀನಿವಾಸ ಕುಮಾರ್, ಇತ್ತೀಚಿನ ದಿನಗಳಲ್ಲಿ ಲೋಹಿಯಾ ಕುರಿತ ವೆಬ್-ಸೈಟೊಂದನ್ನು ಸ್ಥಾಪಿಸುವ ಸಾಹಸದಲ್ಲಿ ತೊಡಗಿದ್ದರು. ಅದಕ್ಕಾಗಿ ನನ್ನಿಂದ ಲೋಹಿಯಾ ಸಂಪಾದಕತ್ವದ ಹಳೆಯ 'ಮ್ಯಾನ್‌ಕೈಂಡ್' ಸಂಚಿಕೆಗಳನ್ನು ತರಿಸಿಕೊಂಡಿದ್ದರು. ಈ ಕೆಲಸ ಎಷ್ಟು ಪೂರ್ಣವಾಗಿದೆಯೋ ತಿಳಿಯದು. ಸರಳ ಸಜ್ಜನರಾಗಿದ್ದ ಶ್ರೀನಿವಾಸಕುಮಾರ್, ಬಹಳಷ್ಟು ಸಮಾಜವಾದಿಗಳ ಕಾರ್ಯಶೈಲಿಗೆ ವಿರುದ್ಧವಾಗಿ, ಎಲೆ ಮರೆಯ ಕಾಯಿಯಂತೆ ಕೆಲಸ ಮಾಡಿ ಕಣ್ಮರೆಯಾಗಿದ್ದಾರೆ. ಈ ಕಾಲದಲ್ಲಿ ಸಮಾಜವಾದಿ ಎನಿಸಿಕೊಳ್ಳಲು ಸಾಕಷ್ಟು ಧೈರ್ಯ ಹಾಗೂ ಬದ್ಧತೆ ಬೇಕು. ಅಂತಹ ಅಪರೂಪದ ಧೈರ್ಯ, ಬದ್ಧತೆಗಳಿದ್ದ ಶ್ರೀನಿವಾಸ ಕುಮಾರ್‌ರ ಸಾವು ಅವರ ಗೆಳೆಯರಲ್ಲಿ ಅಪಾರ ದುಃಖವನ್ನುಂಟು ಮಾಡಿರುವುದು ಸಹಜವೇ. ಆದರೆ, ಕನಿಷ್ಟ ಅವರ ಅಪೂರ್ಣ ಕೆಲಸಗಳನ್ನು ಪೂರ್ಣಗೊಳಿಸುವುದೇ ಆ ಚೇತನಕ್ಕೆ ಈ ಗೆಳೆಯರು ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ.

ಈ ಕಾಲ ಶ್ರೀನಿವಾಸ ಕುಮಾರ್‌ರಂತಹ ತಾತ್ವಿಕ ಬದ್ಧತೆಯಿದ್ದವರು ಬೆಳಕಿಗೆ ಬರುವ ಕಾಲವಲ್ಲ. ಏನಿದ್ದರೂ, ಪ್ರಮೋದ್ ಮುತಾಲಿಕ ಅಥವಾ ನಾರಾಯಣ ಗೌಡರಂತಹ ಬೀದಿ ಬಂಟರು ಮೆರೆಯುವ ಕಾಲ. ಇತ್ತೀಚೆಗೆ ರೈಲ್ವೇ ನೇಮಕಾತಿಯ ವಿರುದ್ಧ ಬೆಂಗಳೂರಿನಲ್ಲಿ ನಡೆದ ಮತ್ತು ರಾಜ್ಯದ ಹಲವು ಕಡೆ ಪ್ರತಿಧ್ವನಿಸಿದ ಪ್ರತಿಭಟನೆಯನ್ನೇ ನೋಡಿ. ವಸೂಲಾತಿ ಮೂಲಕ ಅಪಾರ ಆಸ್ತಿ ಸಂಗ್ರಹ ಹಾಗೂ ಅನೇಕ ರೀತಿಯ ದುಂಡಾವರ್ತಿಯ ಆರೋಪಗಳನ್ನು ತಮ್ಮ ಮಾಜಿ ಸಹಚರರಿಂದಲೇ ಎದುರಿಸುತ್ತಿರುವ ಟಿ. ನಾರಾಯಣ ಗೌಡರ ಕರ್ನಾಟಕ ರಕ್ಷಣಾ ವೇದಿಕೆ, ರೈಲ್ವೇ ಇಲಾಖೆ ತನ್ನ ನೇಮಕಾತಿ ಪ್ರಕ್ರಿಯೆಯನ್ನು ಅಮಾನತ್ತಿನಲ್ಲಿಡಬೇಕಾದ ಪರಿಸ್ಥಿತಿಯನ್ನು ನಿರ್ಮಿಸಿ ಇಂದು ಒಂದು ಸಾರ್ವಜನಿಕ ಮಾನ್ಯತೆ ಹಾಗೂ ಗೌರವಾನ್ವಿತತೆಗಳನ್ನು ಗಳಿಸಿಕೊಳ್ಳುವಂತಾಗಿದೆ. ಇದಕ್ಕೆ ಕಾರಣ ನಮ್ಮ ರಾಜಕೀಯ ನಾಯಕತ್ವದ ವೈಫಲ್ಯವೇ ಆಗಿದೆ. ನಮ್ಮದು ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆ. ಅಂದರೆ, ಜನರ ಅಧಿಕೃತ ಪ್ರತಿನಿಧಿಗಳು ಜನರ ಹಿತಾಸಕ್ತಿಗಳನ್ನು ಸಂರಕ್ಷಿಸುವ ವ್ಯವಸ್ಥೆ. ಆದರೆ ಇಂದು ಈ ಅಧಿಕೃತ ಜನ ಪ್ರತಿನಿಧಿಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿ, ಅನಧಿಕೃತ ಜನ ಪ್ರತಿನಿಧಿಗಳಿಗೆ ರಾಜ್ಯ ವ್ಯವಸ್ಥೆಯನ್ನು ವಹಿಸಿ ಕೊಡುತ್ತಿದ್ದಾರೆ.

ನಮ್ಮ ಪ್ರಜಾಪ್ರಭುತ್ವದಲ್ಲಿ ಅನಧಿಕೃತ ಜನ ಪ್ರತಿನಿಧಿಗಳಿಗೆ ಜಾಗವಿಲ್ಲವೆಂದಲ್ಲ. ಜನರ ಹಿತಾಸಕ್ತಿಗಳು ಧಕ್ಕೆಗೊಳಗಾದಾಗಲೆಲ್ಲ ಆ ಬಗ್ಗೆ ಜಾಗೃತಿ ಮೂಡಿಸಲು ಅನಧಿಕೃತ ಜನಸಂಘಟನೆಗಳು ಅಗತ್ಯ. ಅವುಗಳ ಪ್ರತಿನಿಧಿಗಳು ಅಥವಾ ನಾಯಕರೆಸಿನಿಕೊಂಡವರು ಅಧಿಕೃತ ಪ್ರತಿನಿಧಿಗಳ ಮೇಲೆ ಒತ್ತಡ ಹಾಕಿ ಅವರ ಮೂಲಕ ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳುವಂತಹ ಕಾರ್ಯಾಚರಣೆಗಳಲ್ಲಿ ತೊಡಗುವುದು ಒಂದು ಕ್ರಿಯಾಶೀಲ ಪ್ರಜಾಪ್ರಭುತ್ವದ ಲಕ್ಷಣ. ಆದರೆ ಇಂದು ಕಂಡು ಬರುತ್ತಿರುವುದೇನೆಂದರೆ, ಅನಧಿಕೃತ ಜನ ಪ್ರತಿನಿಧಿಗಳೇ ನೇರವಾಗಿ ವ್ಯವಸ್ಥೆಗೆ ಸವಾಲು ಹಾಕಿ ವ್ಯವಸ್ಥೆಯಿಂದ ಪ್ರತಿಸ್ಪಂದನವನ್ನೂ, ಆ ಮೂಲಕ ಮಾನ್ಯತೆಯನ್ನೂ ಪಡೆಯುತ್ತಿರುವುದು! ಇದು, ನಮ್ಮಲ್ಲಿ ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆ ಸೋಲುತ್ತಿರುವ, ಅರಾಜಕತೆಗೆ ದಾರಿ ಮಾಡಿಕೊಡುತ್ತಿರುವ ಸೂಚನೆಯಷ್ಟೇ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇಂದು ಒಂದು ಕಡೆಯಿಂದ ಕಾರ್ಪೊರೇಟ್‌ಶಾಹಿ ತನ್ನ ಧನಮದದ ಮೂಲಕ ಬೆದರಿಕೆ ಹಾಕುತ್ತಿದ್ದರೆ, ಇನ್ನೊಂದು ಕಡೆ ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಜನಸಾಮಾನ್ಯರ ಅನಧಿಕೃತ ಪ್ರತಿನಿಧಿಗಳು ತಮ್ಮ ದುಂಡಾವೃತ್ತಿಯ ಮೂಲಕ ಬೆದರಿಕೆ ಹಾಕುತ್ತಿದ್ದಾರೆ.

ಮೊನ್ನೆ ವಿಶ್ವಬ್ಯಾಂಕಿನ ಆರ್ಥಿಕ ಸಲಹೆಗಾರರೆಂದು ಹೇಳಲಾದ ಬಾಲಸುಬ್ರಹ್ಮಣ್ಯಂ ಎಂಬುವವರು ಕರ್ನಾಟಕವನ್ನು ಭಾರತದಲ್ಲೇ ಅತ್ಯಂತ ಭ್ರಷ್ಟ ರಾಜ್ಯವೆಂದು ಕರೆದಿದ್ದಾರೆ. ಇದಕ್ಕೂ, ರಾಜ್ಯದಲ್ಲಿ ಇಂದು ಅನೇಕ ರೀತಿಯ ಅಸಂಖ್ಯಾತ ವೇದಿಕೆಗಳು, ಸೇನೆಗಳು, ದಳಗಳು, ಅಭಿಮಾನಿ ಸಂಘಗಳು ತಲೆ ಎತ್ತುತ್ತಿರುವುದಕ್ಕೂ ಸಂಬಂಧವಿದ್ದಂತೆ ತೋರುತ್ತದೆ. ನಮ್ಮ ಶಾಸಕಾಂಗ, ಕಾರ್ಯಾಂಗಗಳೆರಡೂ ಭ್ರಷ್ಟತೆಯ ಭಾರದಲ್ಲಿ ಕುಸಿದು ಬಿದ್ದು, ನ್ಯಾಯಾಂಗ ಅದನ್ನು ಅಸಹಾಯಕವಾಗಿ ನೋಡುವಂತಹ ಸ್ಥಿತಿ ಉಂಟಾದಾಗ ಖಾಸಗಿ ದಳಗಳು-ಒಳ್ಳೆಯದು, ಕೆಟ್ಟದು ಎರಡಕ್ಕೂ-ಹುಟ್ಟಿಕೊಳ್ಳುವುದು ಸಹಜವೇ ಆಗಿದೆ. ಕಾರ್ಪೊರೇಟ್‌ಶಾಹಿ ತನ್ನ ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗದ ಸ್ವೋಪಜ್ಞ ಹೆಸರುಗಳಲ್ಲಿ ಖಾಸಗಿ ದಳಗಳನ್ನು ರಚಿಸಿಕೊಂಡು ಅವುಗಳ ಮೂಲಕ ತುಂಬಾ ನಾಜೂಕಾಗಿ (ಅಥವಾ ನಾಜೂಕಯ್ಯಗಳಾಗಿ?) ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳತೊಡಗಿದ್ದರೆ, ಸಾಮಾನ್ಯ ಜನತೆ ತಮ್ಮದೇ ಬೀದಿ ಹೋರಾಟದ ಅನಧಿಕೃತ ದಳ, ಸೇನೆ, ವೇದಿಕೆ, ಸಂಘಗಳ ಮೂಲಕ ದೊಂಬಿ, ಗಲಭೆ, ಪ್ರತಿಭಟನೆ, ಮೆರವಣಿಗೆಗಳನ್ನು ಏರ್ಪಡಿಸಿಕೊಂಡು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳತೊಡಗಿದ್ದಾರೆ. ಇದರಲ್ಲಿನ ಮುಖ್ಯ ಅಪಾಯವೆಂದರೆ, ಆ ನಾಜೂಕುತನದಲ್ಲಿನ ಜಾಣ ಸುಳ್ಳು, ಮೋಸ, ತಟವಟ, ಆಮಿಷ ಅಥವಾ ಈ ದೊಂಬಿ-ಮೆರವಣಿಗೆಗಳಲ್ಲಿನ ಹಿಂಸಾಚಾರ, ಸಾರ್ವಜನಿಕ ಜೀವನದ ಅಸ್ತವ್ಯಸ್ತತೆಗಳಿಗಿಂತ ಹೆಚ್ಚಾಗಿ, ಅವು ಸೃಷ್ಟಿಸುವ ದೊಡ್ಡ ಪ್ರಚಾರ-ಗೊಂದಲಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯೆಂಬುದೇ ಖಾಸಗಿ ಹಿತಾಸಕ್ತಿಯಾಗಿ ಮಾರ್ಪಾಡಾಗುವುದು. ನಮ್ಮ ಕಾರ್ಪೊರೇಟ್ ಸಂಸ್ಥೆಗಳ ಬರೀ ಬೆಂಗಳೂರು ಕೇಂದ್ರಿತ ಅಭಿವೃದ್ಧಿ

ಬೇಡಿಕೆಗಳನ್ನು ನೋಡಿದರೆ ಅಥವಾ ಕರ್ನಾಟಕ ರಕ್ಷಣಾ ವೇದಿಕೆಯ ಬ್ಯಾನರ್‌ಗಳ ತುಂಬಾ ವ್ಯಾಪಿಸಿರುವ ಅದರ ನಾಯಕ ಮಣಿಗಳ ಮುಖಾರವಿಂದಗಳನ್ನು ನೋಡಿದರೆ ಇದು ವೇದ್ಯವಾದೀತು.

ಅಂದ ಮಾತ್ರಕ್ಕೆ ನಾನು ಕರ್ನಾಟಕ ರಕ್ಷಣಾ ವೇದಿಕೆಯ ಇತ್ತೀಚಿನ ಹೋರಾಟದ ಮಹತ್ವವನ್ನು ಅಲ್ಲಗೆಳೆಯುತ್ತಿಲ್ಲ. ಈ ಹೋರಾಟದ ಮೂಲಕ ಅದು ಗಳಿಸಿಕೊಂಡಿರುವ ಕೀರ್ತಿಗೆ ಅದು ನಿಜವಾಗಿಯೂ ಬಾಧ್ಯವೇ ಆಗಿದೆ. ಆದರೆ, ಭಾರತದ ಸ್ವತಂತ್ರ ಪ್ರಜೆಗಳಾಗಿ ಕನ್ನಡಿಗರ-ಕರ್ನಾಟಕದವರ ಹಕ್ಕುಗಳನ್ನು ಎತ್ತಿ ಹಿಡಿಯಲು ಎಷ್ಟೆಲ್ಲ ವೇದಿಕೆಗಳನ್ನು ನಮ್ಮ ಪ್ರಜಾಪ್ರಭುತ್ವ ಕಲ್ಪಿಸಿ ಕೊಟ್ಟಿದ್ದರೂ -ಸಂಸತ್ತು, ರಾಜ್ಯ ಶಾಸನ ಸಭೆ, ನ್ಯಾಯಾಂಗ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು ಇತ್ಯಾದಿಗಳು- ಕನ್ನಡಿಗರು ಯಾವಾಗಲೂ ಸಾರ್ವಜನಿಕ ಜೀವನವನ್ನು ಅಸ್ತವ್ಯಸ್ತಗೊಳಿಸುವ ದುಂಡಾವರ್ತಿಯ ಮೂಲಕವೇ ಮತ್ತು ಅನ್ಯ ಭಾಷಿಕ ಸಮುದಾಯಗಳ ವಿರುದ್ಧ ಕಹಿ ಹುಟ್ಟಿಸುತ್ತಲೇ, ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವ ಅನಿವಾರ್ಯತೆ ಉಂಟಾಗಿರುವ ಬಗ್ಗೆ ನಮಗೆ ವಿಷಾದವೂ ಉಂಟಾಗಬೇಕು. ರಕ್ಷಣಾ ವೇದಿಕೆಯ ಹೋರಾಟ ದೊಡ್ಡ ಸುದ್ದಿಯಾಗಿ ಸಾರ್ವಜನಿಕರ ಗಮನ ಸೆಳೆದ ಮೇಲೇ ಅಲ್ಲವೇ, ಈ ಎಲ್ಲ ಅಧಿಕೃತ ವೇದಿಕೆಗಳ ಸದಸ್ಯರು ಹೋರಾಟದಲ್ಲಿ ತಾವೂ ಇದ್ದೇವೆ ಎಂದು ಮುಖ ತೋರಿಸ ಹೊರಟದ್ದು? ಕನ್ನಡದ ಜನಸಮುದಾಯ ಭಾರತವೆಂಬ ಒಕ್ಕೂಟದ ಒಂದು ಭಾಗವಾಗಿರುವುದು ತಮ್ಮ ಕುಲ ಅಸ್ಮಿತೆಯನ್ನು ಕಳೆದುಕೊಳ್ಳುವುದಕ್ಕಲ್ಲ; ಬದಲಿಗೆ ಅದನ್ನು ಇನ್ನಷ್ಟು ಸಂಪನ್ನಗೊಳಿಸಿಕೊಳ್ಳುವ ಮೂಲಕ ಈ ಒಕ್ಕೂಟವನ್ನು ಬಲಗೊಳಿಸಲು. ನಮ್ಮ ರಾಷ್ಟ್ರೀಯ(ಸ್ವಾತಂತ್ರ್ಯ) ಹೋರಾಟ ಹಾಗೂ ಕರ್ನಾಟಕ ಏಕೀಕರಣ ಹೋರಾಟಗಳು ನಡೆದದ್ದು ಈ ಆಶಯದೊಂದಿಗೇ. ಹೀಗಾಗಿಯೇ ನಮ್ಮ ಸಂವಿಧಾನ ಈ ರಾಷ್ಟ್ರವನ್ನು ಸಾಂಘಿಕ ಸ್ವರೂಪದ ರಾಷ್ಟ್ರವನ್ನಾಗಿ ಘೋಷಿಸಿ, ಎಲ್ಲರಿಗೂ ತಮ್ಮ ಭಾಷೆ, ಸಂಸ್ಕೃತಿಗಳನ್ನು ಉಳಿಸಿಕೊಂಡು ಬೆಳೆಸುವ ಹಕ್ಕುಗಳನ್ನು ನೀಡಿರುವುದು.

ಇದು ಸಾಧ್ಯವಾಗುವುದು ಎಲ್ಲ ಭಾಷೆ-ಸಂಸ್ಕೃತಿಗಳ ಜನರಿಗೂ ರಾಷ್ಟ್ರ ಜೀವನವನ್ನು ಕಟ್ಟುವ ಸಮಾನಾವಕಾಶಗಳು ಲಭ್ಯವಿರುವ ವಾತಾವರಣವಿದ್ದಾಗ. ಆದರೆ, ಏಕೀಕರಣ ಸಮಯದಲ್ಲೇ ಕರ್ನಾಟಕದ 'ಅಖಿಲ ಭಾರತೀಯ' ನಾಯಕರ ತಲೆಕೆಳಗಾದ ರಾಷ್ಟ್ರೀಯತೆಯಿಂದಾಗಿ ಅನೇಕ ಕನ್ನಡ ಪ್ರದೇಶಗಳನ್ನು ಕಳೆದುಕೊಂಡ ರಾಜ್ಯ, ನಂತರದ ವರ್ಷಗಳಲ್ಲಿ ಈ ತಲೆಕೆಳಗಾದ ರಾಷ್ಟ್ರೀಯತೆಯಿಂದಾಗಿಯೇ ಹುಟ್ಟಿದ ಸ್ವಾರ್ಥ, ಅಧಿಕಾರ ಲಾಲಸೆ ಹಾಗೂ ಜಾತಿ ಹಿತಾಸಕ್ತಿಗಳನ್ನಾಧರಿಸಿದ ಜನದೂರವಾದ ರಾಜಕಾರಣ ತನ್ನ ಸಾಂಸ್ಕೃತಿಕ ಅಸ್ಮಿತೆಯನ್ನೇ ಕಳೆದುಕೊಂಡು, ಸಾಮಾನ್ಯ ಕನ್ನಡಿಗರನ್ನು ಭಾರತದ ಅಸಹಾಯಕ ಪ್ರಜೆಗಳನ್ನಾಗಿ ಮಾಡಿ ಕೂರಿಸಿದೆ. ಇದರ ಜೊತೆಗೆ, ಅನೇಕ ಐತಿಹಾಸಿಕ ಕಾರಣಗಳಿಂದಾಗಿ ತಮ್ಮ ಸಾಂಸ್ಕೃತಿಕ ಅಸ್ಮಿತೆಯ ಬಗೆಗೆ ಅಷ್ಟು ಕಾಳಜಿ ಇಲ್ಲದ ಕನ್ನಡಿಗರ ಒಂದು ದೊಡ್ಡ ಜನಸಮೂಹದ ನಿರಭಿಮಾನವೂ ಸೇರಿ, ಕರ್ನಾಟಕವನ್ನು ಸಾಂಸ್ಕೃತಿಕ ಬೇರು ಕಳೆದುಕೊಳ್ಳುತ್ತಿರುವ ಒಂದು ಆಧುನಿಕ ಪೆಡಂಭೂತವನ್ನಾಗಿ ಪರಿವರ್ತಿಸುತ್ತಿದೆ.

ಹೀಗೆ ಬೇರೆ ರಾಜ್ಯಗಳ ಭಾಷಾ ಸಮುದಾಯಗಳ ನಾಯಕತ್ವಕ್ಕೆ ಹೋಲಿಸಿದರೆ, ಒಂದು ಸಾಂಸ್ಕೃತಿಕ ಅರಿವೇ



ಜಿ. ಶ್ರೀನಿವಾಸ ಕುಮಾರ್

ಇಲ್ಲದಂತೆ ತೋರುವ ಕರ್ನಾಟಕದ ರಾಜಕೀಯ ನಾಯಕತ್ವ, ತನ್ನ ಉಳಿವಿಗಾಗಿ ಘೋಷಿಸುತ್ತಿರುವ ಭ್ರಷ್ಟಾಚಾರ, ಕುಟುಂಬವಾದ, ಜಾತಿವಾದ, ಜಾಗತಿಕವಾದಗಳ ಸುಳಿಯಲ್ಲಿ ಈ ರಾಜ್ಯ ಭಾರತದ ರಾಜಕಾರಣದಲ್ಲಿ ತನ್ನ ಲಂಗರುಗಳನ್ನು ಕಳೆದುಕೊಂಡು ಆತ್ಮವಿಲ್ಲದ ದೇಹದಂತೆ ಎದ್ದೆದ್ದು ಬೀಳುತ್ತಿದೆ. ಇದರ ರಾಜಧಾನಿ ಬೆಂಗಳೂರು ಎಲ್ಲ ಪ್ರಾದೇಶಿಕ ಪರಿಮಳವನ್ನೂ ಕಳೆದುಕೊಂಡು ಮಿರಿ ಮಿರಿ ಮಿಂಚುವ ಕಾಗದದ ರಾಕ್ಷಸ ಹೂವಿನಂತೆ, ಜಾಗತಿಕವಾದದ ಗಾಳಿಗೆ ಸಿಕ್ಕಿ ಹೇಗೆ ತೊನೆದಾಡುತ್ತಿದೆ ನೋಡಿ. ಈ ನರ್ತನವನ್ನು ಕಂಡು, ಕರ್ನಾಟಕದ ಎಲ್ಲ ಪಟ್ಟಣ-ನಗರಗಳೂ ಇಂತಹ ಕಾಗದದ ಹೂಗಳಾಗಲು ಹೇಗೆ ಹಾತೊರೆಯುತ್ತಿವೆ ನೋಡಿ.

ಇಂತಹ ವಾತಾವರಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ವೀರಾವೇಶದ ಹಾರಾಟ-ಹೋರಾಟಗಳೆಲ್ಲವೂ ಅಲ್ಪಕಾಲಿಕ ಹಾಗೂ ಅಲ್ಪ ತೃಪ್ತ ಮಾತ್ರವಾಗಿರಬಲ್ಲವು. ಏಕೆಂದರೆ, ಇಂತಹ ಸೇನೆಗಳು ಭಾವನಾತ್ಮಕ ನೆಲೆಯಲ್ಲಿ ಮಾತ್ರ ಕೆಲಸ ಮಾಡಬಲ್ಲವಾಗಿದ್ದು, ಭಾವಾವೇಶ ಇಳಿದೊಡನೆ ಅವು ಹಿನ್ನೆಲೆಗೆ ಸರಿದು ತಾವು ಉಳಿಯಲು ತಮ್ಮ ದೈನಂದಿನ 'ವ್ಯವಹಾರ'ಗಳಲ್ಲಿ ತೊಡಗಬೇಕಾಗುತ್ತದೆ. ಮತ್ತೆ ಏಕೆಂದರೆ, ಇಂದಿನ ಜಾಗತೀಕರಣದ ಬಿರುಗಾಳಿಯನ್ನು ತಡೆಯುವಷ್ಟು ಅವುಗಳ ಬುಡ ಭದ್ರವಿರುವುದಿಲ್ಲ. ಬಿಹಾರದ ಲಾಲೂ ಪ್ರಸಾದ್ ಯಾದವ್ ಹಾಗೂ ಕರ್ನಾಟಕದ ಕೆ.ಎಚ್.ಮುನಿಯಪ್ಪ ಅಥವಾ ತೇಜಸ್ವಿನಿ ಈಗ ಎತ್ತಿ ಹಿಡಿಯುತ್ತಿರುವುದಾದರೂ ನಮ್ಮ ಹೊಸ ರಾಷ್ಟ್ರೀಯತೆಯ ಹೊಸ ಆದರ್ಶವಾಗಿರುವ ಜಾಗತೀಕರಣ ಪ್ರತಿಪಾದಿಸುತ್ತಿರುವ ಮುಕ್ತ ಸ್ಪರ್ಧೆಯನ್ನೇ! ಯಾರು ಎಲ್ಲಿಗೆ ಬೇಕಾದರೂ ಹೋಗಿ ಅಥವಾ ಬಂದು ಸ್ಪರ್ಧಿಸಿ 'ಗೆಲ್ಲ'ಬಹುದು. ಆದರೆ ಈ ಸ್ಪರ್ಧೆ ನಾವು ಒಪ್ಪಿಕೊಂಡ ಒಕ್ಕೂಟದ ಪರಿಕಲ್ಪನೆಗೇ ಧಕ್ಕೆ ತರುವಂತಿದ್ದರೆ? ರಾಜಕೀಯ ಬಲಶಾಲಿಗಳು ಈ ಒಕ್ಕೂಟದ ಆಶಯವನ್ನೇ ವಿಕೃತಗೊಳಿಸಿದ್ದರೆ? ಇದರಿಂದಾಗಿ ಕೆಲ ಸಮುದಾಯಗಳು ಸದಾ ಅನ್ಯಾಯಕ್ಕೇ ಒಳಗಾಗುವಂತಹ ಸ್ಥಿತಿ ನಿರ್ಮಾಣವಾಗಿದ್ದರೆ?

ಇಂತಹ ಮೂಲಭೂತ ಪ್ರಶ್ನೆಗಳನ್ನು ಕೇಳಬಲ್ಲ ಪ್ರಬುದ್ಧತೆ ಕರ್ನಾಟಕ ರಕ್ಷಣಾ ವೇದಿಕೆಯಂತಹ ಸಂಘಸಂಸ್ಥೆಗಳಿಗೆ ಬಂದಲ್ಲಿ ಮಾತ್ರ ಅವು ನಿಜವಾಗಿ ಕನ್ನಡ-ಕರ್ನಾಟಕವನ್ನು ರಕ್ಷಿಸಬಲ್ಲವು. ಆದರೆ ಅವುಗಳ ಇಂದಿನ ನಾಯಕತ್ವವನ್ನು ನೋಡಿದರೆ ಅದು ಸಾಧ್ಯವಿಲ್ಲದಂತೆ ತೋರುತ್ತದೆ. ಏಕೆಂದರೆ, ಕನ್ನಡದ ಮಕ್ಕಳಿಗೆ ಬಾಲ್ಯದಲ್ಲೇ ಕನ್ನಡ ಭಾಷೆ, ಸಂಸ್ಕೃತಿಗಳ ಬಗ್ಗೆ ಅರಿವು ಮೂಡಿಸುವಂತಹ ಶಿಕ್ಷಣ ಕ್ರಮ ಮತ್ತು ಅದಕ್ಕಾಗಿ ಕನ್ನಡ ಮಾಧ್ಯಮ ಶಾಲಾ ಶಿಕ್ಷಣವನ್ನು ಕಡ್ಡಾಯ ಮಾಡುವಂತೆ ಒತ್ತಾಯಿಸುವ ಮೂಲಕ ಮಾತ್ರ ಕನ್ನಡಿಗರ ಲೌಕಿಕ ಅಭ್ಯುದಯಕ್ಕಾಗಿ ಅವರನ್ನು ನಿಜವಾದ ಅರ್ಥದಲ್ಲಿ ಜಾಗೃತಗೊಳಿಸಲು ಸಾಧ್ಯ ಎಂಬ ಮೂಲಭೂತ ಅರಿವೇ ಅವಕ್ಕೆ ಇಲ್ಲವಾಗಿದೆ. ಇತ್ತೀಚೆಗೆ ಸರ್ಕಾರ ಒಂದನೇ ತರಗತಿಯಿಂದಲೇ ಕನ್ನಡದ ಮಕ್ಕಳಿಗೆ ಇಂಗ್ಲಿಷ್ ಕಲಿಸುವ ಆಜ್ಞೆ ಹೊರಡಿಸಿದಾಗ, ಮೊದಲು ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಿ; ನಂತರ ಎಲ್ಲಿಂದಲಾದರೂ ಇಂಗ್ಲಿಷ್ ಕಲಿಸಿ ಎಂದು ಹೇಳುವ ಕನ್ನಡ ನೈತಿಕತೆಯನ್ನು ಎಷ್ಟು ಕನ್ನಡ ಸಂಘಟನೆಗಳು ಪ್ರದರ್ಶಿಸಲು ಸಾಧ್ಯವಾಯಿತು?

ಹಾಗಾಗಿಯೇ ಆರೇಳು ತಿಂಗಳುಗಳ ಹಿಂದೆ ರೈಲ್ವೇ ಇಲಾಖೆ ರೇಲ್ವೇ ಟಿಕೆಟ್ಟಿನಿಂದ ಕನ್ನಡವನ್ನು ತೆಗೆದು ಹಾಕಿದಾಗ, ಇಲ್ಲಿಂದ ಅನ್ಯ ರಾಜ್ಯಗಳಿಗೆ ಹೋಗುವ ಅಥವಾ ಬರುವ ರೈಲುಗಳಿಂದ ಕನ್ನಡದ ಫಲಕಗಳನ್ನು ಹಿಂತೆಗೆದುಕೊಂಡಾಗ ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ಕನ್ನಡ ಚಳುವಳಿಕಾರರು ಒಂದೆರಡು ದಿನ ತಕ ತಕ ಕುಣಿದು ಆಮೇಲೆ ಸುಮ್ಮನಾದವು. ರೇಲ್ವೇ ಟಿಕೆಟ್ಟಿನಿಂದ ಕನ್ನಡ ಶಾಶ್ವತವಾಗಿ ಹೋಗಿಯೇ ಹೋಯಿತು. ಅದಕ್ಕಾಗಿ ಕಣ್ಣೀರು ಸುರಿಸುವವರು ಯಾರೂ ಇಲ್ಲ- ಬಹುಶಃ ಮೊನ್ನೆ ಶಿವಮೊಗ್ಗದಿಂದ ರೈಲು ಹತ್ತಿ, ಯಾವ ಊರಿಗೆ ಟಿಕೆಟ್ ಕೊಟ್ಟಿದ್ದಾರೆ ನೋಡಿ ಹೇಳಿ ಎಂದು ನನ್ನ ಬಳಿ ಟಿಕೆಟ್ ಕೊಟ್ಟು ಯಾಚಿಸಿದ ಮುದುಕರೊಬ್ಬರ ಮುಖದಲ್ಲಿ ನಾನು ಕಂಡ-ತನ್ನ ದೇಶದಲ್ಲೇ ತಾನು ಪರದೇಶಿಯಾಗುವ-ಆಳದ ವಿಷಾದದ ಹೊರತಾಗಿ.

ಕರ್ನಾಟಕ ರಕ್ಷಣಾ ವೇದಿಕೆಯಲ್ಲದೆ, ಭಜರಂಗ ದಳ, ಶ್ರೀರಾಮ ಸೇನೆ, ಹಿಂದೂ ಯುವ ಸೇನೆ, ಕನ್ನಡ ಸೇನೆ, ಪುಲಿಕೇಶಿ ಸೇನೆ ಇತ್ಯಾದಿ 'ಸ್ವಯಂ ಸೇವಾ' ಸೇನೆಗಳು ಈಗ ರಾಜ್ಯದ ಅನೇಕ ರೀತಿಯ ಹಿತಾಸಕ್ತಿಗಳ ರಕ್ಷಣೆಗಾಗಿ 'ಹೊಡೆದಾಡಲು' ಕಟಿಬದ್ಧವಾಗಿ ನಿಂತಿವೆ! ಮತಾಂತರದ ಹುಯಿಲೆಬ್ಬಿಸಿ ಚರ್ಚ್ ಹಾಗೂ ಪಾದ್ರಿಗಳ ಮೇಲೆ ಹಲ್ಲೆ ನಡೆಸುವ ಭಜರಂಗ ದಳ, ಗೋಹತ್ಯೆಯ ಹುಯಿಲೆಬ್ಬಿಸಿ ಮುಸ್ಲಿಮರ ಮೇಲೆ ಹಲ್ಲೆ ಮಾಡುವ ಹಿಂದೂ ಯುವ ಸೇನೆ, ಹಿಂದೂ ಧಾರ್ಮಿಕ ನಂಬಿಕೆಗಳ ಅವಹೇಳನದ ಹುಯಿಲೆಬ್ಬಿಸಿ ಹಿಂದೂಗಳ ವಿರುದ್ಧವೇ ದಾಳಿಗೆ ಸಿದ್ಧವಾಗುವ ಶ್ರೀರಾಮ ಸೇನೆ ಮುಂತಾದವು ವಿವಿಧ ರೀತಿಯ 'ಧಾರ್ಮಿಕ ಸೇವೆ'ಗಳಲ್ಲಿ ತೊಡಗಿದ್ದರೆ, ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ಕನ್ನಡ ಸೇನೆ, ಪುಲಿಕೇಶಿ ಸೇನೆ ಮುಂತಾದವು ಕನ್ನಡದ ವಿಷಯಗಳಲ್ಲದೆ, ಭ್ರಷ್ಟಾಚಾರ, ಅತ್ಯಾಚಾರ, ವರದಕ್ಷಿಣೆ ಸಾವು, ಆಸ್ತಿ ಆಕ್ರಮಣ ಇತ್ಯಾದಿ ಸಾರ್ವಜನಿಕ ವಿಷಯಗಳಲ್ಲೂ ಆಸಕ್ತಿ ವಹಿಸಿ 'ಸಾಮಾಜಿಕ ಸೇವೆ'ಗೂ ಮುಂದಾಗಿವೆ. ಒಟ್ಟಿನಲ್ಲಿ ಇವೆಲ್ಲ ಸೇನೆಗಳು ಸೇರಿ ತಮ್ಮದೇ ರೀತಿಯಲ್ಲಿ ಕರ್ನಾಟಕದ ಶೀಲ ಸಂರಕ್ಷಣೆಯ ಕಾರ್ಯದಲ್ಲಿ ತೊಡಗಿವೆ!

ಇತ್ತೀಚೆಗೆ ಚಲಚಿತ್ರವೊಂದರ ಗೀತೆಯೊಂದು ರಾಮಾಯಣವನ್ನು ಅವಹೇಳನಗೊಳಿಸುವಂತಿದೆ ಎಂದು ಇಂತಹುದೊಂದು ಸೇನೆ ನಡೆಸಿದ ಪ್ರತಿಭಟನೆಯನ್ನು

ಗಮನಿಸಿ. ರಾಮಾಯಣ ಮಹಾಭಾರತಗಳು ಮೂಲತಃ ಸಾಹಿತ್ಯ ಕೃತಿಗಳು. ಸಾವಿರಾರು ವರ್ಷಗಳ ಕಾಲ ಅವು ಜನತೆಯ ಆಸ್ತಿಯಾಗಿ ಬೆಳೆದು, ಅವುಗಳ ನೂರಾರು ಜನಪದ ಆವೃತ್ತಿಗಳು ಚಾಲ್ತಿಗೆ ಬಂದಿವೆ. ಆ ಆವೃತ್ತಿಗಳಲ್ಲಿ, ಈ ಮಹಾಕಾವ್ಯಗಳು ಪ್ರತಿನಿಧಿಸುವ ಮೌಲ್ಯಗಳನ್ನು ನಮ್ಮ ಜನಸಾಮಾನ್ಯರು ತಮ್ಮ ಜನಪದ ವಿವೇಕದ ಮೂಲಕ ವಿಮರ್ಶಿಸಿ, ಹಲವು ಸಂದರ್ಭಗಳಲ್ಲಿ ಕಥೆಯ ಹಂದರ-ಆಶಯಗಳನ್ನೇ ಬದಲಿಸಿದ್ದಾರೆ. ಅವು ಪ್ರತಿಪಾದಿಸುವ ಸತ್ಯಗಳ ಬಗ್ಗೆ ಮೆಚ್ಚುಗೆ, ಗೌರವ, ಆರಾಧನೆಗಳೇ ಅಲ್ಲದೆ, 'ರಾಮ ಸುಳ್ಳು, ರಾಮಾಯಣವೂ ಸುಳ್ಳು...' ಇತ್ಯಾದಿ ರೀತಿಗಳಲ್ಲಿ ತಮ್ಮ ಅನುಮಾನ, ಹತಾಶೆ, ಛೇಡಿಕೆ, ಲೇವಡಿಗಳನ್ನೂ ವ್ಯಕ್ತಪಡಿಸುವ ಮೂಲಕ ಅವುಗಳನ್ನು ಬಹುಮುಖಿ ಪಠ್ಯಗಳನ್ನಾಗಿ ಮಾಡಿ, ಕಾಲ ದೇಶಗಳ ಬಂಧನಗಳಿಂದ ಅವನ್ನು ಮುಕ್ತಗೊಳಿಸಿದ್ದಾರೆ. ಅವು ಮಹಾಕಾವ್ಯಗಳೆನಿಸಿಕೊಂಡಿರುವುದು ಹೀಗೇ ಹೊರತು, ಅವುಗಳ ಹುಟ್ಟಿನ ಸ್ವರೂಪಗಳಿಂದಲ್ಲ. ಈಗ ನೋಡಿದರೆ, ಶ್ರೀರಾಮ ಸೇನೆಯೆಂಬ ಸಾಹಿತ್ಯ ಮತ್ತು ಜನತೆಯ ನಡುವಣ ಸಂಕೀರ್ಣ ಸಂಬಂಧಗಳ ಗಂಧ ಗಾಳಿಯಿಲ್ಲದ ದೊಣ್ಣೆ ನಾಯಕರ ದಂಡೊಂದು ಧರ್ಮದ ಹೆಸರಲ್ಲಿ, ಮಹಾಕಾವ್ಯಗಳನ್ನು ಜನತೆಯ 'ಸೂತಕ'ದಿಂದ ಪಾರು ಮಾಡಿ 'ಮಡಿ ಮಡಿ'ಯಾಗಿ ಕಾಪಾಡಲು ಬೆದರಿಕೆಗಳ ಮೂಲಕ ಪ್ರಯತ್ನಿಸುತ್ತಿದೆ.

ಈ ಪ್ರಯತ್ನದಲ್ಲಿ, ಕಾಲಾನುಕಾಲದಿಂದ ಈ ಸೂತಕ-ಮಡಿಗಳ ಹಾವಳಿಯಿಂದ ಸಂತ್ರಸ್ತರಾಗಿರುವ ಜನಸಮುದಾಯಗಳೂ ಭಾಗವಹಿಸುತ್ತಿರುವುದು ನಮ್ಮ ಆಧುನಿಕ ಸಾಮಾಜಿಕ ಹೋರಾಟಗಳೆಲ್ಲವೂ ಸಾಂಸ್ಕೃತಿಕ ನೆಲೆಯಲ್ಲಿ ಸೋತಿವೆ ಎಂಬುದನ್ನು ಸೂಚಿಸುತ್ತವೆ. ಇದರ ಜೊತೆಗೆ, ಈ ಸೇನೆಗಳ ಇಂತಹ ಮೂರ್ಖತನಗಳ ಬಗ್ಗೆ ಮಾತೇ ಆಡದ ನಮ್ಮ ಜನಪದ ತಜ್ಞರೂ ಆದ ಸಂಸ್ಕೃತಿ ಸಂಶೋಧಕ ಡಾ॥ ಎಂ. ಚಿದಾನಂದ ಮೂರ್ತಿಯವರು, ಕ್ರಿಶ್ಚಿಯನ್ ಮತಾಂತರದ ವಿರುದ್ಧ ಹಿಂದೂ ಸಂಘ ಸಂಸ್ಥೆಗಳು ಪ್ರದರ್ಶಿಸುತ್ತಿರುವ ಹಿಂಸಾಚಾರವನ್ನು ಸಮರ್ಥಿಸುತಿರುವುದು ಮಾತ್ರ ಸೋಜಿಗದ ಸಂಗತಿಯಾಗಿದೆ. ಅವರು, ಅವು ಅದು ಬಿಟ್ಟು ಇನ್ನೇನು ಮಾಡಬೇಕು ಎಂದು ಹುಸಿ ಮುಗ್ಧತೆಯಲ್ಲಿ ಕೇಳುವ(ಪತ್ರಿಕೆಗಳಿಗೆ ಬರೆದ ಪತ್ರಗಳಲ್ಲಿ) ಮೂಲಕ ತಾವೀಗ ಎಲ್ಲ ಬಿಟ್ಟು ಮತೀಯ ಶಕ್ತಿಗಳ ಪ್ರತಿನಿಧಿಯಾಗಿ ಮಾತ್ರ ಕ್ರಿಯಾಶೀಲವಾಗಿರಲು ನಿರ್ಧರಿಸಿರುವುದನ್ನು ಸೂಚಿಸುತ್ತಿದ್ದಾರೆ. ಇದು ದುಃಖದ ಸಂಗತಿ. ಹಿಂದೂಗಳ ಮತಾಂತರಕ್ಕೆ ಕ್ರಿಶ್ಚಿಯನ್ ಮಠಗಳ ಆಮಿಷಗಳಷ್ಟೇ ಕಾರಣವೆಂದು ನಂಬುವಂತೆ ತೋರುವ ಚಿದಾನಂದ ಮೂರ್ತಿಗಳಂತಹವರು, ಸಾವಿರಾರು ವರ್ಷಗಳ ತಮ್ಮ ಸ್ಮೃತಿಕೋಶದಲ್ಲಿ ಸೇರಿಹೋಗಿರುವ ಧರ್ಮಾಚಾರಗಳನ್ನು ಅಷ್ಟು ಸುಲಭವಾಗಿ ಬಿಟ್ಟು ಹೋಗಲು ಆ ಜನ ತಯಾರಾಗಲು ಇರುವ ಬಲವಾದ ಕಾರಣಗಳಾದರೂ ಏನು ಮತ್ತು ಅವರನ್ನು ಆ ಆಮಿಷಗಳಿಗೆ ಬಲಿ ಬೀಳದಂತೆ ತಮ್ಮ ಸನಾತನ ಧರ್ಮ ತನ್ನ ಆಂತರಿಕ ಸತ್ವದ ಮೂಲಕವೇ ಏಕೆ ತಡೆಯಲಾಗುತ್ತಿಲ್ಲ ಎಂದೂ ಯೋಚಿಸಬೇಕು.

ಹಾಗೇ, ಗೋಹತ್ಯೆ ನಿಜವಾಗಿಯೂ ಹಿಂದೂ ಧರ್ಮದ ಸಂಹಿತೆ ಪ್ರಕಾರ ಅಪರಾಧವೇ? ಎಲ್ಲ ಮಾಂಸಗಳಂತೆ ಗೋಮಾಂಸ ತಿನ್ನುವುದು ತಿನ್ನುವವರ ನಿಸರ್ಗದತ್ತ ಹಕ್ಕಾಗಿದೆಯಲ್ಲವೇ? ಗೋವುಗಳನ್ನು ಮಾಂಸಕ್ಕಾಗಿ

> **ಅನೇಕ ಐತಿಹಾಸಿಕ ಕಾರಣಗಳಿಂದಾಗಿ ತಮ್ಮ ಸಾಂಸ್ಕೃತಿಕ ಅಸ್ಮಿತೆಯ ಬಗೆಗೆ ಅಷ್ಟು ಕಾಳಜಿ ಇಲ್ಲದ ಕನ್ನಡಿಗರ ಒಂದು ದೊಡ್ಡ ಜನಸಮೂಹದ ನಿರಭಿಮಾನವೂ ಸೇರಿ, ಕರ್ನಾಟಕವನ್ನು ಸಾಂಸ್ಕೃತಿಕ ಬೇರು ಕಳೆದುಕೊಳ್ಳುತ್ತಿರುವ ಒಂದು ಆಧುನಿಕ ಪೆಡಂಭೂತವನ್ನಾಗಿ ಪರಿವರ್ತಿಸುತ್ತಿದೆ. ಹೀಗೆ ಬೇರೆ ರಾಜ್ಯಗಳ ಭಾಷಾ ಸಮುದಾಯಗಳ ನಾಯಕತ್ವಕ್ಕೆ ಹೋಲಿಸಿದರೆ, ಒಂದು ಸಾಂಸ್ಕೃತಿಕ ಅರಿವೇ ಇಲ್ಲದಂತೆ ತೋರುವ ಕರ್ನಾಟಕದ ರಾಜಕೀಯ ನಾಯ ಕತ್ವ, ತನ್ನ ಉಳಿವಿಗಾಗಿ ಪೋಷಿಸುತ್ತಿರುವ ಭ್ರಷ್ಟಾಚಾರ, ಕುಟುಂಬವಾದ, ಜಾತಿವಾದ, ಜಾಗತಿಕವಾದಗಳ ಸುಳಿಯಲ್ಲಿ ಈ ರಾಜ್ಯ ಭಾರತದ ರಾಜಕಾರಣದಲ್ಲಿ ತನ್ನ ಲಂಗರುಗಳನ್ನು ಕಳೆದುಕೊಂಡು ಆತ್ಮವಿಲ್ಲದ ದೇಹದಂತೆ ಎದ್ದೆದ್ದು ಬೀಳುತ್ತಿದೆ.**

ಕೊಲ್ಲುವುದು ಅವುಗಳನ್ನು ಅದಕ್ಕಾಗಿ ಮಾರುವವರ ಮತ್ತು ಕೊಳ್ಳುವವರ ನಡುವಣ ವ್ಯವಹಾರ ಮಾತ್ರವಲ್ಲವೇ? ಇದರಲ್ಲಿ ಧರ್ಮ-ಅಧರ್ಮಗಳ ಮಾತೆಲ್ಲಿ ಬಂತು ಎಂಬ ಬಗ್ಗೆಯೂ ಆಲೋಚನಾ ಶಕ್ತಿಯಿರುವ ಚಿದಾನಂದ ಮೂರ್ತಿಯವರಂತಹವರು ಪರ್ಯಾಲೋಚಿಸಿ, ಆಲೋಚನಾ ಶಕ್ತಿಯನ್ನೇ ಕಳೆದುಕೊಂಡಂತಿರುವ ಹಿಂದೂ ಮತೀಯವಾದಿ ಸೇನೆ-ದಳಗಳಿಗೆ ಬುದ್ಧಿ ಹೇಳಬೇಕು. ಹಿಂದೂ ಧರ್ಮ ಜಗತ್ತಿನ ಅತ್ಯಂತ ಪ್ರಜಾಸತ್ತಾತ್ಮಕ ಧರ್ಮ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಹಿಂದೂವಾದಿಗಳು ತಮ್ಮ ವರ್ತನೆಯ ಮೂಲಕ ಹಿಂದೂ ಧರ್ಮದ ಪ್ರಜಾಸತ್ತಾತ್ಮಕತೆಯನ್ನು ಮಾತ್ರವಲ್ಲ, ಈ ದೇಶವನ್ನು ಹಲವು ಸವಾಲುಗಳ ನಡುವೆಯೂ ಒಂದು ರಾಷ್ಟ್ರವನ್ನಾಗಿ ಉಳಿಸಿಕೊಂಡಿರುವ ಪ್ರಜಾಸತ್ತಾತ್ಮಕ ಗಣರಾಜ್ಯತನವನ್ನೂ ಹಾಳುಗೆಡವುತ್ತಿರುವುದು ನಿಜವಾಗಿಯೂ ಇಂದಿನ ಗಂಭೀರ ಸಮಸ್ಯೆಯಾಗಿದೆ. ಬಹುಮುಖಿ ಹಾಗೂ ಒಕ್ಕೂಟ ಸ್ವರೂಪದ ಹಿಂದೂ 'ಧರ್ಮ'ವನ್ನು ಇಸ್ಲಾಂ ಹಾಗೂ ಕ್ರಿಶ್ಚಿಯನ್ ಮತಗಳ ವಿರುದ್ಧದ ಹೋರಾಟಕ್ಕೆ ಸಜ್ಜುಗೊಳಿಸಲು, ಅವುಗಳಂತೆ ಏಕ ಕೇಂದ್ರಿತವಾದ ಪುರೋಹಿತಶಾಹಿ ವೈದಿಕ ಮತವನ್ನಾಗಿ ಪರಿವರ್ತಿಸಲು ಹಿಂದೂ ಮತೀಯ ನಾಯಕರು ನಡೆಸುತ್ತಿರುವ ರಾಜಕೀಯ ಹುನ್ನಾರವೇ ಈ ಸಮಸ್ಯೆಗೆ ಕಾರಣವಾಗಿದೆ.

ಈ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿರುವವರು, ಹಿಂದೂ ಜಾತಿವಾದಿ ಸಂಘ-ಸಂಸ್ಥೆಗಳು. ಜಾತಿ, ಹಿಂದೂ ಸಮಾಜದ ಶಾಪವೆಂದು ನಂಬಿ ಹೊಸ ಹಾಗೂ ಆಧುನಿಕ ಭಾರತ ಕಟ್ಟ ತೊಡಗಿದ ಗಾಂಧಿ ಯುಗದ ನಂಬಿಕೆಗಳು ಇಂದು ಕುಸಿದು ಬಿದ್ದಿವೆ. ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರವರೆಗೆ ಪ್ರತಿಯೊಂದು ಜಾತಿಯೂ ತಮ್ಮ ಜಾತಿ ಸಂಘಗಳನ್ನು ಕಟ್ಟಿಕೊಂಡು ಸಾಮಾಜಿಕ ನ್ಯಾಯದ ಹುಯಿಲೆಬ್ಬಿಸುತ್ತಿವೆ. ಸಾಮಾಜಿಕ ನ್ಯಾಯದ ಪರಿಕಲ್ಪನೆ ಹುಟ್ಟಿದ್ದೇ ಜಾತಿ ವ್ಯವಸ್ಥೆಯ ಅನ್ಯಾಯಗಳಿಂದ ಎಂಬ ಪರಿವೆಯೇ ಇಲ್ಲದ ಈ ಮೂಢ ಜಾತಿವಾದಿ ಸಂಘ ಸಂಸ್ಥೆಗಳ ನಾಯಕರು, ಜಾತಿಯನ್ನಿಟ್ಟುಕೊಂಡೇ ಸಾಮಾಜಿಕ ನ್ಯಾಯ ಸಾಧಿಸುವ ಭ್ರಮೆಯಲ್ಲಿದ್ದಾರೆ. ಹಾವನೂರ್ ಹಾಗೂ ವೆಂಕಟಸ್ವಾಮಿ ಮುಂತಾದ ಕಟ್ಟಾ ಸಾಮಾಜಿಕ ನ್ಯಾಯವಾದಿಗಳೇ ಹಿಂದೂ ಮತೀಯವಾದಿಗಳ ತೆಕ್ಕೆ ಸೇರಿದರೆಂದರೆ, ನಮ್ಮ ಸಾಮಾಜಿಕ ನ್ಯಾಯ ಚಳುವಳಿಯ ಶೀಲ ಅಧಿಕಾರ ರಾಜಕಾರಣಕ್ಕೆ ಸಿಕ್ಕು ಎಷ್ಟು ವಿಕೃತಗೊಂಡಿರಬೇಕು! ಹಾಗಾಗಿಯೇ, ಇತ್ತೀಚಿನವರೆಗೆ ಮೇಲ್ಜಾತಿಗಳ ವಿರುದ್ಧ ಉಗ್ರ ಹೋರಾಟವನ್ನೇ ತನ್ನ ರಾಜಕೀಯ ಕಾರ್ಯಕ್ರಮವನ್ನಾಗಿ ಮಾಡಿಕೊಂಡಿದ್ದ ಮಾಯಾವತಿಯವರ ಪಕ್ಷವೀಗ ಮೇಲ್ಜಾತಿಗಳ ಬಡವರಿಗೂ ಮೀಸಲಾತಿಯ ಮಾತನ್ನಾಡುತ್ತಿದೆ. ಇದರಿಂದ ರೋಮಾಂಚನಗೊಂಡಿರುವ ಕರ್ನಾಟಕದ ಜಾತಿವಾದಿ ಬ್ರಾಹ್ಮಣರು ರಾಜಕೀಯ ಮೀಸಲಾತಿಯನ್ನು ಕೇಳಲು ಮುಂದಾಗಿದ್ದಾರೆ!

ಇದೆಲ್ಲದರ ನಡುವಣ ತಮಾಷೆಯೆಂದರೆ, ಇತರೆಲ್ಲ ಜಾತಿಗಳೂ ತಮ್ಮ ಜಾತಿ ಪಾವಿತ್ರ್ಯವನ್ನು ತಾವು ಕಳೆದುಕೊಂಡಿರುವ ತಮ್ಮ ಮೂಲ ವೃತ್ತಿಗಳನ್ನು ಸೂಚಿಸುವ ಶಬ್ದಗಳ ಸಾಮಾಜಿಕ ಮರ್ಯಾದೆಯನ್ನು ಕಾಪಾಡಿಕೊಳ್ಳಲು ನಡೆಸಿರುವ ಅಸಂಬದ್ಧ ಪ್ರಯತ್ನಗಳ ಸರಮಾಲೆಯಲ್ಲಿ ಈಗ ದೊಂಬರ ಸಂಘವೂ ಸಾರ್ವಜನಿಕ ಜೀವನದಲ್ಲಿ 'ದೊಂಬರಾಟ' ಶಬ್ದ ಬಳಸಿ ತಮ್ಮ ಜಾತಿಗೆ ಅವಮಾನ ಮಾಡಬಾರದೆಂದು ಮನವಿ ಮಾಡಿದೆ! ದೊಂಬರಾಟದವರನ್ನೂ ಒಂದು ಜಾತಿಯನ್ನಾಗಿ ಜಡಗೊಳಿಸಿದ ನಮ್ಮ ಸಾಮಾಜಿಕ ವ್ಯವಸ್ಥೆಯ ಪ್ರತಿಭೆ ನಿಜವಾಗಿಯೂ ಅದ್ಭುತವೇ ಸರಿ! ಅದೇನೇ ಇರಲಿ, ನಮ್ಮ ಜಾತಿ ವ್ಯವಸ್ಥೆ ಶ್ರೇಣೀಕೃತವಾದದ್ದೇ, ಅದು ವೃತ್ತಿ ಆಧಾರಿತವೂ ಆಗಿದ್ದುದರಿಂದ ಹಾಗೂ ಆ ವೃತ್ತಿಗಳ ಸಾಮಾಜಿಕ ಮಹತ್ವ ಬದಲಾಗುತ್ತಿದ್ದಂತೆ ಆ ಶ್ರೇಣೀಕರಣವೂ ಬದಲಾಗುತ್ತಿದ್ದುದನ್ನು ನಾವು ಚರಿತ್ರೆಯಲ್ಲಿ ಗಮನಿಸಿದ್ದೇವೆ. ಅದನ್ನನುಸರಿಸಿಯೇ ನಮ್ಮ 'ಭಾಷಾ ಸಂಸ್ಕೃತಿ'ಯೂ ಬೆಳೆದಿದೆ. ಆದರೆ ಈಗ ಜಾತಿಯು ವೃತ್ತಿ ಆಧಾರಗಳನ್ನು ಕಳೆದುಕೊಂಡಿರುವಾಗ, ವೃತ್ತಿಸೂಚಕ ಶಬ್ದಗಳನ್ನು ಜಾತಿ ಸೂಚಕಗಳನ್ನಾಗಿಯೇ ಪರಿಗಣಿಸಿ ಅವನ್ನು ಒಂದು ಭಾಷಾ ಸ್ಮೃತಿಕೋಶದಿಂದಲೇ ತೆಗೆದು ಹಾಕಬೇಕೆಂದು ಆಗ್ರಹಿಸುವ ಈ ಪ್ರಯತ್ನಗಳು ಏನನ್ನು ಸೂಚಿಸುತ್ತದೆ? ನಮ್ಮ ಜಾತಿ ವಿರೋಧಿ ಹೋರಾಟಗಳೆಲ್ಲವೂ ಜಾತಿ ಬೇರುಗಳನ್ನು ಇನ್ನಷ್ಟು ಗಟ್ಟಿಗೊಳಿಸಿವೆ! ಅಂದರೆ, ಕೇವಲ ಅಧಿಕಾರ ರಾಜಕಾರಣವನ್ನಷ್ಟೇ ದೃಷ್ಟಿಯಲ್ಲಿಟ್ಟುಕೊಂಡು ನಡೆದ ಸಾಮಾಜಿಕ ನ್ಯಾಯದ ಹೆಸರಿನ ಈ ಹೋರಾಟಗಳೆಲ್ಲವೂ ಆಂತರ್ಯದಲ್ಲಿ ಅಸಾಮಾಜಿಕ ಹೋರಾಟಗಳೇ ಆಗಿದ್ದುವು ಎಂದಲ್ಲವೇ? ಇದಕ್ಕೆ ಕಾರಣ ಅವಕ್ಕೆ ಸಾಂಸ್ಕೃತಿಕ ಆಯಾಮಗಳೇ ಇರಲಿಲ್ಲವೆಂದೇ ಅಲ್ಲವೇ?

ಹಾಗೆ ನೋಡಿದರೆ, ಸಾಂಸ್ಕೃತಿಕ ಆಯಾಮವೂ ಇದ್ದ ಶರಣ ಚಳುವಳಿ ಇಂದು ತಲುಪಿರುವ ದುಃಸ್ಥಿತಿಯಾದರೂ ಎಂತಹುದು? ಕಾಲ ಧರ್ಮವೇ ಹಾಗಿದೆಯೇನೋ! ಇತ್ತೀಚೆಗೆ

(೨೩ನೇ ಪುಟಕ್ಕೆ)

ಸೆಕ್ಯುಲರಿಸಂಗೆ ಸವಾಲು

(೭ನೇ ಪುಟದಿಂದ)

ಎಲ್ಲೋ ಒಂದೆಡೆ ಎಲ್ಲಾ ಪಕ್ಷಗಳೂ ಸಹಮತ ವ್ಯಕ್ತಪಡಿಸುತ್ತವೆ. ಎಂ.ಎಫ್.ಹುಸೇನ್ ಪ್ರಕರಣದಲ್ಲಿ ಸೆಕ್ಯುಲಾರ್ ವೇಷ ಧರಿಸುವ ಪಕ್ಷಗಳು ತಸ್ಲೀಮ ನಸ್ರೀನ್ ವಿಚಾರದಲ್ಲಿ ಕೋಮುವಾದಿಗಳಾಗುತ್ತವೆ. ಒಂದೆಡೆ ಹಿಂದೂ ಮೂಲಭೂತವಾದಿಗಳಿಗೆ ಮಣೆ ಹಾಕಿದರೆ ಇನ್ನೊಂದೆಡೆ ಮುಸ್ಲಿಂ ಮೂಲಭೂತವಾದಿಗಳಿಗೆ ಶರಣಾಗುತ್ತವೆ. ಗುಜರಾತಿನಲ್ಲಿ ಆದಿವಾಸಿಗಳ ಬಗ್ಗೆ ಕಣ್ಣೀರು ಮಿಡಿಯುವ ಪಕ್ಷಗಳೇ ಅಸ್ಸಾಂನಲ್ಲಿ ಆದಿವಾಸಿಗಳ ಮಾರಣ ಹೋಮ ಮಾಡುತ್ತವೆ. ಕರ್ನಾಟಕದಲ್ಲಿ ದಲಿತರ ಪರ ಹೋರಾಡುವ ಶಕ್ತಿಗಳು ಮಹಾರಾಷ್ಟ್ರದಲ್ಲಿ ದಲಿತರ ಹತ್ಯೆಗೆ ಇಂಬು ಕೊಡುತ್ತವೆ. ಇದು ಪ್ರಜಾತಾಂತ್ರಿಕ ಭಾರತ ಕಾಣುತ್ತಿರುವ ಕಹಿಸತ್ಯ.

ಈ ನಿಟ್ಟಿನಲ್ಲಿ ಇಂದು ಧರ್ಮಾಧಾರಿತ ಕೋಮುವಾದ ಒಂದೆಡೆ ಜನ ಸಮುದಾಯಗಳ ವಿಘಟನೆಯಲ್ಲಿ ತೊಡಗಿದ್ದರೆ, ಜಾತಿ ಕೋಮುವಾದ ಸಮಾಜದ ಸ್ವಾಸ್ಥ್ಯವನ್ನೇ ಹಾಳುಗೆಡವುತ್ತಿದೆ. ಜಾತಿವಾದ-ಕೋಮುವಾದವಾಗಲೀ, ಫ್ಯಾಸಿಸಂ ಆಗಲೀ ಮತಪೆಟ್ಟಿಗೆಗಳಲ್ಲಿ ಮಾತ್ರ ಉಳಿದಿಲ್ಲ. ಅದು ಜನತೆಯ ನರನಾಡಿಗಳಲ್ಲಿ ಹರಿಯಲಾರಂಭಿಸಿದೆ. ಜಾಗತೀಕರಣದ ಜಗನ್ನಾಥ ರಥದ ಚಕ್ರಕ್ಕೆ ಸಿಲುಕಿ ನಲುಗುತ್ತಿರುವ ಜನಸಮುದಾಯಗಳು ತಮ್ಮ ಉಳಿವಿಗಾಗಿ, ಅಸ್ಮಿತೆಗಾಗಿ ಹೋರಾಡುವ ಪರಿಸ್ಥಿತಿ ಒದಗಿಬಂದಿದೆ. ಈ ಹೋರಾಟಗಳ ದಮನಕ್ಕೆ ಜಾತಿ-ಧರ್ಮ-ಜನಾಂಗೀಯತೆಗಳು ದಾಳಗಳಾಗಿ ಪರಿಣಮಿಸುತ್ತಿವೆ. ಈ ಸಂದರ್ಭದಲ್ಲಿ ಅಸಹಾಯಕ, ಅಮಾಯಕ ಜನತೆಗೆ ಫ್ಯಾಸಿಸಂ ಮತ್ತು ಕೋಮುವಾದಗಳು ಆಕರ್ಷಣೀಯವಾಗಿ ಕಂಡರೆ ಅಚ್ಚರಿಯೇನಿಲ್ಲ. ಏಕೆಂದರೆ ಈ ಮನುಕುಲ ವಿರೋಧಿ ಚಿಂತನೆಗಳು ಜನತೆಯಲ್ಲಿ ಭ್ರಮೆ ಸೃಷ್ಟಿಸುವುದರೊಂದಿಗೇ ಒಂದು ಅಸ್ತಿತ್ವವನ್ನೂ, ನಾವು ಎನ್ನುವ ಅಸ್ಮಿತೆಯನ್ನೂ ನೀಡುತ್ತವೆ. ಹಿಂದೂ ಮೂಲಭೂತವಾದಿಗಳಂತೆಯೇ ಮುಸ್ಲಿಂ ಮೂಲಭೂತವಾದಿಗಳು ತಮ್ಮದೇ ಆದ ಕೋಮುವಾದಿ ರಾಜಕಾರಣವನ್ನು ಮಾಡುತ್ತಿರುವ ಅಂಶವನ್ನೂ ಅಲ್ಲಗಳೆಯಲಾಗುವುದಿಲ್ಲ. ಯಾವುದು ಹೆಚ್ಚು ಅಪಾಯಕರ ಎನ್ನುವುದಕ್ಕಿಂತಲೂ, ಕೋಮುವಾದಿ ಫ್ಯಾಸಿಸಂನ ಬೆಳವಣಿಗೆ ಮತ್ತು ಅವುಗಳು ಹುಟ್ಟಿಸುವ ಅಸ್ಮಿತೆಯ ಭ್ರಮೆ ಮನುಕುಲಕ್ಕೆ ಮಾರಕ ಎಂಬ ಅಂಶ ಪ್ರಧಾನವಾಗಬೇಕಾಗಿದೆ. ಜಾಗತೀಕರಣವೂ ಇಡೀ ಜಗತ್ತೇ ಒಂದು ಪುಟ್ಟ ಹಳ್ಳಿಯಂತೆ ಎಂಬ ಮತ್ತೊಂದು ರೀತಿಯ ಜಾಗತಿಕ ಭ್ರಮೆ ಸೃಷ್ಟಿಸುತ್ತಿದೆ. ಜಾಗತೀಕರಣ ಪ್ರೇರಿತ ಭ್ರಮೆಯೊಂದಿಗೇ ಧಾರ್ಮಿಕ-ಜಾತೀಯ ಅಸ್ಮಿತೆಯ ಭ್ರಮೆಯನ್ನೂ ಸೃಷ್ಟಿಸಿದಲ್ಲಿ ಜಾತಿವಾದಿ-ಕೋಮುವಾದಿ ಶಕ್ತಿಗಳು ಮೇಲುಗೈ ಸಾಧಿಸುತ್ತವೆ. ಇದು ಜಗತ್ತಿನ ಇತಿಹಾಸದಲ್ಲಿ ಕಂಡಿರುವಂತಹ ಸತ್ಯ. ಭಾವುಕತೆಯನ್ನೇ ತಮ್ಮ ಬಂಡವಾಳವನ್ನಾಗಿ ಪರಿಗಣಿಸುವ ಈ ಚಿಂತನೆಗಳು ಕೇವಲ ರಾಜಕೀಯ ಪ್ರಣಾಳಿಕೆಗಳಲ್ಲ, ಒಂದು ನಿರ್ದಿಷ್ಟ ಧ್ಯೇಯೋದ್ದೇಶವನ್ನು ಹೊಂದಿರುವ ಸಿದ್ಧಾಂತಗಳೆಂಬ ಅಂಶವನ್ನು ಸೆಕ್ಯುಲಾರ್ ಶಕ್ತಿಗಳು ಗ್ರಹಿಸಬೇಕಾಗಿದೆ. ಪ್ರಜಾತಾಂತ್ರಿಕ ಚುನಾವಣೆಗಳ ಮೂಲಕ ಸೈದ್ಧಾಂತಿಕ ಹೋರಾಟ ನಡೆಸುವುದು ಅಲ್ಪಕಾಲಿಕ ದೃಷ್ಟಿಕೋನದಿಂದ ಸಾಧ್ಯವಾಗುವುದಿಲ್ಲ. ಚುನಾವಣೆಗಳಲ್ಲಿ ಪ್ರಣಾಳಿಕೆಗಳ ಮಟ್ಟದಲ್ಲಿ ಮಾತ್ರ ಹೋರಾಟ ನಡೆಸಬಹುದಾಗಿದೆ. ಸಿದ್ಧಾಂತಗಳ ನೆಲೆಗಟ್ಟಿನಲ್ಲಿ ಹೋರಾಡಲು ಒಂದು ವಿಶಾಲ ದೃಷ್ಟಿಕೋನದ, ದೂರದರ್ಶಿತ್ವದ ತಳಹದಿಯ ಅವಶ್ಯಕತೆ ಇದೆ. ಇದು ಸಾಮಾಜಿಕ-ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನಡೆಯಬೇಕಾದ ಕಾರ್ಯಸೂಚಿಯಾಗಿದೆ.

ಈ ಕಾರ್ಯಸೂಚಿಯ ಅನುಷ್ಠಾನಕ್ಕೆ ಎರಡು ಹಂತಗಳ ಹೋರಾಟಗಳ ಅವಶ್ಯಕತೆ ಇರುತ್ತದೆ. ಒಂದೆಡೆ ಧಾರ್ಮಿಕತೆ, ಮತೀಯತೆ, ಜಾತೀಯತೆ ಮತ್ತು ಮೂಲಭೂತವಾದಗಳನ್ನು ಎದುರಿಸಿ ಹೋರಾಡುತ್ತಲೇ, ಈ ಎಲ್ಲಾ ಭಾವುಕತೆಯ ಬಂಡವಾಳಗಳನ್ನೂ ತನ್ನ **"ಪ್ರಗತಿ"**ಎಂಬ ಭ್ರಮಾಲೋಕದಲ್ಲಿ ಅಡಗಿಸಿಕೊಂಡು ಜನರನ್ನು ಮತ್ತೊಂದು ಭ್ರಮಾಲೋಕಕ್ಕೆ ಕೊಂಡೊಯ್ಯುವ ಬಂಡವಾಳಶಾಹಿ ಬೆಳವಣಿಗೆಯ ಜಾಗತೀಕರಣದ ವಿರುದ್ಧವೂ ಹೋರಾಡುವುದು ಇಂದಿನ ತುರ್ತು ಅಗತ್ಯತೆಯಾಗಿದೆ. ಮೋದಿಯವರ ವಿರುದ್ಧದ ಹೋರಾಟದಲ್ಲಿ ಕಾಂಗ್ರೆಸ್ ಮತ್ತಿತರ ಪ್ರಗತಿಪರ ಪಕ್ಷಗಳು ವಿಫಲವಾಗಿರುವುದು ಈ ನಿಟ್ಟಿನಲ್ಲೇ ಎಂದು ಸ್ಪಷ್ಟವಾಗಿ ಹೇಳಬಹುದು. ಕರ್ನಾಟಕದಲ್ಲಿ ಮುಂಬರುವ ಚುನಾವಣೆಗಳಲ್ಲೂ ಇದೇ ಪರಿಸ್ಥಿತಿಯನ್ನು ಜನತೆ ಎದುರಿಸುತ್ತಿದೆ. ಒಂದೆಡೆ ತನ್ನ ಊಳಿಗಮಾನ್ಯ ನೀತಿಗಳನ್ನು ಆಧುನಿಕ ಬಂಡವಾಳಶಾಹಿ ಬೆಳವಣಿಗೆಯೊಂದಿಗೆ ಮೇಳೈಸಿ, ಸೆಕ್ಯುಲಾರ್‌ವಾದದ ನೆಪದಲ್ಲಿ, ಸಮಾಜವನ್ನು ಜಾತಿ ಆಧಾರಿತವಾಗಿ ಧೃವೀಕರಿಸುವ ಹುನ್ನಾರ ಒಂದು ಪಕ್ಷದ್ದಾದರೆ, ಗುಜರಾತ್‌ನ ಮೋದಿಯವರ ಪ್ರಗತಿ ಸಿದ್ಧಾಂತದ ರೇಷ್ಮೆ ಶಾಲುವಿನಲ್ಲಿ, ಅವರ ಕೋಮುವಾದಿ ರಾಜಕಾರಣವನ್ನು ಸುತ್ತಿ, ಜನತೆಯ ಮೇಲೆ ಪ್ರಹಾರ ಮಾಡಲು ಮತ್ತೊಂದು ಪಕ್ಷದ್ದಾಗಿದೆ. ಕರ್ನಾಟಕವನ್ನು ಗುಜರಾತ್ ಮಾಡುವ ಭಾಜಪದ ಹುನ್ನಾರಕ್ಕೆ ಬಾಬಾಬುಡನ್‌ಗಿರಿ ಅಯೋಧ್ಯೆಯಾಗುವುದು ಅವಶ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪಕ್ಷ ಮತ್ತು ಸಂಘ ಪರಿವಾರ ಈಗಾಗಲೇ ಕಾರ್ಯೋನ್ಮುಖವಾಗಿದೆ.

ಭಾಜಪದ ಈ ಪ್ರಹಾರವನ್ನು ಎದುರಿಸುವ ನಿಟ್ಟಿನಲ್ಲಿ ಸೆಕ್ಯುಲರ್ ಶಕ್ತಿಗಳ ಸಂಘಟನೆ ಇಂದಿನ ಅಗತ್ಯತೆಯಾಗಿದೆ. ಆದರೆ ಭಾಜಪವನ್ನು ಚುನಾವಣೆಯಲ್ಲಿ ಸೋಲಿಸುವುದರಿಂದಲೇ ಈ ಕಾರ್ಯ ಸಾಧನೆ ಮಾಡುವ ಉದ್ದೇಶ ದೂರದರ್ಶಿತ್ವವಿಲ್ಲದೆ ಸೊರಗುತ್ತದೆ. ಚುನಾವಣಾ ರಾಜಕೀಯದಲ್ಲಿ ಭಾಜಪ ಗೆದ್ದರೂ, ಸೋತರೂ, ಸಂಘಪರಿವಾರದ ಹಿಂದುತ್ವ ಮತ್ತು ಫ್ಯಾಸಿಸ್ಟ್ ನೀತಿಗಳು ಬದಲಾಗುವುದಿಲ್ಲ. ಸಂಘಪರಿವಾರದ ಫ್ಯಾಸಿಸ್ಟ್ ರಾಷ್ಟ್ರ ಸ್ಥಾಪನೆಯ ಉದ್ದೇಶಕ್ಕೆ ಭಾಜಪದ ರಾಜಕೀಯ ಅಧಿಕಾರ ಪೂರಕವಾಗಬಹುದೇ ಹೊರತು ಅನಿವಾರ್ಯವಾಗುವುದಿಲ್ಲ. ಹಾಗಾಗಿ ಭಾಜಪದ ಕೋಮುವಾದೀ ರಾಜಕಾರಣವನ್ನು ಹಿಮ್ಮೆಟ್ಟಿಸಲು, ಚುನಾವಣಾ ಕಣಕ್ಕಿಂತಲೂ, ಜನತೆಯ ಮನದಂಗಣವೇ ಉತ್ತಮ ವೇದಿಕೆಯಾಗುವುದು ಇಂದಿನ ತುರ್ತು ಅಗತ್ಯತೆಯಾಗಿದೆ. ಭಾಜಪವನ್ನು ಸೋಲಿಸುವ ಏಕೈಕ ಉದ್ದೇಶದಿಂದ ಕಾಂಗ್ರೆಸ್ ಪಕ್ಷವನ್ನು ಹಿಂಬಾಲಿಸುವುದು, ೧೯೭೭ರ ತುರ್ತುಪರಿಸ್ಥಿತಿಯ ನಂತರದಲ್ಲಿ, ಕಾಂಗ್ರೆಸ್ ಪಕ್ಷವನ್ನು ಸೋಲಿಸಲು ಜನಸಂಘವನ್ನು ಬೆಂಬಲಿಸಿದಂತಾಗುತ್ತದೆ. **"ಜನ ಸಂಘದವರು ಫ್ಯಾಸಿಸ್ಟರಾದಲ್ಲಿ ನಾನೂ ಒಬ್ಬ ಫ್ಯಾಸಿಸ್ಟ್"** ಎಂಬ ಜಯಪ್ರಕಾಶ ನಾರಾಯಣರ ನುಡಿಗಳು ಇಂದು ಸಂಘ ಪರಿವಾರದ ರೂಪದಲ್ಲಿ, ಭಾಜಪದ ರೂಪದಲ್ಲಿ ಪೆಡಂಭೂತದಂತೆ ಕಾಡುತ್ತಿರುವುದನ್ನು ಸೆಕ್ಯುಲರ್ ಪಕ್ಷಗಳು, ಗುಂಪುಗಳು ಮರೆಯುವಂತಿಲ್ಲ. ಕರ್ನಾಟಕದಲ್ಲಿ ಮತ್ತೊಮ್ಮೆ ಇದೇ ಪ್ರಯೋಗ ನಡೆಯುತ್ತಿರುವ ಹಿನ್ನೆಲೆಯಲ್ಲಿ, ಪ್ರಗತಿಪರ ಶಕ್ತಿಗಳು ಎಚ್ಚರ ವಹಿಸಬೇಕಾಗಿದೆ.

ದೇಶದ ಆರ್ಥಿಕತೆ ಮತ್ತು ಆಡಳಿತ, ಜಾಗತಿಕ ಹಣಕಾಸು ಬಂಡವಾಳದ ಕಬಂಧ ಬಾಹುಗಳಲ್ಲಿ ಬಂಧಿತವಾಗಿರುವವರೆಗೂ ಈ ಮನುಕುಲವಿರೋಧಿ ಫ್ಯಾಸಿಸ್ಟ್ ಸಿದ್ಧಾಂತಗಳು ಜೀವಂತವಾಗಿರುತ್ತವೆ. ಈ ಬಂಧನದಿಂದ ಜನಸಾಮಾನ್ಯರನ್ನು, ಅವಕಾಶ ವಂಚಿತ ಸಮುದಾಯಗಳನ್ನು ರಕ್ಷಿಸುವ ನೈತಿಕ ಹೊಣೆಗಾರಿಕೆ ಸೆಕ್ಯುಲಾರ್ ಶಕ್ತಿಗಳ ಮೇಲಿದೆ. ಈ ಹೊಣೆಗಾರಿಕೆಯನ್ನು ನಿಭಾಯಿಸುವ ನೈತಿಕ-ಮಾನಸಿಕ ಸ್ಥೈರ್ಯ ಕಾಂಗ್ರೆಸ್ ಮತ್ತಿತರ ಸೆಕ್ಯುಲರ್ ಪಕ್ಷಗಳಿಗೆ ಇದೆಯೇ ಎಂಬುದೇ ಯಕ್ಷಪ್ರಶ್ನೆ. ಪರ್ಯಾಯ ರಾಜಕಾರಣವೆಂದರೆ ಪರ್ಯಾಯ ವ್ಯವಸ್ಥೆಯ ನಿರ್ಮಾಣವೇ ಹೊರತು ಮತ್ತೊಂದು ಪಕ್ಷದ ಪೀಠಾರೋಹಣವಲ್ಲ ಎಂಬ ಸತ್ಯಾಂಶವನ್ನು ಭಾರತೀಯ ರಾಜಕಾರಣ ನಿರೂಪಿಸಿದೆ. ಈ ಪರ್ಯಾಯ ಪ್ರಜಾತಾಂತ್ರಿಕ ವ್ಯವಸ್ಥೆಯ ಸ್ಥಾಪನೆಗೆ ಹೋರಾಡದಿದ್ದಲ್ಲಿ, ಮೋದಿಯಾಗಲೀ, ಸಂಘಪರಿವಾರವಾಗಲೀ ಅವರ ಫ್ಯಾಸಿಸ್ಟ್ ಸಿದ್ಧಾಂತವಾಗಲೀ ಅಳಿಯುವುದಿಲ್ಲ. □

ಕೋಮುವಾದಿ ರಾಜಕಾರಣವನ್ನು ಸುತ್ತಿ, ಜನತೆಯ ಮೇಲೆ ಪ್ರಹಾರ ಮಾಡಲು ಮತ್ತೊಂದು ಪಕ್ಷದ್ದಾಗಿದೆ. ಕರ್ನಾಟಕವನ್ನು ಗುಜರಾತ್ ಮಾಡುವ ಭಾಜಪದ ಹುನ್ನಾರಕ್ಕೆ ಬಾಬಾಬುಡನ್‌ಗಿರಿ ಅಯೋಧ್ಯೆಯಾಗುವುದು ಅವಶ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪಕ್ಷ ಮತ್ತು ಸಂಘ ಪರಿವಾರ ಈಗಾಗಲೇ ಕಾರ್ಯೋನ್ಮುಖವಾಗಿದೆ. ಭಾಜಪದ ಈ ಪ್ರಹಾರವನ್ನು ಎದುರಿಸುವ ನಿಟ್ಟಿನಲ್ಲಿ ಸೆಕ್ಯುಲರ್ ಶಕ್ತಿಗಳ ಸಂಘಟನೆ ಇಂದಿನ ಅಗತ್ಯತೆಯಾಗಿದೆ.

ಕನ್ನಡ ಮನಸ್ಸು ಮತ್ತು ಯು.ಆರ್. ಅನಂತಮೂರ್ತಿ

ಡಾ|| ಬಿ. ಸಿ ನಾಗೇಂದ್ರ ಕುಮಾರ್

ಸಾಹಿತ್ಯವು ಶೂನ್ಯದಲ್ಲಿ ಸೃಷ್ಟಿಯಾಗುವುದಿಲ್ಲ. ಸಾಹಿತಿ ತನ್ನ ಸುತ್ತಲಿನ ಬದುಕಿಗೆ ತನ್ನ ಇಡೀ ಮೈಯನ್ನೇ ಕಣ್ಣಾಗಿಸಿ, ಕಿವಿಯಾಗಿಸಿ, ಚರ್ಮವಾಗಿಸಿ ಸ್ಪಂದಿಸಬೇಕಾಗಿರುತ್ತದೆ. ಅನ್ಯ-ಸ್ವಗಳನ್ನು ಮೀರಿ ಎಲ್ಲವನ್ನೂ ಒಳಗು ಮಾಡಿಕೊಳ್ಳುವ ಬೀಸುವ ಗಾಳಿಯಂತಿರಬೇಕಾದದ್ದು ಅನಿವಾರ್ಯ. ಈ ಗುಣ ದತ್ತ ವಾದಾಗಲೇ ಸೃಜನಶೀಲತೆಯು ಎತ್ತರಗಳನ್ನು ಮುಟ್ಟಲು ಸಾಧ್ಯವಾಗುವುದು; ಬರಹಗಾರ ಕಾಲವನ್ನು ಮೀರಿ ಪ್ರಸ್ತುತನಾಗುವುದು. ಸಭಿಕರಿಂದ ಕೇಳಲಾದ ಪ್ರಶ್ನೆಗಳಿಗೆ ಅನಂತಮೂರ್ತಿಯವರು ನೀಡಿದ ಉತ್ತರಗಳು ಹಾ ೂ ಈ ಕೆಲವು ಸಮಸ್ಯೆಗಳಿಗೆ ಅವರು ಇಲ್ಲಿಯ ತನಕ ತೋರುತ್ತಾ ಬಂದಿರುವ ಕ್ರಿಯಾತ್ಮಕ ಪ್ರತಿಕ್ರಿಯೆಗಳು ಅವರನ್ನು 'ಮೋರ್ ದ್ಯಾನ್ ಲಿಟರೇಟರ್' ಸ್ತರದಲ್ಲಿ ಸ್ಥಾಪಿಸಿಬಿಟ್ಟಿವೆ. ಬದ್ಧತೆಗಾಗಿ ಎಂಥವರನ್ನೂ ಎದುರು ಹಾಕಿಕೊಳ್ಳುವ ಎದೆಗಾರಿಕೆ ಅನಂತಮೂರ್ತಿ ಅವರಿಗಿದೆ.

"ಮೋದಿಗೆ ಶಿಕ್ಷೆಯಾಗಬೇಕು; ತಸ್ಲಿಮಾಳಿಗೆ ರಕ್ಷಣೆ ಸಿಗಬೇಕು". ಇವು ಅನಂತಮೂರ್ತಿಯವರ ಮಾತುಗಳು. ಅಂದು 'ಸ್ನೇಹ ಚಿಂತನ' ದವರು ಅವರಿಗೆ ೭೫ ತುಂಬಿದ ಸಂದರ್ಭದಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಅನೌಪಚಾರಿಕ ಸಾರ್ವಜನಿಕ ಸಮಾರಂಭದಲ್ಲಿ ಯು.ಆರ್.ಎ ಅವರು ಮಾತು ಆರಂಭಿಸಿದ್ದೆ ಹೀಗೆ. ಅಂದಿನ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಸಾಹಿತಿಗೂ ಗ್ಲಾಮರ್ ಇರುತ್ತದೆ ಎನ್ನುವುದಕ್ಕೆ ಆ ಜನಸಂದಣಿ ರೂಪಕವಾಗಿತ್ತು. ಅಲ್ಲಿ ಯು.ಆರ್. ವೇದಿಕೆ ಮೇಲೆ ಕುಳಿತು ಪ್ರೇಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೋದರು. ಆಗ ಕೇಳಲಾದ ಪ್ರಶ್ನೆಗಳಾವುವೂ ಸಹೃದಯರು ಸಾಹಿತಿಯೋರ್ವನಿಗೆ ಕೇಳುವಂಥ ಪ್ರಶ್ನೆಗಳಷ್ಟೇ ಆಗಿರಲಿಲ್ಲ. ಜಾಗತೀಕರಣ, ಹೆಚ್ಚುತ್ತಿರುವ ಗಣಿಗಾರಿಕೆ, ರಾಜಕೀಯ ಭ್ರಷ್ಟಾಚಾರ, ಕರ್ನಾಟಕದ ರಾಜಕೀಯದ ಅತಂತ್ರಸ್ಥಿತಿ, ಕುಸಿಯುತ್ತಿರುವ ಮೌಲ್ಯಗಳು, ಉಡುಪಿ ಮಠದ ವಿವಾದ, ದತ್ತ ಪೀಠದ ಬಿಕ್ಕಟ್ಟು, ಭಯೋತ್ಪಾದನೆ ಇತ್ಯಾದಿಗಳು ನೇರವಾಗಿ ಸಾಹಿತ್ಯಕ್ಕೆ ಸಂಬಂಧಿಸಿದಂಥವಾಗಿರಲ್ಲಿಲ್ಲ. ಇದು ಅನಂತಮೂರ್ತಿ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯೋಪಾದಿಯ ಕಾರ್ಯಕ್ರಮವೆಂದರೆ ಅತಿಶಯೋಕ್ತಿಯೆನಿಸುವುದಿಲ್ಲ.

ಸಾಹಿತ್ಯವು ಶೂನ್ಯದಲ್ಲಿ ಸೃಷ್ಟಿಯಾಗುವುದಿಲ್ಲ. ಸಾಹಿತಿ ತನ್ನ ಸುತ್ತಲಿನ ಬದುಕಿಗೆ ತನ್ನ ಇಡೀ ಮೈಯನ್ನೇ ಕಣ್ಣಾಗಿಸಿ, ಕಿವಿಯಾಗಿಸಿ, ಚರ್ಮವಾಗಿಸಿ ಸ್ಪಂದಿಸಬೇಕಾಗಿರುತ್ತದೆ. ಅನ್ಯ-ಸ್ವಗಳನ್ನು ಮೀರಿ ಎಲ್ಲವನ್ನೂ ಒಳಗು ಮಾಡಿಕೊಳ್ಳುವ ಮೈಯೆಲ್ಲಾ ಕೈ ಆಗಿಸಿಕೊಂಡ ಬೀಸುವ ಗಾಳಿಯಂತಿರಬೇಕಾದದ್ದು ಅನಿವಾರ್ಯ. ಈ ಗುಣ ದತ್ತವಾದಾಗಲೇ ಸೃಜನಶೀಲತೆಯು ಎತ್ತರಗಳನ್ನು ಮುಟ್ಟಲು ಸಾಧ್ಯವಾಗುವುದು; ಬರಹಗಾರ ಕಾಲವನ್ನು ಮೀರಿ ಪ್ರಸ್ತುತನಾಗುವುದು. ಸಭಿಕರಿಂದ ಕೇಳಲಾದ ಪ್ರಶ್ನೆಗಳಿಗೆ ಅನಂತಮೂರ್ತಿಯವರು ನೀಡಿದ ಉತ್ತರಗಳು ಹಾಗೂ ಈ ಕೆಲವು ಸಮಸ್ಯೆಗಳಿಗೆ ಅವರು ಇಲ್ಲಿಯ ತನಕ ತೋರುತ್ತಾ ಬಂದಿರುವ ಕ್ರಿಯಾತ್ಮಕ ಪ್ರತಿಕ್ರಿಯೆಗಳು ಅವರನ್ನು "ಮೋರ್ ದ್ಯಾನ್ ಲಿಟರೇಟರ್" ಸ್ತರದಲ್ಲಿ ಸ್ಥಾಪಿಸಿಬಿಟ್ಟಿವೆ.

ತಮ್ಮ ವೈಚಾರಿಕ ನಿಲುವಿನ ಬದ್ಧತೆಗಾಗಿ ಎಂಥವರನ್ನೂ ಎದುರು ಹಾಕಿಕೊಳ್ಳುವ ಎದೆಗಾರಿಕೆ ಅನಂತಮೂರ್ತಿ ಅವರಿಗಿದೆ. ಈ ದಿಟ್ಟತನವನ್ನು ಅವರು ತಮ್ಮ ೭೫ ರ ಇಳಿವಯಸ್ಸಿನಲ್ಲೂ ಕುಂದದಂತೆ ಕಾಪಾಡಿಕೊಂಡು ಬಂದಿದ್ದಾರೆ. ಕಳೆದ ವರ್ಷ ಕರ್ನಾಟಕದ ವಿಧಾನಮಂಡಲದಿಂದ ರಾಜ್ಯಸಭೆಗೆ ಆರಿಸಿಕಳಿಸಲು ದೇವೇಗೌಡರು ತಮಿಳುನಾಡಿನ ಕುದುರೆ ವ್ಯಾಪಾರಿ ರಾಮಸ್ವಾಮಿಯ ಜತೆಗೆ ಒಳಒಪ್ಪಂದ ಮಾಡಿಕೊಂಡಾಗ ತಾತ್ವಿಕ ವಿರೋಧಕ್ಕಾಗಿ ತಾವು ಚುನಾವಣೆಗೆ ನಿಂತಿದ್ದು, ಕುಟುಂಬ ರಾಜಕಾರಣವನ್ನು ತೀವ್ರವಾಗಿ ವಿರೋಧಿಸುತ್ತಿರುವುದು, ಕರ್ನಾಟಕದಲ್ಲಿ ಈಗ ಪಿಡುಗಾಗಿ ಪರಿಣಮಿಸಿರುವ ಗಣಿಗಾರಿಕೆಯನ್ನು ವಿರೋಧಿಸುತ್ತಿರುವುದು ಇದಕ್ಕೆ ಒಂದು ಸಣ್ಣ ನಿದರ್ಶನ. ಅವರಿಗೆ 'ಸಂಸ್ಕಾರ' ದಿಂದಲೇ ವಿಗ್ರಹಭಂಜಕ (iconoclast) ಗುಣ ಮೈಗಂಟಿಕೊಂಡು ಬಂದಿದೆ. ಮುರ್‍ನಾಲ್ಕು ದಶಕಗಳ ಈ ವಿಚಾರ ಪ್ರವಾಹಕ್ಕೆ ಎಂದೂ ಅಡೆತಡೆಯುಂಟಾಗಿಲ್ಲ. ಇದೇ ರೀತಿ ವ್ಯವಸ್ಥೆಯ ಸ್ವಾಸ್ಥ್ಯಕ್ಕಾಗಿ ನಿಷ್ಠೂರತೆಯನ್ನು, ವಿರೋಧವನ್ನೂ ವ್ಯಕ್ತಪಡಿಸುತ್ತಿದ್ದ ಅನೇಕ ಸಾಹಿತಿ, ಚಿಂತಕರುಗಳ ದನಿ ಅಧಿಕಾರದ ಆಮಿಷದಲ್ಲಿ ಅಡಗಿಹೋದಂತೆ ಕಾಣುತ್ತಿದೆ. ಎಲ್ಲರಿಗಿಂತ ಮುಂದೆ ನಿಂತು ಯಾವುದೇ ಸೂಕ್ಷ್ಮ ಸಂಗತಿಗಳಿಗು ಪ್ರತಿಕ್ರಿಯಿಸುತ್ತಿದ್ದ ಲಂಕೇಶ್

ಹಾಗೂ ಪೂಚಂತೇ ಈಗ ನಮ್ಮೊಡನ್ನಿಲ್ಲ. ಇಂಥ ಸಂದರ್ಭದಲ್ಲಿ ಅವೈಚಾರಿಕತೆ, ಮೌಢ್ಯ, ಜಾತೀಯತೆ, ಮತಾಂಧತೆ ಮುಂತಾದ ಜೀವ ವಿರೋಧಿ ಸಂಗತಿಗಳ ವಿರುದ್ಧದ ಪ್ರಭಾ ಪ್ರತಿಭೆಯಾಗಿ ರೂಪಕ ದನಿಯಾಗಿ ಯು.ಆರ್. ಕ್ಕಾಣಿಸುತ್ತಾರೆ.

ಕನ್ನಡ ಮನಸ್ಸು ಎಲ್ಲವನ್ನೂ ಮುಕ್ತವಾಗಿ ಸ್ವೀಕರಿಸುವಂಥಾದ್ದು. ಮೂಲತ: ಚಿಂತನಾಶೀಲವಾದದ್ದು. ಮುಖ್ಯವಾಗಿ ಅನ್ಯವನ್ನು ಸಹಿಸಿಕೊಳ್ಳುವಂಥದ್ದು. 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ' ಎಂದು ಕವಿರಾಜ ಮಾರ್ಗಕಾರ ಸಾವಿರವರ್ಷಗಳ ಹಿಂದೆಯೆ ಹೇಳಿರುವನ್ನಲ್ಲವೇ? ಇದರೊಂದಿಗೆ ಸ್ವವಿಮರ್ಶೆಯನ್ನು ಅಂತಸ್ಥವಾಗಿಸಿಕೊಂಡಿರುವುದು ಕನ್ನಡ ಮನಸ್ಸಿನ ವಿಶಿಷ್ಟತೆ. ಹೀಗಾಗಿಯೇ ಸ್ಥಳೀಯತೆ ಮತ್ತು ಜಾಗತೀಯತೆಗಳನ್ನು ಗೊಂದಲವಿಲ್ಲದೆ ಒಳಗು ಮಾಡಿಕೊಳ್ಳಬಲ್ಲ ಶಕ್ತಿ ಅದಕ್ಕೆ ಇದೆ. ಎಂಥ ಸನ್ನಿವೇಶದಲ್ಲೂ ಅನ್ಯಾಯ, ಶೋಷಣೆಗಳನ್ನು ಪ್ರತಿಭಟಿಸುವ ತಂತ್ರಗಾರಿಕೆ ಕನ್ನಡದ ಸಾಹಿತ್ಯ ಮತ್ತು ಚಿಂತನಾ ಧಾರೆಯೊಳಗೆ ಅಡಕವಾಗಿದೆ. ಈ ಎಲ್ಲಾ ಗುಣಗಳು ಅನಂತಮೂರ್ತಿಯವರಲ್ಲಿ ತುಂಬಿಕೊಂಡಿವೆ. ಹೀಗಾಗಿಯೇ ಅವರು ತಮ್ಮ ವಿರೋಧಿಗಳಿಗೂ ಪ್ರಿಯರಾಗಿ ಕಾಣಿಸಬಲ್ಲರು. ಅವರಿಗೆ ೭೫ ತುಂಬಿದ ಈ ಸಂದರ್ಭದಲ್ಲಿ ಅವರನ್ನು ಕುರಿತು ನನ್ನಂಥ ಕಿರಿಯರಿಗೆ ಏನ್ನೆನ್ನಿಸುತ್ತದೆ ಎಂಬ ಹಿನ್ನೆಲೆಯಲ್ಲಿ ಯೋಚಿಸತೊಡಗಿದಾಗ ಮೇಲೆ ವಿವರಿಸಿದ ಕೆಲವು ಅಂಶಗಳು ದುತ್ತನೆ ಹೊಳೆದಂಥವು. ಈಗಾಗಲೇ ಅವರನ್ನು ಕುರಿತು ಹಲವಾರು ಲೇಖನಗಳು, ಪುಸ್ತಕಗಳ ರಾಶಿಯೇ ಪ್ರಕಟವಾಗಿವ. ಇವೆಲ್ಲವುಗಳ ಓದಿನ ಹಿನ್ನೆಲೆಯನ್ನು ಬದಿಗೆ ಸರಿಸಿ ಅವರ ವ್ಯಕ್ತಿತ್ವವನ್ನು ಅಕ್ಷರಗಳಲ್ಲಿ ಹಿಡಿಯುವುದು ಸುಲಭದ ಕೆಲಸವಲ್ಲ. ಹೀಗಿದ್ದು ಅಂಥ ಗಜಬೇಟೆಯ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಅನಂತಮೂರ್ತಿಯವರ ಚಿಂತನೆಯ ಬಗೆ: ಸಾಮಾನ್ಯವಾಗಿ ಅವರ ಚಿಂತನೆ ಮೇಲ್ನೋಟಕ್ಕೆ ಅವಳೀ ವೈರುಧ್ಯಗಳ ಗ್ರಹಿಕೆಯಿಂದ ಕೂಡಿರುವುದಾಗಿ ಕಾಣುತ್ತದೆ. ಬ್ರಾಹ್ಮಣ-ಶೂದ್ರ, ಅಡುಗೆಮನೆ ಭಾಷೆ-ಜಗುಲಿ ಭಾಷೆ, ಜಾಗತಿಕ-ಸ್ಥಳೀಯ, ಕನ್ನಡ ಮಾಧ್ಯಮ-ಇಂಗ್ಲಿಶ್ ಮಾಧ್ಯಮ, ನೆಲ-ಅಟ್ಟಣಿಗೆ ಹೀಗೆ.. ಈ ಬೈನರಿ ಆಪೋಸಿಶನ್‌ಗಳಲ್ಲಿ ಅವರ ಚಿಂತನೆ ಸಾಗಿದರೂ ತಾವು ಯಾವುದರ ಪರ ನಿಲ್ಲುತ್ತಾರೆ ಎಂಬ ಸಂಗತಿ ಅವರನ್ನು ದೇಸಿ; ಶೂದ್ರ ದಮನಿತರ ಗೆಳೆಯನೆನಿಸುವಂತೆ ಮಾಡಿವೆ. ಕನ್ನಡ ಮನಸ್ಸನ್ನು ಸಮೃದ್ಧಿಗಳಿಸಲು, ಜಾತ್ಯತೀತವಾಗಿಸಲು, ವೈಚಾರಿಕ ಎಚ್ಚರದಲ್ಲಿ ನಿಲ್ಲಿಸಲು ಮೊದಲಿನಿಂದಲೂ ಕನ್ನಡ ಸಾಹಿತ್ಯ ಹಾಗು ಕನ್ನಡದ ಚಿಂತನಾ ಬರಹಗಳು ಶ್ರಮಿಸುತ್ತಲೇ ಬಂದಿವೆ. ಈ ಪರಂಪರೆಗೆ ಯು.ಆರ್. ಅವರ 'ಪೂರ್ವಾಪರ', 'ಪ್ರಜ್ಞೆ ಮತ್ತು ಪರಿಸರ', 'ಬೆತ್ತಲೆ ಪೂಜೆ ಏಕೆ ಕೂಡದು' ಮುಂತಾದ ಚಿಂತನಾಬರಹಗಳು ಮತ್ತು ಅವರ ಎಲ್ಲಾ ಸೃಜನಶೀಲ ಕೃತಿಗಳೂ ನೀಡಿರುವ ಕೊಡುಗೆ ಸಾಮಾನ್ಯವಾದದ್ದಲ್ಲ. ಅಕ್ಷರವು ಪ್ರಜ್ಞೆಯಾಗಬೇಕು; ಪ್ರಜ್ಞೆಯು ಕ್ರಿಯೆಯಾಗಬೇಕು ಆವಾಗಲೇ ಅರ್ಥಪೂರ್ಣವೆನಿಸುವುದು.

ಕನ್ನಡ ಮನಸ್ಸು ಎಲ್ಲವನ್ನೂ ಮುಕ್ತವಾಗಿ ಸ್ವೀಕರಿಸುವಂಥಾದ್ದು. ಮೂಲತ: ಚಿಂತನಾಶೀಲವಾದದ್ದು. ಮುಖ್ಯ ವಾಗಿ ಅನ್ಯವನ್ನು ಸಹಿಸಿಕೊಳ್ಳುವಂಥದ್ದು. 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ' ಎಂದು ಕವಿರಾಜ ಮಾರ್ಗಕಾರ ಸಾವಿರವರ್ಷಗಳ ಹಿಂದೆಯೆ ಹೇಳಿರುವನ್ನಲ್ಲವೇ? ಇದರೊಂದಿಗೆ ಸ್ವವಿಮರ್ಶೆಯನ್ನು ಅಂತಸ್ಥವಾಗಿಸಿಕೊಂಡಿರುವುದು ಕನ್ನಡ ಮನಸ್ಸಿನ ವಿಶಿಷ್ಟತೆ. ಹೀಗಾಗಿಯೇ ಸ್ಥಳೀಯತೆ ಮತ್ತು ಜಾಗತೀಯತೆಗಳನ್ನು ಗೊಂದಲವಿಲ್ಲದೆ ಒಳಗು ಮಾಡಿಕೊಳ್ಳಬಲ್ಲ ಶಕ್ತಿ ಅದಕ್ಕೆ ಇದೆ. ಎಂಥ ಸನ್ನಿವೇಶದಲ್ಲೂ ಅನ್ಯಾಯ, ಶೋಷಣೆಗಳನ್ನು ಪ್ರತಿಭಟಿಸುವ ತಂತ್ರಗಾರಿಕೆ ಕನ್ನಡದ ಸಾಹಿತ್ಯ ಮತ್ತು ಚಿಂತನಾ ಧಾರೆಯೊಳಗೆ ಅಡಕವಾಗಿದೆ. ಈ ಎಲ್ಲಾ ಗುಣಗಳು ಅನಂತಮೂರ್ತಿಯವರಲ್ಲಿ ತುಂಬಿಕೊಂಡಿವೆ. ಹೀಗಾಗಿಯೇ ಅವರು ತಮ್ಮ ವಿರೋಧಿಗಳಿಗೂ ಪ್ರಿಯರಾಗಿ ಕಾಣಿಸಬಲ್ಲರು. ಅವರಿಗೆ ೭೫ ತುಂಬಿದ ಈ ಸಂದರ್ಭದಲ್ಲಿ ಅವರನ್ನು ಕುರಿತು ನನ್ನಂಥ ಕಿರಿಯರಿಗೆ ಏನ್ನೆನ್ನಿಸುತ್ತದೆ ಎಂಬ ಹಿನ್ನೆಲೆಯಲ್ಲಿ ಯೋಚಿ ಸತೊಡಗಿದಾಗ ಮೇಲೆ ವಿವರಿಸಿದ ಕೆಲವು ಅಂಶಗಳು ದುತ್ತನೆ ಹೊಳೆದಂಥವು.

ಈ ಅರಿವು ಅನಂತಮೂರ್ತಿಯವರಿಗಿರುವುದರಿಂದಲೇ ಮೊದಲಿನಿಂದಲೂ ಕ್ರಿಯಾತ್ಮಕ ಪ್ರತಿಭಟನೆಯನ್ನು ತಮ್ಮ ಜೀವನದಲ್ಲಿ ಹಾಸುಹೊಕ್ಕಾಗಿಸಿಕೊಂಡಿದ್ದಾರೆ. ಸಮಾಜವಾದಿ ಚಿಂತಕ ಹೋರಾಟಗಾರ ಶಾಂತವೇರಿ ಗೋಪಾಲಗೌಡರ, ಲೋಹಿಯರ ಒಡನಾಟದಲ್ಲಿ ನೇರವಾಗಿ ಮಠಸಂಸ್ಕೃತಿಯಿಂದಲೇ ಬಂದಿದ್ದರು ಅದರ ಎಲ್ಲ ಚಹರೆಗಳನ್ನು ಕಳೆದುಕೊಂಡು ಬೆಳೆಯುವ, 'ಇವ ನಮ್ಮವ ಇವ ನಮ್ಮವ' ಎನಿಸುವ ವರ್ಚಸ್ಸು ಅವರಿಗೆ ದತ್ತವಾಗಿದೆ. ಬ್ರಾಹ್ಮಣ ಶೂದ್ರ ಎನ್ನುವ ಶಬ್ದಗಳನ್ನು ಕೇವಲ ಜಾತಿಸೂಚಕ ಶಬ್ದಗಳೆಂದು ಪರಿಗಣಿಸದೆ ಮನಸ್ಸುಗಳನ್ನು ಆಳುವ ಯಜಮಾನಿಕೆ ಮತ್ತು ದೈಹಿಕ ದುಡಿಮೆಗಳ ಪ್ರತೀಕದಂತೆ ಕಾಣಲು ಅವರಿಗೆ ಸಾಧ್ಯವಾಗಿದೆ. ಇತ್ತೀಚಿನ ಅನರ ಕೃತಿ 'ಮಾತು ಸೋತ ಭಾರತ' ದಲ್ಲಿ "ಪ್ರಗತಿಪರತೆ ಹಾಗೂ ಆಧುನಿಕತೆ ಕುರಿತ ವಿಚಾರಗಳು ಅದ್ಭುತವಾಗಿ ವ್ಯಕ್ತವಾಗಿವೆ.

ಇದರಲ್ಲಿ ಅವರು "ಆಧುನಿಕವಾದದ್ದೆಲ್ಲವೂ ಪ್ರಗತಿಪರ ಆಗಿರಬೇಕಿಲ್ಲ; ಪ್ರಗತಿಪರವಾದದ್ದೆಲ್ಲ ಆಧುನಿಕವೂ ಆಗಿರಬೇಕಿಲ್ಲ" ಎಂದು ಪ್ರತಿಪಾದಿಸಿದ್ದಾರೆ. ಸಂದರ್ಶನವೊಂದರಲ್ಲಿ "ಕಮ್ಯೂನಿಸಮ್ಮನ್ನು, ಕೋಮುವಾದವನ್ನು ನಾನು ವಿಪರೀತವಾಗಿ ದ್ವೇಷ ಮಾಡ್ತೀನಿ. ಯಾಕಂದ್ರೆ ನನಗೆ ರಿಲಿಜನ್ ಬಗ್ಗೆ ಬಹಳ ಗೌರವ ಇದೆ", ಎಂದಿದ್ದಾರೆ. ಇಂಥಾ ಕಡೆಗಳಲ್ಲಿ ಅನಂತಮೂರ್ತಿಯವರ ಚಿಂತನೆ ಎಡವಿದಂತೆ ಕಾಣುತ್ತದೆ. ಅವರೇ ಸಂರಚಿಸಿರುವ ರೂಪಕವೊಂದರಲ್ಲಿ ಅವರ ಚಿಂತನೆ ಬಿಕ್ಕಟ್ಟನ್ನು ಕುರಿತು ಹೇಳುವುದಾದರೆ "ಪೂರ್ವಕ್ಕೆ ಮುಖ ಪಶ್ಚಿಮಕ್ಕೆ ಪ್ರಯಾಣ" ಎಂಬಂತೆ ತೋರುತ್ತದೆ. ಡಿಸೆಂಬರ್-೨೦೦೭ರ 'ಮಯೂರ' ಮಾಸಿಕದಲ್ಲಿ ಡಿ.ಎಸ್. ನಾಗಭೂಷಣ ಅವರು ಅನಂತಮೂರ್ತಿಯವರ ಚಿಂತನಾಬರಹಗಳ ಬಿಕ್ಕಟ್ಟುಗಳನ್ನು ದಿಟ್ಟವಾಗಿ ಗುರ್ತಿಸಿದ್ದಾರೆ. ಇದರಲ್ಲಿ ಹೇಳಿರುವಂತೆ 'ಹಿಂಪಯಣ' ವಾಗಿ ಕೆಲವೆಡೆ ಅದು ಕಾಣಿಸಿದರೆ ಅಚ್ಚರಿಯಿಲ್ಲ. ಯಾವುದೇ ಚಿಂತಕನ, ಬರಹಗಾರನ ವಿಚಾರಗಳು ಪ್ರಶ್ನಾತೀತವಲ್ಲ. ಪರ-ವಿರೋಧಗಳಿಗೆ ಅದರಲ್ಲಿ ಜಾಗವಿದ್ದಾಗಲೇ ನಿಜವಾದ ಸಂಕೀರ್ಣತೆ ಸಾಧ್ಯವಾಗುವುದು. ಈ ಹಿನ್ನೆಲೆಯಲ್ಲಿ ನೋಡಿದಾಗ ಅನಂತಮೂರ್ತಿ ಬರಹಗಳ ಗಟ್ಟಿತನದ ಅರಿವಾಗುತ್ತದೆ. ಅವರ ಸೃಜನಶೀಲ ಬರಹಗಳ ಬಗ್ಗೆ ಒಂದು ಮಾತು ಹೇಳುವುದಾದರೆ ಗದ್ಯದ ವಿಸ್ತಾರತೆಯನ್ನು ಕಾವ್ಯದಲ್ಲೂ ಕಾವ್ಯದ ಸಂಕ್ಷಿಪ್ತತೆಯನ್ನು ಗದ್ಯದಲ್ಲೂ ಮಿಳಿತಗೊಳಿಸುವ ಮಾಂತ್ರಿಕತೆ ಅದರಲ್ಲಿ ಕಂಡು ಬರುತ್ತದೆ.

ಪದ್ಯಪದವಿಲ್ಲದಿರಬೇಕು
ಹೆಜ್ಜೆಗುರುತು ಇಲ್ಲದೆ ಪಕ್ಷಿ ಹಾರುವಂತೆ
ಕಾಲದಲ್ಲಿ ಸ್ತಬ್ಧ ಎನ್ನಿಸಬೇಕು ಎಂಬ(ಅರ್ಚಿಬಾಲ್ಡ್ ಮ್ಯಾಕ್‌ಲೀಶ್ ಎನ್ನುವಂತೆ ಕವಿತೆ) ಎಂಬ ಅವರ ಆಶಯ ಅವರಿಗೆ ಸಿದ್ಧಿಸಿದಂತಿದೆ.

ಜ್ಞಾನಪೀಠ ಬಂದಾಗ: ಅನಂತಮೂರ್ತಿಯವರಿಗೆ ಪ್ರಶಸ್ತಿ ಬಂದಾಗ ೯೦ರ ದಶಕದ ಆದಿಭಾಗದಲ್ಲಿ ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಸಂಚಲನ ಉಂಟಾದಷ್ಟೇ ಚರ್ಚೆಗೆ ಗ್ರಾಸವಾದದ್ದು ಹೌದು. ಆಗ ಎಮ್.ಎ. ಓದುತ್ತಿದ ನಮ್ಮಗಳ ಮಧ್ಯ ಪರ-ವಿರೋಧಗಳ ವಾಗ್ವಾದವೇ ಶುರುವಾಗಿತ್ತು. ಕೆಲವು ಗೆಳೆಯರು ಪ್ರಶಸ್ತಿಗೆ ಅರ್ಹರಾದ ಇನ್ನು ಕೆಲವರು ಇದ್ದರು. ಅವರನ್ನು ಯು.ಆರ್. ಓವರ ಟೇಕ್ ಮಾಡಿದ್ದಾರೆ ಎಂದು ಆರೋಪಿಸುತ್ತಿದ್ದರು. ಅನಂತಮೂರ್ತಿಯವರ ಎಲ್ಲಾಬರಹಗಳನ್ನು ಗಬಗಬನೆ ಓದುತ್ತಿದ್ದ ನಾವು ಮಾತ್ರ ಇಂಥಾ ಅಪಸ್ವರಗಳನ್ನು ಸಾರಾಸಗಟಾಗಿ ತಿರಸ್ಕರುಸುತ್ತಿದ್ದೆವು. ಯಾವುದೇ ಬಗೆಯ ತಾತ್ವಿಕ ವಿರೋಧವೂ ವೈಯಕ್ತಿಕವಾಗಿರಬಾರದು ಎಂಬ ಎಚ್ಚರ ನಮಗೆ ಅನಂತಮೂರ್ತಿಯವರ ಬದುಕು ಮತ್ತು ಬರಹಗಳು ಪರೋಕ್ಷವಾಗಿ ಕಲಿಸಿಕೊಟ್ಟಿದ್ದವು. ಲಂಕೇಶ್‌ರ ಪತ್ರಿಕೆಯ ಕಟುಟೀಕೆಗಳನ್ನು ವಿರೋಧಿಸಿದರೂ "ಪತ್ರಿಕೆ ದೊಣ್ಣೆ ಬೀಸುವ ಸ್ನೇಹಾಸೂಯೆಯ ಬಡಿಗ" 'ಅನಂತಮೂರ್ತಿಗೆ' ಎಂಬ ಲಕ್ಷ್ಮಿನಾರಾಯಣಭಟ್ಟರ ಕವಿತೆಯ ಸಾಲುಗಳು) 'ಕಲ್ಲುಕರಗುವ ಸಮಯ'ಕ್ಕೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಕೇ.ಸಾ.ಅ.ದ ಅಧ್ಯಕ್ಷರಾಗಿದ್ದವರು ಅನಂತಮೂರ್ತಿಯವರೆ.

ವಿರೋಧಿಗಳನ್ನು ಸಹಿಸಿಕೊಳ್ಳುವ ಅವರ ಗುಣ ಅನುಕರಣೀಯವಾದ್ದದ್ದು. ಇವರು ಸ್ವಾತಂತ್ರ್ಯದ ಮುಂಜಾವಿನಲ್ಲಿ ಅಂತರ್ಮತೀಯ ಮದುವೆ ಮಾಡಿಕೊಂಡರು. ಈ ಮೂಲಕ ಸಾಮಾಜಿಕ ಹಿನ್ನೆಲೆ ಕುರಿತು ತಗಾದೆ ತೆಗೆವವರಿಗೆ ಯು.ಆರ್. ಕ್ರಿಯೆಯ ರೂಪದಲ್ಲಿಯೇ ಉತ್ತರ

(೪೯ನೇ ಪುಟಕ್ಕೆ)

ಬೆನಜಿರ್ ಹತ್ಯೆ: ಅರಾಜಕತೆಯತ್ತ ಪಾಕ್

ಸಾವಿನ ಕತ್ತಿ ನೆತ್ತಿಯ ಮೇಲೆ ತೂಗಾಡುತ್ತಿದ್ದರೂ ಲೆಕ್ಕಿಸದೆ ತಮ್ಮ ಧ್ಯೇಯಸಾಧನೆಗಾಗಿ ಹೋರಾಡಲಿಚ್ಛಿಸುವ ರಾಜಕೀಯ ನಾಯಕರುಗಳು ಜಾಗತಿಕ ಇತಿಹಾಸದಲ್ಲಿ ಬೆರಳೆಣಿಕೆಯಷ್ಟು ಮಾತ್ರ ಕಾಣಸಿಗುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ, ರಾಜಕಾರಣವೆಂದರೆ ಸ್ವಾರ್ಥತೆಯ ಪರ್ಯಾಯವೆಂದೇ ಪರಿಗಣಿಸಲ್ಪಡುವ ಸನ್ನಿವೇಶದಲ್ಲಿ, ಈ ರೀತಿಯ ಮೌಲ್ಯಾಧಾರಿತ ರಾಜಕಾರಣಿಗಳು ಕಾಣುವುದು ವಿರಳವೆಂದೇ ಹೇಳಬಹುದು. ಮೊದಲು ಸ್ವರಕ್ಷಣೆ ನಂತರ ಜನರಕ್ಷಣೆ ಎಂಬ ಮಂತ್ರವನ್ನೇ ಪಠಿಸುವ ರಾಜಕಾರಣಿಗಳು ಜಗತ್ತಿನಾದ್ಯಂತ ರಾರಾಜಿಸುತ್ತಿದ್ದಾರೆ. ಇಂಥವರ ಸಾಲಿಗೆ ಸೇರದ, ಧೀಮಂತ ರಾಜಕಾರಣಿಯಾಗಿ ಪ್ರಜಾತಂತ್ರ ವ್ಯವಸ್ಥೆಗಾಗಿ ಹೋರಾಡುವ ಛಲ ತೊಟ್ಟ ಪಾಕಿಸ್ತಾನದ ಮಾಜಿ ಪ್ರಧಾನಿ ಬೆನಝೀರ್ ಭುಟ್ಟೋರವರ ದಾರುಣ ಹತ್ಯೆ, ಈಗಾಗಲೇ ಅರಾಜಕತೆಯಿಂದ ಬಳಲುತ್ತಿರುವ ಪಾಕಿಸ್ತಾನದ ರಾಜಕಾರಣದಲ್ಲಿ ಬಿರುಗಾಳಿ ಎಬ್ಬಿಸಿದೆ. ಭುಟ್ಟೋರವರ ಗತಕಾಲದ ರಾಜಕಾರಣ ಅನೇಕ ವೈರುಧ್ಯಗಳಿಂದ ಕೂಡಿದ್ದರೂ, ತಾನೇ ನಿರ್ಮಿಸಿಕೊಂಡ ಮೌಲ್ಯಗಳಿಂದ ದೂರ ಸರಿದು ಭ್ರಷ್ಟ ವ್ಯವಸ್ಥೆಯೊಡನೆ ಸಂಧಾನ ಮಾಡಿಕೊಂಡಿದ್ದರೂ, ಪ್ರಸ್ತುತ ಪಾಕಿಸ್ತಾನದ ಸಾಮಾನ್ಯ ಜನತೆಯ ದೃಷ್ಟಿಯಲ್ಲಿ ಆಕೆ ಪ್ರಜಾತಂತ್ರಕ್ಕಾಗಿ ಹೋರಾಡುವ ಧೀಮಂತ ನಾಯಕಿಯಾಗಿದ್ದುದಂತೂ ಸತ್ಯ.

ಎರಡು ಬಾರಿ ಪಾಕಿಸ್ತಾನದ ಪ್ರಧಾನಿಯ ಸ್ಥಾನ ಅಲಂಕರಿಸಿದ್ದ ಬೆನಝೀರ್ ಸಾವಿಗೆ ಅಂಜಿದವರಲ್ಲ. ಬದಲಾಗಿ ಸಾವಿನೊಡನೆ ಸರಸವಾಡಿದವರೆಂದೇ ಹೇಳಬಹುದು. ಸೇನಾಡಳಿತದಿಂದ ಬೇಸತ್ತಿದ್ದ ಪಾಕಿಸ್ತಾನದ ಜನತೆಗೆ ಬೆನಝೀರ್ ಪ್ರಜಾತಂತ್ರದ ಪ್ರತಿಮೆಯಾಗಿ ಕಂಡುಬಂದಿರುವುದರಲ್ಲಿ ಅಚ್ಚರಿಯೇನಿಲ್ಲ. ಆದರೆ ಭುಟ್ಟೋರವರ ರಾಜಕೀಯ ನಿಲುವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರಲ್ಲಿ ಅನೇಕ ಪ್ರಜಾತಂತ್ರವಿರೋಧಿ ಲಕ್ಷಣಗಳನ್ನೂ ಗುರುತಿಸಬಹುದು. ತಮ್ಮ ಉಯಿಲಿನಲ್ಲಿ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಮಗನನ್ನೇ ನೇಮಿಸಲು ಹೇಳಿರುವುದು ಒಂದು ನಿದರ್ಶನವಷ್ಟೆ. ಆದರೂ ಭುಟ್ಟೋರವರ ಭಂಡೆದೆಯನ್ನು ಮೆಚ್ಚಬೇಕಾದ್ದೆ. ೧೯೭೯ರಲ್ಲಿ ತನ್ನ ೨೬ನೇ ವಯಸ್ಸಿನಲ್ಲೇ ತಂದೆ ಝುಲ್ಫೀಕರ್ ಆಲಿ ಭುಟ್ಟೋರವರು ನೇಣುಗಂಬ ಏರುವುದನ್ನು ಕಂಡಿದ್ದ ಬೆನಝೀರ್ ಅಂದಿನಿಂದಲೂ ಸಾವಿನೊಡನೆ ಸ್ನೇಹದಿಂದಲೇ ನಡೆದು ಬಂದಿರುವುದನ್ನು ಗಮನಿಸಬಹುದು. ೧೯೮೫ರಲ್ಲಿ ಜನರಲ್ ಜಿಯಾ ಉಲ್ ಹಕ್‌ರವರಿಂದ ಅಪಾಯವಿದೆ ಎಂದು ಅರಿತಿದ್ದರೂ, ಹತ್ಯೆಯಾದ ತಮ್ಮನ ದೇಹವನ್ನು ಪಾಕಿಸ್ತಾನಕ್ಕೆ ತಂದು ತಂದೆಯ ಸಮಾಧಿಯ ಬಳಿ ಹೂತಿದ್ದರು. ೧೯೯೬ರಲ್ಲಿ ಪ್ರಧಾನಿಯಾಗಿದ್ದಾಗ ಮತ್ತೊಬ್ಬ ಸೋದರ ಮುರ್‌ತಾಜಾ ಭುಟ್ಟೋರವರ ಅಂತಿಮ ಸಂಸ್ಕಾರವನ್ನೂ ಅಲ್ಲಿಯೇ ನೆರವೇರಿಸಿದ್ದರು. **"ನಮ್ಮ ಕುಟುಂಬದಲ್ಲಿ ಮೂರು ಜನ ಪುರುಷ ಭುಟ್ಟೋಗಳಿದ್ದರು, ಈಗ ಮೂವರು ಮಹಿಳಾ ಭುಟ್ಟೋಗಳು ಮಾತ್ರ ಉಳಿದಿದ್ದೇವೆ "** ಎಂಬ ಅವರ ನುಡಿಗಳು ಅವರ ಮರಣಾನಂತರ ಪಾಕಿಸ್ತಾನದಲ್ಲಿ ಪುನಃ ಮೊಳಗುತ್ತಿದೆ. ಸಾವಿನೊಡನೆ ಸರಸವಾಡುವ ಈ ದಿಟ್ಟತನವೇ ಡಿಸೆಂಬರ್ ೨೭ ೨೦೦೭ರ ಬೆನಝೀರ್ ಭುಟ್ಟೋರವರ ಸಾವಿಗೆ ಕಾರಣವಾಗಿತ್ತು.

ಭುಟ್ಟೋರವರ ಸಾವು ಇನ್ನೂ ನಿಗೂಢವಾಗಿರುವಂತೆಯೇ, ಪಾಕಿಸ್ತಾನ ಸರ್ಕಾರ ಅಪರಾಧಿ ಸ್ಥಾನದಿಂದ ತಪ್ಪಿಸಿಕೊಳ್ಳಲು ಸರ್ವಪ್ರಯತ್ನ ಮಾಡುತ್ತಿದೆ. ಭುಟ್ಟೋರವರ ಅಂತಿಮ ಯಾತ್ರೆಗೆ ನೆರೆದ ಅಪಾರ ಜನಸ್ತೋಮ ಮುಷರಫ್ ಸರ್ಕಾರದಲ್ಲಿ ನಡುಕ ಹುಟ್ಟಿಸಿದೆ. ಸಿಂಧ್ ಪ್ರಾಂತ್ಯದ ಪುತ್ರಿ ಎಂದೇ ಹೆಸರಾಗಿದ್ದ ಭುಟ್ಟೋರವರ ಮರಣದಿಂದ, ಈಗಾಗಲೇ ಪ್ರತ್ಯೇಕತೆಗಾಗಿ ಹೋರಾಡುತ್ತಿರುವ ಈ ಪ್ರಾಂತ್ಯದಲ್ಲಿ ಸಾಮಾಜಿಕ ಕ್ಷೋಭೆ ಹೆಚ್ಚುವ ಸಾಧ್ಯತೆಗಳಿವೆ. ಭುಟ್ಟೋರವರ ಶವಯಾತ್ರೆಯ ಸಮಯದಲ್ಲಿ ನಡೆದ ಗಲಭೆಗಳಲ್ಲಿ ಈ ಲಕ್ಷಣಗಳು ವ್ಯಕ್ತವಾಗಿವೆ. ಕೆಲವು ಪ್ರದೇಶಗಳಲ್ಲಿ ಭುಟ್ಟೋ ಹಿಂಬಾಲಕರು ಪಂಜಾಬಿಗಳ ಮೇಲೆ ಆಕ್ರಮಣ ಮಾಡಿದ್ದಾರೆ. ಪಾಕಿಸ್ತಾನದ ಮಿಲಿಟರಿ ಆಡಳಿತ ಮುಖ್ಯ ಕಛೇರಿಯಾಗಿರುವ ಪಂಜಾಬಿನಲ್ಲಿಯೇ ಮೂರು ಪ್ರಧಾನಿಗಳು ಅಸುನೀಗಿರುವುದು ಈ ದ್ವೇಷಕ್ಕೆ ಕಾರಣವಾಗಿದೆ. ೧೯೫೧ರಲ್ಲಿ ಲಿಯಾಖತ್ ಅಲಿ ಖಾನ್, ೧೯೭೯ರಲ್ಲಿ ಭುಟ್ಟೋ ಮತ್ತು ಇಂದು ಬೆನಝೀರ್. ಈಗಾಗಲೇ ಪ್ರಾದೇಶಿಕ ಯಾದವೀ ಕಲಹಗಳಿಂದ ಜರ್ಝರಿತವಾಗಿರುವ ಪಾಕಿಸ್ತಾನಕ್ಕೆ ಭುಟ್ಟೋರವರ

ಭುಟ್ಟೋರವರ ಸಾವು ಇನ್ನೂ ನಿಗೂಢವಾಗಿರುವಂತೆಯೇ, ಪಾಕಿಸ್ತಾನ ಸರ್ಕಾರ ಅಪರಾಧಿ ಸ್ಥಾನದಿಂದ ತಪ್ಪಿಸಿ ಕೊಳ್ಳಲು ಸರ್ವಪ್ರಯತ್ನ ಮಾಡುತ್ತಿದೆ. ಭುಟ್ಟೋರವರ ಅಂತಿಮ ಯಾತ್ರೆಗೆ ನೆರೆದ ಅಪಾರ ಜನಸ್ತೋಮ ಮುಷರಫ್ ಸರ್ಕಾರದಲ್ಲಿ ನಡುಕ ಹುಟ್ಟಿಸಿದೆ. ಸಿಂಧ್ ಪ್ರಾಂತ್ಯದ ಪುತ್ರಿ ಎಂದೇ ಹೆಸರಾಗಿದ್ದ ಭುಟ್ಟೋರವರ ಮರಣದಿಂದ, ಈಗಾಗಲೇ ಪ್ರತ್ಯೇಕತೆಗಾಗಿ ಹೋರಾಡುತ್ತಿರುವ ಈ ಪ್ರಾಂತ್ಯದಲ್ಲಿ ಸಾಮಾಜಿಕ ಕ್ಷೋಭೆ ಹೆಚ್ಚುವ ಸಾಧ್ಯತೆಗಳಿವೆ. ಭುಟ್ಟೋರವರ ಶವಯಾತ್ರೆಯ ಸಮಯದಲ್ಲಿ ನಡೆದ ಗಲಭೆಗಳಲ್ಲಿ ಈ ಲಕ್ಷಣಗಳು ವ್ಯಕ್ತವಾಗಿವೆ. ಕೆಲವು ಪ್ರದೇಶಗಳಲ್ಲಿ ಭುಟ್ಟೋ ಹಿಂಬಾಲಕರು ಪಂಜಾಬಿಗಳ ಮೇಲೆ ಆಕ್ರಮಣ ಮಾಡಿದ್ದಾರೆ. ಪಾಕಿಸ್ತಾನದ ಮಿಲಿಟರಿ ಆಡಳಿತ ಮುಖ್ಯ ಕಛೇರಿಯಾಗಿರುವ ಪಂಜಾಬಿನಲ್ಲಿಯೇ ಮೂರು ಪ್ರಧಾನಿಗಳು ಅಸುನೀಗಿರುವುದು ಈ ದ್ವೇಷಕ್ಕೆ ಕಾರಣವಾಗಿದೆ.

ನಾಡಿ ಬಂಗಾರಪೇಟೆ

ಹತ್ಯೆ ಒಂದು ಅಪಾಯಕರ ತಿರುವು ನೀಡುವ ಸಾಧ್ಯತೆಗಳನ್ನೂ ತಳ್ಳಿಹಾಕಲಾಗುವುದಿಲ್ಲ.

ಬೆನಝೀರ್–ವೈರುಧ್ಯಗಳ ರಾಜಕೀಯ

ತನ್ನ ೫೪ನೆಯ ವಯಸ್ಸಿನಲ್ಲಿ ದಾರುಣ ರೀತಿಯಲ್ಲಿ ಹತ್ಯೆಗೀಡಾದ ಬೆನಝೀರ್ ಕಳೆದ ೨೫ ವರ್ಷಗಳಲ್ಲಿ ಪಾಕಿಸ್ತಾನ ಕಂಡ ಅತ್ಯಂತ ಪ್ರಭಾವಶಾಲಿ ರಾಜಕಾರಣಿ ಎಂದು ಹೇಳಬಹುದು. ತನ್ನ ತಂದೆಯ ಮಾರ್ಗವನ್ನೇ ಅನುಸರಿಸಿದ ಬೆನಝೀರ್ ಅದೇ ರೀತಿಯಲ್ಲಿ ಅಂತ್ಯಗೊಂಡದ್ದು ವಿಪರ್ಯಾಸವಷ್ಟೆ. ಒಂದು ವೇಳೆ ಬದುಕಿದ್ದಲ್ಲಿ ಬೆನಝೀರ್ ಮುಷರಫ್‌ರೊಡನೆ ಸ್ನೇಹ ಬೆಳೆಸುತ್ತಿದ್ದರೋ ಇಲ್ಲವೋ ಎಂದು ಊಹಿಸುವುದು ಕಷ್ಟವಾಗುತ್ತದೆ. ಕೆಲವು ವಿಶ್ಲೇಷಕರ ಅಭಿಪ್ರಾಯದಲ್ಲಿ ಅಮೆರಿಕಾದ ಒತ್ತಾಸೆಯ ಮೇರೆಗೆ ಮುಷ್ರಾಫ್‌ರೊಡನೆ ಮೈತ್ರಿ ಸಾಧಿಸಿ, ಇಸ್ಲಾಮಿಕ್ ಭಯೋತ್ಪಾದಕತೆಯ ವಿರುದ್ಧ ಹೋರಾಡಲು ಬೆನಝೀರ್ ಸಿದ್ಧರಾಗಿದ್ದರೆಂದು ಹೇಳಲಾಗುತ್ತಿದೆ. ಹಾಗಾಗಿ ಭಯೋತ್ಪಾದಕ ಶಕ್ತಿಗಳೇ ಅವರ ಹತ್ಯೆ ಮಾಡಿರಬಹುದೆಂದೂ ಶಂಕಿಸಲಾಗುತ್ತಿದೆ. ಭುಟ್ಟೋರವರ ಪ್ರಜಾತಾಂತ್ರಿಕ ಪ್ರತಿಪಾದನೆಗಳು ಎಷ್ಟರ ಮಟ್ಟಿಗೆ ನಿಷ್ಠೆಯಿಂದ ಕೂಡಿತ್ತು ಎಂದು ಹೇಳುವುದು ಕಷ್ಟವಾದರೂ, ಅವರ ಇತ್ತೀಚಿನ ರಾಜಕೀಯ ನಿಲುವುಗಳನ್ನು ತೀವ್ರವಾಗಿ ಖಂಡಿಸುವವರೂ ಸಹ, ಅವರ ಹತ್ಯೆಯಿಂದ ಪ್ರಕ್ಷುಬ್ಧರಾಗಿದ್ದಾರೆ. ವೈಯಕ್ತಿಕ ದೃಷ್ಟಿಯಿಂದ ನೋಡುವುದಾದರೆ ಬೆನಝೀರ್‌ರವರು ತಮ್ಮ ರಾಜಕೀಯ ಜೀವನದ ಒಂದು ಪ್ರಮುಖ ಹಂತದಲ್ಲಿ ಇಹಲೋಕ ತ್ಯಜಿಸಿದ್ದಾರೆ. ತನ್ನ ಕುಟುಂಬದ ಮೂವರು ಸದಸ್ಯರು ಕೊಲೆಯಾಗಿದ್ದನ್ನು ಕಂಡ ಬೆನಝೀರ್ ತನ್ನ ಅಂತ್ಯವೂ ಅದೇ ರೀತಿಯಲ್ಲಾಗುತ್ತದೆ ಎಂದು ಊಹಿಸಿರಲಿಕ್ಕಿಲ್ಲ. ಆದರೆ ಬೆನಝೀರ್‌ರವರ ಹತ್ಯೆಯಿಂದ ಪಾಕಿಸ್ತಾನದ ರಾಜಕಾರಣದಲ್ಲಿ, ಸಾಮಾಜಿಕ ಸ್ಥಿತ್ಯಂತರಗಳಲ್ಲಿ ಪ್ರಮುಖ ಬದಲಾವಣೆಗಳಾಗುವ ಸಾಧ್ಯತೆಗಳನ್ನು ತಳ್ಳಿಹಾಕಲಾಗುವುದಿಲ್ಲ.

ಜಾಗತಿಕ ಮಟ್ಟದಲ್ಲಿ ಪಸರಿಸಿರು, ದೊಡ್ಡಣ್ಣ ಅಮೆರಿಕಾದ ಸೃಷ್ಟಿಯಾದ ಅಲಲ್‌ಖೈದಾ ಸಂಘಟನೆ ಪ್ರಾರಂಭದಲ್ಲಿ ಬೆನಝೀರ್ ಹತ್ಯೆಗೆ ತಾನೇ ಕಾರಣ ಎಂದು ಘೋಷಿಸಿತ್ತಾದರೂ, ನಂತರದಲ್ಲಿ ತನ್ನ ಹೇಳಿಕೆಯನ್ನು ಹಿಂತೆಗೆದುಕೊಂಡಿರುವುದು ಇಡೀ ಪ್ರಕರಣವನ್ನು ನಿಗೂಢಗೊಳಿಸಿದೆ. ಬೆನಝೀರ್‌ರವರನ್ನು ಹತ್ಯೆಗೈದವರು ಇನ್ನೆಂದಿಗೂ ಕೈಗೆಟುಕದ ಸಾಧ್ಯತೆಗಳೂ ಇವೆ. ಆದರೂ ಪಾಕಿಸ್ತಾನ ಸರ್ಕಾರವು ಈ ಹತ್ಯೆಗೆ ಅಲಲ್‌ಖೈದಾ ಸಂಘಟನೆಯೇ ಕಾರಣ ಎಂದು ಹೇಳಿಕೆ ನೀಡಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯೂ ಇದೇ ಅಭಿಪ್ರಾಯವನ್ನು ತಾಳುತ್ತದೆ. ಪಾಕಿಸ್ತಾನದಲ್ಲಿ ಮಾಜಿ ಜನರಲ್ ಮುಷರಫ್‌ರವರ ಜೊತೆಗೂಡಿ, ಪ್ರಜಾತಂತ್ರವನ್ನು ಮರು ಸ್ಥಾಪಿಸುವ ಬೆನಝೀರ್‌ರವರ ಯತ್ನವನ್ನು ವಿಫಲಗೊಳಿಸಲು ಭಯೋತ್ಪಾದಕರು ಈ ಕೃತ್ಯವನ್ನೆಸಗಿದ್ದಾರೆ ಎಂದು ಐರೋಪ್ಯ ರಾಷ್ಟ್ರಗಳು ಪ್ರತಿಪಾದಿಸುತ್ತಿವೆ. ಬೆನಝೀರ್‌ನ ಬೆಂಬಲಿಗರು ಮತ್ತು ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿ.ಪಿ.ಪಿ.)ಯ ವಕ್ತಾರರು, ಬೆನಝೀರ್‌ಗೆ ಸೂಕ್ತ ರಕ್ಷಣೆಯನ್ನು ಒದಗಿಸುವಲ್ಲಿ ಮುಷರಫ್ ವಿಫಲರಾಗಿದ್ದಾರೆ ಎಂದು ದೂಷಿಸಿದರೂ, ಅವರ ಸಾವಿಗೆ ಮುಷರಾಫ್ ಕಾರಣ ಎಂದು ಎಲ್ಲಿಯೂ ಹೇಳದಿರುವುದರಿಂದ, ಭಯೋತ್ಪಾದಕರ ಕೃತ್ಯವನ್ನೇ ಅವರೂ ಪ್ರತಿಪಾದಿಸುವಂತೆ ಕಾಣುತ್ತದೆ.


ಬೆನಝೀರ್– ವಿದಾಯದ ನಗು

ಈ ಸಂದರ್ಭದಲ್ಲಿ ಎರಡು ಪ್ರತಿಕ್ರಿಯೆಗಳನ್ನು ಗಮನಿಸಬಹುದಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳು ಜಾಗತಿಕ ಮಟ್ಟದಲ್ಲಿ **"ಆಧುನಿಕತೆ ಮತ್ತು ತೀವ್ರವಾದ"**, **"ಸೆಕ್ಯುಲರ್ ಪ್ರಜಾತಂತ್ರ ಮತ್ತು ಇಸ್ಲಾಮಿಕ್ ಮೂಲಭೂತವಾದ"** ಹಾಗೂ **"ಪ್ರಜಾತಂತ್ರ ಮತ್ತು ಧಾರ್ಮಿಕ ಪ್ರಭುತ್ವ"**, ಈ ಮೂರು ಸ್ತರಗಳಲ್ಲಿ ಘರ್ಷಣೆ ನಡೆಯುತ್ತಿದೆ ಎಂದು ಪ್ರತಿಪಾದಿಸುತ್ತವೆ. ಈ ಸಂಘರ್ಷದಲ್ಲಿ ಆಧುನಿಕತೆ, ಪ್ರಜಾತಂತ್ರ ಮತ್ತು ಸೆಕ್ಯುಲರಿಸಂನ ರಕ್ಷಣೆಗಾಗಿ ಹೋರಾಡುತ್ತಿದ್ದ ಬೆನಝೀರ್ ಇಸ್ಲಾಮಿಕ್ ಭಯೋತ್ಪಾದಕರಿಂದ ಹತ್ಯೆಗೀಡಾಗಿದ್ದಾರೆ ಎಂದು ಪ್ರತಿಪಾದಿಸಲಾಗುತ್ತಿದೆ. ಇನ್ನೊಂದೆಡೆ ಇಡೀ ಸಂದರ್ಭವನ್ನು ಇಸ್ಲಾಮ್ ಪರವಾಗಿರುವವರು ಮತ್ತು ಇಸ್ಲಾಂ ವಿರೋಧಿಗಳ ಸಂಘರ್ಷದಂತೆ ಬಣ್ಣಿಸಲಾಗುತ್ತಿದೆ. ಮುಸ್ಲಿಂ ರಾಷ್ಟ್ರಗಳನ್ನು ವಶಪಡಿಸಿಕೊಳ್ಳುವ ಹುನ್ನಾರ ನಡೆಸಿರುವ ಅಮೆರಿಕಾದ ಸಾಮ್ರಾಜ್ಯಶಾಹಿಗೆ ಬೆಂಬಲವಾಗಿ ನಿಂತವರಲ್ಲಿ ಇರಾಕ್‌ನ ನೂರಿ ಅಲ್ ಮಲ್ಲಿಕಿ, ಪಾಲೆಸ್ಟೈನಿನ ಮಹಮೂದ್ ಅಬ್ಬಾಸ್, ಆಫ್ಘಾನಿಸ್ತಾನದ ಹಮೀದ್ ಕರ್ಝಾಯಿ, ಜೋರ್ಡಾನ್ ಮತ್ತು ಸೌದಿ ಅರೆಬಿಯಾದ ರಾಜರುಗಳು ಮತ್ತು ಅವರೊಡನೆ ಮುಷರಫ್ ಮತ್ತು ಬೆನಝೀರ್‌ರವರನ್ನೂ ಸೇರಿಸಲಾಗುತ್ತದೆ.

ಪಾಶ್ಚಿಮಾತ್ಯ ದೇಶಗಳ ಪತ್ರಿಕೆಗಳಲ್ಲಿ ಬೆನಝೀರ್‌ರವರ ಸಾವನ್ನು, ಅಮೆರಿಕಾದ **"ಭಯೋತ್ಪಾದನೆಯ ವಿರುದ್ಧದ ಹೋರಾಟಕ್ಕೆ"** ಆಘಾತಕಾರಿ ಎಂದೇ ಹೇಳುತ್ತಿರುವುದು ಇಲ್ಲಿ ಗಮನಾರ್ಹವಾಗಿದೆ. ವಿಶ್ವ ಸಂಸ್ಥೆಯ ಅಮೆರಿಕಾದ ರಾಯಭಾರಿ ಝುಲ್ಮೇ ಖಲೀಲ್‌ಜಾದ್‌ರವರು ಭುಟ್ಟೋರವರನ್ನು ಅಮೆರಿಕಾದ ಖಾಸಗಿ ಗೆಳತಿ ಎಂದೇ ಕರೆಯುತ್ತಾರೆ. ಮುಂಬರುವ ಅಮೆರಿಕಾದ ಅಧ್ಯಕ್ಷೀಯ ಚುನಾವಣೆಗಳಿಗೆ ಸ್ಪರ್ಧಿಸುತ್ತಿರುವ ಹಿಲ್ಲರಿ ಕ್ಲಿಂಟನ್, ರೂಡಿ ಗುಲಿಯಾನಿ, ಒಬಾಮಾ ಎಲ್ಲರೂ ಬೆನಝೀರ್‌ನ ಸಾವಿನ ನಂತರ ಅವರ ಬಗ್ಗೆ ಅನುಕಂಪ ವ್ಯಕ್ತಪಡಿಸಲಾರಂಭಿಸಿದ್ದಾರೆ. ಭುಟ್ಟೋ ಮತ್ತು ಮುಷರಫ್ ನಡುವೆ ಸಂಧಾನ ನಡೆಸುವುದರಲ್ಲಿ ಪ್ರಮುಖ ಪಾತ್ರ ವಹಿಸಿ ಭುಟ್ಟೋ ಪಾಕಿಸ್ತಾನಕ್ಕೆ ಮರಳಿ ಬರುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದ ಬ್ರಿಟನ್‌ನ ಪ್ರಧಾನಿ ಗಾರ್ಡನ್ ಬ್ರೌನ್ ಸಹ ಬೆನಝೀರ್ ಸಾವಿಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಈ ಸಂತಾಪ ಮತ್ತು ಅನುಕಂಪಗಳ ಹಿಂದೆ ಮಾನವೀಯತೆಗಿಂತಲೂ ರಾಜಕೀಯ ಮತ್ತು ರಾಜತಾಂತ್ರಿಕ ಧ್ಯೇಯಗಳನ್ನು ಗ್ರಹಿಸಬೇಕಾಗುತ್ತದೆ. ಝುಲ್ಫಿಕರ್ ಭುಟ್ಟೋರವರನ್ನು ನೇಣುಗಂಬಕ್ಕೇರಿಸಿ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿದ ಝಿಯಾ ಉಲ್ ಹಕ್‌ರವರ ಅವಧಿಯಲ್ಲಿ, ಕಮ್ಯುನಿಸ್ಟ್ ರಷ್ಯಾ ಮತ್ತು ಅದರ ಪ್ರಾಬಲ್ಯ ಹೆಚ್ಚಾಗಿದ್ದ ಆಫ್ಘಾನಿಸ್ತಾನದಲ್ಲಿ ಕಮ್ಯುನಿಸ್ಟ್ ಪ್ರಭಾವವನ್ನು ಎದುರಿಸಲು ಮುಜಾಹಿದೀನ್ ಸೈನ್ಯಗಳನ್ನು, ಅಲ್‌ಖೈದಾ ಎಂಬ ಸಂಘಟನೆಯನ್ನು ಪಾಕಿಸ್ತಾನದ ನೆಲದಲ್ಲಿ ಹುಟ್ಟುಹಾಕಿದ ಅಮೆರಿಕಾ ಮತ್ತು ಮಿತ್ರ ರಾಷ್ಟ್ರಗಳಿಗೆ ಈಗ ಇದೇ ಅಲ್‌ಖೈದಾ ಸಂಘಟನೆಯನ್ನು ಹತ್ತಿಕ್ಕಲು, ಪಾಕಿಸ್ತಾನದ ನೆರವು ಬೇಕಾದದ್ದು ಇತಿಹಾಸದ ವಿಡಂಬನೆ ಎಂದೇ ಹೇಳಬಹುದು. ಈ ಹೊಸ ಸಾಮ್ರಾಜ್ಯ ಶಾಹಿ ತಂತ್ರಗಾರಿಕೆಯಲ್ಲಿ ಪ್ರಜಾತಂತ್ರದ ಮುಖವಾಡ ಅಮೆರಿಕಾಗೆ ಅವಶ್ಯವಾಗಿತ್ತು. ಮಿಲಿಟರಿ ಸಮವಸ್ತ್ರ ಧರಿಸಿದ್ದ ಮುಷರಫ್‌ರಿಂದ ತನ್ನ ಪ್ರಜಾತಂತ್ರದ ಸೋಗನ್ನು ಪ್ರದರ್ಶಿಸಲಾಗುವುದಿಲ್ಲ ಎಂದರಿತ ಅಮೆರಿಕಾ, ಬೆನಝೀರ್‌ರವರನ್ನು ಪಾಕಿಸ್ತಾನಕ್ಕೆ ಮರಳುವಂತೆ ಪ್ರೇರೇಪಿಸಿತ್ತು. ಬಹುತೇಕ ಒಂದು ದಶಕದ ಕಾಲ ಮುಷರಫ್‌ರವರನ್ನು ಎದುರಿಸಿ ಹೋರಾಡಿ, ಹೊರದೇಶದಲ್ಲಿ ಇದ್ದುಕೊಂಡೇ ಪಾಕಿಸ್ತಾನದಲ್ಲಿ ತನ್ನ ಪಕ್ಷವನ್ನು ಬಲಪಡಿಸಿದ್ದ ಬೆನಝೀರ್ ತಾಯ್ನಾಡಿಗೆ ಮರಳಲು, ಆಕೆಯಲ್ಲಿದ್ದ ಪ್ರಜಾತಾಂತ್ರಿಕ ತುಡಿತವೂ ಒಂದು ಕಾರಣವಾಗಿರಬಹುದು. ಆದರೆ ಆಕೆಯ ದಾರುಣ ಹತ್ಯೆಯ ನಂತರದಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸತೊಡಗಿವೆ. ಭುಟ್ಟೋ ಆಧುನಿಕತೆಯನ್ನು ಪ್ರತಿಪಾದಿಸುತ್ತಿದ್ದ ಪ್ರಜಾತಾಂತ್ರಿಕ ನಾಯಕಿಯೇ, ಅಮೆರಿಕಾದ ಏಜೆಂಟಳೇ, ಪಾಕಿಸ್ತಾನದಲ್ಲಿ ನಿಜವಾದ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಪ್ರಾಣ ತೆತ್ತ ಧೀಮಂತ ನಾಯಕಿಯೆ, ಭಯೋತ್ಪಾದನೆಯ ವಿರುದ್ಧ ಹೋರಾಟದಲ್ಲಿ ಹತಳಾದ ಹುತಾತ್ಮಳೇ ಇಂತಹ ಹಲವು ಸಂಕೀರ್ಣ ಪ್ರಶ್ನೆಗಳು ರಾಜಕೀಯ ಪಂಡಿತರನ್ನು ಕಾಡತೊಡಗಿವೆ.

ಬೆನಝೀರ್ ನಡೆದು ಬಂದ ಹಾದಿ

ಪಾಕಿಸ್ತಾನದ ಅತ್ಯಂತ ಪ್ರಭಾವಶಾಲಿ ಪ್ರಧಾನಿಯಾಗಿದ್ದ ಝುಲ್ಫೀಕರ್ ಆಲಿ ಭುಟ್ಟೋರವರ ಸರ್ಕಾರವನ್ನು ಪದಚ್ಯುತಗೊಳಿಸಿದ ಸಂದರ್ಭದಲ್ಲಿ ಬೆನಝೀರ್ ಪಿ.ಪಿ.ಪಿಯ ನಾಯಕಿಯಾಗಿ ಅಧಿಕಾರವಹಿಸಿಕೊಳ್ಳುವುದು ರಾಜಕೀಯ ಅನಿವಾರ್ಯತೆಯಾಗಿತ್ತು. ಭುಟ್ಟೋ ಕುಟುಂಬವನ್ನು ಬೇಟೆಯಾಡುತ್ತಿದ್ದ ಝಿಯಾ ಉಲ್ ಹಕ್‌ರವರ ದಾಳಿಯಿಂದ ರಕ್ಷಿಸಿಕೊಳ್ಳುವುದೂ ಬೆನಝೀರ್‌ಗೆ ಅನಿವಾರ್ಯವಾಗಿತ್ತು. ಝಿಯಾ ಉಲ್ ಹಕ್‌ರವರ ಅವಧಿಯಲ್ಲಿ, ಒಂದು ಸೆಕ್ಯುಲಾರ್ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದ್ದ ಪಾಕಿಸ್ತಾನ ಕ್ರಮೇಣವಾಗಿ ಮಿಲಿಟರಿ ರಾಷ್ಟ್ರವಾಗಿ, ಇಸ್ಲಾಮಿಕ್ ರಾಷ್ಟ್ರವಾಗಿ, ಕಮ್ಯುನಿಸಂ ವಿರುದ್ಧ ಹೋರಾಡುವ ಇಸ್ಲಾಮಿ ಜಿಹಾದಿ ದೇಶವಾಗಿ ಪರಿವರ್ತಿತಗೊಂಡಿದ್ದು ಪಾಕ್ ಇತಿಹಾಸ ದುರಂತವೆಂದೇ ಹೇಳಬಹುದು. ಈ ಸರ್ವಾಧಿಕಾರದ ವಿರುದ್ಧ ವೀರೋಚಿತವಾಗಿ ಹೋರಾಡಿದ ಬೆನಝೀರ್ ಅನೇಕ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕಾಯಿತು. ೨೦೦೧ರ ನಂತರದಲ್ಲಿ ಮುಷರಫ್ ಅಮೆರಿಕಾಗೆ ಪ್ರಿಯ ಮಿತ್ರನಾದಂತೆಯೇ ಆಗ ಝಿಯಾ ಉಲ್

ಹಕ್ ಅಮೆರಿಕಾಗೆ ನಿಕಟವರ್ತಿಯಾಗಿದ್ದರು. ತನ್ನ ಸರ್ವಾಧಿಕಾರವನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಂಡ ಹಕ್ ಭುಟ್ಟೋರವರನ್ನು ನೇಣುಗಂಬಕ್ಕೇರಿಸಲೂ ಹಿಂಜರಿಯಲಿಲ್ಲ.

ತನ್ನ ತಂದೆಯ ಅಂತ್ಯದ ನಂತರ ಸ್ವಇಚ್ಛೆಯಿಂದ ಇಂಗ್ಲೆಂಡಿನಲ್ಲಿ ಗುಪ್ತವಾಗಿ ಉಳಿದ ಬೆನಝೀರ್ ಅಲ್ಲಿಂದಲೇ ಪಕ್ಷವನ್ನು ಸಂಘಟಿಸುವ ಸಂಕಲ್ಪ ತೊಟ್ಟರು. ಪಿ.ಪಿ.ಪಿ ತನ್ನ ಪ್ರಾರಂಭಿಕ ಹಂತದ ಎಡ ಪಂಥೀಯ ಒಲವಿನ, ಸಮಾಜವಾದಿ ಸಿದ್ಧಾಂತದ, ಊಳಿಗಮಾನ್ಯ ವ್ಯವಸ್ಥೆಯನ್ನು ವಿರೋಧಿಸುವ ಪಕ್ಷವಾಗಿ ಉಳಿದಿರಲಿಲ್ಲ. ಝುಲ್ಫಿಕರ್ ಭುಟ್ಟೋರವರ ಆಡಳಿತಾವಧಿಯಲ್ಲೇ ಪಕ್ಷದ ಎಲ್ಲ ಸಿದ್ಧಾಂತಗಳಿಗೆ ತಿಲಾಂಜಲಿ ನೀಡಲಾಗಿತ್ತು. ಭುಟ್ಟೋರವರ ಆಳ್ವಿಕೆಯಲ್ಲಿ ನಡೆದ ಅನೇಕ ದೌರ್ಜನ್ಯಗಳ ನಡುವೆಯೂ ಪಕ್ಷದ ಸಮೂಹ ತಳಹದಿ ಗಟ್ಟಿಯಾಗಿತ್ತೆಂದು ಹೇಳಬಹುದು. ಪಕ್ಷದ ತಳ ಮಟ್ಟದ ಕಾರ್ಯಕರ್ತರು ಮೂಲ ಸಿದ್ಧಾಂತಗಳನ್ನು ನಂಬಿಕೊಂಡೇ ಬೆನಝೀರ್‌ಗೆ ತಮ್ಮ ಅಪ್ರತಿಮ ಬೆಂಬಲ ಸೂಚಿಸಿದ್ದರು. ಝಿಯಾಉಲ್ ಹಕ್‌ರವರ ಸರ್ವಾಧಿಕಾರದ ವಿರುದ್ಧ ತನ್ನ ಹೋರಾಟದಲ್ಲಿ ಬೆನಝೀರ್ ಈ ಜನಬೆಂಬಲವನ್ನೇ ವೃದ್ಧಿಪಡಿಸಲು ಯತ್ನಿಸಿ, ಯಶಸ್ವಿಯಾಗಿದ್ದರು.

೮೦ರ ದಶಕದ ಅಂತ್ಯದ ವೇಳೆಗೆ ಅಮೆರಿಕಾದ ದೃಷ್ಟಿಯಲ್ಲಿ **"ದುಷ್ಮನ್"** ಆಗಿದ್ದ ಹಕ್ ೧೯೮೮ರಲ್ಲಿ ವಿಮಾನ ದುರಂತದಲ್ಲಿ ಸಾವಿಗೀಡಾದಾಗ ಅಮೆರಿಕಾಗೆ ಒಂದು ರೀತಿಯಲ್ಲಿ ಸಮಾಧಾನವಾಗಿತ್ತು. ಹಾಗಾಗಿಯೇ ಅಮೆರಿಕಾದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಈ ಪ್ರಕರಣವನ್ನು ತನಿಖೆಗೊಳಪಡಿಸದೆ ಮುಚ್ಚಿಹಾಕಿತ್ತು. ಅಂದಿಗೆ ಝಿಯಾ ಉಲ್ ಹಕ್ ಅಮೆರಿಕಾಗೆ ಬಗಲಲ್ಲಿನ ಮುಳ್ಳಾಗಿದ್ದರು. ಏಳು ವರ್ಷಗಳ ಆಳ್ವಿಕೆಯ ನಂತರ ಮುಷರಫ್ ಪರಿಸ್ಥಿತಿಯೂ ಹೀಗೇ ಆಗಿರುವುದು ಕಾಕತಾಳೀಯವಾದರೂ ಸತ್ಯ. ಝಿಯಾರವರ ಸೇನಾಡಳಿತಕ್ಕೆ ಬೇಸತ್ತು ಪ್ರಜಾತಂತ್ರಕ್ಕಾಗಿ ಹಪಹಪಿಸುತ್ತಿದ್ದ ಪಾಕ್ ಜನತೆಗೆ ಆಶಾಕಿರಣವಾಗಿ ೧೯೮೬ರಲ್ಲಿ ಬೆನಝೀರ್ ಸ್ವದೇಶಕ್ಕೆ ಮರಳಿದ್ದರು. ಆಗ ಅವರನ್ನು ಸ್ವಾಗತಿಸಲು ಹತ್ತು ಲಕ್ಷಕ್ಕೂ ಹೆಚ್ಚು ಮಂದಿ ನೆರೆದಿದ್ದರೆಂದು ಹೇಳಲಾಗುತ್ತದೆ. ಝಿಯಾ ಉಲ್ ಹಕ್ ಮರಣಾನಂತರದಲ್ಲಿ ಪಾಕಿಸ್ತಾನದಲ್ಲಿ ಪ್ರಜಾತಂತ್ರದ ಬಿರುಗಾಳಿ ಎದ್ದಿದ್ದು, ಅಮೆರಿಕಾ ಮತ್ತಿತರ ರಾಷ್ಟ್ರಗಳ ನೀತಿಯಲ್ಲೂ ಬದಲಾವಣೆಯನ್ನು ತಂದಿತ್ತು. ಪಾಕಿಸ್ತಾನದಲ್ಲಿ ಪ್ರಜಾತಂತ್ರವನ್ನು ಸ್ಥಾಪಿಸುವುದೇ ತಮ್ಮ ಗುರಿ ಎಂದು ಸಾಮ್ರಾಜ್ಯಶಾಹಿ ರಾಷ್ಟ್ರಗಳು ೧೯೮೮ರಲ್ಲಿ ಬೆನಝೀರ್ ಪ್ರಧಾನಿಯಾಗಿದ್ದನ್ನು ಮುಕ್ತ ಕಂಠದಿಂದ ಸ್ವಾಗಿತಿಸಿದ್ದವು. ಹತ್ತು ವರ್ಷಗಳ ನಂತರ ಇದೇ ಪ್ರಕ್ರಿಯೆ ಪಾಕಿಸ್ತಾನದ ರಾಜಕಾರಣದಲ್ಲಿ ಪ್ರಾರಂಭವಾಗಿದ್ದನ್ನು ಗಮನಿಸಬೇಕಾಗುತ್ತದೆ. ಆದರೆ ೧೯೮೮ರಲ್ಲಿ ಪ್ರಧಾನಿಯಾಗಿದ್ದ ಬೆನಝೀರ್ ಈಗ ಇಲ್ಲವಾಗಿದ್ದಾರೆ.

೧೯೭೯-೮೬ರ ಅವಧಿಯಲ್ಲಿ ತಾನು ಪಟ್ಟ ಯಾತನೆಗಳಿಂದ ಬೆನಝೀರ್ ಪಾಠ ಕಲಿಯಬೇಕಿತ್ತೆನಿಸುತ್ತದೆ. ಭುಟ್ಟೋರವರ ಗಲ್ಲು ಶಿಕ್ಷೆಯಿಂದ ಅಮೆರಿಕಾ ಸಂಪ್ರೀತವಾಗಿದ್ದುದು ಗುಟ್ಟಾದ ವಿಷಯವೇನೂ ಆಗಿರಲಿಲ್ಲ. ಭುಟ್ಟೋರವರಿಗೆ ಗಲ್ಲು ಶಿಕ್ಷೆ ವಿಧಿಸುವ ನಿರ್ಧಾರದ ಹಿಂದೆ ಅಮೆರಿಕಾದ ಪ್ರತ್ಯಕ್ಷ ಪಾತ್ರವನ್ನು ನಿರೂಪಿಸಲಾಗುವುದಿಲ್ಲವಾದರೂ, ಪರೋಕ್ಷ ಬೆಂಬಲವನ್ನು ಅಲ್ಲಗಳೆಯಲಾಗುವುದಿಲ್ಲ. ತನ್ನ ತಂದೆಯ ಸಾವಿಗೆ ಕಾರಣರಾದ ಸಾಮ್ರಾಜ್ಯಶಾಹಿಗಳ ವಿರುದ್ಧ ಬೆನಝೀರ್ ಸೆಟೆದು ನಿಲ್ಲಬಹುದಿತ್ತು. ಸಾಮ್ರಾಜ್ಯಶಾಹಿ ವಿರೋಧಿ ಧೋರಣೆಯನ್ನೇ ತನ್ನ ಪಕ್ಷದ ಪ್ರಜಾತಾಂತ್ರಿಕ ಹೋರಾಟಕ್ಕೆ ಬುನಾದಿಯನ್ನಾಗಿ ಮಾಡಿಕೊಳ್ಳಬಹುದಿತ್ತು. ವಿಪರ್ಯಾಸವೆಂದರೆ ಬೆನಝೀರ್ ಹಾಗೆ ಮಾಡಲಿಲ್ಲ. ೧೯೮೮ರಲ್ಲಿ ಪ್ರಧಾನಿಯಾದಾಗಲೂ ಪಾಕಿಸ್ತಾನದ ಮಿಲಿಟರಿಯೊಡನೆ ಹೊಂದಾಣಿಕೆ ಮಾಡಿಕೊಂಡೇ ಅಧಿಕಾರ ವಹಿಸಿಕೊಂಡಿದ್ದ ಬೆನಝೀರ್, ಮಿಲಿಟರಿಗೆ ನಿಕಟವರ್ತಿಯಾಗಿದ್ದ ಗುಲಾಮ್ ಇಶಾಖ್ ಖಾನ್‌ರವರನ್ನು ಅಧ್ಯಕ್ಷರನ್ನಾಗಿ ಒಪ್ಪಿಕೊಂಡಿದ್ದರು. ಅಮೆರಿಕಾದೊಡನೆ ಸ್ನೇಹದಿಂದಿದ್ದರೆ ಮಾತ್ರ ಪಾಕಿಸ್ತಾನದಲ್ಲಿ ಅಧಿಕಾರ ಗಳಿಸಲು ಸಾಧ್ಯ ಎಂಬ ಪ್ರತಿಪಾದನೆಯಲ್ಲೇ ಬೆನಝೀರ್ ಪ್ರಸ್ತುತ ಸಂದರ್ಭದಲ್ಲೂ ಸ್ವದೇಶಕ್ಕೆ ಮರಳಿದ್ದರು.

ತನ್ನ ೩೫ನೆಯ ವಯಸ್ಸಿನಲ್ಲಿ, ಯಾವುದೇ ಮುಸ್ಲಿಂ ರಾಷ್ಟ್ರದ ಪ್ರಥಮ ಮಹಿಳಾ ಚುನಾಯಿತ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬೆನಝೀರ್ ಪಾಕ್ ಪ್ರಜೆಗಳ ಅಭೂತಪೂರ್ವ ಬೆಂಬಲವನ್ನೂ ಹೊಂದಿದ್ದರು. ಆಗಿನ್ನೂ ಒಂದು ಸೆಕ್ಯುಲರ್ ರಾಷ್ಟ್ರವಾಗಿಯೇ ಉಳಿದಿದ್ದು ಕ್ರಮೇಣ ಇಸ್ಲಾಂ ಮೂಲಭೂತವಾದದೆಡೆಗೆ ತೆವಳುತ್ತಿದ್ದ ಪಾಕಿಸ್ತಾನದಲ್ಲಿ ಸಾಮಾನ್ಯ ಜನತೆಯ ಪ್ರಜಾತಂತ್ರದ ತುಡಿತವೇ ಬೆನಝೀರ್‌ರವರಿಗೆ ಆಸರೆಯಾಗಿತ್ತು. ಆದರೆ ಬೆನಝೀರ್ ಸಾಮಾನ್ಯ ಜನತೆಯ ಆಶೋತ್ತರಗಳಿಗೆ ಸ್ಪಂದಿಸದೆ, ಅಮೆರಿಕಾದ ಸಾಮ್ರಾಜ್ಯಶಾಹಿ ತಂತ್ರಗಳಿಗೆ ಸ್ಪಂದಿಸತೊಡಗಿದ್ದರು. ಇಸ್ಲಾಂ ಮತ್ತು ಕಮ್ಯುನಿಸಂನ ನಡುವಿನ ಸಂಘರ್ಷಕ್ಕೆ ಮುಂದಾಳತ್ವ ವಹಿಸಿದ್ದ ಪಾಕಿಸ್ತಾನದಲ್ಲಿ ಅಮೆರಿಕಾ ಪ್ರಾಯೋಜಿತ ಭಯೋತ್ಪಾದನೆ ಮತ್ತು ಜಿಹಾದಿ ಸಂಘಟನೆಗಳು ಮಿಲಿಟರಿ ಸೇನೆಯ ನೆರವಿನೊಂದಿಗೆ ಜೀವಂತವಾಗಿದ್ದವು. ಈ ಸಂಘಟನೆಗಳ ಲಾಲನೆ ಪಾಲನೆಗಾಗಿ ಅಮೆರಿಕಾ ಸಾಕಷ್ಟು ಧನಸಹಾಯವನ್ನೂ ಮಾಡಿದ್ದುಂಟು. ಪಾಕಿಸ್ತಾನ ಸರ್ಕಾರಗಳು ವಿದೇಶಗಳಿಂದ ಪಡೆದ ಸಾಲ ಮತ್ತು ನೆರವಿನ ಶೇ ೬೦ರಷ್ಟು ಭಾಗವನ್ನು ಮಿಲಿಟರಿಗಾಗಿಯೇ ಖರ್ಚು ಮಾಡಿರುವುದು ಇದಕ್ಕೆ ನಿದರ್ಶನವಷ್ಟೆ. ಒಂದೆಡೆ ರಷ್ಯಾದ ಹಿಡಿತದಲ್ಲಿದ್ದ ಆಫ್ಘಾನಿಸ್ತಾನ ಮತ್ತು ಕಾಶ್ಮೀರ ಎರಡೂ ಅಮೆರಿಕಾದ ಕೆಂಗಣ್ಣಿಗೆ ಗುರಿಯಾಗಿದ್ದವು. ಈ ಹಂತದಲ್ಲಿ ಬೆನಝೀರ್ ತನ್ನ ಪಕ್ಷದ ಸಿದ್ಧಾಂತಗಳನ್ನು ಬದಿಗೊತ್ತಿ, ಅಮೆರಿಕಾದ ಕುತಂತ್ರಕ್ಕೆ ಬಲಿಯಾಗಿದ್ದು ಒಂದು ಐತಿಹಾಸಿಕ ದುರಂತ. ಇದೇ ಅವಧಿಯಲ್ಲಿ ಭುಟ್ಟೋರವರ ಪತಿ ಅಸಿಫ್ ಜರದಾರಿಯವರು ತಮ್ಮ ಭ್ರಷ್ಟತೆಗೆ ಹೆಸರುವಾಸಿಯಾಗಿದ್ದು, ಮಿಸ್ಟರ್ ೧೦ ಪರ್ಸೆಂಟ್ ಎಂದೇ ಪ್ರಖ್ಯಾತರಾಗಿದ್ದರು.

ಈ ಸಂದರ್ಭದಲ್ಲಿ ಝಿಯಾ ಉಲ್ ಹಕ್‌ರವರ ನಿಕಟವರ್ತಿಯಾಗಿದ್ದ ನವಾಜ್ ಷರೀಫ್ ಪಾಕಿಸ್ತಾನ ಮುಸ್ಲಿಂ ಲೀಗ್ ಪಕ್ಷದ ನಾಯಕತ್ವ ವಹಿಸಿದ್ದು ಬೆನಝೀರ್‌ಗೆ ಮಾರಕವಾಗಿತ್ತು. ಮೂಲಭೂತವಾದಿ ಸಂಘಟನೆಗಳಾದ ಜಮಾತ್ ಇ ಇಸ್ಲಾಮಿಯೊಡನೆ ಸ್ನೇಹ ಬೆಳೆಸಿದ ನವಾಜ್ ಷರೀಫ್‌ರವರಿಗೆ ಪಂಜಾಬಿನ ಮಧ್ಯಮವರ್ಗಗಳು, ಕರಾಚಿಯ ಉರ್ದು ಮಾತನಾಡುವ ಮುಹಾಜಿರ್‌ಗಳು ಬೆನ್ನೆಲುಬಾಗಿದ್ದರು. ೧೯೯೦ರಲ್ಲಿ ಭುಟ್ಟೋರವರನ್ನು ಭ್ರಷ್ಟಾಚಾರದ ಆರೋಪದ ಮೇಲೆ ಪದಚ್ಯುತಗೊಳಿಸಿದ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐ.ಎಸ್.ಐನ ನಿಕಟವರ್ತಿ ನವಾಜ್ ಷರೀಫ್ ಅಧಿಕಾರ ವಹಿಸಿಕೊಂಡರು. ಆದರೆ ೧೯೯೩ರಲ್ಲಿ ಪುನಃ ಅಧಿಕಾರಕ್ಕೆ ಮರಳಿದ ಬೆನಝೀರ್ ಜನತೆಯ ವಿಶ್ವಾಸವನ್ನು ಉಳಿಸಿಕೊಳ್ಳದೆ ಹೋದದ್ದು ಅವರ ರಾಜಕೀಯ ಜೀವನ ಮಹತ್ತರ ತಿರುವು ಪಡೆಯಲು ಕಾರಣವಾಗಿತ್ತು. ಕೇವಲ ಮೂರು ವರ್ಷಗಳಲ್ಲಿ ಪುನಃ ಪದಚ್ಯುತರಾದ ಬೆನಝೀರ್ ಆ ಅವಧಿಯಲ್ಲಿ ಅತ್ಯಂತ ಭ್ರಷ್ಟ ರಾಜಕಾರಣಿ ಎಂಬ ಕುಖ್ಯಾತಿ ಗಳಿಸಿದ್ದರು. ಆಕೆಯ ಪತಿ ಜರದಾರಿ ಬಂಡವಾಳ ಹೂಡಿಕೆಯ ಮಂತ್ರಿಯಾಗಿ ನಡೆಸಿದ ಭ್ರಷ್ಟಾಚಾರಗಳು ಸರ್ಕಾರಕ್ಕೆ ಉರುಳಾಗಿತ್ತು. ಈ ಅವಧಿಯಲ್ಲೇ ಬೆನಝೀರ್ ಆಫ್ಘಾನಿಸ್ತಾನದಲ್ಲಿ ತಾಲಿಬಾನ್ ನೇತೃತ್ವದ ಸರ್ಕಾರವನ್ನು ಸ್ಥಾಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಇಲ್ಲಿ ಗಮನಿಸಬೇಕಾದ ಸೂಕ್ಷ್ಮ ಅಂಶವೆಂದರೆ ಪಾಕಿಸ್ತಾನದ ನೆಲದಲ್ಲಿ ಪ್ರಾರಂಭಗೊಂಡ ಆಫ್ಘಾನಿಸ್ತಾನ ಕೇಂದ್ರಿತ ಇಸ್ಲಾಮಿಕ್ ಜಿಹಾದ್ ಮತ್ತು ಐ.ಎಸ್.ಐ ಪ್ರೇರೇಪಿತ ಕಾಶ್ಮೀರ ಭಯೋತ್ಪಾದನೆ ತೀವ್ರಗೊಂಡದ್ದು ಬೆನಝೀರ್‌ರವರ ಆಡಳಿತಾವಧಿಯಲ್ಲೇ.

ಸಾಮ್ರಾಜ್ಯಶಾಹಿಗಳ ಬಲೆ

ತದನಂತರದಲ್ಲಿ ಅನೇಕ ಭ್ರಷ್ಟಾಚಾರದ ಆರೋಪಗಳಿಂದ ಜರ್ಝರಿತಳಾಗಿದ್ದ ಬೆನಝೀರ್ ಮತ್ತು ಆಕೆಯ ಪತಿಯನ್ನು ನವಾಜ್ ಷರೀಫ್ ಸರ್ಕಾರ ಮತ್ತು ನಂತರ ಅಧಿಕಾರಕ್ಕೆ ಬಂದ ಮುಷರಫ್ ಸರ್ಕಾರ ಬೆಂಬಿಡದ ಭೂತದಂತೆ ಕಾಡತೊಡಗಿದ್ದವು. ಈ ಇಕ್ಕಟ್ಟಿನಿಂದ ರಕ್ಷಿಸಿಕೊಳ್ಳಲು ಸ್ವ ಇಚ್ಛೆಯಿಂದ ದುಬೈ ಮತ್ತು ಲಂಡನ್‌ಗಳಲ್ಲಿ ನೆಲೆಸಿದ್ದ ಬೆನಝೀರ್ ಪುನಃ ಸ್ವದೇಶಕ್ಕೆ ಮರಳಿದ್ದು ೨೦೦೭ರ ಅಕ್ಟೋಬರ್ ೧೮ರಂದು. ಬೆನಝೀರ್‌ರವರ ಈ ಹೆಜ್ಜೆ ಅಮೆರಿಕಾದ ರಾಜತಾಂತ್ರಿಕ ತಂತ್ರಗಾರಿಕೆ

೮೦ರ ದಶಕದ ಅಂತ್ಯದ ವೇಳೆಗೆ ಅಮೆರಿಕಾದ ದೃಷ್ಟಿಯಲ್ಲಿ "ದುಷ್ಮನ್" ಆಗಿದ್ದ ಹಕ್ ೧೯೮೮ರಲ್ಲಿ ವಿಮಾನ ದುರಂತದಲ್ಲಿ ಸಾವಿಗೀಡಾದಾಗ ಅಮೆರಿಕಾಗೆ ಒಂದು ರೀತಿಯಲ್ಲಿ ಸಮಾಧಾನವಾಗಿತ್ತು. ಹಾಗಾಗಿಯೇ ಅಮೆರಿಕಾದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಈ ಪ್ರಕರಣವನ್ನು ತನಿಖೆಗೊಳಪಡಿಸದೆ ಮುಚ್ಚಿಹಾಕಿತ್ತು. ಅಂದಿಗೆ ಝಿಯಾ ಉಲ್ ಹಕ್ ಅಮೆರಿಕಾಗೆ ಬಗಲಲ್ಲಿನ ಮುಳ್ಳಾಗಿದ್ದರು. ಏಳು ವರ್ಷಗಳ ಆಳ್ವಿಕೆಯ ನಂತರ ಮುಷರಫ್ ಪರಿಸ್ಥಿತಿಯೂ ಹೀಗೇ ಆಗಿರುವುದು ಕಾಕತಾಳೀಯವಾದರೂ ಸತ್ಯ. ಝಿಯಾರವರ ಸೇನಾಡಳಿತಕ್ಕೆ ಬೇಸತ್ತು ಪ್ರಜಾತಂತ್ರಕ್ಕಾಗಿ ಹಪಹಪಿಸುತ್ತಿದ್ದ ಪಾಕ್ ಜನತೆಗೆ ಆಶಾಕಿರಣವಾಗಿ ೧೯೮೬ರಲ್ಲಿ ಬೆನಝೀರ್ ಸ್ವದೇಶಕ್ಕೆ ಮರಳಿದ್ದರು. ಆಗ ಅವರನ್ನು ಸ್ವಾಗತಿಸಲು ಹತ್ತು ಲಕ್ಷಕ್ಕೂ ಹೆಚ್ಚು ಮಂದಿ ನೆರೆದಿದ್ದರೆಂದು ಹೇಳಲಾಗುತ್ತದೆ.

ಫಲವೇ ಎಂದು ಹೇಳಬಹುದು. ಪಾಕಿಸ್ತಾನದಲ್ಲಿ ಹತೋಟಿ ಮೀರಿ ಹೋಗುತ್ತಿದ್ದ ಭಯೋತ್ಪಾದನೆ, ಪ್ರತ್ಯೇಕತೆಯ ಕೂಗು, ಮೂಲಭೂತವಾದ ಮತ್ತು ಜಿಹಾದಿ ಸಂಘಟನೆಗಳ ವಿರುದ್ಧ ಹೋರಾಡಲು ಪ್ರಜಾತಂತ್ರದ ಮುಖವಾಡ ಅವಶ್ಯವಾಗಿತ್ತು. ಮಿಲಿಟರಿ ಆಡಳಿತದಿಂದ ಜರ್ಝರಿತವಾಗಿದ್ದ ಪಾಕಿಸ್ತಾನದ ಜನತೆ ಪ್ರಜಾತಂತ್ರಕ್ಕಾಗಿ ಹಾತೊರೆಯುತ್ತಿದ್ದುದು ಸ್ಪಷ್ಟವಾಗುತ್ತಿದ್ದಂತೆಯೇ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನೂ ಬಿಡದೆ ತನ್ನ ದಮನಕಾರಿ ನೀತಿಯನ್ನು ಹೇರಿದ ಮುಷರಫ್ ಏಕಾಏಕಿ ಅಮೆರಿಕಾದ ದುಷ್ಮನ್ ಆಗಿದ್ದು ಈ ಕಾರಣಕ್ಕಾಗಿಯೇ. ಆದರೆ ಝಿಯಾ ಉಲ್ ಹಕ್‌ರವರಂತೆ ಮುಷರಫ್‌ರನ್ನು ಮುಗಿಸುವುದು ಅಮೆರಿಕಾಗೆ ಸುಲಭ ಕಾರ್ಯವಾಗಿರಲಿಲ್ಲ. ತಾನೇ ಬೆಳೆಸಿದ ತಾಲಿಬಾನ್ ಮತ್ತಿತರ ಜಿಹಾದಿ ಸಂಘಟನೆಗಳನ್ನು ಎದುರಿಸಲು ಮತ್ತು ಪಾಕಿಸ್ತಾನದ ನೆರೆ ರಾಷ್ಟ್ರ ಆಫ್ಘಾನಿಸ್ತಾನದಲ್ಲಿ ತಾನೇ ಸೃಷ್ಟಿಸಿದ ರಕ್ತ ಬೀಜಾಸುರರನ್ನು ನಿಗ್ರಹಿಸಲು ಅಮೆರಿಕಾಗೆ ಮುಷರಫ್‌ನ ಬೆಂಬಲ ಅವಶ್ಯಕವಾಗಿದೆ. ಆದರೆ ಪಾಕಿಸ್ತಾನದಲ್ಲಿ ಪ್ರಜಾತಂತ್ರಕ್ಕಾಗಿ ನಡೆದ ಜನಾಂದೋಲನ ಮುಷರಫ್‌ಗೆ ಚರಮಗೀತೆ ಹಾಡುವ ವೇದಿಕೆಯಾಗಿ ಪರಿಣಮಿಸುವ ಸಾಧ್ಯತೆಗಳನ್ನು ಗ್ರಹಿಸಿದ ಅಮೆರಿಕಾ, ತನ್ನ ಮಿತ್ರನಿಗೆ ಪ್ರಜಾತಂತ್ರದ ಮುಖವಾಡ ತೊಡಿಸಲು ಬೆನಝೀರ್‌ಗೆ ಮೊರೆ ಹೋಗಬೇಕಾಯಿತು.

ಇಲ್ಲಿ ಬೆನಝೀರ್‌ಗೆ ಎರಡು ಪ್ರಮುಖ ಸವಾಲುಗಳು ಎದುರಾಗಿತ್ತು. ಮೊದಲನೆಯದಾಗಿ ಮುಂಬರುವ ಪ್ರಜಾತಾಂತ್ರಿಕ ಚುನಾವಣೆಗಳಲ್ಲಿ ಗೆಲುವು ಸಾಧಿಸಿ ಪ್ರಧಾನಿ ಪಟ್ಟಕ್ಕೇರಿ, ಮಿಲಿಟರಿ ಆಡಳಿತದೊಡನೆ ಸಂಧಾನ ನಡೆಸಿಕೊಂಡು, ಭಯೋತ್ಪಾದಕತೆಯ ವಿರುದ್ಧ ಹೋರಾಡಲು ಅಮೆರಿಕಾಗೆ ನೆರವಾಗುವುದು, ಎರಡನೆಯದಾಗಿ ಸ್ವಿಟ್ಜರ್‌ಲ್ಯಾಂಡ್, ಸ್ವೀಡನ್, ಸ್ಪೇನ್ ಮತ್ತು ಬ್ರಿಟನ್ ದೇಶಗಳಲ್ಲಿ ತನ್ನ ಮೇಲೆ ಹೂಡಲಾಗಿದ್ದ ಅನೇಕ ಭ್ರಷ್ಟಾಚಾರ ಮೊಕದ್ದಮೆಗಳಿಂದ ತಲೆಮರೆಸಿಕೊಂಡು ಓಡಾಡುವಂತಾಗಿದ್ದ ಪರಿಸ್ಥಿತಿಯಿಂದ ವಿಮೋಚನೆ ಪಡೆಯುವುದು. ಈ ಹಿನ್ನೆಲೆಯಲ್ಲಿ ಅಮೆರಿಕಾದ ಒತ್ತಾಯಕ್ಕೆ ಮಣಿದ ಮುಷರಫ್, ಸಂವಿಧಾನವನ್ನು ಅಮಾನತುಗೊಳಿಸಿ, ತುರ್ತುಪರಿಸ್ಥಿತಿಯನ್ನು ಹೇರಿ, ನ್ಯಾಯಾಧೀಶರನ್ನು ಬಂಧಿಸಿ, ಕಡೆಗೆ ರಾಜಕೀಯ ನಾಯಕರ ವಿರುದ್ಧ ಹೂಡಲಾಗಿದ್ದ ಎಲ್ಲಾ ರೀತಿಯ ಮೊಕದ್ದಮೆಗಳನ್ನು ಹಿಂಪಡೆಯುವ ಮೂಲಕ ಬೆನಝೀರ್‌ರವರ ರಾಜಕೀಯ ಮರುಪಾದಾರ್ಪಣೆಗೆ ನಾಂದಿ ಹಾಡಿದ್ದನ್ನು ಕಳೆದ ಕೆಲವು ದಿನಗಳ ಬೆಳವಣಿಗೆಗಳಲ್ಲಿ ಗಮನಿಸಬಹುದು. ಕಳೆದ ಹತ್ತು ವರ್ಷಗಳಿಂದ ಮುಷರಫ್‌ನೊಡನೆ ಹೋರಾಡುತ್ತಿದ್ದ ಬೆನಝೀರ್ ಹಠಾತ್ತಾಗಿ ಸ್ನೇಹ ಬೆಳೆಸಲಾರಂಭಿಸಿದ್ದನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಆದರೆ ಅಮೆರಿಕಾದ ಉದ್ದೇಶ ಈಡೇರಿತೇ ಎಂಬುದೇ ಇಲ್ಲಿ ಮುಖ್ಯ ಪ್ರಶ್ನೆಯಾಗುತ್ತದೆ. ಮುಸ್ಲಿಂ ರಾಷ್ಟ್ರಗಳಲ್ಲಿ ಪ್ರಜಾತಾಂತ್ರಿಕ ಸರ್ಕಾರಗಳನ್ನು ಸ್ಥಾಪಿಸುವ ಅಮೆರಿಕಾದ ಧೋರಣೆ ಮತ್ತು ಪ್ರಯತ್ನಗಳು ಎಷ್ಟು ಕಪಟ ಎಂದು ಹೇಳಬೇಕಿಲ್ಲ. ಮಿತ್ರ ರಾಷ್ಟ್ರಗಳಾದ ಸೌದಿ ಅರೇಬಿಯಾ, ಜೋರ್ಡಾನ್, ಕುವೈಟ್, ಈಜಿಪ್ಟ್ ಈ ಎಲ್ಲ ದೇಶಗಳಲ್ಲೂ ರಾಜ ಪ್ರಭುತ್ವ ಅಥವಾ ನಿರಂಕುಶ ಪ್ರಭುತ್ವವೇ ರಾರಾಜಿಸುತ್ತಿವೆ. ಪ್ಯಾಲೆಸ್ತೈನಿನಲ್ಲಿ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಹಾಮಾಸ್ ವಿರುದ್ಧ ಅಮೆರಿಕಾ ಪರೋಕ್ಷವಾದ ಯುದ್ಧವನ್ನೇ ಸಾರಿ ಅಲ್ಲಿನ ಸರ್ಕಾರವನ್ನು

ಅಸ್ಥಿರಗೊಳಿಸುತ್ತಿದೆ. ಇರಾಕ್‌ನಲ್ಲಿ ಅಮೆರಿಕಾ ಪ್ರೇರಿತ ಸಂವಿಧಾನವೇ ಕಾರ್ಯನಿರ್ವಹಿಸುತ್ತಿದ್ದು ಇಡೀ ದೇಶವೇ ಅರಾಜಕತೆಯ ಸುಳಿಗೆ ಸಿಲುಕಿ ಸೊರಗುತ್ತಿದೆ. ಎರಡು ಲಕ್ಷಕ್ಕೂ ಹೆಚ್ಚು ಅಮೆರಿಕಾ ಸೇನೆಯನ್ನು ಪಡೆದಿರುವ ಇರಾಕ್‌ನಲ್ಲಿ ಶೇ ೫ ರಷ್ಟು ಜನ ಸಾವನ್ನಪ್ಪಿದ್ದಾರೆ, ಶೇ ೨೦ರಷ್ಟು ಜನ ನಿರಾಶ್ರಿತರಾಗಿದ್ದಾರೆ. ಆಫ್ಘಾನಿಸ್ತಾನದಲ್ಲಿ ಕರ್ಝಾಯಿ ಸರ್ಕಾರ ಅಮೆರಿಕಾದ ಸೇನೆಯ ಸಹಾಯವಿಲ್ಲದೆ ಒಂದು ದಿನವೂ ಉಳಿಯದ ಪರಿಸ್ಥಿತಿ ಎದುರಿಸುತ್ತಿದೆ.

ಈ ಸನ್ನಿವೇಶದಲ್ಲಿ ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತವನ್ನು ಕೊನೆಗೊಳಿಸಿ ತನ್ನ ನೇತೃತ್ವದಲ್ಲಿ ಅಲ್ಲಿ ಪ್ರಜಾಸತ್ತಾತ್ಮಕ ಸರ್ಕಾರವನ್ನು ಸ್ಥಾಪಿಸುವ ಅಮೆರಿಕಾದ ಉದ್ದೇಶಕ್ಕೆ ಬೆನಝೀರ್ ಪ್ರಯೋಗ ಶಿಶುವಾದದ್ದು ಅವರ ಜೀವಕ್ಕೇ ಉರುಳಾಗಿ ಪರಿಣಮಿಸಿದೆ. ಪಾಕಿಸ್ತಾನದ ಪ್ರಜಾತಾಂತ್ರಿಕ ಮನ್ವಂತರದ ಮುಖವಾಣಿಯಾಗಿ ಬೆನಝೀರ್‌ರವರನ್ನು ಬಳಸಿಕೊಂಡು ತನ್ಮೂಲಕವೇ ಭಯೋತ್ಪಾದನೆಯ ವಿರುದ್ಧ ಹೋರಾಟ ನಡೆಸುವ ಅಮೆರಿಕಾದ ತಂತ್ರ ತಿರುಗೇಟು ಹೊಡೆದಿರುವುದು ಸ್ಪಷ್ಟವಾಗಿದೆ. ಈ ಷಡ್ಯಂತ್ರದ ಪ್ರಕಾರ ಬೆನಝೀರ್ ಪಾಕಿಸ್ತಾದ ಚುನಾಯಿತ ಪ್ರಧಾನಿಯಾಗುವುದು, ಮುಷರಫ್ ತನ್ನ ಮಿಲಿಟರ್ ಸಮವಸ್ತ್ರವನ್ನು ಕಳಚಿ ರಾಷ್ಟ್ರಾಧ್ಯಕ್ಷನಾಗುವುದು, ಐ.ಎಸ್.ಐ ಮುಖ್ಯಸ್ಥ ಕಿಯಾನಿ ಮಿಲಿಟರಿ ನಾಯಕತ್ವ ವಹಿಸುವುದು, ಇಸ್ಲಾಮಿ ಜಿಹಾದ್‌ನ ಪಕ್ಷಗಳಾದ ಜಮಾತ್ ಉಲ್ ಉಲೇಮ ಇ ಇಸ್ಲಾಂ ಮತ್ತು ಅವಾಮಿ ರಾಷ್ಟ್ರೀಯವಾದಿ ಪಕ್ಷಗಳು ಹೊಸ ಸರ್ಕಾರಕ್ಕೆ ಬೆಂಬಲ ನೀಡುವುದು ಮೂಲ ಯೋಜನೆಯಾಗಿತ್ತು. ಆದರೆ ದೊಡ್ಡಣ್ಣನ ಈ ತಂತ್ರಗಾರಿಕೆ ಮುಷರಫ್ ಮತ್ತು ಬೆನಝೀರ್‌ರವರನ್ನೂ ಒಳಗೊಂಡಂತೆ ಯಾರಿಗೂ ಬೇಕಿರಲಿಲ್ಲ.

ವಿವಿಧ ಮುಸ್ಲಿಂ ರಾಷ್ಟ್ರಗಳಲ್ಲಿ ತೈಲ ಸಂಪತ್ತಿಗಾಗಿ ತನ್ನ ಸಾಮ್ರಾಜ್ಯಶಾಹಿ ಬಲೆಯನ್ನು ಬೀಸಿ, ಅಲ್ಲಿನ ಸರ್ಕಾರಗಳನ್ನು ಪದಚ್ಯುತಗೊಳಿಸಿ, ತನ್ನ ಕೈಗೊಂಬೆಗಳನ್ನು ನಿರಂಕುಶ ಪ್ರಭುಗಳಾಗಿ ನೇಮಿಸುವ ಅಮೆರಿಕಾದ ಕುತಂತ್ರವನ್ನು ಪಾಕಿಸ್ತಾನದ ಜನತೆ ಗ್ರಹಿಸದಿರಲಿಲ್ಲ. ೬೦ ವರ್ಷಗಳ ಸ್ವತಂತ್ರ ರಾಷ್ಟ್ರವಾಗಿದ್ದರೂ ಇಂದಿಗೂ ಪ್ರಜಾತಾಂತ್ರಿಕ ಮೌಲ್ಯಗಳನ್ನು ಗಟ್ಟಿಗೊಳಿಸಲಾಗದ ಪಾಕಿಸ್ತಾನದ ಪ್ರಜೆಗಳಲ್ಲಿ ಅಸಂತೃಪ್ತಿ, ಜಿಗುಪ್ಸೆ, ನಿರಾಸೆಗಳು ತಾಂಡವಾಡುತ್ತಿವೆ. ಸಿಂಧ್, ಪಂಜಾಬ್, ಬಲೂಚಿಸ್ತಾನಗಳಲ್ಲಿ ಇಂದಿಗೂ ಪ್ರತ್ಯೇಕತೆಯ ಕೂಗು ಕೇಳಿಬರುತ್ತಿದೆ. ಪಾಕಿಸ್ತಾನದ ಆದಿವಾಸಿ ಜನ ಸಮುದಾಯಗಳು, ಅಲ್ಪಸಂಖ್ಯಾತ ಸಮುದಾಯಗಳು, ಆಫ್ಘಾನಿಸ್ತಾನದಿಂದ ವಲಸೆ ಬಂದಿರುವ ಜನಗಳು, ಅಲ್ಲಿನ ಸಂಸ್ಕೃತಿಯೊಡನೆ ಹೊಂದಿಕೊಳ್ಳುವುದರಲ್ಲಿ ವಿಫಲರಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ದೇಶದ ಬಹುತೇಕ ಸಂಪತ್ತು ಮತ್ತು ಸಂಪನ್ಮೂಲಗಳು ಮಿಲಿಟರಿ ಕಾರ್ಯಾಚರಣೆಗಾಗಿ ವ್ಯಯವಾಗುತ್ತಿರುವುದರಿಂದ ಸಾಮಾನ್ಯ ಜನತೆ ಹಸಿವು, ಬಡತನ, ನಿರುದ್ಯೋಗಗಳಿಂದ ಜರ್ಝರಿತರಾಗಿರುವುದು ಗೋಚರಿಸುತ್ತದೆ. ಇವೆಲ್ಲ ಸಮಸ್ಯೆಗಳ ನಡುವೆ ರಾಜಕೀಯ ಅಸ್ಥಿರತೆ ತಾಂಡವಾಡುತ್ತಿರುವುದು, ಪಾಕಿಸ್ತಾನದಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳು ಬೇರೂರಲು ಪ್ರಮುಖ ಅಡಚಣೆಯಾಗಿ ಪರಿಣಮಿಸಿದೆ. ಮಾನವ ಹಕ್ಕುಗಳ ಉಲ್ಲಂಘನೆ ಪಾಕಿಸ್ತಾನದಲ್ಲಿ ಸರ್ವೇಸಾಮಾನ್ಯ ಸಂಗತಿಯಾಗಿದ್ದು, ಭ್ರಾತೃಘಾತಕ ಅಂತರಿಕ ಕಲಹಗಳು ದೇಶದ ಏಕತೆಯನ್ನೇ ಹಾಳುಗೆಡಹುವ ಮಟ್ಟಿಗೆ ಬೆಳೆದಿದೆ. ಮುಸ್ಲಿಂ ಮೂಲಭೂತವಾದವು ಬಲವಾಗಿ ಬೇರುಬಿಟ್ಟಿರುವ ಪಾಕಿಸ್ತಾನದಲ್ಲಿ ಪ್ರಜಾತಾಂತ್ರಿಕ–ಪುರೋಗಾಮೀ–ಎಡಪಂಥೀಯ ಚಳುವಳಿಗಳು ಪ್ರಭಾವಶಾಲಿಯಾಗಿ ಬೆಳೆಯದಿರುವುದೂ ಪ್ರಸ್ತುತ ಅರಾಜಕತೆಗೆ ಕಾರಣವಾಗಿದೆ.

ಇಷ್ಟೆಲ್ಲಾ ನೇತ್ಯಾತ್ಮಕ ಬೆಳವಣಿಗೆ ಮತ್ತು ವೈಯಕ್ತಿಕ ನ್ಯೂನತೆಗಳ ನಡುವೆಯೂ ಬೆನಝೀರ್ ಭುಟ್ಟೋ ಒಬ್ಬ ಜನಾನುರಾಗಿ ನಾಯಕಿಯಾಗಿದ್ದುದು, ಪಾಕಿಸ್ತಾನದ ಸಾಮಾನ್ಯ ಜನತೆಯಲ್ಲಿ ಹುದುಗಿರುವ ಪ್ರಜಾತಂತ್ರದ ತುಡಿತವನ್ನು ತೋರಿಸುತ್ತದೆ. ಒಂದು ವೇಳೆ ಬೆನಝೀರ್ ತನ್ನ ವ್ಯಕ್ತಿತ್ವವನ್ನು ತನ್ನ ದೇಶದ ಜನತೆಯ ಹಿತಾಸಕ್ತಿಗಳ ದೃಷ್ಟಿಯಿಂದ ರೂಪಿಸಿಕೊಳ್ಳಲು ಪ್ರಯತ್ನಿಸಿದ್ದರೆ, ಆಕೆ ಜಾಗತಿಕ ಮಟ್ಟದಲ್ಲಿ ಒಬ್ಬ ಶ್ರೇಷ್ಠ ನಾಯಕಿಯಾಗಬಹುದಿತ್ತೇನೋ. ಆದರೆ ಬೆನಝೀರ್ ತನ್ನ ಹಿಂದಿದ್ದ ಅಪಾರ ಜನ ಸಮೂಹಗಳನ್ನು ಬದಿಗೊತ್ತಿ ಅಮೆರಿಕಾದ ಸಾಮ್ರಾಜ್ಯಶಾಹಿ ತಂತ್ರಗಾರಿಕೆಗೆ ಬಲಿಯಾದದ್ದು ಅವರ ವೈಯಕ್ತಿಕ ಜೀವನದ ದುರಂತವೆಂದು ಹೇಳಬಹುದು.

ಧಾರ್ಮಿಕ ಮೂಲಭೂತವಾದ, ಭಯೋತ್ಪಾದನೆ, ಆಂತರಿಕ ಕಲಹ, ಜಾಗತೀಕರಣದ ಬಿಕ್ಕಟ್ಟುಗಳು, ಆರ್ಥಿಕ ಪರಾವಲಂಬನೆ, ನಿರುದ್ಯೋಗ, ಉತ್ತಮ ಶೈಕ್ಷಣಿಕ ವ್ಯವಸ್ಥೆಯ ಕೊರತೆ ಇವೆಲ್ಲವುಗಳ ಮಧ್ಯೆ ಒಂದು ಪ್ರಜಾ ಸತ್ತಾತ್ಮಕ ನಾಯಕತ್ವದ ಕೊರತೆಗಳಿಂದ ಸೊರಗುತ್ತಿರುವ ಪಾಕಿಸ್ತಾನದ ದುಡಿಯುವ ಜನತೆಗೆ, ಶ್ರಮಿಕ ವರ್ಗಗಳಿಗೆ ಕ್ರಾಂತಿಕಾರಿ ಬದಲಾವಣೆಗಳನ್ನು ತರಬಲ್ಲ ಒಂದು ಪರ್ಯಾಯ ಸಾಮಾಜಿಕ–ಆರ್ಥಿಕ ವ್ಯವಸ್ಥೆಯ ಅಗತ್ಯವಿದೆ. ಈ ಪರ್ಯಾಯ ವ್ಯವಸ್ಥೆ ತರುವ ಶಕ್ತಿಯನ್ನು ಪ್ರಜಾತಾಂತ್ರಿಕ ಸಿದ್ಧಾಂತಗಳಲ್ಲಿ ನಂಬಿಕೆಯುಳ್ಳ ಜನಪರ ಪಕ್ಷಗಳು ತರಬಹುದೇ ಹೊರತು, ಧಾರ್ಮಿಕ ಮೂಲಭೂತವಾದಿಗಳಾಗಲೀ, ಜಿಹಾದಿಗಳಾಗಲೀ ತರಲಾಗುವುದಿಲ್ಲ ಎಂಬ ಸತ್ಯವನ್ನು ಪಾಕಿಸ್ತಾನದ ಜನಸಮುದಾಯ ಗ್ರಹಿಸಿದೆ. ಈ ಜನ ಸಮುದಾಯಗಳಿಗೆ ಒಂದು ನಾಯಕತ್ವ ವಹಿಸುವ ಅವಕಾಶ ಬೆನಝೀರ್ ಭುಟ್ಟೋರವರಿಗಿತ್ತು. ಆಕೆಯ ಮಿಲಿಯಾಂತರ ಬೆಂಬಲಿಗರ ದೃಷ್ಟಿಯಲ್ಲಿ ಪೂರ್ವಪ್ರಾಂತ್ಯದ ಪುತ್ರಿಯಾಗಿದ್ದ ಬೆನಝೀರ್ ಭುಟ್ಟೋ, ಜನ ಸಮುದಾಯದ ವಿಶ್ವಾಸವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿರುವುದೇ ಅಲ್ಲದೆ, ಪಾಕಿಸ್ತಾನದ ಭವಿಷ್ಯವನ್ನೂ ತೂಗುಯ್ಯಾಲೆಯಲ್ಲಿ ಬಿಟ್ಟು ಇಹಲೋಕ ತ್ಯಜಿಸಿದ್ದಾರೆ.

ಆಕೆಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುವುದೊಂದೇ ಜನತೆಗೆ ಉಳಿದಿರುವ ಮಾರ್ಗ. □

ಶಿಕ್ಷಣ ಪ್ರಕ್ರಿಯೆಯಲ್ಲಿ ಕನ್ನಡ ಭಾಷೆಯ ಬಳಕೆ

ಮೇಟಿ ಮಲ್ಲಿಕಾರ್ಜುನ

ಕನ್ನಡ ಭಾಷೆಗೆ ಸಂಬಂಧಿಸಿದ ಶೈಕ್ಷಣಿಕ-ಸಾಮಾಜಿಕ-ರಾಜಕೀಯ ಸಮಸ್ಯೆಗಳ ಕುರಿತ ಪರಿಹಾರಗಳನ್ನು ಭಾಷಾ ನೀತಿ ಹಾಗೂ ಭಾಷಾ ಯೋಜನೆಗಳ ಮೂಲಕ ಕಂಡುಕೊಳ್ಳಬಹುದು. ರಾಜ್ಯಮಟ್ಟದಲ್ಲಿ ಕನ್ನಡ ಭಾಷೆಯನ್ನು ಯೋಜಿಸುವಾಗ ಅದನ್ನು ಆಡಳಿತ ಭಾಷೆಯಾಗಿ, ಶಿಕ್ಷಣ ಮಾಧ್ಯಮವಾಗಿ, ವ್ಯಾವಹಾರಿಕ ಭಾಷೆಯಾಗಿ, ವಾಣಿಜ್ಯ ಉದ್ಯಮಗಳಲ್ಲಿ, ನ್ಯಾಯಾಲಯಗಳಲ್ಲಿ, ಸಾಹಿತ್ಯಿಕವಾಗಿ, ವಿಜ್ಞಾನ-ತಂತ್ರಜ್ಞಾನ ಸಂದರ್ಭಗಳಲ್ಲಿ, ಸಮೂಹ ಮಾಧ್ಯಮಗಳಲ್ಲಿ, ನಿತ್ಯಜೀವನದಲ್ಲಿ ಯಾವಾವ ರೀತಿಯಲ್ಲಿ, ಯಾವಾವ ಪ್ರೇಕ್ಷಕರನ್ನು ಗಮನಿಸಿ ಯಾವಾವ ಉದ್ದೇಶ ಗುರಿಗಳನ್ನು ಸಾಧಿಸಿಕೊಳ್ಳಬೇಕು ಎನ್ನುವುದು ಅಗತ್ಯ.

೧. ಮುನ್ನೋಟ

ಶಿಕ್ಷಣ ಮತ್ತು ಭಾಷೆಯ ಸಂಬಂಧವನ್ನು ಕುರಿತು ಆಲೋಚಿಸುವ ಕ್ರಮಗಳು ಬಹುವಿಸ್ತಾರದ ತಾತ್ವಿಕ ನೆಲೆಗಳನ್ನು ರೂಪಿಸಿಕೊಂಡು ಬೆಳೆಯಬೇಕಾದ ಅಗತ್ಯವಿರುವುದು. ಶಿಕ್ಷಣದಲ್ಲಿ ಭಾಷೆ ಎಂದರೆ ಅದು ಹಲವು ಆಯಾಮಗಳಲ್ಲಿ ಬಳಕೆಯಾಗುವ ಸಾಧ್ಯತೆಗಳನ್ನು ಗುರುತಿಸುವ ಕ್ರಮ. ಅಂದರೆ ಭಾಷಾ ಕಲಿಕೆ, ಬೋಧನೆ, ಮತ್ತು ಶಿಕ್ಷಣ ಮಾಧ್ಯಮವಾಗಿ ಬಳಕೆಗೊಳ್ಳುವ ಬಗೆಗಳು. ಈ ಭಾಷಾ ಬಳಕೆಯ ಪ್ರಕ್ರಿಯೆಯು ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯಾಗಿ ಕನ್ನಡವನ್ನು ಕಲಿಯುವ/ಬೋಧಿಸುವ ಸಂದರ್ಭದಲ್ಲಿ ರೂಢಿಸಿಕೊಳ್ಳಬಹುದಾದ ಪಠ್ಯಪುಸ್ತಕ, ಪಠ್ಯಕ್ರಮ, ಮತ್ತು ಕಲಿಕಾ/ಬೋಧನಾ ವಿಧಾನಗಳನ್ನು ಆಶ್ರಯಿಸಿಕೊಂಡಿರುವುದು. ಕನ್ನಡವನ್ನು ಪ್ರಥಮ ಭಾಷೆಯಾಗಿ ಬೋಧಿಸುವ/ಕಲಿಯುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಭಾಷಾ ಶೈಕ್ಷಣಿಕ ನಿಲುವುಗಳೇನು? ಮತ್ತು ಸಾಧ್ಯತೆಗಳು ಯಾವುವು? ಅನ್ನುವುದು ಕೂಡ ಗಂಭೀರವಾಗಿ ಚರ್ಚಿಸಬೇಕಾದ ಅಗತ್ಯವಿರುವುದು. ಯಾಕೆಂದರೆ ಬಹುಭಾಷಾ ಸಂದರ್ಭದಲ್ಲಿ ಯಾವುದೆ ಒಂದು ಭಾಷೆ ಎಲ್ಲರ ಭಾಷೆಯಾಗಿರಲಾರದು.

ಸಾಮಾಜಿಕ/ರಾಜಕೀಯ/ಸಾಂಸ್ಕೃತಿಕ ಕಾರಣಗಳಿಂದ ಒಂದು ಭಾಷೆಯನ್ನು ಪ್ರಥಮ/ದ್ವಿತೀಯ/ತೃತೀಯ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳುವ ಪರಿಸ್ಥಿತಿ/ಅವಕಾಶ ಇರುವುದು. ಇಂತಹ ಸಂದರ್ಭದಲ್ಲಿ ಕನ್ನಡವನ್ನು ಕಲಿಯುವ/ಬೋಧಿಸುವ ಕ್ರಮ ಹೇಗಿರಬೇಕು ಅನ್ನುವುದು ಸರಳ ತೀರ್ಮಾನದಿಂದ ಬಗೆಹರಿಸಿಕೊಂಡು ತೀರ್ಮಾನದಿಂದ ಬಗೆಹರಿಯುವಂತಹದಲ್ಲ. ಕಾರಣ, ಭಾಷಾ ಭಿನ್ನತೆ ಅಥವಾ ಪ್ರಭೇಧ, ಭಾಷಾಸಂಕರ, ಭಾಷಾರೂಪ ಮತ್ತು ಉಚ್ಚಾರಣೆಯ ವೈವಿಧ್ಯತೆ ಹಾಗೂ ಬರಹ ಮತ್ತು ಮಾತಿನ ಮಧ್ಯದ ಕಂದರ ಮುಂತಾದವುಗಳನ್ನು ಬಗೆಹರಿಸಿಕೊಂಡು ತೀರ್ಮಾನಿಸುವ ಅಗತ್ಯವಿರುವುದು. ಭಾಷಾ ಕಲಿಕೆ, ಬೋಧನೆ ಸಾಮರ್ಥ್ಯಗಳ ಮೌಲ್ಯಮಾಪನಗಳನ್ನು ಕುರಿತು ಹೊಸ ಚಿಂತನೆಗಳನ್ನು ಒಗ್ಗಿಸಿಕೊಳ್ಳುವ ಜರೂರು ಇರುವುದು. ಹಾಗೂ ಇದಕ್ಕೆ ಪೂರಕವಾಗಿ ಕನ್ನಡ ಕಲಿಕೆ/ಬೋಧನೆಗಳಿಗೆ ಅಗತ್ಯವಾದ ತಾತ್ವಿಕ ನೆಲೆಗಳ ಮಂಡನೆ ಮತ್ತು ಬೇಕಾದ ಸಾಮಾಗ್ರಿಯ ಸಿದ್ಧತೆಯನ್ನು ರೂಪಿಸಿಕೊಳ್ಳುವುದು. ಯಾಕೆಂದರೆ ಬಹುಭಾಷಿಕತೆ ಮತ್ತು ಬಹುಸಂಸ್ಕೃತಿ ಹಾಗೂ ಅದರೊಳಗಿನ ಅಂತರ್ ಚಲನಶೀಲತೆ ಒಂದು ವಾಸ್ತವ ಸತ್ಯ.

ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಸಂವಹನವಾಗುವ ಭಾಷಾಬಳಕೆ/ಭಾಷಿಕ ಆಯಾಮಗಳು ಸಹಜ, ಪ್ರಾಮಾಣಿಕ ಮತ್ತು ಪ್ರಜ್ಞಾಪೂರಕವಾದ ಆಯ್ಕೆಗಳಾಗಿರುವುದಿಲ್ಲ. ನಾವು ಮಾಡುವ ಸಾಂಸ್ಕೃತಿಕ-ಶೈಕ್ಷಣಿಕ ನಿರ್ಧಾರಗಳಲ್ಲಿ ಅನೇಕವು ಪ್ರಜ್ಞಾಪೂರಕವಲ್ಲದ ಪಾತಳಿಗೆ ಸೇರಿರುತ್ತವೆ ಹಾಗೂ ಅವು ನಮ್ಮ ವೈಯಕ್ತಿಕ ಆಯ್ಕೆಗಳಾಗಿರುವುದಿಲ್ಲ. 'ಒಂದು ಭಾಷೆ ಬೆಳೆಯಬೇಕಾದರೆ ಅದು ಹಲವು ಸ್ತರಗಳಲ್ಲಿ ಹಲವು ರೀತಿಗಳಲ್ಲಿ ಉಪಯೋಗವಾಗಬೇಕು. ಮುಖ್ಯವಾಗಿ ಜನಜೀವನದ ಎಲ್ಲ ಕ್ಷೇತ್ರಗಳಲ್ಲೂ ಅದು ಸಲ್ಲಬೇಕು. ಹಲವು ಕಾಲದ ಇತಿಹಾಸವಿರುವ ಜನತೆಗೆ ಸಂಬಂಧಿಸಿದಂತೆ ಜನಜೀನವನವೆನ್ನುವುದು ಯಾವತ್ತು ಸರಳವಾಗಿರುವುದಿಲ್ಲ. ಅದಕ್ಕೂ ಹಲವು ಹಂತಗಳು, ಹಲವು ಕೋನಗಳು, ಹಲವು ದಿಕ್ಕುಗತಿಗಳು ಇರುತ್ತವೆ. ಆದ್ದರಿಂದಲೇ ಇಂಥ ಯಾವ ಭಾಷೆಯೂ ಅಖಂಡವಾಗಿಯೂ ತೆಳುವಾಗಿಯೂ ಇರಲಾರದು. ಎಂದರೆ, ಜೀವಂತ ಭಾಷೆಯಲ್ಲಿ ಹಲವು ರೀತಿಯ ಉಪಭಾಷೆಗಳಿರುತ್ತವೆ. ಇದು ಜೀವಂತಿಕೆಯ ಸ್ವಾರಸ್ಯ ಕೂಡಾ. ಈ ಉಪ ಭಾಷೆಗಳೆಲ್ಲವೂ ಬರೆಯುವ ಭಾಷೆಗೆ ಜೀವಸತ್ವ ಒದಗಿಸುವಂತವು. ಆದರೂ ಬರೆಯುವ ಭಾಷೆ ಈ ಉಪಭಾಷೆಗಳನ್ನು ಕೀಳಾಗಿಯೇ ಕಾಣುವ ಅಹಮ್ಮನ್ನು- ಎಂದರೆ, ಸಾಂಸ್ಕೃತಿಕ ಯಜಮಾನಿಕೆಯನ್ನು- ಬೆಳೆಸಿಕೊಂಡಿರುವುದು ದುರದೃಷ್ಟಕರ.

ಯಾಕೆಂದರೆ, ಎಲ್ಲಾ ಕಡೆಯೂ ಬರೆಯುವ ಭಾಷೆ ಯಜಮಾನರದೇ ಆಗಿರೋದು ಇದಕ್ಕೆ ಕಾರಣ' (ಕೆ.ವಿ. ತಿರುಮಲೇಶ್: ಕನ್ನಡಪ್ರಭ: ಡಿ ೧೦:೨೦೦೮). ಬಹು ಭಾಷಾ ಬಹು ಸಾಂಸ್ಕೃತಿಯ ಸಂದರ್ಭದಲ್ಲಿ ಪ್ರತಿಯೊಂದು ಭಾಷೆಯ ಹಿಂದೆಯೂ ಒಂದು ವಿಶಿಷ್ಟ ಜೀವನ ಕ್ರಮವಿದ್ದು ಅದಕ್ಕ ನುಗುಣವಾಗಿ ಶಾಬ್ದಿಕ ಮತ್ತು ಅಶಾಬ್ದಿಕ ಸಂವಹನಗಳ ಮೂಲಕ ಒಂದು ಜನಾಂಗ ತನ್ನನ್ನು ಅಭಿವ್ಯಕ್ತಿಸಿಕೊಳ್ಳುತ್ತಿ ರುತ್ತಾರೆ. ಈ ಪ್ರಾದೇಶಿಕ/ವರ್ಗ/ಜಾತಿ ಭಾಷಾರೂಪ ಮತ್ತು ಸಂಸ್ಕೃತಿಗಳ ಬಹುತ್ವವನ್ನು ಅಗತ್ಯವಾಗಿ ಒಪ್ಪಿ ಕೊಂಡೇ ಕೆಲಸ ಮಾಡಬೇಕಿರುವುದು.

೨. ನಮಗೆ ಬೇಕಾದ ಭಾಷಾ ನೀತಿ ಮತ್ತು ಭಾಷಾ ಯೋಜನೆಗಳು ಯಾವುವು?

ಕನ್ನಡ ಭಾಷೆಗೆ ಸಂಬಂಧಿಸಿದ ಶೈಕ್ಷಣಿಕ-ಸಾಮಾಜಿಕ-ರಾಜಕೀಯ ಸಮಸ್ಯೆಗಳ ಕುರಿತ ಪರಿಹಾರಗಳನ್ನು ಭಾಷಾ ನೀತಿ ಹಾಗೂ ಭಾಷಾ ಯೋಜನೆಗಳ ಮೂಲಕ ಕಂಡುಕೊಳ್ಳಬಹುದು. ರಾಜ್ಯಮಟ್ಟದಲ್ಲಿ ಕನ್ನಡ ಭಾಷೆಯನ್ನು ಯೋಜಿಸುವಾಗ ಅದನ್ನು ಆಡಳಿತ ಭಾಷೆಯಾಗಿ, ಶಿಕ್ಷಣ ಮಾಧ್ಯಮವಾಗಿ, ವ್ಯಾವಹಾರಿಕ ಭಾಷೆಯಾಗಿ, ವಾಣಿಜ್ಯ ಉದ್ಯಮಗಳಲ್ಲಿ, ನ್ಯಾಯಾಲಯಗಳಲ್ಲಿ, ಸಾಹಿತ್ಯಿಕವಾಗಿ, ವಿಜ್ಞಾನ-ತಂತ್ರಜ್ಞಾನ ಸಂದರ್ಭಗಳಲ್ಲಿ, ಸಮೂಹ ಮಾಧ್ಯಮಗಳಲ್ಲಿ, ನಿತ್ಯಜೀವನದಲ್ಲಿ ಯಾವಾವ ರೀತಿಯಲ್ಲಿ, ಯಾವಾವ ಪ್ರೇಕ್ಷಕರನ್ನು ಗಮನಿಸಿ ಯಾವಾವ ಉದ್ದೇಶ ಗುರಿಗಳನ್ನು ಸಾಧಿಸಿಕೊಳ್ಳಬೇಕು? ಎನ್ನುವುದು ಅಗತ್ಯ. ಹಾಗೂ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಭಾಷಾ ಪ್ರಭೇದಗಳ ಸ್ಥಾನಮಾನವೇನು? ಮಾತೃ ಭಾಷಾ ಶಿಕ್ಷಣ, ವಯಸ್ಕರ ಶಿಕ್ಷಣ, ದ್ವಿತೀಯ ಭಾಷಾ ಬೋಧನೆ/ಕಲಿಕೆ ಮತ್ತು ಈ ಪ್ರಕ್ರಿಯೆಯಲ್ಲಿ ಪದಕೋಶ, ಪಠ್ಯಪುಸ್ತಕ, ಪಠ್ಯಕ್ರಮ ಮುಂತಾದವುಗಳ ಸ್ವರೂಪವೇನು? ಭಾಷಾ ಬೋಧನಾ/ಕಲಿಕಾ ಮಾದರಿಗಳಾವುವು? ಹಾಗೂ ಶೈಕ್ಷಣಿಕ ಪರಿಕರಗಳನ್ನು ಸಿದ್ಧಪಡಿಸಿಕೊಳ್ಳಲು ಅಗತ್ಯವಾದ ಮಾನದಂಡ ಮತ್ತು ತಂತ್ರಗಳೇನು? ಮುಂತಾದವುಗಳನ್ನು ಕುರಿತು ಸ್ಪಷ್ಟ ನಿಲುವುಗಳನ್ನು ಜಾರಿಗೊಳಿಸುವುದಕ್ಕೆ ಪೂರಕವಾಗಿ ನಮ್ಮ ಭಾಷಾ ನೀತಿ ಮತ್ತು ಭಾಷಾ ಯೋಜನೆಗಳು ರೂಪುಗೊಳ್ಳುವ ಅವಶ್ಯಕತೆ ಇರುವುದು.

ಯಾಕೆಂದರೆ, ಸ್ವಾರ್ಥ, ಸಾಧನೆ, ಭಾಷಾ ದ್ವೇಷ ಹಾಗೂ ತಪ್ಪು ತಿಳುವಳಿಕೆಗಳೇ ಭಾಷಾ ನೀತಿ ಮತ್ತು ಭಾಷಾ ಯೋಜನೆಗಳನ್ನು ಪರೋಕ್ಷವಾಗಿ ರೂಪಿಸುತ್ತಿರುವುದರಿಂದ, ಈ ಬಗೆಗಿನ ವೈಜ್ಞಾನಿಕವಾದ ಅಧ್ಯಯನ ಏನು ಹೇಳುತ್ತದೆ ಎಂಬುದನ್ನು ಪರಿಗಣಿಸುವ ಅಗತ್ಯ ಇಂದು ಇದೆ. ಭಾಷೆಯ ಬಗೆಗಿನ ಪ್ರೀತಿ ಮತ್ತು ಅಭಿಮಾನಗಳು ತಮ್ಮಷ್ಟಕ್ಕೆ ತಾವೇ ಭಾಷಾ ಕಲಿಕೆ/ಬೋಧನೆ, ಬಳಕೆ, ಆಯ್ಕೆ ಮುಂತಾದ ಸಮಸ್ಯೆಗಳಿಗೆ ಉತ್ತರಗಳನ್ನು ನೀಡಲಾರವು. ಅಂದರೆ, 'ಶಾಲಾ ಶಿಕ್ಷಣದಲ್ಲಿ ಯಾವ ಭಾಷೆಗಳನ್ನು ಕಲಿಯಬೇಕು ಎಂಬ ಪ್ರಶ್ನೆ ಒಂದು ಕಡೆಗಾದರೆ ಈ ಎಲ್ಲಾ ಭಾಷೆಗಳಿಗೂ ಸಮಾನ ಪ್ರಾಶಸ್ತ್ಯ ಇರಬೇಕೆ ಅಥವಾ ಅವುಗಳ ನಡುವೆ ಒಂದು ನಿರ್ದೇಶಿತ ತಾರತಮ್ಯ ಅಗತ್ಯವೇ ಎಂಬ ಇನ್ನೊಂದು ಪ್ರಶ್ನೆ ಮುಂಚೂಣಿಗೆ ಬರುತ್ತದೆ' (ಕೆ.ವಿ. ನಾರಾಯಣ: ಕನ್ನಡ ಜಗತ್ತು: ೪೮: ೨೦೦೭). ಯಾಕೆಂದರೆ, ತ್ರಿಭಾಷಾ ಸೂತ್ರದ ಈ ಗೊಂದಲವು ಮತ್ತು ಅದು ಉಂಟು ಮಾಡುವ ಅಸಮಾನತೆಯ ಸನ್ನಿವೇಶವು ಹಲವಾರು ಇಕ್ಕಟ್ಟುಗಳನ್ನು ನಿರ್ಮಾಣ ಮಾಡಿರುವುದು.

ನಮ್ಮ ಭಾಷಾ ಶಿಕ್ಷಣದ ಪಠ್ಯಕ್ರಮಗಳು ಯಾವುದೆ ತರಹದ ಭಾಷಿಕ ಕೌಶಲಗಳನ್ನು ವೃದ್ಧಿಸುವ ಇರಾದೆಯನ್ನು ಹೊಂದಿರಲಾರವು. ಕೇವಲ ವ್ಯಾಕರಣಾಂಶಗಳನ್ನು ವ್ಯಾಕರಣ ಪರಿಭಾಷೆಯನ್ನು ಬಳಸಿ ಪರಿಚಯಿಸುವುದರ ಮೂಲಕ ಭಾಷಾ ಶಿಕ್ಷಣದ ಉದ್ದೇಶ ಮತ್ತು ಗುರಿಗಳನ್ನು ಸಾಧಿಸಲಾಗದು ಎನ್ನುವುದು ಪರಿಶೀಲನಾರ್ಹವಾಗಿದೆ.

ಕಾರಣವೆನೆಂದರೆ, ಕರ್ನಾಟಕ ಸರಕಾರದ ಭಾಷಾ ನೀತಿಗೆ ಎರಡು ನೆಲೆಯ ಒತ್ತಾಯಗಳು ಪ್ರೇರಕಗಳಾಗಿವೆ. ೧. ಸಂವಿಧಾನ ನಿರೂಪಿಸಿದ ಭಾಷಾ ನೀತಿಯನ್ನು ಕರ್ನಾಟಕ ಸಂದರ್ಭದಲ್ಲಿ ಯತಾವತ್ತಾಗಿ ಆಚರಿಸುವುದು. ೨. ಜನರ ಆಶೋತ್ತರಗಳನ್ನು ಅಪೇಕ್ಷೆಗಳನ್ನು ಗಮನಿಸಿ ಅದಕ್ಕನುಗುಣವಾದ ಭಾಷಾ ನೀತಿಯನ್ನು ರೂಪಿಸುವುದು' (ಅದೇ :೧೫). ಯಾವುದೇ ಭಾಷಿಕ ಸಮುದಾಯಕ್ಕೆ ತನ್ನ ಭಾಷೆಯನ್ನು ತನ್ನ ಖಾಸಗೀ ಹಾಗೂ ಸಾರ್ವಜನಿಕ ವಲಯಗಳಲ್ಲಿ ಬಳಸುವ ಹಕ್ಕಿದೆ. ಈ ಬಳಸುವ ಪ್ರಯತ್ನಕ್ಕೆ ಪೂರಕವಾದ ವ್ಯವಸ್ಥೆಯನ್ನು ಸರ್ಕಾರ ಒದಗಿಸಬೇಕು. ಭಾಷಾ ಕಲಿಕೆಯ ನೆಲೆಗಳನ್ನು ರೂಪಿಸುವ ಜವಾಬ್ದಾರಿ ಭಾಷಾ ನೀತಿ ಮತ್ತು ಭಾಷಾ ಯೋಜನೆಗಳಂತಹ ಪ್ರಕ್ರಿಯೆಗಳು ಮೈಗೂಡಿಸಿಕೊಳ್ಳಬೇಕು. ಭಾಷಾ ನೀತಿ ಮತ್ತು ಭಾಷಾ ಯೋಜನೆಯು ಭಾಷಾ ಬಳಕೆಯ ನೆಲೆಗಳನ್ನು ವಿಸ್ತಾರವಾಗಿ ಕಲಿಯುವ ಮಾದರಿ/ ಮಾನದಂಡಗಳನ್ನು ರೂಪಿಸಬೇಕಾಗಿರುವುದು. ಭಾಷಾ ಬಳಕೆಯ ಸ್ವರೂಪ, ವಿಧಾನ ಮತ್ತು ಅನುಸರಿಸಬೇಕಾದ ಪರಿಕರಗಳ ಬಗ್ಗೆ ಗಮನಹರಿಸಬೇಕಾಗಿದೆ.

ಅಂದರೆ, ನಮ್ಮ ಭಾಷಾ ಶಿಕ್ಷಣದ ಪಠ್ಯಕ್ರಮಗಳು ಯಾವುದೆ ತರಹದ ಭಾಷಿಕ ಕೌಶಲಗಳನ್ನು ವೃದ್ಧಿಸುವ ಇರಾದೆಯನ್ನು ಹೊಂದಿರಲಾರವು. ಕೇವಲ ವ್ಯಾಕರಣಾಂಶಗಳನ್ನು ವ್ಯಾಕರಣ ಪರಿಭಾಷೆಯನ್ನು ಬಳಸಿ ಪರಿಚಯಿಸುವುದರ ಮೂಲಕ ಭಾಷಾ ಶಿಕ್ಷಣದ ಉದ್ದೇಶ ಮತ್ತು ಗುರಿಗಳನ್ನು ಸಾಧಿಸಲಾಗದು ಎನ್ನುವುದು ಪರಿಶೀಲನಾರ್ಹವಾಗಿದೆ. ಕಾರಣ, ಶಿಕ್ಷಣದಲ್ಲಿ ಕನ್ನಡವು ಪರಿಣಾಮಕಾರಿಯಾಗಿ ಬಳಕೆಯಾದರೆ, ಇನ್ನೆಲ್ಲ ಕ್ರಿಯಾತ್ಮಕ ವಲಯಗಳಲ್ಲಿ ಕನ್ನಡವು ಕ್ರಿಯಾಶೀಲವಾಗುವದರಲ್ಲಿ ಯಾವುದೆ ಸಂದೇಹವಿಲ್ಲ.

ಆಧುನಿಕತೆಯ ಎಲ್ಲ ಅವಕಾಶಗಳನ್ನು ಮೈಗೂಡಿಸಿಕೊಳ್ಳುವ ಭರಾಟೆಯ ಪ್ರಕ್ರಿಯೆಯಲ್ಲಿ ಒಂದು "ಪ್ರಮಾಣ ಭಾಷೆಯಾಗಿ" ನಿರ್ಮಾಣವಾಗುವ ಅಪಾಯಗಳಿರುವವು. ಪ್ರಮಾಣ ಭಾಷೆ ಎನ್ನುವುದು ಯಾವುದೆ ಒಂದು ವರ್ಗ, ಪ್ರದೇಶ, ಜನಾಂಗದ ಭಾಷೆಯಾಗಿರಬಹುದು ಇಲ್ಲ ಯಾರದೂ ಆಗದೆ ಅಮೂರ್ತರೂಪದಲ್ಲಿರಬಹುದು. ಪರಿಣಾಮವಾಗಿ ಭಾಷಿಕ ವೈವಿಧ್ಯತೆ ನಾಶವಾಗುವುದು. ಭಾಷೆಯ ಬೆಳವಣಿಗೆಗೆ ಪ್ರಮಾಣೀಕರಣ ಮತ್ತು ಆಧುನಿಕರಣ ಪ್ರಕ್ರಿಯೆಗಳು ಅಗತ್ಯವಾದರೂ ಭಾಷೆಯಲ್ಲಿ ಸರಿ-ತಪ್ಪು, ನೇಲು-ಕೀಳೂ, ಶ್ರೇಷ್ಠ-ಕನಿಷ್ಟ ಎನ್ನುವ ಮನೋಭಾವನೆಗೆ ಅವಕಾಶವಿರಕೂಡದು ಬದಲಾಗಿ ಭಾಷಿಕ ವೈವಿಧ್ಯತೆಯನ್ನು ಅಳವಡಿಸಿಕೊಳ್ಳುವ ಸೂಕ್ತ ತೀರ್ಮಾನಗಳು ಅವಶ್ಯ. ಒಟ್ಟು ಜನಸಮುದಾಯದ ಭಾಷಿಕ ಪ್ರಜ್ಞೆಯನ್ನು ಪ್ರತಿನಿಧಿಸುವ ಪರಿಕರಗಳು ರೂಪುಗೊಳ್ಳಬೇಕು. ಶೈಕ್ಷಣಿಕ ಪಠ್ಯಕ್ರಮಗಳು ಸಾಮಾಜಿಕ-ಸಾಂಸ್ಕೃತಿಕ ಅಸಹನೆಯನ್ನು ಸೃಷ್ಟಿಸಕೂಡದು. ಇದನ್ನು ಸಾಧಿಸಬೇಕೆಂದರೆ ಭಾಷಾ ಬಳಕೆಯ ನೆಲೆಗಳು ಸಾಮುದಾಯಿಕ ಭಾಷಾ ಚಟುವಟಿಕೆಗಳ ಆಧಾರದ ಮೇಲೆ ರೂಪಗೊಳ್ಳಬೇಕು.

೩. ಭಾಷಾ ಪಠ್ಯಗಳ ರಚನೆ ಮತ್ತು ಭಾಷಿಕ ಸ್ವರೂಪ ಹೇಗಿರಬೇಕು?

ಕನ್ನಡ ಮನೆಮಾತಾಗಿ ಮತ್ತು ಕನ್ನಡ ಮನೆಮಾತಲ್ಲದ ಮಕ್ಕಳಿಗೆ ಕನ್ನಡವನ್ನು ಬೋಧಿಸುವ/ಕಲಿಯುವ ವಿಧಾನ/ಸ್ವರೂಪದ ಬಗ್ಗೆ ಮರುಮೌಲ್ಯಮಾಪನದ ಅಗತ್ಯವಿದೆ. ಭಾಷಾ ಪಠ್ಯಗಳ ರಚನೆ ಮತ್ತು ಭಾಷಿಕ ಸ್ವರೂಪ ಹೇಗಿರಬೇಕು ಎನ್ನುವುದು ಕನ್ನಡವನ್ನು ಯಾರಿಗೆ, ಯಾವಾಗ, ಎಲ್ಲಿ ಕಲಿಸಲಾಗುತ್ತದೆ ಎನ್ನುವುದನ್ನೂ ಆಧರಿಸಿಕೊಂಡು ತೀರ್ಮಾನವಾಗುವುದು. ಯಾಕೆಂದರೆ, ಭಾಷಾ ಶಿಕ್ಷಣದ ಉದ್ದೇಶ ಮತ್ತು ಗುರಿಗಳೂ ಭಾಷಿಕ ಕೌಶಲಗಳನ್ನು ರೂಪಿಸುವುದಾಗಿದೆ. ಈ ಕೌಶಲಗಳ ಬೋಧನೆ/ಕಲಿಕೆ ಕನ್ನಡ ಮನೆಮಾತಾಗಿ ಮತ್ತು ಮನೆಮಾತಲ್ಲದ ಮಕ್ಕಳಿಗೆ ಬೇರೆ ಬೇರೆಯಾಗಿರುವುದು. ಕನ್ನಡ ತಾಯಿ ನುಡಿಯಾಗಿ ಬೋಧನೆ/ಕಲಿಕೆಯು ಒಂದು ಹಂತದವರೆಗೆ ಸ್ಥಳೀಯವಾಗಿ ವ್ಯಾಪಕವಾಗಿ ಬಳಕೆಯಾಗುವ ಭಾಷಿಕ ರೂಪಗಳಿಂದ ಆರಂಭವಾಗಬೇಕು. ಭಾಷೆಯ ಮೂಲ ಕೌಶಲಗಳನ್ನು ರೂಢಿಸಿಕೊಂಡ ಬಳಿಕ ಕಲಿಯುವರ ಗ್ರಹಿಕ ಮತ್ತು ಬಳಕೆಯ ನೆಲೆಗಳನ್ನು ಅನುಸರಿಸಿಕೊಂಡು ಬೋಧನೆ/ಕಲಿಕೆ ನೆಲೆಗಳು ಸಿದ್ಧಗೊಳ್ಳಬೇಕು.

ಯಾವುದೆ ಭಾಷೆಯು ಪ್ರಭೇಧ, ಭಿನ್ನತೆ/ವ್ಯಾತ್ಯಾಸಗಳಿಂದ ಹೊರತಾದದ್ದಲ್ಲ. ಹಾಗಾಗಿ 'ಪರಿಚಿತ ಭಾಷಾರೂಪಗಳಿಂದ' 'ಅಪರಿಚಿತ ಭಾಷಾರೂಪಗಳನ್ನು' ಪರಿಚಯಿಸುವ ಅಗತ್ಯವಿರುವುದು. ಕನ್ನಡದಲ್ಲಿ ಸಂಭವಿಸುವ ಭಾಷಾ ರೂಪ ವ್ಯತ್ಯಾಸ (ಉದಾ: ಬಹಳ, ಜಾಸ್ತಿ, ಜಗ್ಗಿ, ಮನಗಂಡು, ಸಖತ್, ಬೇಜಾನ ಮುಂತಾದವು), ಪರ್ಯಾಯ ಉಚ್ಚಾರಣೆ (ಶಾಲಾ, ಶಾಲೆ, ಸಾಲಿ) ಇನ್ನಿತರ ವಿಕಲ್ಪಗಳನ್ನು ಕಡೆಗಣಿಸಿ ಭಾಷಾ ಕಲಿಕೆ/ಬೋಧನೆಯ ಪರಿಕರಗಳನ್ನು ರೂಪಿಸುವ ಪ್ರಯತ್ನಗಳು ನಡೆದಿರುವುದಕ್ಕೆ ಅಗಾಧವಾದ ಪುರಾವೆಗಳು ನಮಗೆ ಲಭ್ಯವಾಗುವುವು. ನಮ್ಮ ಶೈಕ್ಷಣಿಕ ಚಟುವಟಿಕೆ ಮೊದಲಾಗುವುದು 'ಭಾಷಾ ಶಿಕ್ಷಣದೊಂದಿಗೆ ಇಲ್ಲಿ ಗಮನಿಸಬೇಕಾಗಿರುವುದು ಮಾತೃಭಾಷಾ ಶಿಕ್ಷಣ ಪ್ರಕ್ರಿಯೆಯಲ್ಲಿ ಓದು-ಬರಹದಂತಹ ಪ್ರಾಥಮಿಕ ಕೌಶಲಗಳು ಪ್ರಾರಂಭವಾಗುವವು. ಇಲ್ಲಿಯೇ ಸಮಸ್ಯೆಯು ಕೂಡ ಪ್ರಾರಂಭಗೊಳ್ಳುವುದು. ಅಂದರೆ, 'ಸರಿಯಾದ' ಅಥವಾ 'ಶುದ್ಧ' ಭಾಷೆಯನ್ನು ಬೋಧಿಸುವ/ಕಲಿಸುವ ಪರಿಣಾಮವಾಗಿ ಮಾತು-ಬರಹಗಳ ಮಧ್ಯ ನೇರಸಂಪರ್ಕವನ್ನು ಕಲ್ಪಿಸಿಕೊಳ್ಳದೆ ಮಕ್ಕಳು ಹಲವಾರು ಭಾಷಿಕ ಗೊಂದಲಗಳನ್ನು ಸೃಷ್ಟಿಸಿಕೊಳ್ಳುವರು. ಅಂದರೆ, ಈಗಾಗಲೆ ಮಗು ರೂಢಿಸಿಕೊಂಡ ಭಾಷಿಕ ಕೌಶಲಗಳನ್ನು ವಿಸ್ತರಿಸಿಕೊಳ್ಳುವುದಕ್ಕಿಂತ 'ಸರಿ-ತಪ್ಪು' ಎನ್ನುವ ರೀತಿಯಲ್ಲಿ ಸರಿಪಡಿಸುವ ಪ್ರಯತ್ನಗಳನ್ನು ಶುರುಮಾಡುವರು. ರೂಢಿಗತ ಭಾಷಾರೂಪಗಳಿಗಿಂತ ಭಿನ್ನ ಭಾಷಿಕರೂಪ/ಉಚ್ಚಾರಣೆಗಳು ಕಲಿಯುವರಲ್ಲಿ ಹಲವಾರು ಭಾಷಿಕ ಏರುಪೇರು

ಗಳಿಗೆ ಅವಕಾಶ ಮಾಡಿಕೊಡುವುದು. ಉದಾ: ಶ,ಷ,ಸ ನಡುವಿನ ವ್ಯತ್ಯಾಸ ಮತ್ತು ಅಲ್ಪಪ್ರಾಣ- ಮಾಹಾಪ್ರಾಣ ಹಾಗೂ ಹೇರಳವಾಗಿ ಎರವಲು ಪದಗಳ ಬಳಕೆಯು ಹಲವಾರು ಗೊಂದಲಗಳನ್ನು ಸೃಷ್ಟಿಸುವುದು.

ನಾವು ಇಂದು ಶಾಲೆಗಳಲ್ಲಿ ಕಲಿಸುತ್ತಿರುವ ಕನ್ನಡವನ್ನೇ ನಿದರ್ಶನಕ್ಕೆಂದು ತೆಗೆದುಕೊಳ್ಳೋಣ, ನಾವು ಕಲಿಸುತ್ತಿರುವ 'ಪ್ರಮಾಣ ಕನ್ನಡ' ಸಮಾಜದ ಮೇಲ್ವರ್ಗ ಮತ್ತು ಇತರ ನಗರವಾಸಿ ಮುಂದುವರಿದ ಜಾತಿಗಳ ದಿನನಿತ್ಯದ ವ್ಯವಹಾರಿಕ ಭಾಷೆಗೆ ಸಮೀಪವಾಗಿದ್ದು, ದಲಿತ, ಹಿಂದುಳಿದ ಮತ್ತು ಅಸಂಖ್ಯಾತ ಗ್ರಾಮವಾಸಿಗಳ ದಿನನಿತ್ಯದ ವ್ಯವಹಾರಿಕ ಭಾಷೆಯಿಂದ ದೂರವಾಗಿದೆ. ಈ ಸ್ಥಿತಿ ಸಮಾಜದ ಕೆಲವು ಗುಂಪುಗಳಿಗೆ, ಶೈಕ್ಷಣಿಕವಾಗಿ ಕೆಲವು ಉಪಯುಕ್ತತೆಯನ್ನು ನೀಡಿದರೆ ಉಳಿದ ಗುಂಪುಗಳನ್ನು ಅನುಪಯುಕ್ತತೆಗೆ ಈಡುಮಾಡುತ್ತದೆ. ಚಾರಿತ್ರಿಕವಾಗಿ ಕೆಲವು ಶಕ್ತಿಗಳ ಒತ್ತಡದಿಂದ ರೂಪಗೊಂಡಿರುವ ಈ ಪ್ರಮಾಣ/ಗ್ರಾಂಥಿಕ ಭಾಷೆಯನ್ನು ಹೇಗೆ ಕಸಿಗೊಳಿಸಬೇಕು ಎಂಬ ಬಗ್ಗೆ ಸರ್ಕಾರ, ಸಮುದಾಯ, ಶಿಕ್ಷಣತಜ್ಞರು, ಭಾಷಾವಿಜ್ಞಾನಿಗಳು ಒಟ್ಟಾಗಿ ಯೋಚನೆ ಮಾಡಬೇಕಾದ ಅವಶ್ಯಕತೆ ಇದೆ. ಕಾರಣ, ನಮ್ಮ ಭಾಷೆ ಹಲವಾರು ಭಾಷಿಕ ಗೊಂದಲಗಳನ್ನು ಸೃಷ್ಟಿಸಿಕೊಂಡಿದೆ. ಹೀಗೆ ಸೃಷ್ಟಿಗೊಂಡ ಭಾಷಿಕ ರಚನಾ ಗೊಂದಲಗಳನ್ನು ಅಮೂಲಾಗ್ರವಾಗಿ ಬದಲಾಯಿಸಬೇಕು. ಈ ಅಮೂಲಾಗ್ರ ಬದಲಾವಣೆಗಳನ್ನು ಭಾಷೆಯ ಚೌಕಟ್ಟಿನೊಳಗೆ ತರಬೇಕಾಗಿದೆ. ಡಾ॥ ಡಿ.ಎನ್.ಎಸ್. ಭಟ್ಟ ಅವರ ಪ್ರಕಾರ, ಕನ್ನಡದವೇ ಪದಗಳನ್ನು ಬರೆದು ಬಳಸುವುದಕ್ಕೆ ಮೂವತ್ತು ಮೂರು (ಈಗಿನ ಐವತ್ತು ಅಕ್ಷರಗಳಿಗೆ ಬದಲಾಗಿ) ಅಕ್ಷರಗಳಿದ್ದರೆ ಸಾಕು.

ಈ ಮೂವತ್ತು ಮೂರು ಅಕ್ಷರಗಳಿಂದ ಮಾತು ಮತ್ತು ಬರೆಹದ ನಡುವಿನ ಕಂದರವನ್ನು ಇಲ್ಲವಾಗಿಸಬಹುದು. ಹಾಗೂ ಸಂಸ್ಕೃತದಿಂದ ಎರವಲಾಗಿ ಪಡೆದುಕೊಂಡ ಮಾಹ ಪ್ರಾಣಾಕ್ಷರಗಳ (ಖ,ಛ,ಠ,ಢ,ಫ ಮತ್ತು ಘ,ಝ,ಧ,ಭ)ನ್ನು ಬಳಸಿಕೊಂಡು ಸಂಸ್ಕೃತ ಪದಗಳನ್ನು ಬಳಸುವಾಗ, ಹೆಚ್ಚಾಗಿ ಅಲ್ಪ ಪ್ರಾಣಗಳು ಬಳಕೆಯಾಗುವುದು ಸಾಮಾನ್ಯ, ಉದಾಃ ಸುಖ, ವ್ಯಥೆ, ಪರಿಚ್ಛೇದ, ಪ್ರಧಾನ, ವಿಫಲ ಇವುಗಳಿಗೆ ವ್ಯತರಿಕ್ತವಾಗಿ (ಕ,ಚ,ಟ,ತ,ಪ ಮತ್ತು ಗ,ಜ,ಡ,ದ,ಬ) ಸುಖ, ವ್ಯಥೆ, ಪರಿಚ್ಛೇದ, ಪ್ರದಾನ, ವಿಪಲ ಹೀಗೆ ಬಳಕೆಯಾಗುವುದು ರೂಢಿ ಆದ್ದರಿಂದ, ಜನಸಾಮಾನ್ಯರ ಭಾಷಾ ಬಳಕೆಗನುಗುಣವಾಗಿ ಕನ್ನಡ ರೂಪಗೊಳ್ಳಬೇಕಾಗಿದೆ ಎನ್ನುವುದು ಇವರ ಆಶಯ.

ಭಾಷೆ ನಿರಂತರವೂ ಬದಲಾವಣೆಗೆ ಹೊಂದುತ್ತಿರುವಂತಹ ಒಂದು ಚಟವಟಿಕೆ. ಪ್ರತಿಯೊಂದು ಪೀಳಿಗೆ ಉಪಯೋಗಿಸುತ್ತಿರುವ ದಿನನಿತ್ಯದ ವ್ಯಾವಹಾರಿಕ ಭಾಷೆಯಲ್ಲಿ ವೈವಿಧ್ಯ/ವ್ಯತ್ಯಾಸಗಳಿವೆಯಾದರೂ ನಮಗೆ ಉಪಲಬ್ಧವಿರುವ ಸಾಹಿತ್ಯ ಕೃತಿಗಳು ಮತ್ತು ಶಾಸನಗಳಲ್ಲಿ ಸಿಗುವುದು ಕೇವಲ ಪ್ರಮಾಣ/ಗ್ರಾಂಥಿಕ ಭಾಷೆ. ಈ ಸಾಹಿತ್ಯ/ಭಾಷೆ ಚರಿತ್ರೆಯನ್ನು ಗಮನಿಸಿದರೆ ಈ ಗ್ರಾಂಥಿಕ ಭಾಷೆ ಕೂಡ ಕಾಲಾನುಕ್ರಮದಲ್ಲಿ ದಿನನಿತ್ಯ ವ್ಯವಹಾರಿಕ ಭಾಷಿಗೆ ಸಮೀಪವಾಗಿ ಪರಿವರ್ತನೆ ಹೊಂದುವ ಪ್ರಯತ್ನವನ್ನು ಪದೇ ಪದೇ ಮಾಡಿರುವುದು ಕಂಡು ಬರುವುದು. ಉದಾ: ರಳ, ಕುಳ, ಕ್ಷಳ ಋಕಾರ ಮತ್ತು ಸ,ಶ,ಕ್ಷಗಳ ಮಧ್ಯದ ತಿಕ್ಕಾಟ ಮುಂತಾದವುಗಳನ್ನು ಗಮನಿಸಬಹುದು. ಧ್ವನಿಗಳನ್ನು ಉಚ್ಚರಿಸುವ ಅನುಕ್ರಮಕ್ಕೂ ಮತ್ತು ಅವುಗಳನ್ನು ಬರವಣಿಗೆಯಲ್ಲಿ ಲಿಪಿಕರಿಸುವ ಅನುಕ್ರಮಕ್ಕೂ ಕನ್ನಡದಲ್ಲಿ ವ್ಯತ್ಯಾಸಗಳಿರುವ ಪ್ರಸಂಗಗಳಿವೆ. ಉದಾ: ಹರಿ (to cut) ಹರಿ (to flow) ಈ ಎರಡು ಪದಗಳ ನಡುವಿನ ವ್ಯತ್ಯಾಸ 'ಹ'ಕಾರದ ಅನಂತರ ಬರುವ ಸ್ವರಕ್ಕೆ ಸಂಬಂಧಿಸಿದೆ. ಹೀಗೆ ಸಂಭವಿಸಬಹುದಾದ ಕಾಗುಣಿತ, ಒತ್ತಕ್ಷರ, ಸ್ವರ-ವ್ಯಂಜನಗಳ ಅನುಕ್ರಮಣಿಕೆ, ಹೊಂದಾಣಿಕೆ ಮತ್ತು ಎರವಲು ಪದ ಹಾಗೂ ಅವುಗಳು ಪ್ರತಿನಿಧಿಸುವ ಕನ್ನಡ ಧ್ವನಿಗಳ ಸಮಸ್ಯೆಯು ಕಲಿಯುವವರ ಗಮನಕ್ಕಿರಬೇಕು.

ಯಾಕೆಂದರೆ, ಭಾಷಾ ಪಠ್ಯಗಳ ಹಿಂದೆ' ಸರಳತೆಯಿಂದ ಕ್ಲಿಷ್ಟತೆ'ಯಡೆಗೆ ಎಂಬ ತತ್ವ ಬಲವಾಗಿರುತ್ತದೆ. ಅದರಲ್ಲೂ ಭಾಷೆಯ ಲಿಖಿತರೂಪದಲ್ಲಿ ವಿದ್ಯಾರ್ಥಿಗೆ ಪ್ರವೇಶ ಒದಗಿರಬೇಕೆಂಬ ಇರಾದೆ ಮುಖ್ಯವಾಗಿರುತ್ತದೆ. ಕನ್ನಡ ಭಾಷೆಯನ್ನು ಮೊದಲ ಭಾಷೆಯಾಗಿ ಕಲಿಯುವ ಮಕ್ಕಳು ಶಾಲಾ ಶಿಕ್ಷಣದ ವ್ಯಾಪ್ತಿಗೆ ಬರುವ ಹೊತ್ತಿಗೆ ಕನ್ನಡವನ್ನು ಚೆನ್ನಾಗಿ ಬಲ್ಲವರಿರುತ್ತಾರೆ. ಇವರಿಗೆ ಕನ್ನಡವನ್ನು 'ಕಲಿಸುವ' ಬದಲಾಗಿ 'ಪರಿಣಾಮಕಾರಿಯಾಗಿ' ಬಳಸುವ ಕೌಶಲಗಳನ್ನು ರೂಢಿಸಿಕೊಳ್ಳುವ ಭಾಷಿಕ ಮಾದರಿಗಳನ್ನು ಪಠ್ಯಗಳಲ್ಲಿ ರೂಪಿಸಬೇಕು. ವಿಪರ್ಯಾಸವೆಂದರೆ, ಶಾಲಾ ಪಠ್ಯಕ್ರಮದಲ್ಲಿ ವ್ಯಾಕರಣಾಂಶಗಳ ಮಾದರಿಗಳು ಭಾಷಿಕ ಏರುಪೇರುಗಳನ್ನುಂಟುಮಾಡುವವು. ಉದಾ: ಸಂಸ್ಕೃತ ಸಂಧಿ ನಿಯಮ ಮತ್ತು ರಚನೆಗಳನ್ನು ಕನ್ನಡ ಭಾಷಾ ಕಲಿಕೆಯಲ್ಲಿ ಅಳವಡಿಸಿಕೊಂಡಿರುವುದು ದೋಷಯುಕ್ತ ಕ್ರಮವಾಗಿದೆ.

ಆದ್ದರಿಂದ ಭಾಷಾ ಕಲಿಕೆ ವಿಶ್ಲೇಷಣಾತ್ಮಕ ವಿಧಾನಕ್ಕಿಂತ ಸಂಶ್ಲೇಷಣಾತ್ಮಕ ವಿಧಾನದಿಂದ ಪರಿಣಾಮಕಾರಿಯಾಗುವುದು. ಉದಾ: 'ಮನೆಯಲ್ಲಿ' ಎಂಬ ಪದವನ್ನು ಒಡೆದು ಹೇಳುವುದಕ್ಕಿಂತ ಹಲವು ಪದಗಳನ್ನು ನೀಡಿ ಅವುಗಳನ್ನು ಅದೇ ಮಾದರಿಯಲ್ಲಿ ಸಂಯೋಜಿಸುವ ಕ್ರಮವನ್ನು ರೂಢಿಸುವುದು. ಮತ್ತು ವಿರುದ್ಧ ಪದ ಹಾಗೂ ಸಾಮಾಜಿಕ ನೀತಿಗೆ ಹೊಂದದ ವಿಭಜನೆಗಳಾಗುತ್ತವೆ ಮತ್ತು ತಿಳುವಳಿಕೆಯ ಕೊರತೆಯನ್ನುಂಟು ಮಾಡುವುದು (ಉದಾ: ಹಗಲು-ರಾತ್ರಿ, ಬೆಳಕು-ಕತ್ತಲು, ತಲೆ-ಕಾಲು ಹಾಗೂ ಗಂಡ-ಹೆಂಡತಿ, ಹಿಂದು-ಮುಸ್ಲಿಂ ಮುಂತಾದವು ಕೆ.ವಿ. ನಾರಾಯಣ: ಕನ್ನಡ ಜಗತ್ತು: ೨೦೦೭) ಎನ್ನುವುದು ನಮ್ಮ ಗಮನಕ್ಕೆ ಬಾರದು. ಈ ಅಪಾಯಗಳನ್ನು ಕನ್ನಡದ ವಿಶಿಷ್ಟ ರಾಚನಿಕ ನಿಲುವುಗಳನ್ನಾಗಿ ಗುರುತಿಸುವ ಕ್ರಮ ಕನ್ನಡದಲ್ಲಿ ಲೀಲಾಜಾಲವಾಗಿದೆ. ಕನ್ನಡದಲ್ಲಿ ಇರದೇ ಇರುವ ನಿಷೇಧಾರ್ಥಕ ಪ್ರತ್ಯಯವನ್ನು ಸಂಸ್ಕೃತದ 'ಅ' ಕಾರ 'ನಿರ್' ಮುಂತಾದ ಪೂರ್ವಪ್ರತ್ಯಯಗಳನ್ನು ಬಳಸುವುದು ದೋಷಪೂರ್ಣವಾಗಿದೆ.

ಕನ್ನಡದ ವಿಶೇಷ ಭಾಷಿಕ ರೂಪಗಳಾದ 'ಅಲ್ಲ' ಮತ್ತು 'ಇಲ್ಲ' ಪದಗಳಿಂದ ನಿಷೇಧಾರ್ಥವನ್ನು ರೂಪಿಸುವ ಉದ್ದೇಶವನ್ನು ಸಾಧಿಸಬಹುದು. ಪ್ರತಿ ಭಾಷೆಗೂ ಅದರದ್ದೇ ಆದ ಧ್ವನಿ, ಪದ, ವಾಕ್ಯ ಸ್ತರವಿರುತ್ತದೆ. ಭಾಷಿಕ ರಚನೆಗೆ ಸಂಬಂಧಿಸಿದ ನಿಯಮಗಳು ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗುತ್ತ ಹೋಗುತ್ತವೆ. ಸಂಸ್ಕೃತ ವೈಯಾಕರಣಿಗಳು ಆ ಭಾಷಿಕ ರಚನೆಯ ಸಾಧ್ಯತೆಗಳನ್ನು ಅವಲಂಬಿಸಿ ಭಾಷಿಕ ವಿನ್ಯಾಸಗಳನ್ನು ನಿರೂಪಿಸಿರುವುದು ಆಗದ ಮಾತು. ಏಕೆಂದರೆ, ಕನ್ನಡಕ್ಕೆ ಅದರದ್ದೇ ಆದ ಧ್ವನಿ, ಪದ, ವಾಕ್ಯ ರಚನಾ ನಿಯಮಗಳು ಇವೆ. ಕನ್ನಡ ಭಾಷೆಯನ್ನು ವಿಶ್ಲೇಷಿಸುವ ವಿಧಾನಗಳು ಕನ್ನಡ ರಾಚನಿಕ ವಿನ್ಯಾಸಗಳನ್ನಾಧರಿಸಿರಬೇಕು. ಎನ್ನುವುದು ಮುಖ್ಯ.

೪. ಭಾಷಿಕ ಕೌಶಲಗಳನ್ನು ವೃದ್ಧಿಸುವ ಬಗೆಗಳು ಯಾವುವು?

ಭಾಷಾಕೌಶಲಗಳನ್ನು ರೂಢಿಸಿಕೊಳ್ಳುವಾಗ ಯಾವ ಭಾಷಾ ಕೌಶಲ ಎನ್ನುವ ಪ್ರಶ್ನೆ ಬರುವುದು. ಇದರ ಅರ್ಥ ಮಾತೃ/ಪ್ರಥಮ/ಪರಿಸರ ಭಾಷೆ, ದ್ವಿತೀಯ ಅಥವಾ ತೃತೀಯ ಭಾಷೆ ಇವುಗಳಿಗೆ ಅನುಗುಣವಾಗಿ, ಒಂದು ಭಾಷೆಯ ಪಠ್ಯಕ್ರಮ ಮತ್ತು ಬೋಧನಾ/ಕಲಿಕಾ/ವಿಧಾನ/ಪದ್ಧತಿಗಳನ್ನು ರೂಪಿಸಬೇಕು. ಭಾಷಾ ಕಲಿಕೆ/ಬೋಧನೆ ಅನ್ನುವುದೆಂದರೆ; ಒಂದು ಭಾಷೆಯ ಕೌಶಲಗಳನ್ನು ಕಲಿಸುವುದೆಂದರ್ಥ. ಹಾಗಾದರೆ, ಆ ಕೌಶಲಗಳು ಯಾವುವು? ಅವುಗಳೆಂದರೆ ಆಲಿಸುವಿಕೆ, ಮಾತನಾಡುವಿಕೆ, ಬರೆಯುವ ಮತ್ತು ಓದುವ. ಇವುಗಳಲ್ಲಿ ಮೊದಲೆರಡನ್ನು ಪ್ರಾಥಮಿಕ ಕೌಶಲ ನಂತರದೆರಡನ್ನು ಗೌಣ ಕೌಶಲಗಳೆಂದು ಗುರುತಿಸುವುದು ವಾಡಿಕೆ. ಇಲ್ಲಿರುವ ಮುಖ್ಯ ಪ್ರಶ್ನೆ ಒಂದು ಭಾಷೆಯನ್ನು ಕಲಿಸುವುದೆಂದರೆ, ಆ ಭಾಷಾಕೌಶಲಗಳನ್ನು ರೂಢಿಸಿಕೊಳ್ಳುವುದೆಂದು ಒಂದು ಹಂತದಲ್ಲಿ ಒಪ್ಪಿಕೊಳ್ಳಬಹುದು. ಹಾಗಾದರೆ ಈ ಕೌಶಲಗಳನ್ನು ಕಲಿಸುವ ವಿಧಾನ, ತಂತ್ರ, ಮತ್ತು ಪಠ್ಯಕ್ರಮ ಹೇಗಿರಬೇಕು ಎಂಬುದು ಪ್ರಮುಖವಾದ ವಿಷಯ.

ಆಲಿಸುವ, ಮಾತನಾಡುವ, ಬರೆಯುವ ಮತ್ತು ಓದುವ ಈ ನಾಲ್ಕು ಅಂಶಗಳ ಮೂಲಕ ಅದು ಹೇಗೆ ಒಂದು ಭಾಷೆಯ ಸಂವಹನ ಸಾಧ್ಯತೆಗಳನ್ನು ರೂಢಿಸಿಕೊಳ್ಳಲು ಸಾಧ್ಯ ಎನ್ನುವ ಸಹಜ ಪ್ರಶ್ನೆ ಉದ್ಭವಿಸಬಹುದು. ಹೌದು, ಈ ನಾಲ್ಕು ಪ್ರಮುಖ ಕೌಶಲಗಳ ಮುಖೇನ ಒಂದು ಭಾಷೆಯ ಅರ್ಥ, ರಚನೆ, ಮತ್ತು ಬಳಕೆಯ ಎಲ್ಲ ಸಾಧ್ಯತೆಗಳನ್ನು ರೂಢಿಸಿಕೊಳ್ಳುವುದು ಶಕ್ಯ. ಹಾಗಾದರೆ, ಈ ಕೌಶಲಗಳನ್ನು ಬೋಧಿಸುವ/ಕಲಿಸುವ ವಿಧಾನ/ಕ್ರಮಗಳು ಹೇಗಿರಬೇಕು? ಅವುಗಳ ಸ್ವರೂಪವೇನು? ಅವುಗಳನ್ನು ರೂಢಿಸಿಕೊಳ್ಳುವಾಗ, ಅನುಸರಿಸಬೇಕಾದ ಮಾನ

ಭಾಷಾಕೌಶಲಗಳನ್ನು ರೂಢಿಸಿಕೊಳ್ಳುವಾಗ ಯಾವ ಭಾಷಾ ಕೌಶಲ ಎನ್ನುವ ಪ್ರಶ್ನೆ ಬರುವುದು. ಇದರ ಅರ್ಥ ಮಾತೃ/ಪ್ರಥಮ/ಪರಿಸರ ಭಾಷೆ, ದ್ವಿತೀಯ ಅಥವಾ ತೃತೀಯ ಭಾಷೆ ಇವುಗಳಿಗೆ ಅನುಗುಣವಾಗಿ, ಒಂದು ಭಾಷೆಯ ಪಠ್ಯಕ್ರಮ ಮತ್ತು ಬೋಧನಾ/ಕಲಿಕಾ/ವಿಧಾನ/ಪದ್ಧತಿಗಳನ್ನು ರೂಪಿಸಬೇಕು. ಭಾಷಾ ಕಲಿಕೆ/ಬೋಧನೆ ಅನ್ನುವುದೆಂದರೆ; ಒಂದು ಭಾಷೆಯ ಕೌಶಲಗಳನ್ನು ಕಲಿಸುವುದೆಂದರ್ಥ. ಹಾಗಾದರೆ, ಆ ಕೌಶಲಗಳು ಯಾವುವು? ಅವುಗಳೆಂದರೆ ಆಲಿಸುವಿಕೆ, ಮಾತನಾಡುವಿಕೆ, ಬರೆಯುವ ಮತ್ತು ಓದುವ ಇವುಗಳಲ್ಲಿ ಮೊದಲೆರಡನ್ನು ಪ್ರಾಥಮಿಕ ಕೌಶಲ ನಂತರದೆರೆಡನ್ನು ಗೌಣ ಕೌಶಲಗಳೆಂದು ಗುರುತಿಸುವುದು ವಾಡಿಕೆ.

ದಂಡಗಳೇನು? ಇವು ಬಹಳ ಪ್ರಮುಖವಾದ ಪ್ರಶ್ನೆಗಳು. ಕಾಲ–ದೇಶಗಳ ಅಗತ್ಯ ಮತ್ತು ಆದ್ಯತೆಗೆ ಅನುಗುಣವಾಗಿ ಭಾಷಾ ಕಲಿಕೆ/ಬೋಧನಾ ವಿಧಾನಗಳು ರೂಪಗೊಂಡಿವೆ. ಈ ವಿಧಾನಗಳು ಒಂದು ಭಾಷೆ ಮತ್ತು ಅದರ ಪಠ್ಯಕ್ರಮವನ್ನು ಅನ್ವಯಿಸಿಕೊಂಡು ರೂಪಗೊಂಡಿರುವುದು ಸಹಜ.

ಆದರೆ, ಶಾಲಾ ಶಿಕ್ಷಣದಲ್ಲಿ ಭಾಷೆಯನ್ನು ಕಲಿಸುವ ಉದ್ದೇಶ, ಕ್ರಮ, ಗುರಿ, ಇತ್ಯಾದಿಗಳೇನು? ಎಷ್ಟು? ಹೇಗೆ? ಎಂಬುವ ಪ್ರಶ್ನೆಗಳು ಬಗೆಹರಿದಿಲ್ಲ. ಅಂದರೆ, ಶಾಲಾ ಶಿಕ್ಷಣದಲ್ಲಿ ಓದು ಮತ್ತು ಬರಹಗಳು ಮಾತ್ರ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಆದರೆ ಇವತ್ತಿನ ಭಾಷಿಕ ಅಗತ್ಯಗಳು ಬೇರೆಯೇ ಆಗಿವೆ. ಅವುಗಳೆಂದರೆ; ಭಾಷಾ ಬಳಕೆಯ ಎಲ್ಲ ಸಾಧ್ಯತೆಗಳನ್ನು ರೂಢಿಸಿಕೊಳ್ಳಬೇಕು ಎನ್ನುವ ನಿರೀಕ್ಷೆಯಲ್ಲಿ ಈ ಹೊತ್ತಿನ ಪಠ್ಯಕ್ರಮ, ಕಲಿಕಾವಿಧಾನ ಮತ್ತು ಬೋಧನಾ ಪದ್ಧತಿಗಳು ರೂಪಗೊಳ್ಳಬೇಕು. ಆದ್ದರಿಂದ, ಭಾಷೆಯನ್ನು ಕಲಿಯುವುದೆಂದರೆ, ಭಾಷಾ ಬಳಕೆಯ ಎಲ್ಲ ಸಾಧ್ಯತೆಗಳನ್ನು ಮಾತ್ರ ರೂಢಿಸಿಕೊಳ್ಳುವುದೆಂದಲ್ಲ, ಅವುಗಳನ್ನು ಪರಿಣಾಮಕಾರಿಯಾಗಿ ಬಳಸುವ ಸಾಮರ್ಥ್ಯವನ್ನು ರೂಢಿಸಿಕೊಳ್ಳುವುದೆಂದರ್ಥ. ಅವುಗಳನ್ನು ಈ ಕೆಳಕಂಡಂತೆ ಸೂತ್ರೀಕರಿಸಬಹುದು.

* ಸಂವಾದಗಳ ಮೂಲಕ ಭಾಷಾ ಕಲಿಕೆ/ಬೋಧನೆ

* ಸೃಜನಶೀಲ ಪಠ್ಯಗಳನ್ನು ಆಧರಿಸಿಕೊಂಡು ಭಾಷಿಕ ಕೌಶಲಗಳನ್ನು ರೂಢಿಸಿಕೊಳ್ಳುವುದು

* ಭಾಷೆಯ ಉತ್ಪಾದಕತೆ ಮತ್ತು ರೂಪಾಂತರ ಪ್ರಕ್ರಿಯೆಯ ನಿಯಮಿತ ವ್ಯವಸ್ಥೆಯ ಆಂತರಿಕ ನೆಲೆಗಳನ್ನು ಜಾಗೃತಗೊಳಿಸುವುದು.

* ಸಾಂದರ್ಭಿಕ ಅರ್ಥಸಾಧ್ಯತೆಗಳನ್ನು ಭಾಷಿಕ ಕ್ರಿಯೆಯ ಆಧಾರದ ಮೇಲೆ ಗುರುತಿಸುವ ಸಾಮರ್ಥ್ಯವನ್ನು ಬೆಳೆಸುವುದು.

* ಸಂವಾದ, ನಿರೂಪಣೆ ಮತ್ತು ಕಥನ ಶೈಲಿಗಳನ್ನು ಆಧರಿಸಿಕೊಂಡು ಭಾಷಾ ಕಲಿಕೆ/ಬೋಧನೆಯ ವಿಧಾನಗಳನ್ನು ರೂಪಿಸುವುದು.

* ವಿಭಿನ್ನ ಪ್ರಸಂಗಗಳಲ್ಲಿ ಬಳಕೆಯಾಗುವ ಭಾಷಾ ಮಾದರಿಗಳು ಕಲಿಕೆಗೆ ನೆರವಾಗುವ ಪಠ್ಯಗಳಾಗಬೇಕು.

* ಭಾಷಾ ವೈವಿಧ್ಯತೆ/ಪ್ರಭೇದವನ್ನು ಒಳಗೊಂಡ ಪಠ್ಯಗಳ ಮೂಲಕ ಬೋಧನೆ ಮತ್ತು ಕಲಿಕೆ ಸಾಧ್ಯವಾದರೆ ವಿದ್ಯಾರ್ಥಿಯ ಗ್ರಹಿಕೆಯ ಮತ್ತು ಬಳಕೆಯ ಪದಕೋಶ ವಿಸ್ತಾರವಾಗುವುದು ಹಾಗೂ ಕನ್ನಡದ ಬೇರೆ ಬೇರೆ ಪ್ರಭೇದಗಳ ಪರಿಚಯದೊಂದಿಗೆ ಭಾಷಿಕ ಸಹನೆಯನ್ನು ರೂಢಿಸಿಕೊಳ್ಳುವ ಅವಕಾಶ ಇರಬೇಕು.

* ಇವತ್ತಿನ ಯಾವುದೇ ಸಂದರ್ಭ ಮತ್ತು ಸವಾಲುಗಳನ್ನು ನಿಭಾಯಿಸುವ ಕ್ರಮಕ್ಕೆ ಅನುಗುಣವಾಗಿ ಆಲೋಚನಕ್ರಮವನ್ನು ರೂಪಿಸುವ ಕನ್ನಡದ್ದೆ ಆದ ಸಂದರ್ಭ ಭಾಷೆಯನ್ನು ರೂಪಿಸಬೇಕು.

* ಆಲೋಚನಕ್ರಮದ ಭಾಷೆ/ಪರಿಭಾಷೆಯನ್ನು ರೂಪಿಸಿಕೊಳ್ಳುವ ಭಾಷಾರೂಪಗಳು ಆದಷ್ಟೂ ಕನ್ನಡದ ಮೂಲದಿಂದಲೇ ರೂಢಿಸಿಕೊಳ್ಳಬೇಕು ಸಾಧ್ಯವಾಗದ ಪಕ್ಷದಲ್ಲಿ ಎರವಲು ಪ್ರಕ್ರಿಯೆಯಿಂದ ರೂಪಿಸಿಕೊಳ್ಳಬೇಕು.

* ಎರವಲು ಪ್ರಕ್ರಿಯೆಯು ಆಂತರಿಕ (Internal Borrowing) ಮತ್ತು ಬಾಹ್ಯ (External Borrowing) ಭಾಷಾ ಸ್ವೀಕರಣ ಕ್ರಮದಲ್ಲಿ ಸಾಧ್ಯವಾಗಬೇಕು ಉದಾ: ಕನ್ನಡದ ಬೇರೆ ಬೇರೆ ಭಾಷಾ ಪ್ರಭೇದ/ಪ್ರಕಾರಗಳಾದ ಸಾಮಾಜಿಕ, ಪ್ರಾದೇಶಿಕ ಅಥವಾ ಕಾಲಿಕ (Temporal Dialect) ಭಾಷಾರೂಪಗಳಿಂದ ಈ ಎರವಲು ಪ್ರಕ್ರಿಯೆಯನ್ನು ಸಾಧಿಸಬೇಕು. ಇಲ್ಲಿಯೂ ಸಾಧ್ಯವಾಗದ ಸಂದರ್ಭದಲ್ಲಿ ಅನ್ಯ ಭಾಷೆಗಳಿಂದ ಈ ಕೊರತೆಯನ್ನು ನಿಭಾಯಿಸಿಕೊಳ್ಳಬೇಕು.

* ಭಾಷಾ ಬಳಕೆಯ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವ ಕ್ರಮಗಳ 'ಭಾಷಾ ಶುದ್ಧತೆ ಅಥವಾ ಮಡಿವಂತಿಕೆ' ಯಂತಹ ಹುಸಿ ಕಲ್ಪನೆಗಳನ್ನು ಅನುಸರಿಸಕೂಡದು.

ಈಗಾಗಲೆ ಹೇಳಿದಂತೆ, ಭಾಷಾ ಕಲಿಕೆ ಎಂದರೆ, ಭಾಷಿಕ ಕೌಶಲಗಳನ್ನು ರೂಢಿಸಿಕೊಳ್ಳುವುದೆಂದರ್ಥ. ಆದರೆ ಇಂದು ಭಾಷಾ ಕಲಿಕೆ ಎಂದರೆ, ಒಂದು ಭಾಷಾ ಬಳಕೆಯ ಎಲ್ಲ ಸಾಧ್ಯತೆಗಳನ್ನು ಸಮಗ್ರವಾಗಿ ರೂಢಿಸಿಕೊಂಡು ಸಂವಹನ ಮಾಡುವ ಸಾಮರ್ಥ್ಯವೆಂದು ಹೇಳಬಹುದು.

ಕನ್ನಡವನ್ನು ಮಾತೃ ಭಾಷೆಯಾಗಿ ಓದುವ ಹಾಗೂ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಓದುವ ಮಕ್ಕಳಿಗೆ ಕಲಿಕೆಯ ಪ್ರಕ್ರಿಯೆ ಮತ್ತು ಪರಿಕರಗಳು ಬೇರೆ ಬೇರೆಯಾಗಿರುವುವು. ಕನ್ನಡವನ್ನು ಮಾತೃ ಭಾಷೆಯಾಗಿ ಓದುವವರು ಆ ಭಾಷೆಯ ಆಂತಸ್ಥ ನಿಯಮಗಳ ಮೇಲೆ ಪ್ರಭುತ್ವವನ್ನು ಪಡೆದುಕೊಂಡಿರುವರು. ಆದರೆ, ಇವರಿಗೆ ಭಾಷೆಯಲ್ಲಿ ಸಂವಹನ ಕೌಶಲಗಳನ್ನು ರೂಢಿಸಿಕೊಳ್ಳಲು ಪೂರಕವಾದ ಮಾದರಿಗಳ ಅಗತ್ಯವಿರುವುದು. ಹಾಗಾಗಿ ಇವರಿಗೆ 'ಅಪರಿಚಿತವಾದ ವ್ಯಾಕರಣ ನಿಯಮಗಳನ್ನು 'ಬೋಧಿಸುವುದರ ಮೂಲಕ ಗೊಂದಲಗಳನ್ನು ಸೃಷ್ಟಿಸಬಾರದು. ಬದಲಾಗಿ ಕನ್ನಡ ಪದಕೋಶವನ್ನು ಹೆಚ್ಚಿಸುವ ಮತ್ತು ಬಳಕೆಯ ನೆಲೆಗಳನ್ನು ವೃದ್ಧಿಸುವ ನಿಟ್ಟಿನಲ್ಲಿ ಕನ್ನಡ ಕಲಿಕೆ/ಬೋಧನೆ ಶುರುವಾಗಬೇಕು. ಈ ಪ್ರಕ್ರಿಯೆಯಿಂದ ವಿದ್ಯಾರ್ಥಿಗಳು ಹೊಸ ಹೊಸ ಪದರಚನೆಗಳನ್ನು ರಚಿಸುವ ಸಾಮರ್ಥ್ಯವನ್ನು ರೂಢಿಸಿಕೊಳ್ಳಬೇಕು. ಭಾಷೆಯು ಒಂದು 'ಕಟ್ಟುವ ಪ್ರಕ್ರಿಯೆಯಾಗಿ' ರೂಪಗೊಳ್ಳಬೇಕು ಹೊರತಾಗಿ, 'ಒಡೆಯುವ ಪ್ರಕ್ರಿಯೆಯಾಗಬಾರದು' ಅಂದರೆ 'ವಿಭಕ್ತಿ, ಕಾರಕ, ಆಖ್ಯಾತ, ಸಂಧಿ ಮುಂತಾದ ವ್ಯಾಕರಣ ಪ್ರಕ್ರಿಯೆಗಳನ್ನು ಹೇಳಿ ಕೊಡುವ ಅಗತ್ಯವಿಲ್ಲ.

ಆದರೆ, ಭಾಷೆಯನ್ನು ಹೊಸ ಹೊಸ ಸನ್ನಿವೇಶಗಳಲ್ಲಿ ಬಳಸಲು ಬೇಕಾದ ಉತ್ಪಾದಕತೆಯ ಸಾಮರ್ಥ್ಯವನ್ನು ಮಾತ್ರ ಮಕ್ಕಳಲ್ಲಿ ಬೆಳಸಬೇಕಾಗುತ್ತದೆ. ಹಾಗೆ ನೋಡಿದರೆ ನಮ್ಮ ಶಾಲೆಗಳಲ್ಲಿ ಈ ನೆಲೆಗೆ ದೊರಕುತ್ತಿರುವ ಒತ್ತು ತುಂಬಾ ಕಡಿಮೆಯಾಗಿದೆ. ಹಾಗಾಗಿ, ನಮ್ಮ ಮಕ್ಕಳು ತಾವು ಬಲ್ಲ ಕನ್ನಡವನ್ನು ಜೀವನದ ಬೇರೆ ಬೇರೆ ಸಂದರ್ಭಗಳಲ್ಲಿ ಬಳಸಲು ಹಿಂಜರಿಯುವಂತಾಗಿದೆ. ಅವರು ಕಲಿತ ವ್ಯಾಕರಣ ಅವರಿಗೆ ನೆರವಾಗುವುದಿಲ್ಲ. ಅಂದರೆ, ಭಾಷೆಯ ರಚನೆಯನ್ನು 'ತಿಳಿಯುವುದು' ಒಂದು ನೆಲೆಯಾದರೆ ಅದರ ಬಳಕೆಯನ್ನು 'ಕಲಿಯುವುದು' ಇನ್ನೊಂದು ನೆಲೆ. ಮೊದಲನೆಯದನ್ನು ಕಲಿಯಬೇಕಾಗಿಲ್ಲ. ಹಾಗೆ ಕಲಿಸಿದರೂ ಅದು ಅವರಿಗೆ ಬಳಕೆಯ ಸಾಮರ್ಥ್ಯಗಳನ್ನು ತಂದುಕೊಡುವುದಿಲ್ಲ. ಆದರೆ, ಬಳಕೆಯ ಸಾಮರ್ಥ್ಯಗಳನ್ನು ಮಾತ್ರ ಹೊಸದಾಗಿಯೇ 'ಕಲಿತು' ಗಳಿಸಿಕೊಳ್ಳಬೇಕಾಗುತ್ತದೆ. (ಕೆ.ವಿ. ನಾರಾಯಣ: ಪದಗತಿ: ಮಯೂರ: ಸೆ: ೨೦೦೬). ಆದ್ದರಿಂದ, ಕನ್ನಡ ಭಾಷೆಯ ವ್ಯಾಕರಣ ನಿಯಮಗಳು ಒಡೆಯುವಾಗ ತೋರುವ ಚಹರೆಗಳನ್ನು ರೂಪಿಸುವ ಬದಲಾಗಿ 'ಕಟ್ಟುವಾಗ' ಏನಾಗುತ್ತದೆ ಎನ್ನುವ ಪ್ರಕ್ರಿಯೆಯನ್ನು ಕುರಿತು ಭಾಷಿಕ ಸಾಮರ್ಥ್ಯಗಳನ್ನು ರೂಪಿಸುವ ಅಗತ್ಯವಿರುವುದು.

ಈ ಆಲೋಚನ ಕ್ರಮವನ್ನು ಅನುಸರಿಸಿಕೊಂಡು ಕನ್ನಡವನ್ನು ಮಾತೃ ಭಾಷೆಯಾಗಿ ಬಳಸುವವರಿಗೆ ಅಭ್ಯಾಸ ಮಾಡಿಸಬೇಕು. ಅದೇ ತೆರನಾಗಿ, ಕನ್ನಡವನ್ನು ಮಾತೃ ಭಾಷೆಯಲ್ಲದವರಿಗೆ ಅಥವಾ ದ್ವಿತೀಯ ಭಾಷೆಯಾಗಿ ರೂಢಿಸಿಕೊಳ್ಳುವವರಿಗೆ ವ್ಯಾಕರಣದ ಕಲಿಕೆ ಅಗತ್ಯವಿರುವುದು. ಆದರೆ, ಬೋಧಿಸಬೇಕಾದ ವ್ಯಾಕರಣಾಂಶಗಳ ಬಗ್ಗೆ ಜಾಗೂರಕತೆಯಿಂದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಕಾರಣ, ಕನ್ನಡ ಭಾಷೆಯ ರಚನಾ ಚಹರೆಗಳನ್ನು ಪ್ರಕಟಿಸುವ ಮಾದರಿಗಳನ್ನು ಆಧರಿಸಿಕೊಂಡು ಕನ್ನಡ ವ್ಯಾಕರಣ ವಿನ್ಯಾಸಗಳು ಗ್ರಹಿತವಾಗಬೇಕು.

ಬಹುಭಾಷಿಕ ಸಂದರ್ಭದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಕನ್ನಡವನ್ನು ಪರಿಸರದ ಭಾಷೆಯಾಗಿ ರೂಢಿಸಿಕೊಂಡಿರುವರು ಹಾಗಾಗಿ, ಮಾತೃ ಭಾಷಾ ಮತ್ತು ದ್ವಿತೀಯ ಭಾಷಾ ಕಲಿಕೆಯ ವಿಧಾನಗಳಲ್ಲಿ ವ್ಯತ್ಯಾಸಗಳಿರಲಾರವು. ಆದರೆ, ನಮ್ಮ ಶಿಕ್ಷಣ ಕ್ರಮದಲ್ಲಿ ಈ ಎರಡು ಬಗೆಯ ಕನ್ನಡ ಕಲಿಕೆಯ ಸ್ವರೂಪ ಬೇರೆ ಬೇರೆಯಾಗಿರುವುದರ ಮಾನದಂಡಗಳೇನು ಎಂಬ ಪ್ರಶ್ನೆಗಳು ತಿಳಿದಿಲ್ಲ. ಇದು ಕೇವಲ ಕನ್ನಡದ ಒಂದು ಪ್ರಮಾಣ ರೂಪವನ್ನು ಕಲಿಸಲು ಶಿಕ್ಷಣಕ್ರಮದಲ್ಲಿ ಪ್ರಯತ್ನಿಸಲಾಗುತ್ತದೆ. ಈ ಪ್ರಮಾಣ ರೂಪದ ಧ್ವನಿರಚನೆ, ಪದರಚನೆ, ಮತ್ತು ಪದಕೋಶಗಳು ಕನ್ನಡದ ಹಲವು ಉಪಭಾಷೆಗಳಿಗಿಂತ ಭಿನ್ನವಾಗಿದೆ. ಈ ಕ್ರಮವು ಕಲಿಯುವರಲ್ಲಿ ಗೊಂದಲವನ್ನು ಹುಟ್ಟಿಸುವುದು. ಪರಿಣಾಮವಾಗಿ, ಕಲಿಕೆಯು ಪರಿಣಾಮಕಾರಿಯಾಗದ ಕಾರಣ ಭಾಷಾ ಬಳಕೆಯ ನೆಲೆಗಳು ಕುಂಟಿತಗೊಳ್ಳುವ ಬಗೆಗಳು ಯಾವುವು ಅನ್ನುವುದನ್ನು ನಿರ್ಧರಿಸುವ ಅಗತ್ಯ

(೪ನೇ ಪುಟಕ್ಕೆ)

ಭಾಷೆಯನ್ನು ಹೊಸ ಹೊಸ ಸನ್ನಿವೇಶಗಳಲ್ಲಿ ಬಳಸಲು ಬೇಕಾದ ಉತ್ಪಾದಕತೆಯ ಸಾಮರ್ಥ್ಯ ವನ್ನು ಮಾತ್ರ ಮಕ್ಕಳಲ್ಲಿ ಬೆಳಸಬೇಕಾಗುತ್ತದೆ. ಹಾಗೆ ನೋಡಿದರೆ ನಮ್ಮ ಶಾಲೆಗಳಲ್ಲಿ ಈ ನೆಲೆಗೆ ದೊರಕುತ್ತಿರುವ ಒತ್ತು ತುಂಬಾ ಕಡಿಮೆಯಾಗಿದೆ. ಹಾಗಾಗಿ, ನಮ್ಮ ಮಕ್ಕಳು ತಾವು ಬಲ್ಲ ಕನ್ನಡವನ್ನು ಜೀವನದ ಬೇರೆ ಬೇರೆ ಸಂದರ್ಭಗಳಲ್ಲಿ ಬಳಸಲು ಹಿಂಜರಿಯುವಂತಾಗಿದೆ. ಅವರು ಕಲಿತ ವ್ಯಾಕರಣ ಅವರಿಗೆ ನೆರವಾಗುವುದಿಲ್ಲ. ಅಂದರೆ, ಭಾಷೆಯ ರಚನೆಯನ್ನು 'ತಿಳಿಯುವುದು' ಒಂದು ನೆಲೆಯಾದರೆ ಅದರ ಬಳಕೆಯನ್ನು 'ಕಲಿಯುವುದು' ಇನ್ನೊಂದು ನೆಲೆ. ಮೊದಲನೆಯದನ್ನು ಕಲಿಯ ಬೇಕಾಗಿಲ್ಲ. ಹಾಗೆ ಕಲಿಸಿದರೂ ಅದು ಅವರಿಗೆ ಬಳಕೆಯ ಸಾಮರ್ಥ್ಯಗಳನ್ನು ತಂದುಕೊಡುವುದಿಲ್ಲ.

ಶ್ರೀನಿವಾಸರಾಜು
ಮೌನದ ಮೆರಗು

ಎರಡುಮೂರು ತಿಂಗಳ ಹಿಂದೆ ಡಿ. ಎನ್. ಶಂಕರಭಟ್‌ರ ಪುಸ್ತಕ ಬೇಕಾಗಿತ್ತು. ಗೊತ್ತಿರುವವರಲ್ಲಿ ವಿಚಾರಿಸಿ ಕೊನೆಗೆ ರಾಜು ಮೇಸ್ಟ್ರೀಗೆ ಫೋನ್ ಮಾಡಿದೆ. 'ನನ್ನ ಪರ್ಸನಲ್ ಕಾಪಿ ಇದೆ. ನಾಳೆ ಪುಸ್ತಕ ಪ್ರಾಧಿಕಾರದ ಕಛೇರಿಗೆ ಬನ್ನಿ, ತಂದಿರ್ತೇನೆ' ಎಂದರು. ಮಾರನೆ ದಿನ ಆ ಪುಸ್ತಕ ನನ್ನ ಕೈ ಸೇರಿತು. ಹೀಗೆ, ನನ್ನಂತೆನ ಅವರಿಂದ ಪುಸ್ತಕದ ನೆರವು ಪಡೆದವರು ಹಲವರು. ಕರ್ನಾಟಕದ ಉದ್ದಗಲಕ್ಕಿರಬಹುದು. ಅವರಲ್ಲಿ ಅಂತ ವಿಶೇಷವೇನಿಲ್ಲ. ಏಕೆಂದರೆ, ರಾಜು ಮೇಷ್ಟ್ರು ತಮ್ಮ ಜೀವಿತದುದ್ದಕ್ಕು ಮಾಡಿದ್ದು ಇದೇ ಕಾಯಕವಲ್ಲವೆ. ಹೀಗೆ ಪುಸ್ತಕ ಸಂಸ್ಕೃತಿಯನ್ನು ಬೆಳೆಸಿದ ಗಳನಾಥ ಶಿವರಾಮಕಾರಂತ, ಜಿಪಿ. ಕಾತರತ್ನಂ ಹಾಗೂ ನಾವು ಕಂಡು ಕೇಳಿರದ ಎಷ್ಟೋ ಕನ್ನಡ ಕಾಯಕ ಜೀವಿಗಳ ಸಾಲಿಗೆ ಸೇರುವ ರಾಜು ಅವರು ನಮ್ಮೊಂದಿಗಿದ್ದರು. ಈಗ....

ಅವರು ತೀರಿಕೊಳ್ಳುವ ೮–೧೦ ದಿನಗಳ ಹಿಂದೆ ಕನ್ನಡ ಭವನದಲ್ಲಿ ಆಕಸ್ಮಿಕವಾಗಿ ಅವರನ್ನು ಭೇಟಿಯಾದೆ. ಅವರು ಕರೆದಿದ್ದ ಸಂತೋಷಕೂಟಕ್ಕೆ ನಾನು ಹೋಗಿರಲಿಲ್ಲ. ಅವತ್ತು ಅವರು ನನ್ನನ್ನು ಸ್ಮರಿಸಿಕೊಂಡಿದ್ದನ್ನು ಗೆಳೆಯರು–ನನಗೆ ತಲುಪಿಸಿದ್ದರು. ನಮಸ್ಕರಿಸಿ, ಹತ್ತಿರ ಹೋದೆ. 'ಚಂದಶೇಖರಯ್ಯನೋರೆ, ನಿಮ್ಮನ್ನು ಹೊಡಿಬೇಕು, ಅಷ್ಟು ಸಿಟ್ಟು ಬಂದಿದೆ' ಅಂದರು. 'ಜೀವನದಲ್ಲಿ ನೀವು ಯಾರನ್ನು ಹೊಡೆದೆ ಇಲ್ಲ. ಆಭಾಗ್ಯ ನನಗೆ ಬರಲಿ, ದಯಮಾಡಿ'... ಅಂತ ನಾನು ನಾಟಕೀಯವಾಗಿ ಅವರ ಮುಂದೆ ಬಾಗಿ ನಿಂತೆ. 'ಮನೆಗೆ ಬನ್ನಿ' ಅಂತ ಕೈ ಹಿಡಿದುಕೊಂಡರು. 'ಆಯ್ತು ಸಾರ್, ಬರ್ತೇನೆ' ಎಂದು ಹೇಳಿ ಹೊರಟೆ. ಮತ್ತೆ ಅವರನ್ನು ನಾನು ಹೀಗೆ ನೋಡ್ತೇನೆ ಅಂದುಕೊಂಡಿರಲಿಲ್ಲ. ಡಿಸೆಂಬರ್ ೩೧ರ ಬೆಳಗ್ಗೆ ೮.೦೫ಕ್ಕೆ ಗೆಳೆಯರೊಬ್ಬರು ಗದ್ಗದ ಧ್ವನಿಯಲ್ಲಿ 'ರಾಜು ಮೇಷ್ಟ್ರು ಹೋಗಿಬಿಟ್ಟರು' ಎಂದು ಹೇಳಿ ಫೋನ್ ಇಟ್ಟರು. ಮತ್ತೇ ಅವರೇ ನನ್ನ ಮೊಬೈಲ್‌ಗೆ ಮೇಸೇಜ್ ಕಳಿಸಿದರು. ಅಂದು ಸಂಜೆ ಅವರ ಮನೆಗೆ ಹೋಗಿ, ಅವರ ಫೋಟೊ ನೋಡುತ್ತ ಮೌನವಾಗಿ ಒಂದು ಕ್ಷಣ ನಿಂತಾಗ "ಅವತ್ತು ನೀವು ಬರಲಿಲ್ಲ. 'ಚಂದ್ರಶೇಖರಯ್ಯನೋರೆ ಬರಲಿಲ್ಲ ಬರಲಿಲ್ಲ' ಅಂತ ಒಂದೇ ಸಮನೆ ಹೇಳ್ತಿದ್ದರು" ಅಂತ ಹೇಳಿ ಸರಸ್ವತಿಯವರು ಬಿಕ್ಕ ತೊಡಗಿದರು. ಅಲ್ಲಿ ನಿಲ್ಲಲಾಗದೆ ಹೊರ ಬಂದು ನಿಂತ ಕಡೆ ನಿಲ್ಲಲಾರದೆ ಚಡಪಡಿಸತೊಡಗಿದೆ.

ಅಷ್ಟು ಹೊತ್ತಿಗೆ ಅಲ್ಲಿ ನೂರಾರು ಜನ ನೆರೆದಿದ್ದರು. ಅಲ್ಲಿ ಭೇಟಿಯಾದ ಗೆಳೆಯರೊಬ್ಬರು ರಾಜು ಅವರ ವಿಶಿಷ್ಟ ಗುಣವನ್ನು ಸ್ಮರಿಸಿಕೊಂಡರು. ಅವರ ಕಾಲೇಜಿನ ವಿದ್ಯಾರ್ಥಿಯೊಬ್ಬರ ಕವಿತೆ ದಿನಪತ್ರಿಕೆಯಲ್ಲಿ ಈಚೆಗೆ ಪ್ರಕಟಗೊಂಡಿತ್ತು. ಆ ಕವಿತೆ ಓದಿ ಮೆಚ್ಚಿಕೊಂಡ ರಾಜು ಅವರು ಪತ್ರಿಕಾಲಯಕ್ಕೆ ಹೋಗಿ 'ಆ ಯುವ ಕವಿಯ ವಿಳಾಸ ತಿಳಿದುಕೊಂಡು 'ಇನ್ನು ಏನೇನು ಬರೆದಿದ್ದೀರ, ಅದನ್ನೆಲ್ಲ ಕಳಿಸಿಕೊಡಿ. ಪ್ರಕಟಿಸೋಣ' ಎಂದು ಪತ್ರ ಬರೆದಿದ್ದರು. ಇದಾಗಿ ಕೆಲವೆ ದಿನಗಳು ಕಳೆದಿತ್ತು. ರಾಜು ಅವರ ಕುಪ್ಪಳಿಗೆ ಹೋದವರು, ಹೋಗೇ ಬಿಟ್ಟರು– ಎಲ್ಲರ ಕಣ್ಣು, ಹೃದಯಗಳಲ್ಲಿ ಕಂಬನಿವುಳಿಸಿ. ಹೀಗೆ ನೂರಾರು ಯುವ ಕವಿಗಳನ್ನು ರಾಜು ಗುರುತಿಸಿ ಬೆಂಬಲ ನೀಡಿದ್ದಾರೆ. ಪ್ರೋತ್ಸಾಹಿಸಿದ್ದಾರೆ, ಪುಸ್ತಕ ಪ್ರಕಟಣೆಗೊಳ್ಳಲು ನೆರವಾಗಿದ್ದಾರೆ. ಬೆನ್ನು ತಟ್ಟಿ ಕನ್ನಡದ ಕೆಲ್ಸಕ್ಕೆ ಅಣಿಗೊಳಿಸಿದ್ದಾರೆ ಇದಿದೆಯಲ್ಲ, ಕನ್ನಡದ ಹೊಸ ಸಂವೇದನಾಶೀಲ ಮನಸ್ಸುಗಳನ್ನು ಗುರುತಿಸಿ, ಅವರೊಂದಿಗೆ ಸಂವಾದ ನಡೆಸುತ್ತ, ತಮ್ಮ ಆತ್ಮೀಯ ವಲಯಕ್ಕೆ ಬಿಟ್ಟುಕೊಂಡು ಇಲ್ಲಿ ಕಾವ್ಯಕ್ಕೆ ಬೆಂಬಲವಿದೆ, ಮೆಚ್ಚುವವರಿದ್ದಾರೆ ಎಂಬ ವಾತಾವರಣ, ವಿಶ್ವಾಸ ಮೂಡಿಸುವುದು ಇದು ಬಹಳ ದೊಡ್ಡ ಕೆಲಸ. ಎಳೆಯ ಮನಸ್ಸುಗಳ ಕಾವ್ಯೋತ್ಸಾಹದ ಹಣತೆ ಆರದಂತೆ ತಮ್ಮ ಬೊಗಸೆಯಲ್ಲಿ ರಕ್ಷಿಸುವುದು–ಕೊನೆಯವರೆಗೂ ಅದೇ ಆಗಿದ್ದವರು, ಅವರು. ಜಾತಿ, ಮತ, ಪ್ರದೇಶಗಳ ಹಂಗು ಮೀರಿ ಉತ್ತಮ ಕವಿತೆಗಳನ್ನು ಓದಿ ಮೆಚ್ಚಬಲ್ಲ ಸಹೃದಯತೆ ರಾಜು ಅವರದು. ಅದಕ್ಕಾಗಿ, ಕನ್ನಡದಲ್ಲಿ ಅಪರೂಪವಾಗುತ್ತಿರುವ ಈ ಗುಣನಿಧಿಯಂತಿದ್ದ ರಾಜು ಅವರನ್ನು ಕನ್ನಡ ಸಾಹಿತ್ಯಲೋಕ ಕೃತಜ್ಞತೆಯಲ್ಲಿ ಸ್ಮರಿಸುತ್ತಿದೆ.

ರಾಜು ಅವರಿಗೆ ನಾಡಿನ ತುಂಬ ಗೆಳೆಯರು. ಅವರಿಗೆ ಶತ್ರುಗಳೇ ಇರಲಿಲ್ಲವೇನೊ ಎಂಬಂತೆ ಅವರ ನಡೆನುಡಿ. ಯಾರನ್ನು ಕುರಿತು ಮನಸ್ಸಲ್ಲಿ ಕಹಿ ಇಟ್ಟುಕೊಂಡು ಏನನ್ನಾದರು ಅವರು ಆಡಿದ್ದನ್ನು ನಾನು ಕೇಳಿಲ್ಲ. ಮಾತಿಗಾಗಿ, ವಿರೋಧಕ್ಕಾಗಿ, ಹೇಳಲೇಬೇಕು ಎಂಬ ಧಾವಂತದಲ್ಲಿ ಅವರು ಎಂದೂ ಮಾತನಾಡಿದವರಲ್ಲ. ಏನನ್ನು ಹೇಳಿದರೂ ಯೋಚಿಸಿ ಸಾವಧಾನವಾಗಿ ಆಡುತ್ತಿದ್ದರು. ಯಾರನ್ನು ಕಟುವಾಗಿ ಟೀಕಿಸುತ್ತಿರಲಿಲ್ಲ. 'ನೋಡಿ, ಇಂತವರೆ ಹೀಗೆ ಮಾಡಿದರೆ ಹೇಗೆ?... ನಿಮಗೆ ಗೊತ್ತಾಯ್ತು 'ಅವರು ಹೀಗೆ ಮಾಡಿದ್ದು ಸರೀನ'– ಹೀಗೆ. ಇಷ್ಟವಾಗದ್ದರ ಬಗ್ಗೆ, ತಪ್ಪಾದದ್ದರ ಬಗ್ಗೆ ಅವರ ಮಾತು. ಕನ್ನಡಕ್ಕೆ ಸಂಬಂಧಿಸಿದ ಬಿಕ್ಕಟ್ಟುಗಳು ಬಂದಾಗ ಅವರು ಯಾವತ್ತು ಕನ್ನಡದ ಪರವಾಗಿ ನಿಲ್ಲುತ್ತಿದ್ದರು. ಆದರೆ, ಕನ್ನಡ ಭಾಷೆ–ಸಾಹಿತ್ಯ–ಸಾಹಿತಿಗಳ ಬಗ್ಗೆ ಬಹಿರಂಗವಾಗಿ ವಾಗ್ವಾದಗಳು ನಡೆಯುತ್ತಿದ್ದಾಗ ಅವರು ತಮ್ಮ ನಿಲುವು ಪ್ರಕಟಿಸುತ್ತಿರಲಿಲ್ಲ. ತಟಸ್ಥರಾಗಿರುತ್ತಿದ್ದರು. ಅವರ ಈ ದಾಕ್ಷಿಣ್ಯ ಸ್ವಭಾವ ಕೆಲವರಲ್ಲಿ ಅನುಮಾನ, ಗೊಂದಲಕ್ಕೆ ಕಾರಣವಾಗುತಿತ್ತು. ಬಹುಶಃ ಕದಡಿದ ನೀರಿಗೆ ತಮ್ಮದು ಒಂದು ಕಲ್ಲು ಹೊಡೆಯಲು ಅವರು ಹಿಂಜರಿಯುತ್ತಿದ್ದರೆಂದು ತೋರುತ್ತದೆ. ಇಂತ ವೇಳೆ ಅವರು ಸ್ವಲ್ಪ ಬೋಳೆ ಎನಿಸುತ್ತಿದ್ದರು.

ಅವರ ಜೀವಿತದ ಬಹುಮುಖ್ಯ ಕಾರ್ಯಕ್ಷೇತ್ರ ಕ್ರೈಸ್ತ ಕಾಲೇಜು ಕನ್ನಡ ಸಂಘ. ಅದರ ಸಂಸ್ಥಾಪಕರು ಕೂಡ. ಹಾಗೂ ಕನ್ನಡ ಪುಸ್ತಕ



ರಾಜು ಅವರಿಗೆ ನಾಡಿನ ತುಂಬ ಗೆಳೆಯರು. ಅವರಿಗೆ ಶತ್ರುಗಳೆ ಇರಲಿಲ್ಲವೇನೊ ಎಂಬಂತೆ ಅವರ ನಡೆನುಡಿ. ಯಾರನ್ನು ಕುರಿತು ಮನಸ್ಸಲ್ಲಿ ಕಹಿ ಇಟ್ಟುಕೊಂಡು ಏನನ್ನಾದರು ಅವರು ಆಡಿದ್ದನ್ನು ನಾನು ಕೇಳಿಲ್ಲ. ಮಾತಿಗಾಗಿ, ವಿರೋಧಕ್ಕಾಗಿ, ಹೇಳಲೇಬೇಕು ಎಂಬ ಧಾವಂತದಲ್ಲಿ ಅವರು ಎಂದೂ ಮಾತನಾಡಿದವರಲ್ಲ. ಏನನ್ನು ಹೇಳಿದರೂ ಯೋಚಿಸಿ ಸಾವಧಾನವಾಗಿ ಆಡುತ್ತಿದ್ದರು. ಯಾರನ್ನು ಕಟುವಾಗಿ ಟೀಕಿಸುತ್ತಿರಲಿಲ್ಲ. ಅವರ ಮಾತು ಕನ್ನಡಕ್ಕೆ ಸಂಬಂಧಿಸಿದ ಬಿಕ್ಕಟುಗಳು ಬಂದಾಗ ಅವರು ಯಾವತ್ತು ಕನ್ನಡದ ಪರವಾಗಿ ನಿಲ್ಲುತ್ತಿದ್ದರು. ಆದರೆ, ಕನ್ನಡ ಭಾಷೆ-ಸಾಹಿತ್ಯ-ಸಾಹಿತಿ ಗಳ ಬಗ್ಗೆ ಬಹಿರಂಗವಾಗಿ ವಾಗ್ವಾದಗಳು ನಡೆಯುತ್ತಿದ್ದಾಗ ಅವರು ತಮ್ಮ ನಿಲುವು ಪ್ರಕಟಿಸುತ್ತಿರಲಿಲ್ಲ. ತಟಸ್ಥರಾಗಿರುತ್ತಿದ್ದರು. ಅವರ ಈ ದಾಕ್ಷಿಣ್ಯ ಸ್ವಭಾವ ಕೆಲವರಲ್ಲಿ ಅನುಮಾನ, ಗೊಂದಲಕ್ಕೆ ಕಾರಣವಾಗುತಿತ್ತು.

ಎಂ.ಜಿ. ಚಂದ್ರಶೇಖರಯ್ಯ

ಪ್ರಕಟಣೆಯಲ್ಲಿ ಒಂದು ವಿಕ್ರಮ ಸಾಧಿಸುವಂತೆ ಬೆಳೆಸಿದ ಕೀರ್ತಿ ಅವರಿಗೆ ಸಲ್ಲಬೇಕು. ಕನ್ನಡದ ವಾತಾವರಣವೇ ಇಲ್ಲದ ಕ್ರಿಶ್ಚಿಯನ್ ಮತ್ತು ಇಂಗ್ಲಿಷ್ ವಾತಾವರಣದ ಕ್ರೈಸ್ಟ್ ಕಾಲೇಜಿನಲ್ಲಿ ಕನ್ನಡ ಹಿರಿಯ ಲೇಖಕರನ್ನು ಕಾಲೇಜಿಗೆ ಆಹ್ವಾನಿಸಿ ಕ್ರೈಸ್ಟ್ ಕಾಲೇಜಿಗೆ ಕನ್ನಡದ ದೀಕ್ಷೆ ಕೊಡಿಸಿದರು. ಎಷ್ಟೋ ಲೇಖಕರ ಮೊದಲ ಕೃತಿಗಳು ಕ್ರೈಸ್ಟ್ ಕಾಲೇಜಿನಿಂದ ಪ್ರಕಟಗೊಳ್ಳಲು ಕಾರಣರಾದರು. ಹಾಗೆಯೆ ಎನ್. ಮೂರ್ತಿರಾವ್ ಅವರಂತ ಖ್ಯಾತ ನಾಮರ ಕೃತಿಗಳನ್ನು ಪ್ರಕಟಿಸಿದರು. ಮೂವತ್ತೂ ವರ್ಷಕ್ಕೂ ಮಿಕ್ಕು ದಣಿಯದೆ ಸಾಹಿತ್ಯ ಪರಿಚಾರಕರಾಗಿ ಅವರು ದುಡಿದರು. ಯಾರಾದರು ಈ ಬಗ್ಗೆ 'ಅವರಲ್ಲಿ ಪ್ರಸ್ತಾಪಿಸಿದರೆ' ಬಿಡಿ, ಈ ಕೆಲಸವನ್ನು ಯಾರೂ ಮಾಡಬಹುದಾಗಿತ್ತು. ಇದನ್ನೆಲ್ಲ ನಾನೇ ಎಲ್ಲರ ನೆರವಿನಿಂದ ಮಾಡಿದ್ದೇನೆ' ಎಂದು ಸಂಕೋಚದಿಂದ ಹೇಳುತ್ತಿದ್ದರು. ಅವರ ಸೌಜನ್ಯ ದೊಡ್ಡದು.

ಹಿರಿಯರಾದ ಶ್ರೀನಿವಾಸರಾಜು ಅವರೊಂದಿಗೆ ನನ್ನದು ಕೆಲವೆ ವರ್ಷಗಳ ಒಕ್ಕು ಬಳಕೆ. ಅದು ತೀರ ನಿಕಟವಾದುದಾಗಿರಲಿಲ್ಲ. ಆದರೆ, ಅವರೊಂದಿಗೆ ಇದ್ದಾಗ ಅವರು ಅಪರಿಚಿತರು ಎಂದು ಅನ್ನಿಸಿರಲೇ ಇಲ್ಲ. ಅಷ್ಟು ಆತ್ಮೀಯತೆ, ಪ್ರೀತಿ ಇರುತ್ತಿತ್ತು. ಅವರ ನಡೆನುಡಿಯಲ್ಲಿ. ಅವರನ್ನು ನಾನು ಮೊದಲಿಗೆ ನೋಡಿದ್ದು ಎಲ್ಲಿ ಎಂಬುದು ನೆನಪಿಲ್ಲ. ಮೌಲ್ಯಮಾಪನ ಕೆಲಸಕ್ಕೆ ವರ್ಷಕ್ಕೊಮ್ಮೆ ನಾವೆಲ್ಲ ಸೇರುತ್ತಿದ್ದೆವು. ಆ ಸಂದರ್ಭದಲ್ಲಿ ಒಂದು ಕಡೆ ಮೇಜು ಇಟ್ಟು ಕನ್ನಡ ಸಂಘದ ಪುಸ್ತಕಗಳನ್ನು ಅದರ ಮೇಲೆ ಹರಡಿ, ಶೇಕಡ ಇಷ್ಟು ರಿಯಾಯಿತಿ ಎಂದು ಬರೆದ ಚೀಟಿಯೊಂದನ್ನು ಅಲ್ಲಿಟ್ಟು ತಮ್ಮ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದರು. ಯಾರಾದರು ಪುಸ್ತಕ ಪ್ರಿಯರು ಅಲ್ಲಿಗೆ ಹೋಗಿ ಪುಸ್ತಕ ನೋಡುತ್ತ, ಹೊಸ ಪುಸ್ತಕದ ಪುಟ ತಿರುವುತ್ತ ನಿಂತಿದರೆ ನಾಲ್ಕೈದು ನಿಮಿಷದಲ್ಲಿ ಅವರು ಅಲ್ಲಿಗೆ ಬರುವರು. 'ನೋಡಿ ಈ ಪುಸ್ತಕ ಚೆನ್ನಾಗಿದೆ... ಇದು ಹೊಸ ಪುಸ್ತಕ' ಹೀಗೆ ಏನೊ ಹೇಳುವರು. ಆದರೆ ಎಂದೂ ಇದನ್ನೆ ಕೊಳ್ಳಿ ಎಂದವರಲ್ಲ. ಯಾವುದಾದರೂ ಹೊಸ ಪುಸ್ತಕ ಬೇರೆ ಕಡೆ ಪ್ರಕಟಗೊಂಡಿದ್ದರೆ ಅದನ್ನು ತೋರಿಸಿ 'ಇದನ್ನು ನೋಡಿದ್ದೀರ, ಚೆನ್ನಾಗಿದೆ' ಎನ್ನುವರು. ಒತ್ತಾಯಿಸದೆ ಹೀಗೆ ಕನ್ನಡ ಪುಸ್ತಕ ಪ್ರೀತಿಯನ್ನು ಅವರು ಬೆಳೆಸಿದರು. ಅದು ಎಂದೂ ಉಬ್ಬರ, ಅಬ್ಬರವಿಲ್ಲದೆ. ಅವರ ಕನ್ನಡ ಪ್ರೀತಿ ಯಾವತ್ತೂ 'ಅಂತರ್ಜಲ'ದ ಹಾಗೆ.

೨೦೦೬ರಲ್ಲಿ ಒಂದು ದಿನ. ನನ್ನ ಪ್ರೀತಿಯ ಕವಿ ಎಸ್.ಜಿ. ಸಿದ್ಧರಾಮಯ್ಯನವರು ಫೋನ್ ಮಾಡಿ 'ರಾಜು ಅವರಿಗೆ ಅಭಿನಂದನ ಗ್ರಂಥ ತರಬೇಕೆಂದು ಇಲ್ಲಿ ಕೆಲವರು ಬಂದಿದ್ದಾರೆ. ನೀವು ನನ್ನ ಜೊತೆ ಇರಬೇಕು' ಎಂದರು. ಎಸ್.ಜಿ.ಎಸ್. ಬಗ್ಗೆ ನನಗೆ ಗೌರವ, ಪ್ರೀತಿ ಇದೆ. ಆದರೆ ರಾಜು ಅವರೊಂದಿಗೆ ನನಗೆ ಹೆಚ್ಚಿನ ಒಡನಾಟವಿರಲಿಲ್ಲ. ಹೀಗಾಗಿ ನಾನು ಹಿಂಜರಿದೆ. 'ಬೇಡ, ರಾಜು ಅವರನ್ನು ನಿಕಟವಾಗಿ ಬಲ್ಲವರನ್ನು ನಿಮ್ಮೊಂದಿಗೆ ಇಟ್ಟುಕೊಳ್ಳಿ' ಎಂದು ವಿನಂತಿಸಿದೆ. ನನ್ನ ಪಟ್ಟಿಗೆ ಬಗ್ಗದ ಎಸ್.ಜಿ.ಎಸ್. 'ನೀವು ಬನ್ನಿ, ಆಮೇಲೆ ಮಾತಾಡೋಣ' ಎಂದರು. ಆವೇಳೆಗೆ ರಾಜು ಅವರ ಅಭಿನಂದನ ಸಮಾರಂಭ ಮಾಡಲು ಕೆಲವು ಪ್ರಯತ್ನ ನಡೆದು, ಅವರು ಒಪ್ಪಿಗೆ ನೀಡದೆ ಕೆಲವರು ಕೈ ಚೆಲ್ಲಿದ್ದರು. ಎಸ್.ಜಿ.ಎಸ್. ಅವರ ಪ್ರೀತಿಗೆ ಕಟ್ಟುಬಿದ್ದು ಅವರ ಪ್ರಯತ್ನದಲ್ಲಿ ನಾನು ಜೊತೆಗೆ ನಿಲ್ಲಲು ಒಪ್ಪಿಕೊಂಡೆ. ರಾಜು ಅವರನ್ನು ಒಪ್ಪಿಸುವುದು ಹೇಗೆ ಎಂಬ ಪ್ರಶ್ನೆ ಬಂತು. ನಾನು 'ಜಿ.ಎಸ್.ಎಸ್.

ರಾಜು ಅವರಿಗೆ ನಾಡಿನ ತುಂಬ ಗೆಳೆಯರು. ಅವರಿಗೆ ಶತ್ರುಗಳೇ ಇರಲಿಲ್ಲವೇನೊ ಎಂಬಂತೆ ಅವರ ನಡೆನುಡಿ. ಯಾರನ್ನು ಕುರಿತು ಮನಸ್ಸಲ್ಲಿ ಕಹಿ ಇಟ್ಟುಕೊಂಡು ಏನನ್ನಾದರು ಅವರು ಆಡಿದ್ದನ್ನು ನಾನು ಕೇಳಿಲ್ಲ. ಮಾತಿಗಾಗಿ, ವಿರೋಧಕ್ಕಾಗಿ, ಹೇಳಲೇಬೇಕು ಎಂಬ ಧಾವಂತದಲ್ಲಿ ಅವರು ಎಂದೂ ಮಾತನಾಡಿದವರಲ್ಲ. ಏನನ್ನು ಹೇಳಿದರೂ ಯೋಚಿಸಿ ಸಾವಧಾನವಾಗಿ ಆಡುತ್ತಿದ್ದರು. ಕನ್ನಡಕ್ಕೆ ಸಂಬಂಧಿಸಿದ ಬಿಕ್ಕಟ್ಟುಗಳು ಬಂದಾಗ ಅವರು ಯಾವತ್ತು ಕನ್ನಡದ ಪರವಾಗಿ ನಿಲ್ಲುತ್ತಿದ್ದರು.

ಅವರ ಮೂಲಕ ಪ್ರಯತ್ನಿಸೋಣ. ಜಿ.ಎಸ್.ಎಸ್. ಒಪ್ಪಿದರೆ ಕೆಲಸ ಆಗಬಹುದು' ಎಂದೆ. ಸಿದ್ದರಾಮಯ್ಯನವರು ತಕ್ಷಣ ಹೊರಟು ನಮ್ಮನ್ನೆಲ್ಲ ಶಿವರುದ್ರಪ್ಪನವರ ಮನೆಗೆ ಕರೆದುಕೊಂಡು ಹೋದರು.

ಅವರಲ್ಲಿ ವಿಷಯ ಪ್ರಸ್ತಾಪಿಸಿ, ನೀವೆ ಮುಂದೆ ನಿಂತು ಇದನ್ನು ನಡೆಸಿಕೊಡಬೇಕು ಎಂದೆವು. ಒಂದರೆ ಕ್ಷಣ ಮೌನವಾದ ಜಿ.ಎಸ್.ಎಸ್. 'ಆಯ್ತು, ಇದೇ ಕೊನೆಯದು. ಇದೊಂದು ಮಾಡಿ ಮುಗಿಸಿಬಿಡೋಣ' ಎಂದು ಒಪ್ಪಿಗೆ ಕೊಟ್ಟರು. ಯಾರ ಒತ್ತಾಯಕ್ಕೂ ಬಾಗದಿದ್ದ ರಾಜು ಅವರು ತಮ್ಮ ಗುರು ಜಿಎಸ್ಎಸ್ ಅವರ ಮಾತಿಗೆ ಕಟ್ಟು ಬಿದ್ದರು. ಸಮಾರಂಭದುದ್ದಕ್ಕೂ ಸಂಕೋಚದಿಂದ ಮುದುಡಿ ಮೌನದ ಮುದ್ದೆಯಂತೆ ಕುಳಿತಿದ್ದ ಅವರು ಎಂದಿನಂತೆ ಬರೆದು ತಂದ ಭಾಷಣ ಓದಿದರು. ಶಿಷ್ಯರಿಗೆ ದುಂಬಾಲು ಬಿದ್ದು ಅಭಿನಂದನ ಸಮಾರಂಭ ನಡೆಸಿಕೊಳ್ಳುವವರ ಮಧ್ಯೆ ರಾಜು ವಿಶಿಷ್ಟರಾಗುವುದು. ಅವರ ಸಂಕೋಚ, ವಿನಯದಿಂದ. ಅಂದು ಜಿಎಸ್ಎಸ್ ಹೇಳಿದರು. 'ಗುರುವಿಗೆ ಶಿಷ್ಯರು ಅಭಿನಂದಿಸುವುದು ಲೋಕರೂಢಿ. ಆದರೆ ನನ್ನನ್ನು ನಾನು ಅಭಿನಂದಿಸಿ ಸಂತೋಷ ಪಡ್ತಿದ್ದೇನೆ'. ಇದಕ್ಕಿಂತ ಧನ್ಯತೆ ಇನ್ನೇನು ಇದ್ದೀತು. ನಿಜಕ್ಕೂ ಅವರದು ಸಾರ್ಥಕ ಬದುಕು; ಅವರು ಧನ್ಯಜೀವಿ.

ನಿಜ, ಅವರು ಧನ್ಯಜೀವಿಯೆ, ಆದರೆ, ಅವರು ಅಂದು ಪುಸ್ತಕ ಪ್ರಾಧಿಕಾರದ ಕಛೇರಿಯಲ್ಲಿ ನನ್ನ ಕೈಗಿತ್ತ ಪುಸ್ತಕ ಈಗಲು ನನ್ನಲ್ಲಿದೆ. ಈಗ ಅದನ್ನು ಹೇಗೆ ಹಿಂದಿರುಗಿಸಲಿ? ಯಾರಿಗೆ ಹಿಂದಿರುಗಿಸಲಿ? ಈ ನೋವು ನನ್ನೊಬ್ಬನದಲ್ಲ; ನನ್ನಂಥವರು ಹಲವರು ಇದೇ ಕೊರಗಿನಲ್ಲಿದ್ದಾರೆ ಎಂದು ನಾನಾದರು ಹೇಗೆ ಸಮಾಧಾನ ಪಡಲಿ? ಮತ್ತೆ ಯಾವುದಾದರೂ ಪುಸ್ತಕದ ಅಗತ್ಯ ಬಿದ್ದಾಗ ಸಲಿಗೆಯಲ್ಲಿ ಕೇಳಬಹುದಾದ ರಾಜು ಅಂತವರು ಯಾರಿದ್ದಾರೆ ಎಂದು ಹುಡುಕುತ್ತಿದ್ದೇನೆ.

ಸಾಮಾನ್ಯವಾಗಿ ಎಂದೂ ಭಾವುಕರಾಗದ ಡಾ.ಕೆ.ವಿ. ನಾರಾಯಣ ಅವರು ರಾಜು ಅಭಿನಂದನ ಸಮಾರಂಭದಲ್ಲಿ ಅಭಿನಂದಿಸಿ ಮಾತಾಡ್ತ ಕಣ್ಣಲ್ಲಿ ನೀರು ತುಂಬಿಕೊಂಡು ಕ್ಷಣ ಮಾತು ನಿಲ್ಲಿಸಿದ್ದು ಏಕೆ ಎಂಬುದು ಈಗ ನಿಧಾನಕ್ಕೆ ನನ್ನೊಳಗೆ ಜಿನುಗುತ್ತಿದೆ. □

ವೇದಿಕೆ, ದಳ, ಸೇನೆಗಳ ರಾಜ್ಯಕ್ಕೆ ಹೀಗೆ ಬನ್ನಿ

(೧೧ನೇ ಪುಟದಿಂದ)

ಕೂಡಲ ಸಂಗಮದಲ್ಲಿ ನಡೆದ ನಡೆದ ಶರಣ ಸಮಾವೇಶ, ಜಾತಿ ವಿರೋಧಿ ವಚನಗಳನ್ನು ಉದ್ಧರಿಸುತ್ತಲೇ ಜಾತಿವಾದಿ ಸಮಾವೇಶವೊಂದರ ರೀತಿಯಲ್ಲಿ ಸಂಘಟನೆಗೊಂಡಿದ್ದ ಅದರ ನಿರ್ಲಜ್ಜ, ಜಾತಿ ಆಧಾರಿತ ರಾಜಕಾರಣ ಮಾಡತೊಡಗಿರುವ ಪಕ್ಷವೊಂದರ ನಾಯಕರನ್ನು ತನ್ನಲ್ಲಿಗೆ ಆಹ್ವಾನಿಸಿ ಅವರು ಅಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅವಕಾಶ ಮಾಡಿಕೊಡುವ ಮೂಲಕ ಬಹಿರಂಗವಾಗಿಯೇ ಪ್ರಕಟಗೊಂಡಿತಲ್ಲವೇ?

ಇದೆಲ್ಲದಕ್ಕೆ ನಮ್ಮ ಒಟ್ಟಾರೆ ರಾಜಕಾರಣದ ಪ್ರತಿಕ್ರಿಯೆಯಾದರೂ ಏನು? ರಾಜಕಾರಣ, ಮೂಲತಃ ಪ್ರಜಾಪ್ರಭುತ್ವ ವಿರೋಧಿಯಾದ ಹಾಗೂ ನಮ್ಮ ಸಂವಿಧಾನದ ಆಶಯಗಳಿಗೆ ಭಂಗ ತರುವಂತಹ ಈ ಎಲ್ಲ ಚಟುವಟಿಕೆಗಳನ್ನು ತನ್ನ ಸ್ವಾಯತ್ತತೆಯ ಆಧಾರದಲ್ಲಿ ವಿಮರ್ಶಿಸುತ್ತಾ ಅವುಗಳ ಹಿಂದಿರುವ ಸಂಘ-ಸಂಸ್ಥೆ-ವೇದಿಕೆ-ದಳ-ಸೇನೆಗಳನ್ನು ಪ್ರಜಾಸತ್ತಾತ್ಮಕತೆಯ ಚೌಕಟ್ಟಿನಲ್ಲಿ ತಹಬಂದಿಗೆ ತರುವ ಬದಲು, ಅವುಗಳೊಂದಿಗೆ ಶಾಮೀಲಾಗಿ ಬದುಕಬೇಕಾದ ಅಸಹಾಯಕತೆ ಮತ್ತು ಅನಿವಾರ್ಯತೆಗಳಿಗೆ ಈಡಾಗಿದೆ. ಇದಕ್ಕೆ ಎಲ್ಲ ರಾಜಕೀಯ ಪಕ್ಷಗಳ ಕೊಡುಗೆ ಇದೆ ಎಂಬುದೇ ಇಂದಿನ ನಿಜವಾದ ದುರಂತವಾಗಿದೆ.

ಇನ್ನು ಧರ್ಮಕ್ಕೂ ಅಧ್ಯಾತ್ಮಿಕತೆಗೂ ಸಂಬಂಧವಿಲ್ಲ; ಧರ್ಮವೆಂದರೆ ಅರ್ಥ ಕಳೆದುಕೊಂಡ ಕಟ್ಟಳೆ, ಪರಮ ಮೌಢ್ಯ, ಚಿನ್ನ- ವಜ್ರಗಳ ವ್ಯವಹಾರ, ನಿರ್ಲಜ್ಜ ಭಕ್ತ ಬಲ ಪ್ರದರ್ಶನ; ಸಿಂಹಾಸನಾರೋಹಣ, ಪೂಜಾ ಅಧಿಕಾರ, ಅದರಿಂದ ಗಿಟ್ಟುವ ದಾನ ದಕ್ಷಿಣೆ ಇತ್ಯಾದಿಗಳ ರಾಜಕಾರಣವೆಂಬುದನ್ನು ಸಾಬೀತು ಪಡಿಸಿರುವ ರಾಜ್ಯದ ಶೇ.೨ಕ್ಕೂ ಕಡಿಮೆ ಜನಸಂಖ್ಯಾ ಬಾಹುಳ್ಯವುಳ್ಳ ಜಾತಿಯೊಂದರ ಮಠದ ಕೋಳಿ ಜಗಳವೊಂದನ್ನು ಒಂದು ತಿಂಗಳಿಂದ ಒಂದೇ ಸಮನೆ ಮುಖ್ಯ ಸುದ್ದಿಯಾಗಿ ಪ್ರಕಟಿಸುತ್ತಿರುವ-ವಾಣಿಜ್ಯೋದ್ದೇಶಗಳಿಗಾಗಿ ರೋಚಕತೆಯನ್ನೇ ತಮ್ಮ ಧರ್ಮವನ್ನಾಗಿ ಸ್ವೀಕರಿಸತೊಡಗಿರುವ(ಒಂದು ಪತ್ರಿಕೆಯಂತೂ ತನ್ನ ಓದುಗರಿಗೆ ಕೊಡುಗೆಯಾಗಿ ನೀಡಿದ ವಾರ್ಷಿಕ ಕ್ಯಾಲೆಂಡರನ್ನೇ ರಾಜಕೀಯ ನಾಯಕರೊಬ್ಬರ ಪ್ರಚಾರಕ್ಕೆ ಮಾರಿಕೊಂಡಿದೆ!)- ನಮ್ಮ ಪತ್ರಿಕೆಗಳೂ, ವಾಹಿನಿಗಳೂ ಈ ರಾಜಕಾರಣವನ್ನು ಸರಿಪಡಿಸುವಲ್ಲಿ ಸಹಾಯಕವಾಗಬಲ್ಲವು ಎಂಬ ನಂಬಿಕೆಯೂ ಕ್ರಮೇಣ ಆರಿ ಹೋಗುತ್ತಿದೆ.

ಹೀಗಿರುವಾಗ ಹೇಳಿ, ಯಾವ ಪ್ರಜಾಪ್ರಭುತ್ವ ವಿದು, ಎಂತಹ ಪ್ರಜಾಪ್ರಭುತ್ವವಿದು? ಇಲ್ಲಿ ಯಾರಿಗೆ, ಯಾವುದಕ್ಕೆ ದೊರೆಕಿರುವುದು ಸ್ವಾತಂತ್ರ್ಯ? ನಿಜವಾಗಿ ಮುಗಿದಿದೆಯೇ ನಮ್ಮ ಪಾರತಂತ್ರ್ಯ? ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾದವರೇ ಅದನ್ನು ಭಕ್ಷಿಸ ತೊಡಗಿದಾಗ, ಪಾರತಂತ್ರ್ಯ ಹಿಂದಿರುಗಿ ಬರಲು ಒಂದಲ್ಲ ಒಂದು ವೇಷದಲ್ಲಿ ಕಾದು ನಿಂತಿರುತ್ತದೆ...

ಇದನ್ನು ಕನ್ನಡಿಗರಿಗೆ ಮನವರಿಕೆ ಮಾಡಿಕೊಡುವುದಾದರೂ ಯಾರು? ಹೇಗೆ? □

ಶ್ರೀನಿವಾಸ್‌ಕುಮಾರ್ ಎಂಬ ಸಹೃದಯಿ

ನಮ್ಮ ಸಮಾಜವಾದಿ ಅಧ್ಯಯನ ಕೇಂದ್ರವೆಂಬ ಪುಟ್ಟ ಯುವಕರ ಗುಂಪಲ್ಲಿ ಸೋಲಿಗರ ಹುಡುಗ ಜಡೇಗೌಡನಿದ್ದ. ಬಿಳಿಗಿರಿರಂಗನ ಬೆಟ್ಟದ ಕನ್ನೇರಿಕಾಲೋನಿಯಲ್ಲಿ ಅವನ ಮೇಲೆ ರಾಜಕೀಯ ಪ್ರೇರಿತ ಹಲ್ಲೆಯಾಗುತ್ತದೆ. ಅಸಹಾಯಕನಾಗಿ ರಕ್ತ ಸುರಿಸಿಕೊಂಡು ಚಾಮರಾಜನಗರಕ್ಕೆ ಆತ ಓಡಿ ಬಂದು ನಮ್ಮಲ್ಲಿ ರಕ್ಷಣೆಕೋರುತ್ತಾನೆ. ಜಿ. ಶ್ರೀನಿವಾಸ್‌ಕುಮಾರ್‌ರವರು ಅವನ ಸಂಪೂರ್ಣ ಜವಾಬ್ದಾರಿ ನನಗೆ ವಹಿಸುತ್ತಾರೆ. ಈ ಮಧ್ಯೆ ಪೊಲೀಸರು ಇವರ ಇಡೀ ಕುಟುಂಬದವರ ಮೇಲೆ ಕೇಸ್ ದಾಖಲಿಸಿರುತ್ತಾರೆ. ತಮ್ಮಂದಿರ ಮೇಲೆ ಪೊಲೀಸ್ ದೌರ್ಜನ್ಯ ನಡೆದಿರುತ್ತೆ. ಇದೆಲ್ಲದರಿಂದ ಇವನ್ನು ಬಿಡಿಸಿ ಕುಟುಂಬದವರನ್ನು ತಮ್ಮಂದಿರನ್ನು ಆಸ್ಪತ್ರೆಗೆ ದಾಖಲಿಸಿ, ಶ್ರೀನಿವಾಸ್‌ಕುಮಾರ್‌ರವರಿಗೆ ಎಲ್ಲವೂ ಸುಸೂತ್ರವಾಗಿ ಕೆಲಸ ಪೂರೈಸಿದೆ ಎಂದು ಹೇಳಲು ಸಂತೋಷದಿಂದ ಅವರ ಮನೆಗೆ ಹೋಗಿದ್ದೆ.

ನಮ್ಮ ಗುಂಪಿನವರ ಪ್ರತಿಯೊಂದು ನಡೆಯನ್ನು ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಶ್ರೀನಿವಾಸ್‌ಕುಮಾರ್‌ರವರು ಹೋರಾಟದಲ್ಲಿ ಆಳವಾದ ಬದ್ಧತೆಯನ್ನು ಬಯಸಿದ್ದರು. ಯಾರೇ ಒಬ್ಬರು ಬೌದ್ಧಿಕವಾಗಿಯಾಗಲಿ, ಹೋರಾಟದಲ್ಲಿಯಾಗಲಿ ನಾಯಕರಾಗಿ ಮೆರೆಯುವುದು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಸಂಘಟಿತ ಪ್ರಯತ್ನ ಹಾಗೂ ಜನತೆ ಎದುರು ಕಾರ್ಯಕ್ರಮ ರೂಪಿಸುವುದರಲ್ಲೇ ಅವರ ನಂಬಿಕೆ ಅಚಲವಾಗಿತ್ತು. ಅವರು ಸ್ವತಃ ಅವನ್ನು ರೂಢಿಸಿಕೊಂಡಿದ್ದರು. ನಮ್ಮ ಸಂಘಟನೆಗಾಗಿ ಅವರು ರಾತ್ರಿ ಎಷ್ಟು ವೇಳೆಯವರೆಗೆ ಅಧ್ಯಯನದಲ್ಲಿ ತೊಡಗುತ್ತಿದ್ದರು. ಯುವಕರ್ನಾಟಕವೆಂಬ ಸಮಾಜವಾದಿ ಆಶಯಗಳ ಯುವ ಸಂಘಟನೆ ಕಟ್ಟಲು ನಿರಂತರವಾಗಿ ಶ್ರಮಿಸುತ್ತಿದ್ದರು.

ನಮ್ಮ ಸಂಘಟನೆಯಿಂದ ಕಳಪೆ ಹತ್ತಿ ಬೀಜದ ವಿರುದ್ಧ ಗ್ರಾಹಕ ವೇದಿಕೆಯಲ್ಲಿ ರೈತರಿಗೆ ಜಯಲಭಿಸಿದಾಗಲೂ, ಇದು ಇಲ್ಲಿಗೆ ನಿಂತರೆ ಪ್ರಯೋಜವಿಲ್ಲ ಹತ್ತಿ ಬೆಳೆಗಾರರ ಸಂಘಟನೆ ಮಾಡು ಎಲ್ಲರನ್ನೂ ಒಗ್ಗೂಡಿಕೊಂಡು ಮಾಡು ಎಂದು ಹೇಳುತ್ತಿದ್ದರು. ಅವರ ಬದ್ಧತೆಯ ಮಟ್ಟವನ್ನು ಮೀರಲು ನನ್ನಿಂದ ಕೆಲವೊಮ್ಮೆ ಸಾಧ್ಯವಾಗದೆ ಅಸಹಾಯಕನಾಗಿ ಅತ್ತಿದ್ದೇನೆ. ಕಣ್ಣೀರೆಂಬುದು ನಮ್ಮ ಖಾಸಗಿ ಆಭರಣವಾಗಬೇಕು, ಎಲ್ಲರೆದುರೂ ಹೀಗೆ ಅಳಬೇಡ ಅನ್ನುತ್ತಿದ್ರು.

ಜಡೇಗೌಡ ವಿಚಾರಕ್ಕೆ ಅವರ ಮನೆಗೆ ಹೋದಾಗ ಈ ಪದ್ಯ ಕೊಟ್ಟು ಇದು ನಿನಗಾಗಿ ಮಾತ್ರ ಕೊಟ್ಟದ್ದು ಎಲ್ಲೂ ಪ್ರಕಟಿಸಬಾರದೆಂದು ಕಟ್ಟಪ್ಪಣೆ ವಿಧಿಸಿದ್ದರು. ಅವರ ಈ ಪದ್ಯ ಓದುತ್ತಾ ನನಗೆ ಅಂದು ಅವರೊಂದಿಗೆ ಏನು ಮಾತಾಡಬೇಕೆಂದು ಹೊಳೆಯಲಿಲ್ಲ. ಪದ್ಯ ಓದಿದ ಮೇಲೆ "ನಿನಗೆ ಬರೆದಿದ್ದು" ಎಂದು ಸಿಗರೇಟಿಗೆ ಬೆಂಕಿ ಹೊತ್ತಿಸಿದರು. ಅವರು ನಿರಂತರವಾಗಿ ಒಂದು ನಂಬಿಕೆಗೆ ಸಿದ್ಧಾಂತಕ್ಕೆ ಕಾಲವೂ ಮತ್ತು ಮನುಷ್ಯನ ಪ್ರಾಣವೂ ಅಷ್ಟು ಮುಖ್ಯವಾಗುವುದೇ ಇಲ್ಲ ಎಂದು ಭಾವಿಸಿಕೊಂಡಿದ್ದರು.

ಕಾಲದ ಚಲನೆಯಲ್ಲಿ ಮಿಂಚಿನಂತೆ ಉರಿದು ಮರೆಯಾದವರ ಸಾಂಸ್ಕೃತಿಕ ಕಥಾನಕಗಳನ್ನು, ಚಳವಳಿಗಳನ್ನು ಕಲಾವಿದರನ್ನು, ಬಹಳಷ್ಟು ಅವರು ನಮಗೆ ಹೇಳುತ್ತಲೇ ಇದ್ದರು. ಈ ಬ್ರಹ್ಮಾಂಡದೆದುರಿಗೆ ಒಂದು ನಿರ್ಜೀವ ರಾಸಾಯನಿಕ ವಸ್ತು ಜೀವ ಪಡೆದಿದೆ ಎಂದಾದರೆ ಅವರ ನಂಬಿಕೆಗೆ ಅಥವಾ ಯಾವುದಾದರೂ ಮುಖ್ಯ ಉದ್ದೇಶದಿಂದಲೇ ಬಂದಿರುತ್ತದೆ. ಒಬ್ಬ ಕಲಾವಿದನಿಗೆ ಇದು ಮುಖ್ಯವಾಗಬೇಕು. ಕಾಲಾಂತರದಲ್ಲಿ ತನ್ನನ್ನೇ ಸಾಹಿತ್ಯಕ್ಕೂ, ಚಿತ್ರಕಲೆಗೂ, ಹೋರಾಟಕ್ಕೂ ಸುಟ್ಟುಕೊಂಡ ನೀಗಿಕೊಂಡ ಜೀವನಗಳನ್ನೇ ಕಾಲ ಮತ್ತೆ ಮತ್ತೆ ನೆನೆಯುತ್ತಿರುತ್ತದೆ ಎಂದು ಹೇಳಿದ್ದರು.

ಇತ್ತೀಚೆಗೆ ಬೆಂಗಳೂರಿಗೆ ಹೋದ ತಮ್ಮ ಕೆಲವು ಗೆಳೆಯರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ, ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ನೊಂದು ನುಡಿಯುತ್ತಿದ್ದರು. ಅವರು ತೀವ್ರ ಹೃದಯಘಾತಕ್ಕೆ ತುತ್ತಾಗಿ ನಮ್ಮನ್ನಗಲಿ ಹೋಗಿದ್ದು ಅವರೆಲ್ಲಾ ಸ್ನೇಹಿತರಿಗೂ ತೀವ್ರ ನೋವನ್ನು ತಂದುಕೊಟ್ಟಿದೆ. ಈಗ ನನ್ನಲ್ಲಿ ತುಂಬಿಕೊಂಡಿರುವ ಖಾಸಗಿ ಆಭರಣಗಳಾದ ಕಣ್ಣೀರನ್ನು ಅವರಿಗೆ ಅರ್ಪಿಸುತ್ತಾ ಈ ಪದ್ಯವನ್ನು ನಿಮಗಾಗಿ ಕೊಡುತ್ತಿದ್ದೇನೆ.

○ **ಅಪೂರ್ವ ಡಿ'ಸಿಲ್ವ**

೧.
ನನ್ನ ಕ್ರಿಸ್ತ ಗೆಳೆಯನೊಬ್ಬನಿಗೆ
ಯೇಸು ಸ್ವಾಮಿಯ ಚಿತ್ರ ಬೇಡಿದೆ.
ಅದು ಸಾದ ಸೀದಾ ಏಸು ಸ್ವಾಮಿಯದ್ದು,
ಬೇಕಿತ್ತು.
(ನನ್ನ ಬೇಡಿಕೆ ಜೀಸಸ್ಸಿನ ಚಿತ್ರಕ್ಕಾಗಿ ಅಲ್ಲ.)

೨.
ಗೆಳೆಯ,
ನನಗೆ ಸುವರ್ಣ ಚೌಕಟ್ಟಿನ ಚಿತ್ರ ಕೊಟ್ಟ.
ಅದರಲ್ಲಿ ಏಸುವೂ, ಆತನ ಶಿಲುಬೆಯೂ
ಬಂಧಿಯಾಗಿತ್ತು.
ಆ ಯಾತನೆಯ ಕ್ಷಣ ಸಿಡಿಯುವುದ ಬಿಟ್ಟು
ಮತ್ತೇನಿತ್ತು.
ನನ್ನ ಸಿಟ್ಟು, ಗೆಳೆಯನಿಗೆ ಸೈರಣೆಯಾಗಿತ್ತು.

೩.
ಸಮಾಧಾನ ಗೆಳೆಯ
ಸಮಾಧಾನ.
ಇಗೋ ನೀನು ಕೇಳಿದ ಜೀಸಸ್ಸಿನ ಚಿತ್ರ,
ನೋಡು ಅವನ ಮುಳ್ಳಿನ ಕಿರೀಟ
ಸೈರಣೆಯೇ ಕಿರೀಟವಾದ ಆ ಮುಖ.
ನನ್ನಲ್ಲಿ ಅದೆಷ್ಟು ಭಯ ತುಂಬಿತೆಂದರೆ
ಮೈ ಮುಳ್ಳಾಗಿ ನನ್ನನ್ನೇ ಚುಚ್ಚುತ್ತಿತ್ತು.
ಇಲ್ಲ,
ಇದು ನನ್ನ ಸ್ವಾಮಿಯಲ್ಲ.
"ನನಗೆ ನನ್ನ ಸ್ವಾಮಿಯ ಕೊಡಿ"

ಶಾಂತಿಯ, ಪಾರಿವಾಳಗಳು ಹೊತ್ತು ತಂದಿವೆ
ನೂರು ನೂರು ಚಿತ್ರಗಳು
ಅಸಂಖ್ಯ ಭಂಗಿಗಳು, ಅಸಂಖ್ಯಮುಖಗಳು.
ವಿವಿಧ ಚೌಕಟ್ಟಿನಲ್ಲಿ ಬಂಧಿ ಯೇಸು
ಬಂಧಿಸುವ ಚರ್ಚುಗಳು, ಪೂಜಾರಿಗಳು,
ಭಕ್ತಕೋಟಿಗಳು
ನಂಬು
ಇವನೇ ಯೇಸು.
ನಂಬುವ ಆ ಕ್ಷಣ

ಜೀಸಸ್ಸಿನ ಚಿತ್ರ



ಅವನ ಕಣ್ಣುಗಳ ಯಾತನೆ
ದಿಡ್ಡಿಬಾಗಿಲ ಹಾಗೇ ಅಡ್ಡ ನಿಂತು
ನಾನು ನುಡಿಯದವನಾಗಿ...,

೪

ನಾನು ನುಡಿಯದವನಾಗಿ
ನುಡಿವ ಏಸುವಿನೆದುರು
ಯಾತನೆಯೇ ಹುಟ್ಟಾಗಿ
ಹುಟ್ಟೇ ಸಾಕಪ್ಪಾಗಿ
ಹೊತ್ತ, ಆ ಹೊರೆ ಶಿಲುಬೆ

ಶಿಲುಬೆಯ ಮೇಲೆ ಎಷ್ಟೊಂದು ಮುಖಗಳು
ಆ ಮುಖಗಳ ಪ್ರತಿಫಲಿಸುವ ಕನ್ನಡಿ
ನೌಕಾಲಿಯ ನರರ ಕಾಡುಗಳಲ್ಲಿ ತಿರುಗುವ
ತಿರುಬೋಕಿ

ಆ ತಿರುಪೆಯವ
ಹರಿದ ಬಟ್ಟೆಯ ಏಕವಸ್ತ್ರದ ನಿವಸ್ತ್ರ ಸಂತನ
ಕಣ್ಣುಗಳಲ್ಲಿ
ನನ್ನ ಸ್ವಾಮಿಯ ಬೆಳಕು ಬೆಳಗುತ್ತಾ
ಏಸು ಸ್ವಾಮಿ ತೆವಳುತ್ತಾ..."

○ ಜಿ. ಶ್ರೀನಿವಾಸ್‌ಕುಮಾರ್

ಕರ್ನಾಟಕದ ರಾಜಕೀಯ ಹಿಂದೆಂದೂ ಕಾಣದಷ್ಟು ಅಧಃಪತನವನ್ನು ಈಗ ಕಂಡಿದೆ. ಬಹುತೇಕ ಎಲ್ಲ ಪ್ರಮುಖ ಪಕ್ಷಗಳೂ ಯಾವುದೇ ರಾಜಕೀಯ ತತ್ವ-ಸಿದ್ಧಾಂತಗಳಿಗೂ ಬದ್ಧವಾಗದೇ ಅಧಿಕಾರ ಲಾಭಕೋರತನವನ್ನೇ ಗುರಿಯಾಗಿಸಿಕೊಂಡಿವೆ. ಹಾಗಾಗಿ ರಾಜ್ಯದ ರಾಜಕೀಯ ನಗೆಪಾಟಲಿಗೆ ಗುರಿಯಾಗಿದೆ. ಸುಳ್ಳರ ಸಂತೆಯಾಗಿದೆ. ಪ್ರಾಮಾಣಿಕ ಮತ್ತು ಪ್ರಜ್ಞಾವಂತ ರಾಜಕೀಯ ಇಲ್ಲಿ ಸಾಧ್ಯವೇ ಇಲ್ಲ ಎಂಬ ಹತಾಶೆ ಜನರಲ್ಲಿ ಮೂಡಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯ ಸ್ಥಿತಿ-ಗತಿ ಕುರಿತು ಗಂಭೀರ ಚರ್ಚೆಯನ್ನು 'ಸಂವಾದ' ಕೈಗೊಳ್ಳುತ್ತಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರು ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಉಳಿದವುಗಳನ್ನು ಮುಂದೆ ಪ್ರಕಟಿಸಲಾಗುವುದು. ಓದುಗರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು:

೧. ಕರ್ನಾಟಕದ ಸಧ್ಯದ ರಾಜಕೀಯ ಹಿಂದೆಂದೂ ಕಾಣದ ದುಃಸ್ಥಿತಿಗೆ ಇಂದು ಬಂದು ನಿಂತಿದೆ. ಇಂಥ ಅಧಃಪತನಕ್ಕೆ ನೀವು ಕಂಡುಕೊಳ್ಳುವ ಕಾರಣಗಳೇನು?

೨. ಜಾತ್ಯಾತೀತ ತೃತೀಯ ರಾಜಕೀಯ ಶಕ್ತಿಯಂತಿದ್ದ ಜೆಡಿ(ಎಸ್) ಪಕ್ಷದ ನೈತಿಕ ಕುಸಿತ ದ್ವಿಪಕ್ಷ ಪದ್ಧತಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆಯೇ?

೩. ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಬೇಕೆಂಬ ಆಶಯ ನಿರಂತರವಾಗಿದ್ದರೂ ಅದು ಸಾಧ್ಯವಾಗದಿರುವುದಕ್ಕೆ ನೀವು ಗುರುತಿಸುವ ಕಾರಣಗಳೇನು?

೪. ಜನಪರ ಚಳವಳಿಗಳು ಅಧಿಕಾರ ರಾಜಕಾರಣದಲ್ಲಿ ಸಮರ್ಥ (ನಿರ್ಣಾಯಕ) ಪಾತ್ರ ನಿರ್ವಹಿಸುವಲ್ಲಿ ಸೋಲುತ್ತಿರುವುದೇಕೆ?

೫. ತಳಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಇದೆಯಾ? ಬಿ.ಎಸ್.ಪಿ, ಸರ್ವೋದಯ ಕರ್ನಾಟಕ ಪಕ್ಷ, ಆರ್.ಪಿ.ಐ ಇವೇ ಮೊದಲಾದ ಪಕ್ಷಗಳ ಮುಂದಿನ ದಾರಿ ಮತ್ತು ಗುರಿಗಳನ್ನು ನೀವು ಹೇಗೆ ಮುಂಗಾಣುತ್ತೀರಿ?

೬. ಕರ್ನಾಟಕದ ಮುಂದಿನ ರಾಜಕಾರಣ ಹೇಗಿರಬೇಕೆಂದು ನೀವು ಬಯಸುತ್ತೀರಿ?

ತತ್ವಬದ್ಧ ರಾಜಕಾರಣ ಬಯಕೆ

ಡಾ॥ ನಾ. ಡಿಸೋಜ

ಸಾಹಿತಿ, ಚಿಂತಕ



೧. **ಸು**ಮಾರು ೨೦-೨೫ ತಿಂಗಳುಗಳ ಹಿಂದೆ ಕಾಂಗ್ರೆಸಿನ ಜೊತೆಯಲ್ಲಿ ಏನು ಜೆ.ಡಿ(ಎಸ್) ಕೈ ತೆಗೆದು [illegible] ಕೈಜೋಡಿಸಿಕೊಂಡು ಸರಕಾರ ಮಾಡುವ ಯತ್ನ ಮಾಡಿತೋ ಅಲ್ಲಿಂದಲೇ ಜೆ.ಡಿ(ಎಸ್)ನ ಪತನ ಪ್ರಾರಂಭವಾಯಿತು. ಕೋಮು ಭಾವನೆಗಳನ್ನ ಕೆರಳಿಸುವುದರ ಮೂಲಕ ಸದಾ ರಾಜಕೀಯ ಗದ್ದುಗೆಯ ಮೇಲೆ ಕಣ್ಣಿರಿಸಿಕೊಂಡಿರುವ ಬಿಜೆಪಿ ಯತ್ನ ಒಂದು ಕಡೆ ಫಲಕಾರಿಯಾದರೆ, ಅಧಿಕಾರ ಲಾಭಕೋರತನವನ್ನೇ ಗುರಿಯಾಗಿರಿಸಿಕೊಂಡ ಕುಮಾರ ಸ್ವಾಮಿ ಮತ್ತು ಅವರ ಪರಿವಾರ ತಮ್ಮ ಮಹತ್ವಾಕಾಂಕ್ಷೆಯನ್ನ ಈಡೇರಿಸಿಕೊಂಡು ಇಂದಿನ ಅಧಪತನಕ್ಕೆ ಕಾರಣವಾಯಿತು ಎಂದು ಹೇಳಬಹುದು. ಕೊಟ್ಟ ಮಾತನ್ನ ಉಳಿಸಿಕೊಳ್ಳಲಾಗದೇ ಹೋದದ್ದು ಕೂಡ ಇದಕ್ಕೆ ಕಾರಣ.

೨. ಈಗಾಗಲೇ ಎಂ.ಪಿ. ಪ್ರಕಾಶ್ ಅವರು ಜೆ.ಡಿ.(ಎಸ್) ಅನ್ನು ತೊರೆಯುವ ನಿರ್ಧಾರ ಮಾಡಿದ್ದಾರೆ. ಜಾತ್ಯತೀತ ತತ್ವಗಳಲ್ಲಿ ನಂಬಿಕೆ ಇರಿಸಿಕೊಂಡಿರುವ ಜೆಡಿ(ಎಸ್) ಸದಸ್ಯರು ಎಲ್ಲೋ ಒಂದು ಕಡೆ ತಮಗೆ ಅಧಿಕಾರ ಸಿಗಬಹುದು ಅನ್ನುವ ಕಾರಣಕ್ಕೆ ಈ ಪಕ್ಷಕ್ಕೆ ಜೋತು ಬಿದ್ದಿದ್ದಾರಲ್ಲದೆ, ಪಕ್ಷದ ಮೇಲೆ ಯಾರಿಗೂ ನಿಜವಾದ ಅಭಿಮಾನ ಇರುವಂತಿಲ್ಲ. ಮುಂದಿನ ದಿನಗಳಲ್ಲಿ ಜೆಡಿ(ಎಸ್) ಕೇವಲ ಅಪ್ಪ ಮಕ್ಕಳ ಪಕ್ಷವಾಗಿ ಉಳಿದರೂ ಅಚ್ಚರಿ ಪಡಬೇಕಾಗಿಲ್ಲ. ಕಾಂಗ್ರೆಸ್ ದುರ್ಬಲವಾಗಿರುವಾಗ, ಬಿಜೆಪಿಗೆ ಒಳ್ಳೆಯ ಹೆಸರು ಇಲ್ಲದಿರುವಾಗಿ ಜೆಡಿ(ಎಸ್) ಪ್ರಬಲ ಪಕ್ಷವಾಗಿ ಬೆಳೆಯಲು ಅವಕಾಸವಿತ್ತು. ಆದರೆ ಅದು ತನ್ನ ಮೂರ್ಖತನದಿಂದ ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿ ಕೊಂಡಿದೆ. ಈ ಕಾಂಗ್ರೆಸ್ಸಿನ ಮುಂದೆ ಒಂದು ಸವಾಲಿದೆ. ಅದನ್ನು ಸ್ವೀಕರಿಸುವ ಶಕ್ತಿ ಆ ಪಕ್ಷಕ್ಕೆ ಬರಬೇಕಾಗಿದೆ.

೩. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಬೇಕಾದ ಆವಶ್ಯಕತೆ ಈಗ ಅಧಿಕವಾಗಿದೆ. ನಮ್ಮ ಮುಂದಿರುವ ದಾರಿ ಇದೊಂದೇ ಕೂಡ. ಆದರೆ ಈ ಕೆಲಸ ಆದೀತೆ ಎಂಬುದು ಅನುಮಾನ. ನಮಗೆ ಪ್ರಜಾಪ್ರಭುತ್ವವೇ ಮುಖ್ಯ ವಾಗಬೇಕಲ್ಲದೆ ಬೇರೆ ಅಲ್ಲ. ಆದರೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೂ ಕೂಡ ಎಲ್ಲೋ ಒಂದು ಕಡೆ ಅಧಿಕಾರ, ಮಂತ್ರಿ ಪದವಿ, ಇತ್ಯಾದಿಗಳ ಮೇಲೆ ಕಣ್ಣಟ್ಟಿರುವುದು ಈ ಎರಡೂ ಶಕ್ತಿಗಳ ಒಗ್ಗೂಡುವಿಕೆಗೆ ಅಡ್ಡವಾಗಿದೆ ಏನೋ ಅನಿಸುತ್ತದೆ.

೪. ಚಳವಳಿಗಳಲ್ಲಿ ಹಿಂದಿನ ಬಿಗಿ, ಚಳವಳಿಗಳನ್ನ ನಡೆಸುವ ನಾಯಕರಲ್ಲಿ ನಿಜವಾದ ಕಳಕಳಿ ಕಂಡು ಬರುತ್ತಿಲ್ಲ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಏನು ಛಲ. ತ್ಯಾಗ, ಹಟ ನಮ್ಮ ಜನರಲ್ಲಿ ಇತ್ತು. ಇದು ಇಂದು ಕಾಣೆಯಾಗಿದೆ. ಎಲ್ಲರೂ ಇದು ನಮಗೆ ಯಾಕೆ ಬೇಕು ಅನ್ನುವ ಮನೋಭಾವವನ್ನ ತಾಳಿದ್ದಾರೆ. ಜೊತೆಗೆ ಯಾವುದೋ ಆಸೆ ಇವರನ್ನ ಹೋರಾಟಗಳಲ್ಲಿ ತೊಡಗಿ ಕೊಳದಂತೆ ತಡೆಯುತ್ತಿದೆ. ಜನಪರ ಚಳವಳಿಗಳಂತೂ ತಮ್ಮ ಹಿಡಿತವನ್ನ ಕಳೆದುಕೊಂಡಿವೆ. ಸಾಮಾನ್ಯ ಜನರಿಗೆ ಆಸಕ್ತಿ ಇದ್ದರೂ ಅವರನ್ನ ಒಗ್ಗೂಡಿಸುವ ನಾಯಕರಿಲ್ಲದಿರುವುದು ಒಂದು ದುರಂತ.

೫. ಈ ದೇಶದ ರೈತರು. ದಲಿತರು, ಮಹಿಳೆಯರು ಮನಸ್ಸು ಮಾಡಿದರೆ ಒಂದು ಶಕ್ತಿಯಾಗಿ ನಿಲ್ಲುವ ಸಾಧ್ಯತೆ ಇದೆ. ಆದರೆ ಇವರಲ್ಲಿ ಸಂಘಟನೆಯ ಕೊರತೆ ಎದ್ದು ಕಾಣುತ್ತಿದೆ. ಪರಸ್ಪರ ನಂಬಿಕೆ, ವಿಶ್ವಾಸ, ಏಕತೆಯ ಕೊರತೆಯಿಂದಾಗಿ ಈ ಎಲ್ಲ ಶಕ್ತಿಗಳು ಒಂದಾಗುವುದರಲ್ಲಿ ಸೋಲುತ್ತಿವೆ. ಈ ಎಲ್ಲ ಪಕ್ಷಗಳೂ ಪ್ರಜಾಪ್ರಭುತ್ವವನ್ನೇ ಮುಖ್ಯ ಗುರಿಯಾಗಿ ಇರಿಸಿಕೊಂಡು, ತಮ್ಮ ನಡುವಿನ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳನ್ನು ಮರೆತರೆ ಇದರಿಂದ ದೇಶಕ್ಕೆ ಒಳಿತಾಗುತ್ತದೆ.

೬. ಪ್ರಜಾಪ್ರಭುತ್ವದ ಹಿತವನ್ನ ಕಾಪಾಡುವ, ದಲಿತರ, ರೈತರ, ಮಹಿಳೆಯರ ಪರವಾಗಿರುವ, ಸದಾ ವೈಜ್ಞಾನಿಕವಾಗಿ ಚಿಂತನೆಯನ್ನ ಮಾಡುವ, ಅಮೆರಿಕದಂತಹಾ ಅಪಾಯಕಾರಿ ದೇಶಗಳನ್ನ ದೂರವಿರಿಸುವ, ತನ್ನ ಕಾಲ ಮೇಲೆ ತಾನು ನಿಲ್ಲುವಂತಹ, ಜಾತಿ ಧರ್ಮಗಳನ್ನ ಮನೆಯ ನಾಲ್ಕು ಗೋಡೆಗಳ ಒಳಗೆ ಇರಿಸುವ. ಸರ್ವರಿಗೂ ಸಮಪಾಲು ನೀಡುವಂತಹ, ಗಾಂಧೀಜಿಯವರ ತತ್ವಗಳಿಗೆ ತಿಲಾಂಜಲಿ ನೀಡದ ಒಂದು ರಾಜಕಾರಣ ನಮ್ಮಲ್ಲಿ ಬರಬೇಕು ಎಂಬುದು ನನ್ನ ಬಯಕೆ. ಆದರೆ ಇದು ಕೇವಲ ಬಯಕೆ ಆದೀತೆ? □

ಪ್ರಜಾಪ್ರಭುತ್ವದ ಹಿತವನ್ನ ಕಾಪಾಡುವ, ದಲಿತರ, ರೈತರ, ಮಹಿಳೆಯರ ಪರವಾಗಿರುವ, ಸದಾ ವೈಜ್ಞಾನಿಕವಾಗಿ ಚಿಂತನೆಯನ್ನ ಮಾಡುವ, ತನ್ನ ಕಾಲ ಮೇಲೆ ತಾನು ನಿಲ್ಲುವಂತಹ, ಜಾತಿ ಧರ್ಮಗಳನ್ನ ಮನೆಯ ನಾಲ್ಕು ಗೋಡೆಗಳ ಒಳಗೆ ಇರಿಸುವ, ಸರ್ವರಿಗೂ ಸಮಪಾಲು ನೀಡುವಂತಹ, ರಾಜಕಾರಣ ನಮ್ಮಲ್ಲಿ ಬರಬೇಕು ಎಂಬುದು ನನ್ನ ಬಯಕೆ. ಆದರೆ ಇದು ಕೇವಲ ಬಯಕೆ ಆದೀತೆ?

ಪ್ರಗತಿಶೀಲರ ಮುಂದಿರುವ ಸಮಸ್ಯೆ-ಸವಾಲು

ಎಲ್.ಎನ್. ಗೋಪಾಲಕೃಷ್ಣ
ಸಮಾಜವಾದಿ ಚಿಂತಕ



ರಾಜಕಾರಣ ಚರ್ಚೆ

ಅಧಿಕಾರ ಲಾಲಸೆ, ಗರಿಷ್ಠ ಅನೈತಿಕತೆ ಹಾಗೂ ಸೈದ್ಧಾಂತಿಕ ಖಾಲಿತನಗಳೇ ಕರ್ನಾಟಕದ ಇಂದಿನ ರಾಜಕೀಯ ದುಃಸ್ಥಿತಿಗೆ ಕಾರಣ.

೧. ಕಳೆದ ಮೂವತ್ತೈದು ವರ್ಷಗಳಿಗೂ ಹೆಚ್ಚು ಕಾಲದಿಂದ ರಾಷ್ಟ್ರ ಹಾಗು ರಾಜ್ಯ ರಾಜಕಾರಣ ಹಾಗು ಸಾಮಾಜಿಕ ಚಳವಳಿಗಳನ್ನು ಆಸಕ್ತಿಯಿಂದ ಅವಲೋಕಿಸುತ್ತಿರುವ ನನ್ನ ಮುಂದೆ, ಉತ್ತರಗಳಿಗಿಂತ ಪ್ರಶ್ನೆಗಳೇ ಹೆಚ್ಚಿವೆ. ರಾಜಕೀಯ ಪ್ರಕ್ರಿಯೆ ಅತ್ಯಂತ ಸಂಕೀರ್ಣವಾದುದು. ನೂರಾರು ಅಂಶಗಳು, ಶಕ್ತಿಗಳು ಇಲ್ಲಿ ಡಿಕ್ಕಿ ಹೊಡೆಯುತ್ತವೆ; ಮೇಲಾಟವಾಡುತ್ತವೆ. ಅವುಗಳನ್ನು ವಿಶದೀಕರಿಸಿ, ನಮ್ಮ ಮಿತಿಯಲ್ಲಿ ಅರ್ಥೈಸಿಕೊಂಡು ಹೇಳಲು ದೀರ್ಘ ಲೇಖನವನವನ್ನೇ ಬರೆಯಬೇಕಾದೀತು.

ಆದರೂ, ತತ್‌ಕ್ಷಣಕ್ಕೆ ಹೇಳುವುದಾದರೆ, ಜೆಡಿ(ಎಸ್) ನಾಯಕರ ಅತೀವ ಅಧಿಕಾರ ಲಾಲಸೆ, ಗರಿಷ್ಠ ಅನೈತಿಕತೆ ಹಾಗೂ ಸೈದ್ಧಾಂತಿಕ ಖಾಲಿತನಗಳೇ ಕರ್ನಾಟಕದ ಇಂದಿನ ರಾಜಕೀಯ ದುಃಸ್ಥಿತಿಗೆ ಕಾರಣ.

ಇಂತಹ ಕೆಡುಕುಗಳಿಂದ ಕೂಡಿದ ರಾಜಕಾರಣವು ಭಾರತದ ವಿವಿಧ ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲಿ ಅನೇಕ ಬಾರಿ ನಡೆದಿದೆ. ಇದೇನೂ ಹೊಸದಲ್ಲ ಎಂಬುದನ್ನು ಮರೆಯಬಾರದು.

ಅಂತಿಮವಾಗಿ, ಮತದಾರ ತನಗೆ ಯಾವುದು ಮುಖ್ಯವೆನಿಸುವುದೋ, ಮೌಲಿಕವೆನಿಸುವುದೋ, ಆ ಆಧಾರದ ಮೇಲೆ ಚುನಾವಣೆಗಳಲ್ಲಿ ಉತ್ತರಿಸುತ್ತಾ, ಈ ಕಗ್ಗಂಟುಗಳನ್ನು ತನ್ನದೇ ರೀತಿಯಲ್ಲಿ ಬಿಡಿಸಲು ಪ್ರಯತ್ನಿಸುತ್ತಲೆ ಇದ್ದಾನೆ.

೨. ಈ ಪ್ರಶ್ನೆಗೆ ಉತ್ತರಿಸಲು ಇನ್ನು ಕನಿಷ್ಠ ಎರಡು ಚುನಾವಣೆಗಳಿಗಾಗಿ ಕಾಯಬೇಕಾಗಬಹುದು. ಮುಂದಿನ ಚುನಾವಣೆಗಳಲ್ಲಿ ಜೆಡಿ(ಎಸ್), ಬಿ.ಎಸ್‌ಪಿ. ಬಂಗಾರಪ್ಪನವರ ಗುಂಪುಗಳು ಬಲಗೊಳ್ಳುತ್ತವೆಯೇ ಎಂಬುದರ ಮೇಲೆ ಉತ್ತರ ಸಿಗಬಹುದು. ಜೀವಂತಿಕೆ ಕಳೆದುಕೊಂಡಿರುವ ಕಾಂಗ್ರೆಸ್ ಹಾಗೂ ಏಕಸಂಸ್ಕೃತಿ ಪ್ರತಿಪಾದಿಸುವ ಬಿಜೆಪಿಗಳನ್ನು ನಿರಾಕರಿಸುವ ಸಾಮಾಜಿಕ ಶಕ್ತಿಗಳು ಹಾಗು ರಾಜಕೀಯ ಗುಂಪುಗಳು ದಶಕಗಳಿಂದ ಕರ್ನಾಟಕದಲ್ಲಿ ಸಕ್ರಿಯವಾಗಿವೆ. ಮೂರನೇ ಶಕ್ತಿಯ ರಾಜಕೀಯ ವೇದಿಕೆಗಂತೂ ಕಾಲ ಪಕ್ವವಾಗಿ ವರ್ಷಗಳೇ ಕಳೆದಿವೆ. ಅಂತಹ ವೇದಿಕೆ ಹುಟ್ಟಬೇಕಷ್ಟೆ.

೩. 'ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು' ಎಂದಾಗ ಕಾಂಗ್ರೆಸ್ ಮತ್ತು ಬಿಜೆಪಿ ಬಿಟ್ಟು ಇತರ ಶಕ್ತಿಗಳು ಎಂದು ನಾನು ಭಾವಿಸುತ್ತೇನೆ. ಆ ಶಕ್ತಿಗಳು ಕನಿಷ್ಠ ಕಾರ್ಯಕ್ರಮ ರೂಪಿಸುವುದು ಕಷ್ಟವೇನಲ್ಲ. ಸಮಸ್ಯೆ ಇರುವುದು ಅವುಗಳಲ್ಲಿ ನಾಯಕರಿಗೆ ತಮ್ಮ ಪ್ರಾಮುಖ್ಯತೆ ಮತ್ತು ನಾಯಕತ್ವ ಕಡಿಮೆಯಾಗುತ್ತದೆ ಎಂಬ ಆತಂಕದಲ್ಲಿ. ಎಲ್ಲರೂ ತಮ್ಮತಮ್ಮ ಗುಂಪುಗಳ ನಾಯಕರಾಗಿ ಉಳಿಯಲು ಇಚ್ಛಿಸುತ್ತಾರೆಯೇ ಹೊರತು ಒಗ್ಗೂಡಲು ಇಚ್ಛಿಸುವುದಿಲ್ಲ. ಮುತ್ಸದ್ದಿತನ, ಸಂಯಮಗಳ ಕೊರತೆ ಇದೆ.

೪. ಜನಪರ ಚಳವಳಿಗಳು ರಾಜಕೀಯದಲ್ಲಿ ನಿರ್ಣಾಯಕ ಪಾತ್ರವಹಿಸಬೇಕಾದರೆ ಅವುಗಳಿಗೆ ವ್ಯಾಪಕ ಜನಬೆಂಬಲ ಹಾಗೂ ದೀರ್ಘ ಹೋರಾಟದ ಶಕ್ತಿ ಎರಡೂ ಬೇಕಾಗುತ್ತದೆ. ಹಾಗೆ ಆದಾಗೆಲ್ಲ, ಅವು ರಾಜಕಾರಣದಲ್ಲಿ ಪರಿಣಾಮಕಾರಿ ಪಾತ್ರವನ್ನು ವಹಿಸಿವೆ. ಜೊತೆಗೆ, ಪ್ರತ್ಯೇಕವಾಗಿರುವ ಅವು ಅಷ್ಟರ ಮಟ್ಟಿಗೆ ಕಡಿಮೆ ಪರಿಣಾಮಕಾರಿಯಾಗಿವೆ. ಎಲ್ಲ ಜನಪರ ಚಳವಳಿಗಳು ಒಗ್ಗೂಡಲು ಸೈದ್ಧಾಂತಿಕ ಮುತ್ಸದ್ದಿತನ ಹಾಗೂ ರಾಜಕೀಯ ಮುತ್ಸದ್ದಿತನ ಎರಡೂ ಬೇಕಾಗಿದೆ. ಮೂರನೇ ಶಕ್ತಿಯ ರಾಜಕೀಯ ಪಕ್ಷಗಳಲ್ಲಿನ ವ್ಯಕ್ತಿಪ್ರತಿಷ್ಠೆ, ನಾಯಕತ್ವದ ಸಮಸ್ಯೆಗಳು ಇಲ್ಲಿಯೂ ಇವೆ.

ತಳ ಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಇದೆ. ಕರ್ನಾಟಕ ರಾಜಕಾರಣದ ಇತಿಹಾಸದ ನಡೆಯಲ್ಲಿ ಅದು ಅನಿವಾರ್ಯವಾಗುವ ಘಟ್ಟವನ್ನು ನಾವು ತಲುಪಿದ್ದೇವೆ. ಅದಕ್ಕಾಗಿ ಇನ್ನು ೨-೩ ಚುನಾವಣೆಗಳನ್ನು ಕಾಯಬೇಕಾಗಬಹುದು. ಅದು ಕೇವಲ ಒಂದು ರಾಜಕೀಯ ಅನುಭವವಾಗಿ ಪರ್ಯವಸನ ಹೊಂದುತ್ತದೋ ಅಥವಾ ಕರ್ನಾಟಕದ ಸಮಾಜಕ್ಕೆ ಗಟ್ಟಿಯಾದ ಕೊಡುಗೆ ನೀಡುತ್ತದೋ ಎಂಬುದು ಆ ಸಮುದಾಯಗಳ ರಾಜಕಾರಣದ ಮೇಲೆ ಅವಲಂಬಿತವಾಗಿರುತ್ತದೆ. ಎಲ್ಲ ಪ್ರಗತಿಪರ, ಜನತಾಂತ್ರಿಕ ರಾಜಕೀಯ ಸಂಘಟನೆಗಳು ಒಗ್ಗೂಡಿ ಮೂರನೇ ಶಕ್ತಿ ರೂಪಿಸಬೇಕು. ಆದರೆ ಅದಕ್ಕೆ ಅಗತ್ಯವಾದ ಕೊಡು-ಕೊಳ್ಳುವ ಮನೋಭಾವ ತುಂಬಾ ಅಗತ್ಯ.

ಅಧಿಕಾರ ರಾಜಕಾರಣದ ಅಸ್ತಿತ್ವಕ್ಕೆ ಸವಾಲಾದಾಗ ಅಥವಾ ಚುನಾವಣಾ ರಾಜಕೀಯದಲ್ಲಿ ಸೋಲಾಗುತ್ತದೆ ಎಂದು ಭಾವಿಸಿದಾಗ ಮಾತ್ರ ಅಧಿಕಾರ ರಾಜಕಾರಣಿಗಳು ಜನಪರ ಚಳವಳಿಗಳಿಗೆ ಹೆದರುತ್ತಾರೆ. ಬಹುಶಃ ಈಗ ಅಂತಹ ವಾತಾವರಣವನ್ನು ನಿರ್ಮಿಸುವಲ್ಲಿ ಜನಪರಚಳುವಳಿಗಳು ವಿಫಲರಾಗಿರುವುದರಿಂದ, ಅವು ಪರಿಣಾಮಕಾರಿಯಾಗುತ್ತಿಲ್ಲ.

೫. ತಳ ಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಇದೆ. ಕರ್ನಾಟಕ ರಾಜಕಾರಣದ ಇತಿಹಾಸದ ನಡೆಯಲ್ಲಿ ಅದು ಅನಿವಾರ್ಯವಾಗುವ ಘಟ್ಟವನ್ನು ನಾವು ತಲುಪಿದ್ದೇವೆ. ಅದಕ್ಕಾಗಿ ಇನ್ನು ಎರಡು-ಮೂರು ಚುನಾವಣೆಗಳನ್ನು ಕಾಯಬೇಕಾಗಬಹುದು. ಅದು ಕೇವಲ ಒಂದು ರಾಜಕೀಯ ಅನುಭವವಾಗಿ ಪರ್ಯವಸನ ಹೊಂದುತ್ತದೋ ಅಥವಾ ಕರ್ನಾಟಕದ ಸಮಾಜಕ್ಕೆ ಗಟ್ಟಿಯಾದ ಕೊಡುಗೆ ನೀಡುತ್ತದೋ ಎಂಬುದು ಆ ಸಮುದಾಯಗಳ ರಾಜಕಾರಣದಸೈದ್ಧಾಂತಿಕದರ್ಶನದ ಮೇಲೆ ಅವಲಂಬಿತವಾಗಿರುತ್ತದೆ.

ಎಲ್ಲ ಪ್ರಗತಿಪರ, ಜನತಾಂತ್ರಿಕ ರಾಜಕೀಯ ಸಂಘಟನೆಗಳು ಒಗ್ಗೂಡಿ ಮೂರನೇ ಶಕ್ತಿ ರೂಪಿಸಬೇಕು. ಆದರೆ ಅದಕ್ಕೆ ಅಗತ್ಯವಾದ ಕೊಡು-ಕೊಳ್ಳುವ ಮನೋಭಾವ, ಮುತ್ಸದ್ದಿತನ ತಾಳ್ಮೆ, ಕನಿಷ್ಠ ೧೦-೧೫ ವರ್ಷಗಳ ಕಾಯುವಿಕೆಗಳಿಗೆ ಈ ಸಂಘಟನೆಯ ನಾಯಕರು ಸಿದ್ಧರಿದ್ದಾರೆಯೇ ಎಂಬುದೇ ಪ್ರಶ್ನೆ.

೬. ಮೇಲಿನ ನನ್ನ ಮಾತುಗಳು ಈ ಪ್ರಶ್ನೆಗೆ ಉತ್ತರಿಸಿವೆ. ಎಂದು ಭಾವಿಸುತ್ತೇನೆ. ಜೊತೆಗೆ, ರಾಜಕಾರಣದಲ್ಲಿ ಹಣದ ಪ್ರಭಾವ ಕಡಿಮೆಯಾಗಬೇಕಾಗಿದೆ; ವಿಕೇಂದ್ರೀಕೃತ ಜನಭಾಗವಹಿಸುವಿಕೆಯ ಜನತಂತ್ರಕ್ಕೆ ಒತ್ತು ಸಿಗಬೇಕಿದೆ. ಸಮಾಜದಲ್ಲಿನ ಕೆಡುಕುಗಳು ರಾಜಕಾರಣದಲ್ಲಿ ಕಾಣುವ ಕೆಡಕುಗಳನ್ನು ಮರುಗಟ್ಟಿಗೊಳಿಸುವುದರಿಂದ, ಸಮಾಜದ ನೈತಿಕತೆ ಹಾಗೂ ಮಾನವೀಯತೆಯನ್ನು ಗಟ್ಟಿಗೊಳಿಸುವ ಸಾಮಾಜಿಕ ಚಳವಳಿಗಳ ಅಗತ್ಯ ಇಂದು ಹೆಚ್ಚಾಗಿದೆ. ಅರವತ್ತರ ದಶಕದಲ್ಲಿ ಸಿದ್ಧಗೊಂಡ 'ಪ್ರಗತಿಶೀಲ' ಸೈದ್ಧಾಂತಿಕ ನಿಲುವುಗಳು, ನೀತಿ, ಕಾರ್ಯಕ್ರಮಗಳನ್ನು ಪುನರ್ಮೌಲ್ಯ ಮಾಡದಿದ್ದರೆ, ಪ್ರಗತಿಪರರು ಅಪ್ರಸ್ತುತವಾಗುತ್ತಾ ಹೋಗುವ ಅಪಾಯವೂ ಇದೆ... ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಆದ್ದರಿಂದಲೇ, ಈ ಉತ್ತರಪಟ್ಟಿಯ ಮೊದಲಲ್ಲಿ ಹೇಳಿದಂತೆ, ನೀವು ಕೇಳಿದ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ, ವಿಷಯಗಳನ್ನು ವಿಶದೀಕರಿಸುತ್ತಾ ಒಂದು ಪ್ರಬಂಧವನ್ನೇ ಬರೆಯಬೇಕಾಗುತ್ತದೆ.

ಕಳೆದ ಮೂವತ್ತೈದು ವರ್ಷಗಳ ರಾಷ್ಟ್ರ, ರಾಜ್ಯ ರಾಜಕಾರಣ ಹಾಗೂ ಜನಪರ ಚಳವಳಿಯ ಸ್ಥಿತ್ಯಂತರಗಳು ಕೆಲೈಡೋಸ್ಕೋಪಿನಲ್ಲಿ ಕಾಣುವ ವಿನ್ಯಾಸಗಳಂತೆ, ಹೊಸ ಹೊಸ ಅರ್ಥಗಳನ್ನೇ ಹೊಳೆಯಿಸುತ್ತವೆ. □

ಚಳುವಳಿಗಳು ವಸ್ತುನಿಷ್ಟವಾಗಿ ಸ್ವ-ಅವಲೋಕನ ಮಾಡಿಕೊಂಡಿಲ್ಲ

ರಾಜಕಾರಣ ಚರ್ಚೆ

ದು. ಸರಸ್ವತಿ
ಸಾಹಿತಿ, ಚಿಂತಕಿ

೧. ಕರ್ನಾಟಕದ ಅಧಿಕಾರ ರಾಜಕೀಯ ದುಃಸ್ಥಿತಿಗೆ ಬಂದು ನಿಂತಿದೆ ಎನ್ನುವುದು ಹೆಚ್ಚು ಸೂಕ್ತ. ಅಧಿಕಾರವೆಂದರೆ ಜನರನ್ನು ಆಳಲು ನೀಡುವ ಪರವಾನಿಗೆ ಅಲ್ಲ.

ಅಧಿಕಾರ ರಾಜಕೀಯವೆಂದರೆ ಜನಸಮುದಾಯದ ಪ್ರತಿನಿಧಿಗಳು, ಜನಪರನೀತಿಗಳನ್ನು ಜಾರಿಗೊಳಿಸುವ ವ್ಯವಸ್ಥೆ ಅಷ್ಟೆ. ಆಯ್ಕೆಯಾದವರು ಪ್ರತಿನಿಧಿಗಳಾಗುವುದಕ್ಕಿಂತ ಆಳುವ ಆಧುನಿಕ ಧಣಿಗಳಾಗಿದ್ದರಿಂದಲೇ ಜನರ ಆಶಯಗಳು ಈಡೇರಲೇ ಇಲ್ಲ.

ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ನವರಾಜಕೀಯ ಪ್ರಜ್ಞೆ ರೂಪುಗೊಂಡಿದ್ದೇ ಮೇಲ್ಜಾತಿ, ಮೇಲ್ವರ್ಗದ ಜನರು ಹಾಗೂ ಭೂಮಾಲೀಕರಿಂದ. ಹಾಗಾಗಿ, ವಸಾಹತುಶಾಹಿ ರಾಜಪ್ರಭುತ್ವ, ಊಳಿಗಮಾನ್ಯ ಪದ್ಧತಿಯಿಂದ ಸಮಾನತೆ ಆಧರಿಸಿದ ಪ್ರಜಾತಂತ್ರದತ್ತ ನಾಡನ್ನು ನಡೆಸುವಂತಹ ಅವಕಾಶವನ್ನು ರಾಜಕೀಯ ಸ್ವಾತಂತ್ರ್ಯ ತಂದುಕೊಟ್ಟರೂ ಅದು ಯಶಸ್ವಿಯಾಗಲಿಲ್ಲ.. ಆ ವರ್ಗವು ಜನಸಮುದಾಯದ ಆಶಯಕ್ಕೆ ತಕ್ಕಂತೆ ನೀತಿ ರೂಪಿಸುವ ಮೂಲಕ (ರೂಪಿಸುವ ಸಾಧ್ಯತೆ ಇದ್ದಂತಹವರ ಪ್ರಯತ್ನಗಳನ್ನು ಮುರಿದಿದೆ.) ಪ್ರಜಾತಂತ್ರವನ್ನು ಜನಸಮುದಾಯದ ಭಾಗವಾಗಿಸಲಿಲ್ಲ. ಭ್ರಷ್ಟಾಚಾರ ಮಾತ್ರ ಜಾರಿಯಾಯಿತು.

ಹೆಸರಿಗೆ ಪ್ರಜಾಪ್ರಭುತ್ವವೆನಿಸಿಕೊಂಡರೂ ವಂಶಪಾರಂಪರ್ಯ ರಾಜಕಾರಣವೇ ಮುಂದುರೆದಿರುವುದೂ ಇದಕ್ಕೆ ಕಾರಣವಾಗಿದೆ.

ಜನ ಪ್ರತಿನಿಧಿಗಳು ತಾವು ಪ್ರತಿನಿಧಿಸುವ ಕ್ಷೇತ್ರದ ಸಮಗ್ರ ತಿಳುವಳಿಕೆ, ಅಲ್ಲಿನ ಜನರ ಬದುಕಿಗೆ ತಕ್ಕ ನೀತಿ ರೂಪಿಸುವ ಅರಿವು, ಇಚ್ಛೆ ಇರುವವರಿಗಿಂತ, ಈ ನಾಡಿನ ಜನರ ಜೀವನದ ನಾಡಿ ಮಿಡಿತಗಳನ್ನೇ ತಿಳಿಯದ ವರ್ಗದ ಜನರೇ ಜಾತಿ, ಹಣ ಬಲದಿಂದಾಗಿ ಅಧಿಕಾರ ರಾಜಕೀಯದಲ್ಲಿ ನಿರತರಾಗಿದ್ದಾರೆ. ಜನರ ಒಡನಾಡಿಗಳಾಗಿದ್ದ ಕಾರಣಕ್ಕಷ್ಟೇ ಆಯ್ಕೆಯಾಗಿ ಹೋದಂತವರ ಕುರುಹನ್ನು ವಿಧಾನಸೌಧದ ಕಂಭಗಳೇ ಮರೆತು ಹೋಗಿರಬಹುದು.

೨. ಜಾತ್ಯತೀತ ಜನತಾದಳಕ್ಕೆ 'ಜಾತ್ಯತೀತ' ಎಂಬುದು ಆದರ ಪ್ರಣಾಳಿಕೆಯ ತಾಂತ್ರಿಕ ಶಬ್ದ ಮಾತ್ರವೇ ಆಗಿತ್ತು. ಆದ್ದರಿಂದ ಆ ಪಕ್ಷವನ್ನು ಜಾತ್ಯತೀತ ಶಕ್ತಿ ಎಂದು ಭಾವಿಸುವುದೇ ತಪ್ಪು. ಪ್ರಬಲ ಜಾತಿಗೆ ಸೇರಿದ, ಶ್ರೀಮಂತ ಕುಟುಂಬವೇ ಅಧಿಕಾರ ಕೇಂದ್ರವಾಗಿರುವ ಆ ಪಕ್ಷದಲ್ಲಿ ಜಾತ್ಯತೀತತೆಗೆ ಮೂಲಾಧಾರವಾದ ಪ್ರಜಾಸತ್ತಾತ್ಮಕ ಮೌಲ್ಯಗಳೇ ಇಲ್ಲ. ಜಾತ್ಯತೀತತೆಯನ್ನು ಆಚರಣೆಗೆ ತರುವ ಯಾವುದೇ ಕಾರ್ಯತಂತ್ರಗಳೂ ಅಲ್ಲಿಲ್ಲ. ದೇವೇಗೌಡರು ಜಾತ್ಯತೀತತೆಯ ಕುರಿತು ಮಾತನಾಡಿದ್ದಾರಷ್ಟೆ. ಅವರೊಬ್ಬ ಪ್ರಬಲ ಜಾತಿಯ ಮುಖಂಡರೇ ಹೊರತು ಈ ನಾಡಿನ ಜನಮಾನಸದ ನಾಯಕರಲ್ಲ. ಮುಖ್ಯ ಮಂತ್ರಿಯ ಪಟ್ಟವನ್ನು ಪಕ್ಕಕ್ಕಿಟ್ಟು ಬಿಜೆಪಿ ಮತ್ತು ಜೆಡಿಎಸ್‌ನ ಸದಸ್ಯರು ಮತ್ತು ಅವರ ಹತ್ತಿರ, ದೂರದ ಸಂಬಂಧಿಗಳು ಸರ್ಕಾರ ರಚನೆಯಾದ ದಿನದಿಂದ ಇಪ್ಪತ್ತು ತಿಂಗಳು ಮಾಡಿರುವ ಲೂಟಿಯ ವಿವರವನ್ನು ಇವರು ನಾಡಿನ ಜನತೆಯ ಮುಂದಿಡುವ ಧೈರ್ಯ ಮಾಡಿದರಾದರೆ ಓಹೋ ಅವರಲ್ಲೂ ನೈತಿಕತೆ ಇದೆ ಎನ್ನಬಹುದೇನೋ.

೩. ನಮ್ಮ ನಮ್ಮ ಅನನ್ಯತೆಗಳನ್ನು ಇಟ್ಟುಕೊಂಡೇ ಸಮಾನ ಉದ್ದೇಶಕ್ಕಾಗಿ ಹಾಗೂ ಮನುಷ್ಯರ ಘನತೆಯ ಬದುಕಿಗಾಗಿ ಮತ್ತು ಮನುಷ್ಯತ್ವದ ಉನ್ನತಿಗಾಗಿ ಒಗ್ಗೂಡುವುದು ಅತ್ಯಗತ್ಯ. ಇಂತಹ ಒಕ್ಕೂಟ ಎಷ್ಟು ಅನಿವಾರ್ಯ, ಅಗತ್ಯವೆಂದರೆ ಮನುಷ್ಯರ ಸಹಬಾಳ್ವೆಯಷ್ಟು, ಗಾಳಿ, ನೀರು, ಮಣ್ಣು ಎಂಬ ಜೀವಸತ್ವ ಸೇರಿ ಪ್ರಕೃತಿಯಾಗಿರುವಷ್ಟೆ ಸಹಜವಾಗಿ ಎಲ್ಲ ಮಜಲಿನ ದುಡಿಯುವ ವರ್ಗದ ಜನ ಒಗ್ಗೂಡಬೇಕಾಗಿರುವುದು ಇಂದಿನ ದರ್ದು. ಇಂತಹ ಒಗ್ಗೂಡುವಿಕೆಗೆ ವೈರಿಗಾಗಿ ಕಾಯುವ ಅಗತ್ಯವಿಲ್ಲ.

ಒಗ್ಗೂಡದಿರುವುದಕ್ಕೆ ವ್ಯಕ್ತಿಗಳ ಅವಕಾಶವಾದಿತನ, ಸ್ವಾರ್ಥ, ಪ್ರತಿಷ್ಠೆಗಳೇ ಕಾರಣ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಗಿಂತಲೂ ego-fightಗಳೇ ಸಿಡಿದುಹೋಗುವುದಕ್ಕೆ ಕಾರಣವಾಗಿವೆ.

ಸೀಮಿತ ಅಜೆಂಡಾಗಳಿಗೆ ಚುರುಕಾಗಿರುವಷ್ಟು ಸಂಘಟಿತ ಅಜೆಂಡಾಗಳಿಗೆ ಸಂಘಟನೆಗಳು ಕ್ರಿಯಶೀಲವಾಗಿಲ್ಲ.

ನಮ್ಮ ಅನನ್ಯತೆಗಳ ಚಲನೆ ಒಗ್ಗೂಡುವಿಕೆಯತ್ತ ಸಾಗದೆ ದ್ವೀಪಗಳಂತಾಗಿಬಿಟ್ಟಿದೆ. ಬಲಪಂಥೀಯರ ಕ್ರಿಯೆಗಳಿಗೆ ಪ್ರತಿಕ್ರಿಯೆಯಾಗಿ ಒಕ್ಕೂಟ ಮಾಡಿಕೊಂಡಿದ್ದೇವೆ. ಬಾಬಾಬುಡನ್‌ಗಿರಿಯ ಉದಾಹರಣೆಯನ್ನೇ ತೆಗೆದುಕೊಳ್ಳಿ, ನೂರಾರು ವರ್ಷಗಳಿಂದ ಜಾತ್ಯತೀತತೆಯ ಜೀವಂತ ಸಂಕೇತದಂತಿರುವ ಆ ಸ್ಥಳ ಬಹಳ ಹಿಂದೆಯೇ ನಮ್ಮ ಆಸಕ್ತಿಯ ವಿಷಯ ಏಕಾಗಲಿಲ್ಲ? ಕೋಮುವಾದ ವಿರೋಧಕ್ಕಷ್ಟೆ ಅಲ್ಲದೆ ರೈತರ ಆತ್ಮಹತ್ಯೆ, ಹೆಣ್ಣು ಭ್ರೂಣ ಹತ್ಯೆ, ಮಹಿಳೆಯರ ಮೇಲಿನ ಹಿಂಸೆ, ಸಾರ್ವಜನಿಕ ರಂಗದ ಕಾರ್ಖಾನೆಗಳು ಮುಚ್ಚಿ ಹೋಗಿ ಬೀದೀಪಾಲಾಗಿರುವ ಕಾರ್ಮಿಕರು, ಬಿಡಿಗಾಸಿಗೆ ಕಸ ಬಾಚಿ, ಕಸವಾಗಿಹೋಗುತ್ತಿರುವ ಪೌರ ಕಾರ್ಮಿಕರು, ಕನಿಷ್ಟ ಮಾನವ ಗೌರವವೂ ಸಿಗದ ವೇಶ್ಯಾವಾಟಿಕೆಯಲ್ಲಿರುವ ಹೆಂಗಸರು, ಲೈಂಗಿಕ ಅಲ್ಪಸಂಖ್ಯಾತರು, ಅಸ್ಪೃಶ್ಯತೆಯ ಉರಿಯಲ್ಲಿ ಕರಕಲಾಗುತ್ತಿರುವ ದಲಿತರು, ನಾಳೆಗಳನ್ನು ಹೊಸಕಿಸಿಕೊಂಡ ಮಕ್ಕಳು, ದಿಕ್ಕೆಟ್ಟು ಕಂಗಾಲಾಗಿರುವ ಹೆಸರು ಗುರುತುಗಳೇ ಇಲ್ಲದ ಅನೇಕಾನೇಕ ಸಮುದಾಯಗಳ ಸಲುವಾಗಿ ನಾವೇಕೆ ಒಗ್ಗೂಡಬಾರದು? ಅಲ್ಲಿ ಯಾವ ಅನನ್ಯತೆಯೂ ಅಡ್ಡಿಯಾಗಲಾರದು.

೪. ಸಾಮುದಾಯಿಕ ಆಶಯಗಳಿಗೆ ರೂಪಕವಾಗಿರುವಂತಹ ಜನಪರ ಚಳುವಳಿಗಷ್ಟೆ ನಿರ್ಣಾಯಕ ಪಾತ್ರ ವಹಿಸುವ ಸಾಧ್ಯತೆ ಇರುವುದು.

ಚಳುವಳಿಗಳು ಜನಪರತೆಗಿಂತ ವ್ಯಕ್ತಿ ಕೇಂದ್ರಿತವಾದದ್ದು. ಇಡೀ ಚಳುವಳಿಯನ್ನು ಒಬ್ಬ ವ್ಯಕ್ತಿಗೆ ಸಮೀಕರಿಸುವಂತಹ ಉದಾಹರಣೆಗಳು ನಮ್ಮಲ್ಲಿ ಇವೆ. ಚಳುವಳಿಗಳು ಸಾಮೂಹಿಕ ನಾಯಕತ್ವಕ್ಕೆ ಒತ್ತು ನೀಡದೇ ನಾಯಕರುಗಳನ್ನಷ್ಟೇ ಸೃಷ್ಟಿಸಿತು.

ಚಳುವಳಿಗಳ ಒಳಗೆ ಶ್ರೇಣೀಕರಣವನ್ನು ಮುರಿಯುವ, ಪ್ರಜಾಸತ್ತಾತ್ಮಕತೆಯನ್ನು ಸಾಧಿಸಿಕೊಳ್ಳುವ ಪ್ರಯತ್ನ ಕಾರ್ಯರೂಪದಲ್ಲಿ ಯಶಸ್ವಿಯಾಗದಿದ್ದುದು.

ತಕ್ಷಣದ ಅಜೆಂಡಾಗಳು ಇರಲಿ ಬಿಡಲಿ, ಜನಸಮುದಾಯದೊಟ್ಟಿಗೆ ಒಂದು ಸಾವಯವ, ಕ್ರಿಯಾಶೀಲ ಸಂಬಂಧವನ್ನು ನಿರಂತರವಾಗಿ ಉಳಿಸಿಕೊಂಡು ಬರುವಂತಹ ಕಾರ್ಯಕ್ರಮಗಳು ಚಳುವಳಿಯ ರಚನೆಯೊಳಗೆ ಅಂತರ್ಗತವಾಗಿರಬೇಕು. ಹಾಗಾದರೆ, ಧರಣಿ, ಮುಷ್ಕರ, ಮೆರವಣಿಗೆಗಷ್ಟೇ ಜನರು ಸೀಮಿತವಾದರು.

> **ಜನ ಪ್ರತಿನಿಧಿಗಳು ತಾವು ಪ್ರತಿನಿಧಿಸುವ ಕ್ಷೇತ್ರದ ಸಮಗ್ರ ತಿಳುವಳಿಕೆ, ಅಲ್ಲಿನ ಜನರ ಬದುಕಿಗೆ ತಕ್ಕ ನೀತಿ ರೂಪಿಸುವ ಅರಿವು, ಇಚ್ಛೆ ಇರುವವರಿಗಿಂತ, ಈ ನಾಡಿನ ಜನರ ಜೀವನದ ನಾಡಿ ಮಿಡಿತಗಳನ್ನೇ ತಿಳಿಯದ ವರ್ಗದ ಜನರೇ ಜಾತಿ, ಹಣ ಬಲದಿಂದಾಗಿ ಅಧಿಕಾರ ರಾಜಕೀಯದಲ್ಲಿ ನಿರತರಾಗಿದ್ದಾರೆ. ಜನರ ಒಡನಾಡಿಗಳಾಗಿದ್ದ ಕಾರಣಕ್ಕಷ್ಟೇ ಆಯ್ಕೆಯಾಗಿ ಹೋದಂತವರ ಕುರುಹನ್ನು ವಿಧಾನಸೌಧದ ಕಂಭಗಳೇ ಮರೆತು ಹೋಗಿರಬಹುದು.**

ಸರ್ಕಾರದ ನೀತಿಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ಮತ್ತು ಜನವಿರೋಧಿಯಾಗಿರುವ ನೀತಿಗಳನ್ನು ತಡೆಯಲು ಒತ್ತಡ ಹೇರುವುದರ ಜೊತೆಗೆ ಪರ್ಯಾಯ ನೀತಿಗಳನ್ನು ರೂಪಿಸುವಂತಹ ಪ್ರಯತ್ನಗಳನ್ನು ಚಳುವಳಿಗಳು ಪರಿಣಾಮಕಾರಿಯಾಗಿ ಮಾಡಲಿಲ್ಲ.

ಜನಪರ ಚಳುವಳಿಗಳು ವಸ್ತುನಿಷ್ಠವಾಗಿ ಸ್ವ-ಅವಲೋಕನ ಮಾಡಿಕೊಳ್ಳಲಿಲ್ಲ.

೫. ತಳ ಸಮುದಾಯಗಳು ಅಧಿಕಾರ ರಾಜಕಾರಣದಲ್ಲಿ ವೋಟ್‌ಬ್ಯಾಂಕ್ ರಾಜಕಾರಣಕ್ಕೆ ಸೀಮಿತವಾಗದೇ ಭಿನ್ನವಾದ ಜಾತ್ಯತೀತ ಶಕ್ತಿಯಾಗಿ ಕೆಲಸ ಮಾಡುವ ಸಾಧ್ಯತೆಯೂ ಇದೆ. ಆದರೆ ಜಾತಿ ಸಂಘಟನೆಗಳಾಗಿ ಉಳಿದುಬಿಡುವುದರ ವಿರುದ್ಧ ನಿರಂತರವಾದ ಎಚ್ಚರಿಕೆ ಅಗತ್ಯ.

ಬಿ.ಎಸ್.ಪಿ, ಸರ್ವೋದಯ ಕರ್ನಾಟಕ ಪಕ್ಷ, ಆರ್.ಪಿ.ಐಗಳಂತಹ ತಳಸಮುದಾಯಗಳ ಪಕ್ಷಗಳು.

ಸಮಾನತೆಯನ್ನು ಆಧರಿಸಿದ ಸಾಮೂಹಿಕ ನಾಯಕತ್ವಕ್ಕೆ ಆದ್ಯತೆ ನೀಡಬೇಕು.

ಪಕ್ಷಗಳ ಉದ್ದೇಶ, ಕಾರ್ಯತಂತ್ರಗಳನ್ನು ನಿರ್ಧರಿಸುವ, ಜಾರಿಗೊಳಿಸುವ ಪ್ರಕ್ರಿಯೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಬೇಕು. ಇದು ಸಾಧ್ಯವಾಗುವುದು ಪಕ್ಷದ ರಚನೆ, ಕೆಲಸ ಮಾಡುವ ಶೈಲಿಯಂತಹ ಮೂಲಭೂತ ವಿಷಯಗಳಲ್ಲಿ ಬದಲಾವಣೆ ಮಾಡಿಕೊಂಡಾಗ ಮಾತ್ರ. ಮಹಿಳೆಯರ ಸಂಘಟನೆ ಅತ್ಯಗತ್ಯ. ಮಹಿಳೆಯರು ಒಟ್ಟು ಸಮಾಜದ ಮುಂಚೂಣಿಗೆ ಬಂದಲ್ಲಿ, ಆ ಸಮಾಜ ಬಹುಬೇಗ ಸುಧಾರಿಸುತ್ತದೆ. ಮನೆಯ, ಸಂಘಟನೆಯ, ಪಕ್ಷದ ಹಾಗೂ ದೇಶದ ಆಗುಹೋಗುಗಳಲ್ಲಿ ಮಹಿಳೆಗೆ ಸಮರ್ಪಕವಾದ ಪ್ರಾತಿನಿಧ್ಯ ಅತ್ಯವಶ್ಯ. ಸಮುದಾಯದ ಪ್ರಾತಿನಿಧ್ಯವನ್ನು ಒತ್ತಾಯ ಮಾಡುತ್ತಿರುವಂಥ ಸಂದರ್ಭದಲ್ಲಿ ಸಮುದಾಯದೊಳಗಣ ಮಹಿಳೆಯರನ್ನು ನಿರ್ಲಕ್ಷಿಸಲಾಗದು. ಅಸ್ಪೃಶ್ಯತೆ, ಜಾತೀಯತೆ, ಜನಸಂಖ್ಯಾ ಹೆಚ್ಚಳ, ಶಿಕ್ಷಣದ ಮಹತ್ವ, ಧರ್ಮಾಂತರ, ವತನ್ ಪದ್ಧತಿಯ ರದ್ದತಿ, ಮುಂತಾದ ವಿಷಯಗಳ ಬಗ್ಗೆ ಬರೀ ಪುರುಷರೇ ಚರ್ಚೆ ನಡೆಸಿದರೆ ಸಾಲದು. ಮಹಿಳೆಯರೂ ಪಾಲ್ಗೊಳ್ಳುವಂತಾಗಬೇಕು. ಇದು ಇಬ್ಬರ ಜವಾಬ್ದಾರಿ. ಕೌಟುಂಬಿಕ ಹೊಣೆಗಾರಿಕೆಯನ್ನು ಪೂರ್ತಿಯಾಗಿ ಮಹಿಳೆಯರಿಗೇ ಬಿಟ್ಟುಬಿಡಬಾರದು, ಪುರುಷರೂ ಹೊರೆ ಹೊರಬೇಕು. ಮಕ್ಕಳನ್ನು ಹೆರುವುದಷ್ಟೇ ಅಲ್ಲದೆ ಅವರಿಗೆ ಒಳ್ಳೆ ದಿಕ್ಕನ್ನು ತೋರುವುದು ಇಬ್ಬರ ಹೊಣೆ. ಪತಿ-ಪತ್ನಿ ಉತ್ತಮ ಮಿತ್ರರಂತಿರಬೇಕು. ಪರಸ್ಪರರ ಶ್ರೇಯಸ್ಸಿಗೆ ಇಬ್ಬರೂ ನೆರವಾಗಬೇಕು. "ಮನುಷ್ಯ ಗೌರವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟರೆ ಕುಟುಂಬದ, ಸಮುದಾಯದ, ದೇಶದ ಗೌರವವನ್ನು ಎತ್ತಿ ಹಿಡಿಯುವುದು ಸಾಧ್ಯವಾಗುತ್ತದೆ." ಎಂಬ ಅಂಬೇಡ್ಕರ್‌ರ ಮಾತು ತಳಸಮುದಾಯದ ಸಂಘಟನೆಗಳೂ ಸೇರಿದಂತೆ ಎಲ್ಲಾ ಜನಪರ ಸಂಘಟನೆಗಳ ಕಾರ್ಯಯೋಜನೆಯ ಭಾಗವಾಗಬೇಕು.

ತಳಸಮುದಾಯದ ಪಕ್ಷಗಳು ಸಮುದಾಯದೊಳಗಿನ ಮಧ್ಯಮ ವರ್ಗದ, ಮೇಲ್ವರ್ಗದ, ಬುದ್ಧಿಜೀವಿಗಳ ಕ್ರೋಢೀಕರಣವಾಗಿ ಉಳಿಯದೆ, ತಳಭಾಗದ ಅವಕಾಶವಂಚಿತರನ್ನೂ ಒಳಗೊಂಡು ಅವರನ್ನೂ ಸಾಮಾಜಿಕ ನಾಯಕತ್ವದ ಭಾಗವಾಗಿಸಿಕೊಳ್ಳಬೇಕು.

ಜೀವ ವಿರೋಧಿ, ಸಾಮ್ರಾಜ್ಯಶಾಹಿ, ಲಾಭಕೋರ ಬಂಡವಾಳಶಾಹಿಯ ಮಾರುಕಟ್ಟೆ ಆರ್ಥಿಕತೆ ಬಗ್ಗೆ ಸ್ಪಷ್ಟ ನಿಲುವನ್ನು ಇಟ್ಟುಕೊಳ್ಳಬೇಕು. ಇವರ ಪರ ಆರ್ಥಿಕ ನೀತಿಗೆ ಕೊಡುಗೆ ನೀಡಬೇಕು.

ಸಮಕಾಲೀನ ವಿಷಯಗಳ ಕುರಿತು (ಉದಾಹರಣೆಗೆ: ನಾಗರೀಕ ಅಣು ಒಪ್ಪಂದ) ತಮ್ಮ ನಿಲುವನ್ನು ದಾಖಲಿಸಬೇಕು.

೬. ಕರ್ನಾಟಕದ ಮುಂದಿನ ರಾಜಕಾರಣದಲ್ಲಿ, ಭಿನ್ನಾಭಿಪ್ರಾಯ, ಅನನ್ಯತೆಗಳನ್ನಿಟ್ಟುಕೊಂಡೇ ಒಗ್ಗೂಡಿದ ಜನಪರ ಚಳುವಳಿಗಳು ಸಕ್ರಿಯ ಪಾತ್ರ ವಹಿಸಬೇಕು.

ವ್ಯಕ್ತಿ ಕೇಂದ್ರಿತ, ಅಧಿಕಾರ ಕೇಂದ್ರೀಕರಣಕ್ಕೆ ಅವಕಾಶ ನೀಡದ ಪ್ರಜಾಸತ್ತಾತ್ಮಕವಾದ ಸಾಮೂಹಿಕ ನಾಯಕತ್ವಕ್ಕೆ ಆದ್ಯತೆ ನೀಡುವ ಇರಾದೆ ಇಟ್ಟುಕೊಳ್ಳಬೇಕು.

ಆದ್ಯತೆಯ ಮೇರೆಗೆ ಮಹಿಳೆಯರ ಶಕ್ತಿ, ಚೈತನ್ಯಗಳಿಗೆ ಸೂಕ್ತ Outletನ್ನು ಕಲ್ಪಿಸಬೇಕು.

'ಸರ್ವರಿಗೂ ಸಮಪಾಲು ಸಮಬಾಳು' ಎಂಬುದು ಘೋಷಣೆಯಷ್ಟೇ ಆಗದೆ ಸರ್ವರು ಎಂಬುದು ಹೆಂಗಸರು, ತೋಟಿಗಳು, ಕೂಲಿಗಳು, ಲೈಂಗಿಕ ಕಾರ್ಮಿಕರು, ಲೈಂಗಿಕ ಅಲ್ಪಸಂಖ್ಯಾತರು, ಅಂಗವಿಕಲರು .. ಇನ್ನೂ ಅನೇಕಾನೇಕ ದುಡಿದೂ ಕನಿಷ್ಠ ಮಾನವ ಹಕ್ಕುಗಳೂ ಇಲ್ಲದ ದಮನಿತ, ದಿಕ್ಕೆಟ್ಟ ಸಮುದಾಯಗಳನ್ನೂ ಒಳಗೊಳ್ಳುತ್ತಾ ಹೋಗಬೇಕು.

ಸರ್ವರಿಗೂ ಆಹಾರ, ಆರೋಗ್ಯ, ಉದ್ಯೋಗ, ವಸತಿ, ದಕ್ಕುವಂತಾಗುವ ಸೂಕ್ತ, ಸಮರ್ಥ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ, ಹಸಿವು, ತಾರತಮ್ಯ ಇರುವವರೆಗೂ ಕೋಟ್ಯಾಧೀಶರಾಗುವುದು ವ್ಯಾಧಿ, ಅಪರಾಧವೆಂದು ಪರಿಗಣಿಸುವ ಆತ್ಮಸಾಕ್ಷಿ ಇಟ್ಟುಕೊಳ್ಳಬೇಕು.

ಇಂಟಲೆಕ್ಟ್‌ನ ಬಳಕೆ ಅಗತ್ಯಕ್ಕೆ ಮಾತ್ರ ಸೀಮಿತಗೊಂಡು, ಮಿದುಳು, ಹೃದಯ, ಕೈಗಳಿಂದ ಸಮನ್ವಯಗೊಂಡ ಶಕ್ತಿ ಹಾಗೂ ಸಹನೆ, ಅಂತಃಕರಣಗಳೇ ಜೀವದ್ರವ್ಯವಾಗಿರುವಂತಹ ರಾಜಕಾರಣ ಬೇಕು.

ಇವು ಅಸಾಧ್ಯದ ರಾಜಕಾರಣಗಳೆಂದು ನನಗೆಂದೂ ಅನಿಸಿಲ್ಲ. ಮನುಷ್ಯ ಚೈತನ್ಯದ ಸಾಧ್ಯತೆಗಳ ಬಗ್ಗೆ ನಂಬಿಕೆ ಇರುವ ಯಾರಿಗೂ ಇದು ಅಸಾಧ್ಯವಲ್ಲ. □

ತೃತೀಯಶಕ್ತಿ ಹುಸಿ ಕಲ್ಪನೆ

೧. ರಾಷ್ಟ್ರೀಯತೆಯ ಜೊತೆಗೆ ಉಪರಾಷ್ಟ್ರೀಯತೆಯನ್ನು ರಾಜಕೀಯವಾಗಿ (=ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಪಕ್ಷಗಳೊಂದಿಗೆ ಪ್ರಬಲ ಪ್ರಾದೇಶಿಕ ಪಕ್ಷವನ್ನು) ರೂಪಿಸಿಕೊಳ್ಳದೆ ಹೋದುದೇ ಇಂದಿನ ದುಃಸ್ಥಿತಿಗೆ ಕಾರಣವಾಗಿದೆ.

೨. 'ಜಾತ್ಯತೀತ ತೃತೀಯ ರಾಜಕೀಯ ಶಕ್ತಿ' ಎಂಬುದು ಹುಸಿ ಕಲ್ಪನೆ, ಜಾತಿ ಪದ್ಧತಿ ಮತ್ತು ಆರ್ಥಿಕ ಅಸಮಾನತೆಗಳಿಂದ ಕೂಡಿರುವ ಈ ನೆಲದಲ್ಲಿ ಪ್ರಬಲ ಜಾತಿಗಳು ಮತ್ತು ಮುಂಚೂಣಿ ವರ್ಗದ ಹಿತಾಸಕ್ತಿಗಳೇ ಪ್ರಧಾನವಾಗಿದೆ. ಹಾಗೂ ಇವುಗಳ ನಡುವೆಯೇ ಪ್ರಥಮ-ದ್ವಿತೀಯ-ತೃತೀಯ ಎಂಬ ಶಕ್ತಿ ಸ್ಥಾನಗಳು ಏರಿಳಿತಗಳೊಂದಿಗೆ ನಿರ್ಣಯವಾಗುತ್ತಿದೆ.

೩. ಎಡಪಕ್ಷಗಳು ಅಥವಾ ಪ್ರಜಾಸತ್ತಾತ್ಮಕ ಶಕ್ತಿಗಳು ಕೂಡ ನಮ್ಮ ದೇಶದಲ್ಲಿ ಪ್ರಬಲ ಜಾತಿಗಳು ಮತ್ತು ಮುಂಚೂಣಿ ವರ್ಗದ ಹಿತಾಸಕ್ತಿಗಳಿಗೆ ಒಳಪಟ್ಟಿರುವುದರಿಂದ ಒಂದುಗೂಡುವ ಆಶಯ ಗಗನ ಕುಸುಮವಾಗಿದೆ.

೪. ಜನಪರ ಚಳವಳಿಗಳೆಲ್ಲವೂ (= ಭಾಷೆ-ರೈತ-ಮಹಿಳೆ-ದಲಿತ-ಪರಿಸರ ಮುಂತಾದುವು) ಜಟಕಾ ಕುದುರೆಗಳಂತಾಗದ್ದು ಒಟ್ಟು ಪರಿಣಾಮದಲ್ಲಿ ಜಾತಿ ಪದ್ಧತಿಯ ತದ್ರೂಪುಗಳಾಗಿರುವುದರಿಂದ ಅಧಿಕಾರ ರಾಜಕಾರಣದಲ್ಲಿ ಸಮರ್ಥ (ನಿರ್ಣಾಯಕ) ಪಾತ್ರ ನಿರ್ವಹಿಸುವಲ್ಲಿ ಸೋಲುತ್ತಿವೆ.

೫. 'ಮುಂಚೂಣಿ' ಮತ್ತು 'ಹಿಂಚೂಣಿ' ಎಂಬ ಪ್ರತ್ಯೇಕದಡಗಳು ಏರ್ಪಟ್ಟಿರುವುದರಿಂದ ಕೃಶವಾಗಿ ಹರಿಯುತ್ತಾ, ಇಂಗಿ ಹೋಗುವಂತಿರುವ ಸಾಮುದಾಯಿಕ ಜೀವನವೆಂಬ ನೀರಿಗೆ ಪ್ರತ್ಯೇಕ ದಡಗಳನ್ನು ಮುಳುಗಿಸಿ ಹರಿಯುವಷ್ಟು ಸೆಳವು ಕೂಡಿ ಬಂದಿಲ್ಲ. ಈ ಪ್ರಶ್ನೆಯಲ್ಲಿರುವ ಯಾವೊಂದು ಪಕ್ಷಕ್ಕೂ ಮೇಲಿನ ಎರಡು ಧ್ರುವಗಳನ್ನು ಒಳಗೊಂಡು ಹರಿಯುವ ಶಕ್ತಿಯೇ ಇಲ್ಲ.

೬. ಮುಂಚೂಣಿ ವರ್ಗ ಮತ್ತು ಹಿಂಚೂಣಿವರ್ಗ ಎಂಬ ವಿಭಜನೆಗೆ ಬಲಿಯಾಗದೆ ಎಲ್ಲ ಜಾತಿಗಳು ಮತ್ತು ಎಲ್ಲ ವರ್ಗಗಳನ್ನು ಒಳಗೊಂಡು ಎದುರು ನಿಲ್ಲುವಂಥ ಸಬಲೀಕರಣದ ಪ್ರಾದೇಶಿಕ ಪಕ್ಷವೊಂದರ ರಾಜಕಾರಣ ಇಂದಿನ ಅಗತ್ಯವಾಗಿದೆ.

ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಪಕ್ಷಗಳು ಗೆದ್ದೆತ್ತಿನ ಬಾಲ ಹಿಡಿಯುವಂತೆ, ಪ್ರಬಲ ಪ್ರಾದೇಶಿಕ ಪಕ್ಷಗಳನ್ನುಳ್ಳ ಆಂಧ್ರ ಪ್ರದೇಶ, ತಮಿಳುನಾಡುಗಳಿಗೆ ಕೊಡುವ ಪ್ರಾಶಸ್ತ್ಯ ಮತ್ತು ಕರ್ನಾಟಕದ ವಿಷಯದಲ್ಲಿ ತೋರುತ್ತಿರುವ ಮಲತಾಯಿ ಧೋರಣೆಗಳನ್ನು ಗ್ರಹಿಸಿದರೆ ಇದು ಸ್ಪಷ್ಟವಾಗುತ್ತದೆ. □

ವಿ. ಚಂದ್ರಶೇಖರ ನಂಗಲಿ

ಸಾಹಿತಿ, ಚಿಂತಕ



ದೇವರ ಹೂವು

ಡಾ॥ ಬೆಸಗರಹಳ್ಳಿ ರಾಮಣ್ಣ

"ಕೊ... ಕ್ೋ... ಕ್ೋ..." ಎಂದು ಕೂಗುತ್ತ, ಸ್ವಲ್ಪ ಕುಂಟುತ್ತ, ರೆಕ್ಕೆ ಬಡಿ ಯುತ್ತ ಓಡಿದ 'ಅಗೆಗತ್ತಿ'ನ ಪೊಟ್ಟೆ ಕೋಳಿಯ ಹಿಂದೆಯೇ ಓರಗಿತ್ತಿ ನಿಂಗಕ್ಕ ಆಡಿದ: ಥೂ! ನಿನ್ನ ಹೊಟ್ಟೆ ಹಾಳಾಗ್ಹೋಗ, ಬಂದು ಬತ್ತದ ಮೂಟೆ ಕುಟುಕಿ ಕುಟುಕಿ ತೂತು ಮಾಡಿ ಹೊಟ್ಟೆ ಪಿಣುಗರಿವಂಗೆ ಮುಕ್ಕುತ್ತಿ ಅಲ್ಲ: ನಂಮನೆ ಬತ್ತವೇ ರುಚಿಯೇನೋ ನಿಂಗೆ! ನಿನ್‌ಗೆ ಕೊಕ್ಕರೆ ರೋಗ ಬರಾ... ಕಂಡೋರ ಮನೆ ರಾಗಿ ಬತ್ತ ತಿಂದು ಮೇಲೇರ್ತಾ ಇದ್ದಿಯಾ. ಥೂ! ನಿನ್ನ ಸಾಕದೋರ ಮನೆ ಹಾಳಾಗ್ಹೋಗ... ನಿನ್ನ ತಿಂದೋರ ಹೊಟ್ಟೆ ಒಡಿಯ! ಅಲ್ಲ ನಂಕಂಡೆರೆ ನೆಟಕೆ ಮುರೀತಾರೆ: ನಂಮನೆ ಸೊತ್ತ ತಿನ್ನೋಕೆ ನಾಚ್ಕೆ ಆಗೊದಿಲ್ಲವೇನೋ.." ಕಿವಿ ತೂತಾಗುವ ಮಾತುಗಳು ಚನ್ನಕ್ಕನಿಗೆ ಕುದಿಯುವ ಬೆಲ್ಲದ ಪಾಕ ಮೈಮೇಲೆ ಬಿದ್ದಾಗ ಆಗುವಂತ ಕೋಪ, ನೋವನ್ನುಂಟು ಮಾಡಿದುವು.

ನಿಂಗಕ್ಕನ ಗ್ರಹಚಾರ ಚೆನ್ನಾಗಿತ್ತು.

ಮಗಳ ತಲೆಯನ್ನು ಬಾಚಿ, ಜಡೆ ಹಾಕಿ ಮುಗಿಸಿ, ತೋಟದಿಂದ ಹೂವು ತಂದು ಪೋಣಿಸಿ ಮುಡಿಸಬೇಕು ಎಂದು ಅಂದಾಜು ಮಾಡಿಕೊಳ್ಳುತ್ತ ಮೇಲೇಳುತ್ತಿದ್ದ ಚನ್ನಕ್ಕನ ಬಾಯಿಂದ ಸಿಡಿಯಬೇಕಾಗಿದ್ದ ಮಾತಿನ ಪ್ರವಾಹ, 'ಕಿರುಮನೆ'ಯಲ್ಲಿ ಮಲಗಿರುವ ಅಳಿಯನನ್ನು ನೆನೆದು ಬೆಚ್ಚಿ ನಾಲಿಗೆಯ ತುದಿಯಲ್ಲಿ ಬಂದು ನಿಂತಿತು. ಓರಗಿತ್ತಿಯನ್ನು ಮನಸ್ಸಿನಲ್ಲೇ "ನಿನ್ನ ನಾಲಗೆ ಸೇದು ಹೋಗ... ನನ್ನ ಅಳಿಯ. ನಿನಗೂ ಅಳಿಯ ಅಲ್ವೆ? ಅವನ ಕಿವಿಗೂ ನಿನ್ನ ಯೋಗ್ಯತೆ ಮುಟ್ಟ ಬೇಕಾಗಿತ್ತೆ!" ಎಂದು ಮುಂತಾಗಿ ಬೈದುಕೊಳ್ಳುತ್ತ, ಸೊಪ್ಪಿನ ಮಂಕರಿಯನ್ನು ಕಂಕುಳಲ್ಲಿ ಇರುಕಿಕೊಂಡು ತೋಟದ ಕಡೆಗೆ ನಡೆದಳು.

ನೆನ್ನೆ ಸಂಜೆ ಬಂದು ತನ್ನ ಗಂಡ ಹೊನ್ನಣ್ಣನ ಬಳಿ ಕೇಳಿಕೊಂಡಿದ್ದ ನಂಜಣ್ಣ ರುದ್ರಮ್ಮನ ಪಾಲಿನ ಗದ್ದೆಯಿ ಬತ್ತ ಬಡಿದು ಮುಗಿಸಿ ಆಗಲೇ ಆಳುಗಳೊಡನೆ ಅರ್ಧಕ್ಕಿಂತಲೂ ಜಾಸ್ತಿಯನ್ನು ತೂರಿ ಮುಗಿಸಿ, ಉಳಿದುದನ್ನು ತೂರಿ ಹಸನು ಮಾಡುತ್ತಿರುವುದು, ಮೊರಗಳಿಂದ ಕೆಳಕ್ಕಿಳಿಯುವಾಗ ಗಾಳಿಯ ರಭಸಕ್ಕೆ ತೆರೆ ತೆರೆಯಾಗಿ ಹೊನ್ನಿನ ಪುಡಿಯಂತೆ ಬಳುಕುತ್ತ ಬೀಳುವ ಬತ್ತದ ಕಾಳುಗಳ ಮೊತ್ತ ಇಳಿಬಿಸಿಲಿನಲ್ಲಿ ಒಂದು ಕೂಗಳತೆಯ ದೂರದಿಂದಲೇ ಚನ್ನಕ್ಕನ ಕಣ್ಣಿಗೆ ಬಿದ್ದುವು. ಯಾವಗಲೂ ಪಾಲುದಾರರನ್ನು ಕಣ್ಣಿನ ಮೇಲೆ ಕಣ್ಣಿಟ್ಟು, ಬತ್ತ ಹುಲ್ಲು ಪಾಲಾಗಿ ಮನೆ ಸೇರುವ ತನಕ ಕಾಯುವ ರುದ್ರಮ್ಮನೇ ಕಣದ ಬಳಿ ಇರದಿರುವುದು ಚನ್ನಕ್ಕನಿಗೆ ಆಶ್ಚರ್ಯ ಉಂಟು ಮಾಡಿತು. "ಬೆಟ್ಟ ಸೇರ್ಕೋಂಡ ಮಳೆ ಇವತ್ತು ಯಾವ ದಿಕ್ಕಿನಿಂದ ಬಂದೋ ಕಾಣೆಕನೋ ದೇವರೇ!" ಎಂದುಕೊಳ್ಳುತ್ತಿದಂತೆಯೇ ರುದ್ರಮ್ಮ ತೋಟದ ಬಾಗಿಲಿನಿಂದ ಹೊರಕ್ಕೆ ಬಂದದ್ದು ಮತ್ತಷ್ಟು ಆಶ್ಚರ್ಯದ ಜೊತೆಗೆ ಸಂಶಯವನ್ನು ಮೂಡಿಸಿತು. ರುದ್ರಮ್ಮ ಮಡಿಲಿನಲ್ಲಿ ಏನೋ ಕಟ್ಟಿಕೊಂಡಿರುವುದು ಕಾಣಿಸಿದ ಮೇಲಂತೂ ಸಂಶಯದ ಜೊತೆಗೆ ಕುತೂಹಲವೂ ಕೆರಳಿ ಹೆಜ್ಜೆಗಳನ್ನು ಬಿರುಸು ಮಾಡಿದಳು.

ಕಣಕ್ಕೆ ಅಂಟಿಕೊಂಡ ಹಾಗೆಯೇ ತೋಟ. ಚನ್ನಕ್ಕ ಕಣದ ಬಳಿ ಬರುವ ವೇಳೆಗೆ ಮುಂಚೆಯೇ ಕಣ ಸಮೀಪಿಸಿ ಆಳುಗಳಿಗೆ ಸರಿಯಾಗಿ ತೂರುವಂತೆ 'ಮೇಲ್ವಿಚಾರಣೆ'ಯನ್ನು ವಹಿಸಿಕೊಂಡು, ಕೈ-ಬಾಯಿ ಕುಣಿಸುತ್ತಿದ್ದ ರುದ್ರಮ್ಮ ಅರೆ ಕ್ಷಣ ಬೆಚ್ಚಿದಂತಾಗಿ ನೋಡಿದಳು

"ಯಾರ ಕೇಳಿ ತೋಟಕ್ಹೋಗಿದ್ದಮ್ಮ?"

"ನಿನ್ ತೋಟದಲ್ಲಿ ಏನೂ ದೋಚಕೋಲಿಲ್ಲಕನ, ಸುಮ್ಮನಿರಮ್ಮ... ಪೂಜೆಗೆ ಮೂರು ಹೂವು ಕಿತ್ಕೊಂಡೆ... ಸಂಜೇಗೆಕನಾ"

ಹೂವು ಅನ್ನುವ ಪದ ಕಿವಿಗೆ ಬೀಳುತ್ತಲೇ ಚನ್ನಕ್ಕನಿಗೆ ಬಿಸಿ ಬೂದಿಯನ್ನು ಮುಖಕ್ಕೆ ಎರಚಿದಂತಾಯಿತು. ಹೂವಿಗಾಗಿ ಕಾಯುತ್ತ ಮನೆಯಲ್ಲಿ ಸಿದ್ಧವಾಗಿರುವ ಮಗಳ ಮೊಳದುದ್ದದ ಜಡೆಯ ನೆನಪಾದಾಗಲಂತು ಕಿಡಿಕಿಡಿಯಾದಳು.

"ಅಲ್ಲಾ ನೀನು ಕೂದಿರೋದು ಮೂರೇ ಹೂವೇನಮ್ಮ? ಮಡ್ಲು ತುಂಬ ಕೂದಿದ್ದೀಅಲ್ಲ... ಪುಗಸಟ್ಟೆ ಸಿಕ್ತೂ ಅಂತ. ಮೈ ಮುರಿದು ಕಾಲುವೆಯಿಂದ ನೀರು ಹೊತ್ತು ಬೆಳಸಿದ್ದುದು ನೀನು ಮನೆಗೆ ತಕ್ಕೊಂಡೋಗಿ ನಿನ್ನ ಸೊಸೆಗೆ ಮುಡಿಸಿ ಮೆರೆಸ್ಲಿ ಅಂತೇನಮ್ಮ?" ತನ್ನ ಜಮೀನಿನ ಪಾಲುಗಾರ ನಂಜಣ್ಣನ ಮುಂದೆ ಅವಮಾನವಾಗಬಾರದೆಂದು ರುದ್ರಮ್ಮನೂ ನಾಲಗೆ ಜೋರು ಮಾಡಿದಳು.

"ಅಯ್ಯೋ! ಊರೆಲ್ಲ ಒಂದಾಗುವಂತೆ ಯಾಕೆ ಕಿರಚಿ, ಶಿವಪೂಜೆಗೆ ಅಂತ ಕುಯ್ಕೊಂಡೆ. ಏನಮ್ಮ ಗಂಡಸ್ರು ಅವರ ನನಗೂ ದೇವರು ಅಂತ ಮಾನ ಮರ್ಯಾದೆ ಬ್ಯಾಡ್ವೆ? ದಿಂಡರಿಲ್ಲವೇನಮ್ಮ?"

"ಹೋ! ಹೋ! ನೀ ಬೋಮಾನಿಸ್ಟೆ! ಕಿರುಚೋಕೆ ನಾನೇನು ಬೀದಿನಾಯಿ ಅಂತ ತಿಳ್ಕೊಂಡಾ ಅಂದೆ, ನಿನ್ನ ದೇವರಿಗೆ ನನ್ನ ತೋಟದಿಂದ ಕದ್ದ ಹೂವೇ ಬೇಕಿತ್ತೇ? ಬೇಕಾಗಿದ್ರೆ ಬೆಳ್ದು ಮುಡ್ಸಿ ಮೂರುಹೊತ್ತೂ ತಿಳ್ಕಂಡ? ನಿನ್ನ ದೇವರು ಒಂದು ಮಡ್ಲು ಹೂವುನೇ ತಂದು ಪೂಜೆ ಮಾಡು ಅಂತ ಬಂದು ಹೇಳಿದ್ನೆ? ನೀನೇ ಒಪ್ಪೋ ನಂಜಣ್ಣ... ಇವಮ್ಮನ ನ್ಯಾಯವಾ!"

ಬತ್ತದ ರಾಶಿಯ ಸುತ್ತ ಮೊರದಿಂದ ಗಾಳಿ ಬೀಸಿ ದುಂಬನ್ನು ಹೊಡೆಯುತ್ತಿದ್ದ ನಂಜಣ್ಣನಿಗೆ, ಕತ್ತರಿಗೆ ಸಿಕ್ಕ ಅಡಿಕೆಯಂತಾಯಿತು. ಅವನು ಏನೂ ಕಾಣದವನಂತೆ ತಡವರಿಸುತ್ತ ಮೇಲೆ ಕೆಳಗೆ ನೋಡುತ್ತಿದ್ದಾಗ, ನೆಲ್ಲುಲ್ಲಿನ ಹೊರೆಯನ್ನು ಹೊತ್ತುಕೊಂಡು ಮನೆಗೆ ಹೋಗುತ್ತಿದ್ದ, ಊರಿನ ಮುಂದಾಳುಗಳಲ್ಲೊಬ್ಬರಾದ ಕೆಂಪೇಗೌಡರ ಮನೆಯ ಆಳು ಬೆಸ್ತರ ಕಾಳಬೋಯಿ ಮಾತು ಎಟುಕಿಸಿಕೊಂಡು "ಹೋಗ್ಲಿ ಬುಡವ್ವ, ಕಾಣ್ದೆ ಕೂದುಬುಟ್ರು ದೇವ್ರ ಕೆಲ್ಸಕ್ಕೆ ಗಳಿಗೆ ಕೆಟ್ಟದ್ದು!" ಅಂದ.



ಕಥೆ

"ಕಾಣ್ದೆ ಕುಯ್ಯೊಕೆ, ಕಣ್ಣು ಕುಂಡೆ? ತೊಲೆತುಂಡಿದ್ದಂಗವಳೆ! ಇನ್ನೇ ಹೋದ್ರೇ ತೋಟ ಇವಳ ಗಂಡಂದೋ? ಅಂತೀನಿ" ಎಂದಾಗ ಎಲ್ಲರ ಎದುರು 'ತೋಟ ನಿನ್ನ ಗಂಡಂದೇ?" ಎನ್ನುವ ಮಾತು ರುದ್ರಮ್ಮನ ಆತ್ಮ

ಗೌರವವನ್ನು ಹಿಡಿದು ಜಗ್ಗಿಸಿತು. ಸುತ್ತಮುತ್ತಲಿದ್ದ ಕಣಗಳಿಂದ ಜನರೂ ನಿಂತು ನೋಡುತ್ತಿದ್ದರು. ತನ್ನ ಸುತ್ತಮುತ್ತಲೂ ಹತ್ತಾರು ಜನ ಸೇರಿರುವುದನ್ನು ಕಂಡು, ತನ್ನ ಮಾನಮರ್ಯಾದೆ ಇವರ ಮುಂದೆಲ್ಲ ಹೋಗುವಂತಾಯಿತಲ್ಲ ಎಂದು ರುದ್ರಮ್ಮನೂ ತನ್ನ ನಾಲಗೆಯನ್ನು ಚಲಾಯಿಸಿದಳು. "ನಾಲಗೆ ಬಿಗಿ ಹಿಡಿದು ಮಾತಾಡು. ನನ್ನ ಗಂಡನ ಸುದ್ದಿಗೆ ಬಂದ್ರೆ ಆಗಬೇಕಾದ್ದು ಆದಾದು!"

"ನಿನ್ನ ಗಂಡಂದೇ ಅಂತ ಸಾವಿರಸಲ ಅಂತೀನಿಕನಮ್ಮ. ತಲೆತಗದೀಯ! ಬೋನಿಸೂರು ಮಾಡ್ತಿ..."

"ತಕ್ಕೋ ನಿನ್ನ ಗಂಟಲು ಹಾಳಾಗ... ನಿನ್ನ ಹೂವ ನಿನ್ನ ಎದೆಮೇಲೆ ಹಾಕ್ಕೋ ಆ ಶಿವ ನೋಡ್ತಾನೆ ಕಣ್ಣಿಲ್ವೆ ಅವನಿಗೆ?" ಎಂದು ತನ್ನ ಮಡಿಲನ್ನು ಒದರಿದುದೇ ತಡ, ಕಾಲು ಹಾದಿಯ ಧೂಳಿನಲ್ಲಿ ಕೆಂಪು ಮತ್ತು ಹಳದಿಯ ಚೆಂಡು ಮಲ್ಲಿಗೆ ಮತ್ತು ಬಿಳಿ ಮಲ್ಲಿಗೆ ಮೊಗ್ಗುಗಳು ಬಿದ್ದು ಒದ್ದಾಡಿದುವು.

ಚನ್ನಕ್ಕನಿಗೆ, ಹೊಟ್ಟೆಗೆ ಸುಣ್ಣದ ನೀರು ಸುರಿದಂತಾಯಿತು. "ನನ್ನ ಎದೆ ಮೇಲೆ ಸುರಿದು ಬುಟ್ಟು ನೆಲಕ್ಕೆ ಸುರಿದಲ್ಲ ನಿನ್ನ ಮನೆತನದ ಗೆಡ್ಡೆ ಕಿತ್ಹೋಗ! ಅದ್ಕೇ ಅಲ್ವೇ ಗಂಡನತಿನ್ಕಂಡು. ಚಿಕ್ಕಂದಿನಿಂದ ಬರೀ ಹಣೇ ಬುಟ್ಕಂಡು ಬಸವೀ ಆಂಗಿರೋದು"

"ಥೂ! ಮುಂಡೆ, ನಿನಗೆ ಕುಂಕುಮ ಭಾಗ್ಯೇವು ಅದೆ ಅಂತ ಮರೀಬ್ಯಾಡ ನಿನಗೆ ವಾಂತಿಭೇದಿ ಬರ."

'ಹಲ್ಲಿಡಿದು ಮಾತಾಡು! ಮುಂಡೆ ಅಂತೆ ಮುಂಡೆ, ಅವ್ಳು ಯಾಕಾದಾಳು?"

ಹೊನ್ನಣ್ಣನ ಧ್ವನಿ! ಎಲ್ಲ ತಿರುಗಿ ನೋಡಿದರು. ಇವರಿಬ್ಬರ ಜಗಳ, ಕೈ ಬಾಯಿ ನೋಡುತ್ತಿದ್ದವರಿಗೆ ಹೊನ್ನಣ್ಣ ಬಂದದ್ದೇ ಗೊತ್ತಿರಲಿಲ್ಲ.

"ದೇವರಿಗೆ ಅಂತ ಮೂರು ಹೂವು ಕೂದ್ರೆ ಬಾಯಿಗೆ ಬಂದಂಗೆ 'ಸಣ್ಣ ಪುಟ್ಟ' ಮಾತಾಡಬೋದೇನಯ್ಯ ನಿನ್ನ ಹೆಂಡ್ತಿ? ರುದ್ರಮ್ಮ ನ್ಯಾಯ ಒಪ್ಪಿಸಿದಳು.

"ಅವಳು ದಡ್ಡೆ... ನೀ ತಿಳಿದೋಳು. ಅಲ್ಲಕನಮ್ಮ ಹೂಕಿತ್ತಲ್ಲ ದೇವರಿಗೆ ಅಂತ ನಾ ಬರೂತನಕ ಇದ್ದು ನಡೆದದ್ದನ್ನೆಲ್ಲಾನೂ ಒಪ್ಪಿಸಿ ತಕ್ಕೊಂಡು ಹೊಗೂವೆ. ದೇವ್ರು ನಿನಗೆ ಬ್ಯಾರೆಯೇ? ನಿನ್ನ, ನನ್ನ ಹೆಂಡ್ತಿ ಬಾಯಿಗೆ ಬಂದಂಗೆ ಮಾತಾಡಿದ್ದುಕ್ಕೆ ಅವಳ ಮರಕ್ಕೆ ಕಟ್ಟಿ ನಿನ್ನ ಎದುರಿಗೆ ಬೇಕಾದ್ರೆ ಹೊಡೀತೀನಿ. ಹೂವ ಯಾರ ಕೇಳ್ದೂ ತೋಟದೇಲಿ ಕಿತ್ತುದ್ದೂ ಅಲ್ದೆ. ಬಿಸಾಡಿ ಯಾರ್ಗೂಯಿಲ್ಲದಂತೆ ಮಾಡದಲ್ಲ, ನಿನಗೆ ಏನು ಮಾಡ್ಬೇಕು ಹೇಳೂಮಂತೆ?... ನೋಡು ನಿನ್ನ ಮಗನೇ ಬತ್ತಾನೆ ಕೇಳು..." ಎಂದು ದೂರದಲ್ಲಿ ಕೊಳಗ ಮತ್ತು ಗೋಣಿ ಚೀಲಗಳನ್ನು ಹೊರಿಸಿಕೊಂಡು ಕಣದ ಕಡೆಗೆ ನಾಲ್ಕಾರು ಮಾರು ದೂರದಲ್ಲಿ ಬರುತ್ತಿದ್ದ ರುದ್ರಮ್ಮನ ಮಗ ಬಸವ ರಾಜೇಂದ್ರಪ್ಪನನ್ನು ತೋರಿಸಿ ಹೇಳಿದ.

ಸುತ್ತ ಸೇರಿದ ಜನ, ಧೂಳಿನಲ್ಲಿ ಬಿದ್ದು ಆಕಾಶ ನೋಡುತ್ತಿದ್ದ ಹೂವುಗಳಿಂದ ನಡೆದ ವಿಷಯ ಏನೆಂದು ತಿಳಿಯಿತು. ಬೇಸರ ಹಾಗೂ ಕೋಪ ತುಂಬಿದ ಧ್ವನಿಯಿಂದ: "ನಿನಗೆ ಬುದ್ಧಿಯಿಲ್ಲಕನವ್ವ ಸಣ್ಣ ಜನಗೋಳ ಜೊತೇಲೆಲ್ಲ ಹೋಗಿ ನಿನ್ನ ಮಾನ ನನ್ನ ಮಾನ ಎಲ್ಲಾನೂ ತಗೀತಿ ಥೂ!" ಎಂದ.

"ಯಾರಯ್ಯ ಸಣ್ಣ ಜನ! ನೀನೇನು ಕುಬೇರನ ಮೊಮ್ಮಗನೇನೋ?" ಎಂದಳು. ಚನ್ನಕ್ಕ ಅವಕಾಶ ಬಂದಾಗ ಬಿಡಬಾರದು ಎನ್ನುವ ಬುದ್ಧಿಯಿಂದ.

"ಲೇ! ಹೋಗೇ ಅದೇನು ಕೆಲ್ಸ ನೋಡು! ನಿನಗೆ ಮಗಳ ಮದುವೆ ಆಗಿ ಮನೇಗೆ ಅಳಿಯ ಬಂದ್ರೂ ಬುದ್ಧಿ ಬರಲಿಲ್ಲ" ಎಂದು ಹೊಡೆಯುವವನಂತೆ ಗಂಡ ಕೈ ಎತ್ತಿದುದನ್ನು ಕಂಡು ಚನ್ನಕ್ಕ ತೋಟದ ಒಳಕ್ಕೆ ಗೊಣಗಿಕೊಳ್ಳುತ್ತ ನಡೆದಳು. ಹೊನ್ನಣ್ಣ ಬಸವರಾಜೇಂದ್ರಪ್ಪನ ಕಡೆ ತಿರುಗಿ "ನಾವು ಸಣ್ಣೋರು ಅಲ್ವೇನಯ್ಯ ಬಸವ ರಾಜೇಂದ್ರಪ್ಪ ಯಾರ್ದಯ್ಯಾ ತಪ್ಪು? ಉತ್ತಮ ಜಾತೀಲಿ, ದೊಡ್ಡೋರ ಹೊಟ್ಟೇಲಿ ಹುಟ್ಟಿದ್ದೀ ನೀನೇ ನ್ಯಾಯ ಹೇಳು. ಹೂವ ಕೂದದ್ದೂ ಅಲ್ದೆ ನಿಮ್ಮವ್ವ ಬೈದು-ಆಡಿ ಹೂವ ಮಣ್ಣಿನ ಪಾಲು ಮಾಡಿದ್ಲು ಆಗಬೋದೋ?"

"ಅದ್ಕೆ ಬಾಯಿಗೆ ಬಂದಂಗೆ ಮಾತಾಡಬೋದೋ! ಹೂವು ಕೂದುದ್ಕೆ ತಪ್ಪು ಎಷ್ಟಾಯ್ತದೇ ಕೊಡ್ತೀನಿ ನ್ಯಾಯಕ್ಕೆ ಸೇರಿಸಯ್ಯ ನಿನ್ಹೆಂಡ್ತಿ ಆಡಿರೋ ಮಾತಿಗೆ ಅದೇನು ಮಾಡಬೇಕೋ ನ್ಯಾಯದೋರೇ ಹೇಳಲಿ"

"ಇದು ಮಾತು ಅಂದ್ರೆ ಸೇರ್ರುಸ ಈ ವಿಷಯ ಬೀದಿಗೆ ಬಂದ್ರೂ ಚಿಂತೆಯಿಲ್ಲ. ನೆನ್ನೆಂಡ್ತಿದು ತಪ್ಪಿದ್ರೆ ಎಷ್ಟು ಹೇಳ್ತಾರೆ ಅಷ್ಟು ನಾನು ತಪ್ಪು ಕೊಡ್ತೀನಿ ನಿಮ್ಮವ್ವ ಮಡಿರೋ ಎರಡು ತಪ್ಪುಗೆ ಅದೆಷ್ಟು ಕೊಡಬೇಕೋ ನೀನು ಕೊಡು ಹೆದರಿಕೆ ಏನಯ್ಯ? ಇವತ್ತು ರಾತ್ರೇಕೆ ಸೇರ್ಸಿ. ನಿಮ್ಮ ಜಾತಿಯೋರು ನಮ್ಮ ಜಾತಿಯೋರು ಸೇರಿ ನ್ಯಾಯ ನಡೆದೇ ಹೋಗ್ಲಿ" ಎಂದು ಹೊನ್ನಣ್ಣನೂ ತೋಟದ ಕಡೆ ನಡೆದ. ಜಗಳ ನಿಲ್ಲುತ್ತಲೆ ಸುತ್ತಮುತ್ತಲಿದ್ದ ಜನರು ಕಾಲು ಕಿತ್ತರು. ಇಷ್ಟು ಹೊತ್ತು ನೋಯದಿದ್ದ ಕತ್ತು ಮತ್ತೆ

"ಅವಳು ದಡ್ಡೆ... ನೀ ತಿಳಿದೋಳು. ಅಲ್ಲಕನಮ್ಮ ಹೂಕಿತ್ತಲ್ಲ ದೇವರಿಗೆ ಅಂತ ನಾ ಬರೂತನಕ ಇದ್ದು ನಡೆದದ್ದನ್ನೆಲ್ಲಾನೂ ಒಪ್ಪಿಸಿ ತಕ್ಕೊಂಡು ಹೊಗೂವೆ. ದೇವ್ರು ನಿನಗೆ ಬ್ಯಾರೆಯೇ? ನಿನ್ನ, ನನ್ನ ಹೆಂಡ್ತಿ ಬಾಯಿಗೆ ಬಂದಂಗೆ ಮಾತಾಡಿದ್ದುಕ್ಕೆ ಅವಳ ಮರಕ್ಕೆ ಕಟ್ಟಿ ನಿನ್ನ ಎದುರಿಗೆ ಬೇಕಾದ್ರೆ ಹೊಡೀತೀನಿ. ಹೂವ ಯಾರ ಕೇಳ್ದೂ ತೋಟದೇಲಿ ಕಿತ್ತುದ್ದೂ ಅಲ್ದೆ. ಬಿಸಾಡಿ ಯಾರ್ಗೂಯಿಲ್ಲದಂತೆ ಮಾಡದಲ್ಲ, ನಿನಗೆ ಏನು ಮಾಡ್ಬೇಕು ಹೇಳೂಮಂತೆ?... ನೋಡು ನಿನ್ನ ಮಗನೇ ಬತ್ತಾನೆ ಕೇಳು..." ಎಂದು ದೂರದಲ್ಲಿ ಕೊಳಗ ಮತ್ತು ಗೋಣಿ ಚೀಲಗಳನ್ನು ಹೊರಿಸಿಕೊಂಡು ಕಣದ ಕಡೆಗೆ ನಾಲ್ಕಾರು ಮಾರು ದೂರದಲ್ಲಿ ಬರುತ್ತಿದ್ದ ರುದ್ರಮ್ಮನ ಮಗ ಬಸವ ರಾಜೇಂದ್ರಪ್ಪನನ್ನು ತೋರಿಸಿ ಹೇಳಿದ.

ನೋಯಲು ಶುರು ಮಾಡಿದ್ದನ್ನು ಕಂಡು ತಾನು ಹೊತ್ತಿರುವುದು ನೆಲ್ಲುಲ್ಲಿನ ಹೊರೆ ಎಂಬುದು ಜ್ಞಾಪಕಕ್ಕೆ ಬಂದು ಕಾಳಾಬೋಯಿ ಇನ್ನೂ ಹೊತ್ತಾದರೆ 'ಗೀಕನೆ' ಬಿದ್ದಾವು ಎಂದು ಮನೆಯ ಕಡೆ ನಡೆದ

* * * * * * * * * * * * *

ರಾತ್ರಿ ಸುಮಾರು ಒಂಬತ್ತು ಗಂಟೆಯ ಸಮಯ. ಬಸವರಾಜೇಂದ್ರಪ್ಪನ ಛಲದ ಫಲವಾಗಿ ಊರಿನ ಸ್ಕೂಲಿನ ಜಗಲಿಯ ಮೇಲೆ ಎರಡು ಲಾಟೀನುಗಳ ಬೆಳಕಿನಲ್ಲಿ ಪಂಚಾಯಿತಿ ಸೇರಿತು. ಛೇರ್ಮನ್ ಶಿವರುದ್ರಪ್ಪ ಮತ್ತು ಬಸವರಾಜೇಂದ್ರಪ್ಪ ಎಡಗಡೆಯ ಜಗುಲಿಯ ಮೇಲೆ ಕುಳಿತರು. ಬಲಗಡೆಯ ದೊಡ್ಡ ಜಗುಲಿಯ ಮೇಲೆ ಯಜಮಾನ್, ಸಿದ್ದ ವೀರಪ್ಪನವರು, ಅವರ ಎದುರಾಗಿ ಕೆಂಪೇಗೌಡರು ಹಾಗೂ ಇಮಾಮ್ ಸಾಹೇಬರೂ ಕುಳಿತರು. ಜೋಯಿಸರ ಮೈಗೆ ಸರಿಯಿಲ್ಲವೆಂದು ಹೇಳಿ ಕಳುಹಿಸಿದರು. ಯಜಮಾನ್ ಸಿದ್ದವೀರಪ್ಪನರಿಗೆ "ಇಂಥ ಹದಗೆಟ್ಟ ನ್ಯಾಯಕ್ಕೆ ಬರೂದು ಅಂದ್ರೆ ಯೋಚನೆ ಮಾಡಲೇಬೇಕು" ಎಂದುಕೊಂಡು, ಜೋಯಿಸರು ತಪ್ಪಿಸಿಕೊಂಡ ಹಿನ್ನೆಲೆಯ ನೋವು ಅರ್ಥವಾಗಿ ಸುಮ್ಮನಾದರು.

ತಮ್ಮ ಊರಿನ ಚರಿತ್ರೆಯಲ್ಲೇ ಕಾಣದ, ಕೇಳದ ನ್ಯಾಯವನ್ನು ನೋಡಲು, ಕೇಳಲು ಜನರೂ ಗುಂಪು ಸೇರಿದರು. ಸಾಕ್ಷಿಗಳಾಗಿ ನಂಜಣ್ಣ ಮತ್ತು ಗೌಡರ ಮನೆ ಆಳು ಕಾಳಬೋಯಿಯನ್ನೂ ಬಸವರಾಜೇಂದ್ರಪ್ಪ ಕರೆದು ತಂದಿದ್ದ.

ಕೆಂಪೇಗೌಡರು ಒಮ್ಮೆ ಕತ್ತೆತ್ತಿ ಸುತ್ತ ನೋಡಿ, "ಎಲ್ಲ ಬಂದವ್ರೆ, ಇನ್ಯಾಕೆ ತಡ ಅದೇನು ಬೇಗ ಬೇಗ ಮಾತಾಡಿ ಸಿದ್ದವೀರಪ್ಪನೋರೆ, ಅದೇನು ವಿಚಾರಿಸಿ ಛೇರ್ಮನ್ರೆ" ಎಂದರು.

ಸಿದ್ದವೀರಪ್ಪನವರು ಮಾತನಾಡಲಿಲ್ಲ. ಇಮಾಮ್ ಸಾಹೇಬರು ನ್ಯಾಯದ ಹಿನ್ನೆಲೆಯಾದ ದೇವರ ಹೂವಿನ ವಿಚಾರವನ್ನೇ ಯೋಚಿಸುತ್ತಿದ್ದವರು ಯಜಮಾನ್ ಸಿದ್ದವೀರಪ್ಪನವರನ್ನು ನೋಡುತ್ತ ಕುಳಿತರು.

ಛೇರ್ಮನ್ ಶಿವರುದ್ರಪ್ಪನೇ ಪಂಚಾಯಿತಿಯನ್ನು ಪ್ರಾರಂಭಿಸಿದ. "ಚನ್ನಮ್ಮನೇ ಮೊದಲು ಬಾಯಿಗೆ ಬಂದಂಗೆ ಆಡಿದ್ದೂ ಅಲ್ದೆ: ನಮ್ಮ ದೇವರ್ರೂ 'ಹೀನಮಾನ ಬೈದ್ಲು ಅನ್ನದ್ಕೆ ಸಾಕ್ಷಿ ಕೊಡ್ತೀವಿ ನಾವು."

"ಸಾಕ್ಷಿ ಯಾರವ್ರೆ?" ಎಂದರು ಗೌಡರು.

"ನಂಜಣ್ಣ ರುದ್ರಮ್ಮನೋರ ಜಮೀನು ಪಾಲುದಾರ. ಅವನು ಸತ್ಯ ನುಡಿದರೂ ಯಾರೂ ನಂಬುವಂಗಿಲ್ಲ! ಇನ್ನು ಕಾಳಾಬೋಯಿ ಬೇಕಾದ್ರೆ ಸಾಕ್ಷಿಯಾಗಿ ಒಪ್ಪಬೋದು"

"ಅದ್ಯಾಕೆ ಗೌಡರೆ ನಂಜಣ್ಣನ ಸಾಕ್ಷಿ ಆಗೊದಿಲ್ಲ ಅಂತೀರಿ? ಕಾಳಬೋಯಿ ನಿಮ್ಮ ಮನೆ ಆಳು... ಅವನು ಬೇಕಾದ್ರೆ ಸಾಕ್ಷಿಯಾಗಬೋದು. ನಮಗೆ ಯಾವ ನಂಬ್ಕೆ? ಅವನು ನಿಮ್ಮ ಮುಖ ನೋಡಿ ಹೆದರಿಕೇಗೆ ನಿಮ್ಮ ಪರ. ನಿಮ್ಮ ಜಾತಿಯೋರ್ ಪರವಾಗಿ ಸಾಕ್ಷಿ ಹೇಳೋದಿಲ್ಲ ಅಂತ್ಲ!" ಎಂದ ಬಸವರಾಜೇಂದ್ರಪ್ಪನ ಮಾತು ಕೋಪ ತಂದರೂ ಅವರು ಸಹನೆ ಕಳೆದುಕೊಳ್ಳದೆ-

"ನ್ಯಾಯದ ಮಾತ್‌ಗ ಯಾರಾದರೇನು. ಜಾತಿ ಮಾತು ಯಾಕೆಯಿಲ್ಲಿ ಬಸವ

ರಾಜೇಂದ್ರಪ್ಪ. ಅಂತು ಜಾತಿ ಮಾತು ಬಂದು ಆಗ್ಲೇ ನಮ್ಮೂರು ವಿಷ ಆಗೋಗದೆ ನನಗದು ಗೊತ್ತು ಇಲ್ಲಿ. ನಿಮ್ಮಪ್ಪ ಯಾರಾದ್ರೂ ಸಾಕ್ಷಿ ಹೇಳಲಿ. ಯಜಮಾನ್ ಸಿದ್ದವೀರಪ್ಪನೋರು, ಸಾಹೇಬರೂ ಒಪ್ಪಿದ್ರೆ ನಾನೂ ಬೇಡ ಅನ್ನೊಲ್ಲ" ಎಂದು ಸುಮ್ಮನಾದರು.

"ನಂಜಣ್ಣನ ಸಾಕ್ಷಿಯಾಗಿ ಅರ್ಗೀಸ ತಕ್ಕೋಕೆ ಆಗೋದಿಲ್ಲ" ಎಂದ ಹೊನ್ನಣ್ಣ.

"ಹಾಗಾದ್ರೆ ಈ ವಿಷಯ ಇಲ್ಲೇ ಮುಗೀದಿಲ್ಲ. ಕೋರ್ಟು ಮೆಟ್ಟಿಲ ತುಳಿಯೋ ಬೇಕಾಯ್ತದೆ ನ್ಯಾಯಕ್ಕೆ ಅಂದೆ" ಎಂದು ಛೇರ್ಮನ್ನರು ತಮಗೆ ಕೋರ್ಟು ಕಾನೂನು ಬಹಳ ಗೊತ್ತಿದೆ ಎಂಬುದರ ಪ್ರತಿಷ್ಠೆ ಪ್ರದರ್ಶನಕ್ಕೆ ಸಿದ್ದವೀರಪ್ಪನವರು. "ಹೌದು ಕಣ್ರಪ್ಪ. ನಮ್ಮೂರಿಂದ ಎಂಥೆಂಥ ಕೇಸೋ ಕೋರ್ಟುಗೋಗವೆ. ಮಂಡ್ಯದಲ್ಲಿರುವ ಲಾಯರುಗಳೆಲ್ಲಾರುಗೂ ನಮ್ಮೂರ ಹೆಸರು ಕಿವಿಗೆ ಬಿದ್ರೆ ನೆಟ್ಟಗಾದವಂತೆ? ದೇವರ್ಗೆ ಮೂರು ಹೂವು ಕೊಯ್ದು ಜಗಳ ಆಡಿ ಕೋರ್ಟು ಹತ್ತಿದ ಕೀರ್ತಿಯೂ ನಮ್ಮೂರ್ಗೆ ಬರಬೇಕು ಅಂತ್ಲೇ ನಿಮ್ಮಪ್ಪ? ಎಂದರು.

"ಅದೂ ಆಗೋಗ್ಲೀ ಅಂತೀನಿ-" ಎಂದು ಬಸವರಾಜೇಂದ್ರಪ್ಪ ಮಾತು ಮುಗಿಸುವುದಕ್ಕೆ ಮೊದಲೇ ಶಿವರುದ್ರಪ್ಪ" ನಮ್ಮ ಜನ, ನಮ್ಮ ದೇವರು ಅಂದ್ರೆ ಕೆಲವು ಬಹಳ ಸದರ ತಿಳ್ಕಂಡವ್ರೆ. ತೀರ್ಮಾನ ಮಾಡಿ ತಪ್ಪು ಎಳೀರಿ. ತಪ್ಪಿನ ದುಡ್ಡೇಲಿ ಊರ ಮುಂದೆ ಪಾಳು ಬಿದ್ದೋಯ್ತಾಯಿರೊ ಬಸವಣ್ಣನ ಗುಡಿ ಸರಿ ಮಾಡ್ರಿ" ಎಂದ.

"ಅಂತೂ ನಮ್ಮೂರ ಬಸವಣ್ಣನ ಗುಡಿ ಇಂಥ ದುಡ್ಡೇಲೇ ದುರಸ್ತು ಆಗೋ ಕಾಲ ಬಂತು-ಊರೇಲಿ ಒಗ್ಗಟ್ಟು ಕಡಿಮೆ ಆದಂಥೆಲ್ಲ 'ದೇವನೊಬ್ಬ ನಾಮಹಲವು' ಅಂಥ ಹಿರಿಯೋರು ದೊಡ್ಡ ಮಾತು ಆಡವ್ರೆ ನಮ್ಮ ದೇವ್ರು ಅಂತ ಯಾರೂ ಗುತ್ತಿಗೆ ಮಾಡ್ಕೋಕಾಗೂದಿಲ್ಲ..." ಸಿದ್ದವೀರಪ್ಪನವರ ಮಾತಿಗೆ...

"ಸಚ್... ಬಹುತ್ ಅಚ್ಛಾ ಬೋಲ್ಯಾ ಯಜಮಾ‌ನ್!" ಅಂದರು ಇಮಾಮ್ ಸಾಹೇಬರು.

"ನಿಮ್ಮ ಪುರಾಣ ನನಗೆ ಬೇಕಿಲ್ಲ ನಿಮ್ಮ ಕೈಲಿ ಆದದೋಯಿಲ್ವೋ ಹೇಳಿ?" ಎಂದ ಬಸವರಾಜೇಂದ್ರಪ್ಪನ ಮಾತಿಗೆ ವಿಷಾದದಿಂದ ನಕ್ಕು ಸಿದ್ದವೀರಪ್ಪನವರು" ಲೋಮಗ, ಬಸವರಾಜೇಂದ್ರಪ್ಪ ಕೋಪದೇಲಿ ಕುಯ್ದು ಮೂಗು ಆಮೇಲೆ ಚಿಂತೆ ಮಾಡಿದ್ರೆ ಬರೋದಿಲ್ಲ. ನನ್ನ ಮಾತು ಕೇಳು. ಒಂದೇ ಊರಲ್ಲಿ ಇಂಥ ನ್ಯಾಯ ಮಾಡಿ ತಪ್ಪುಗಿಪ್ಪು ಹಾಕೋದು ಥರವಲ್ಲ. ನನ್ನ ಸ್ವಂತ ಖರ್ಚಿಂದ ಬಸವಣ್ಣನ ಗುಡಿ ದುರಸ್ತು ಮಾಡಿಸ್ತೀನಿ. ಆಯ್ತೆ. ಇನ್ನು ಈ ಜಗಳದ ವಿಚಾರದೇಲಿ ನನ್ನ ತೀರ್ಮಾನಾನ ಕಿತ್ತು ಹಾಕೋದಿಲ್ಲ ಅಂದ್ರೆ ಮುಂದೆ ಮಾತಾಡ್ತೀನಿ, ಬೇಡ ಅಂದ್ರೆ ಬೇಡ' ಎಂದು ಸುತ್ತ ನೋಡಿದರು.

ಗೌಡರು, ಸಾಹೇಬರು, ಹೊನ್ನಣ್ಣ "ಆಗಬಹುದು" ಎಂದು ತಲೆಯಾಡಿಸಿದರು.

ಮೊದಮೊದಲು ದುಡುಕಿ ಮಾತನಾಡಿದ ಬಸವರಾಜೇಂದ್ರಪ್ಪನೂ "ಅದೇನು ಹೇಳಿ ಕೇಳ್ತೀನಿ" ಎಂದು ಛೇರ್ಮನ್ ಶಿವರುದ್ರಪ್ಪನ ಮುಖ ನೋಡಿದಾಗ "ಎಲ್ಲ ಒಪ್ಪಿದ ಮೇಲೆ ನನ್ನದೇನು" ಎಂದು ನುಣುಚಿಕೊಳ್ಳುವ ಮಾತನಾಡಿ ಸುಮ್ಮನಾದ.

ಸಿದ್ದವೀರಪ್ಪನವರು ಮಾತು ಮುಂದುವರಿಸಿದರು. "ಏನೋ ಕೆಟ್ಟಗಳಿಗೆ ಮಾತಿಗೆ ಮಾತು ನಡೆದು ಹೋಯ್ತು. ಕೆದಕಿ ಪ್ರಯೋಜನವಿಲ್ಲ. ಯಾರ ಮನೇನಾದ್ರೂ ಹಾಳಾಗಲಿ ಅಂಥ ಒಬ್ಬರು ಅಂದ ಮಾತ್ರಕ್ಕೇ ಆಗೋಗಲ್ಲ ಬಸವಣ್ಣನವರು. 'ಮನೆಯೊಳಗಿನ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು ಕೂಡಲಸಂಗಮದೇವ!" ಅಂತ ಹೇಳವ್ರೆ..."

"ಹೂಂ... ಅಲ್ವೇ... ಮಂತೆ!" ಗೌಡರು ಮೆಚ್ಚಿಗೆ ಸೂಚಿಸಿದರು.

"ನನಗೆ ತಿಳಿದಮಟ್ಟಿಗೆ ರುದ್ರಮ್ಮನದು, ಚನ್ನಕ್ಕನದು, ಇಬ್ಬರದೂ ಸಮ ತಪ್ಪದೆ ಇವ್ರೆ ಜಗಳ ಆಡಿದ್ರೆ ತಪ್ಪು ಹಾಕಿ ಬುದ್ಧಿ ಕಲಿಸಬಹುದಾಗಿತ್ತು. ಇದರೇಲಿ ದೇವರ ವಿಚಾರ ಬಂದಿರೋದರಿಂದ ತಪ್ಪು ಹಾಕೋ ವಿಚಾರ ಬೇಡ. ಪಶ್ಚಾತ್ತಾಪವೇ ಸರಿ. ಅದಕ್ಕೆ ನಾನೊಂದು ಹೊಸ ಬಗೆ ಶಿಕ್ಷೆ ಕೊಡ್ತೀನಿ. ಅದೇನಪ್ಪ ಅಂದ್ರೆ: ಚನ್ನಕ್ಕ ರುದ್ರಮ್ಮ ಇಬ್ಬರೂ ಒಂದುವಾರ, ದಿವಸ ಸಾಯಂಕಲ ನಾಲ್ಕು ನಾಲ್ಕು ಎಳ್ಳುಂಡೆ ದೀಪವ ಬಸವಣ್ಣನ ಗುಡಿಗೆ ಹಚ್ಚಬೇಕು... ಒಪ್ಪಿಗೆಯೇ?" ಎಂದಾಗ ಎಲ್ಲರೂ ಯಜಮಾನ್ ಸಿದ್ದವೀರಪ್ಪನವರ ಮಾತಿಗಿಂತಲೂ ಅವರು ಕೊಟ್ಟ ಹೊಸ ಬಗೆಯ ತೀರ್ಪು, ಶಿಕ್ಷೆಗಳಿಂದ ಮಾರು ಹೋಗಿ ತಲೆದೂಗಿದರು.

ಚನ್ನಕ್ಕ, ರುದ್ರಮ್ಮ ಇಬ್ಬರೂ 'ಹೂಂ' ಎಂದು ಶಿಕ್ಷೆ ಒಪ್ಪಿಕೊಂಡರು. ಸಿದ್ದವೀರಪ್ಪನವರು ಅವರನ್ನು ಕುರಿತು "ಇದು ನಿಮ್ಮಿಬ್ಬರಿಗೂ ಶಿಕ್ಷೆ ಅಲ್ಲ: ನಿಮ್ಮ ಪಾಲಿನ ಅರಿಕೆ ಅಂತ ತಿಳ್ಕೊಂಡು ಮಾಡಿ" ಎಂದು ಮಾತು ಮುಗಿಸಿದರು.

* * * *

ಊರಿನ ಪಶ್ಚಿಮಕ್ಕೆ ಪಾಳೆಯಗಾರರಿದ್ದ ಊರೆಂದು ಪರಿಚಯ ಹೇಳಲು ನಿಂತ ಹಳೆಯ ಕೋಟೆಯ ಬಾಗಿಲ ಎಡಕ್ಕೆ ಹಿಂಭಾಗದಲ್ಲಿ ಎಲ್ಲಮ್ಮ ತಾಯಿಯ ದೇವಸ್ಥಾನ: ಮುಂಭಾಗದಲ್ಲಿ ಬಸವಣ್ಣನ ದೇವಸ್ಥಾನ. ಬಸವಣ್ಣ ಅಂದರೆ ಪ್ರವಾದಿ ಜಗಜ್ಯೋತಿ ಬಸವಣ್ಣನವರ ದೇವಸ್ಥಾನವಲ್ಲ ಹಣೆಗಣ್ಣನ ವಾಹನವಾದ ನಂದಿಯ ದೇವಸ್ಥಾನ. ಅದು ಜನರ ಬಾಯಲ್ಲಿ 'ಬಸವಣ್ಣನ ಗುಡಿ' ಇದರ ಎಡಕ್ಕೆ ಅಂಟಿಕೊಂಡಂತೆಯೇ ಆಂಜನೇಯನ ಗುಡಿ ಹಾಗೂ ಗಣೇಶನ ಸಣ್ಣ ಮಂಟಪ. ಇವುಗಳ ಬಲಕ್ಕೆ ಒಂದು ಕೂಗು ಗಳತೆಯಲ್ಲಿ ಕೈ ಹಾಕಿದರೆ ಸಿಕ್ಕುವಂತೆ, ಚೂಪಗೆ ತನ್ನ ಗೋಪುರಗಳ ತುದಿಗಳನ್ನು ಆಕಾಶದ ಕಡೆಗೆ ಚಾಚಿ ನಿಂತ ಬಿಳಿಯ ವರ್ಣದ ಮುಸಲ್ಮಾನರ ಮಸೀದಿ!

ಬಸವಣ್ಣನ ಗುಡಿಯ ಬಾಗಿಲಿಗೆ ಕದವೇ ಇಲ್ಲ. ಒಂದು ಸಣ್ಣ ದ್ವಾರ. ನಂತರ ಗರ್ಭಗುಡಿ. ಇದಕ್ಕೆ ಪೂಜಾರಿಯೂ ಇಲ್ಲ. ವರ್ಷಕ್ಕೆರಡು ಬಾರಿ ಅಂದರೆ ಬಸವ ಜಯಂತಿ ಹಾಗೂ ಸಂಕ್ರಾಂತಿಯಲ್ಲಿ ಮಾತ್ರ ಪೂಜೆ ಪುರಸ್ಕಾರ ಭಕ್ತಿಗಿಂತ ಹೆಸರುಬೇಳೆ, ಪಾನಕದ ರುಚಿಗೆ ಬರುವ ಭಕ್ತವೃಂದವೇ ಜಾಸ್ತಿ. ಕಾಸು ಕಟ್ಟಿಕೊಂಡು 'ಪಚ್ಚಿ' ಆಡುವವರು, 'ಪರೇಲು' ಆಡುವವರು ಆಗಾಗ್ಗೆ ಸದ್ವಿನಿಯೋಗಪಡಿಸಿಕೊಳ್ಳುವುದೂ ಉಂಟು. ಇಂಥ ಪರಿಸ್ಥಿತಿಯಲ್ಲಿ ಯಜಮಾನ್ ಸಿದ್ದವೀರಪ್ಪನವರು ಕೊಟ್ಟ ತೀರ್ಪು ಮೂಕ ಬಸವಣ್ಣನಿಗೆ ವರರೂಪವಾದ್ದೇ ಎಂದು ಹೇಳಬೇಕು.

ಮಾರನೆ ದಿನ ಸಾಯಂಕಾಲ ರುದ್ರಮ್ಮ ಸೊಸೆಯ ಜೊತೆಯಲ್ಲಿ ಹೋಗಿ ದೇವಸ್ಥಾನವನ್ನು ಗುಡಿಸಿ, ಹಸನು ಮಾಡಿದಳು. ಚೆಂಬಿನಲ್ಲಿ ತೆಗೆದುಕೊಂಡು ಹೋಗಿದ್ದ ನೀರಿನಿಂದ 'ನಾಲ್ಕು ಪಾದಗಳನ್ನೂ ತೊಳೆದು ಅವಕ್ಕೂ ಹಣೆಗೂ ವಿಭೂತಿಯನ್ನು ಧರಿಸಿದಳು. ನಂತರ ನಾಲ್ಕು ಎಳ್ಳುಂಡೆ ದೀಪಗಳನ್ನು ಕೆಳಗಿಟ್ಟು ಹಚ್ಚಿ ಕೈ ಮುಗಿದು, ಅಡ್ಡ ಬಿದ್ದು. ಪಾದಗಳನ್ನು ಮುಟ್ಟಿ ಕಣ್ಣಿಗೆ ಒತ್ತಿಕೊಂಡು, ಸೊಸೆಯ ಕೈಯಲ್ಲೂ ಕೈ ಮುಗಿಸಿ ಹೊರಕ್ಕೆ ಬಂದಳು.

ಮನೆಯಿಂದ ಹೊರಟಾಗ ತನ್ನನ್ನು ಕಂಡು, ಬಾಗಿಲಲ್ಲಿ ನಿಂತಿದ್ದ ಓರಗಿತ್ತಿ ನಿಂಗಕ್ಕ ಒಳಕ್ಕೆ ಹೋಗಿ ತನಗೆ ಕೇಳುವಂತೆ: "ಏನ್ಲಾ ಕೊತ್ತಿ. ಎಲ್ಲಿ ಬುಟ್ಟಿ ನಿನ್ನ ಚಾಲ. ಕಾಸೀಗೋದ್ರೂ ಇಲಿತಿನ್ನೂ ಬುದ್ಧಿ!" ಎಂದು ಆಡಿದ ಸನ್ನೆ ಮಾತನ್ನು ಮೆಲುಕು ಹಾಕುತ್ತ 'ತರಾತುರಿ'ಯಲ್ಲಿ ದೇವಸ್ಥಾನದ ಕಡೆ ಬರುತ್ತಿದ್ದ ಚನ್ನಕ್ಕನಿಗೆ ದೂರದಿಂದಲೇ ಬೆಳಕು ಕಂಡು ರುದ್ರಮ್ಮ ಸೊಸೆಯೊಡನೆ ಬಂದು ಹೋಗಿರಬೇಕು ಎಂದುಕೊಳ್ಳುತ್ತಿದ್ದಂತೆಯೇ ಮಬ್ಬು ಕತ್ತಲೆಯಲ್ಲಿ ರುದ್ರಮ್ಮ ಸೊಸೆಯೊಡನೆ ಬರುವುದು ಕಂಡು ಬೆಚ್ಚಿ ಅಲ್ಲೇ ಪಕ್ಕದಲ್ಲಿದ್ದ ಶಿವಶಂಕುವಿನ ಮರದ ಮರೆಯಲ್ಲಿ ಅವಿತುಕೊಂಡಂತೆ ನಿಂತಳು. ಅವರು ಮರೆ ಆದ ಮೇಲೆ ಹೋಗಿ ಕುಂಕುಮ ಇಟ್ಟು ಎಳ್ಳುಂಡೆ ದೀಪಗಳನ್ನು ಹಚ್ಚಿ ಕೈ ಮುಗಿದು, ಅಡ್ಡ ಬಿದ್ದು ಮನೆಗೆ ಹಿಂತಿರುಗಿದಳು.

ಮನೆಯಿಂದ ಹೊರಟಾಗ ತನ್ನನ್ನು ಕಂಡು, ಬಾಗಿಲಲ್ಲಿ ನಿಂತಿದ್ದ ಓರಗಿತ್ತಿ ನಿಂಗಕ್ಕ ಒಳಕ್ಕೆ ಹೋಗಿ ತನಗೆ ಕೇಳುವಂತೆ: "ಏನ್ಲಾ ಕೊತ್ತಿ, ಎಲ್ಲಿ ಬುಟ್ಟಿ ನಿನ್ನ ಚಾಲ. ಕಾಸೀಗೋದ್ರೂ ಇಲಿತಿನ್ನೂ ಬುದ್ಧಿ!" ಎಂದು ಆಡಿದ ಸನ್ನೆ ಮಾತನ್ನು ಮೆಲುಕು ಹಾಕುತ್ತ 'ತರಾತುರಿ'ಯಲ್ಲಿ ದೇವಸ್ಥಾನದ ಕಡೆ ಬರುತ್ತಿದ್ದ ಚನ್ನಕ್ಕನಿಗೆ ದೂರದಿಂದಲೇ ಬೆಳಕು ಕಂಡು ರುದ್ರಮ್ಮ ಸೊಸೆಯೊಡನೆ ಬಂದು ಹೋಗಿರಬೇಕು ಎಂದುಕೊಳ್ಳುತ್ತಿದ್ದಂತೆಯೇ ಮಬ್ಬು ಕತ್ತಲೆಯಲ್ಲಿ ರುದ್ರಮ್ಮ ಸೊಸೆಯೊಡನೆ ಬರುವುದು ಕಂಡು ಬೆಚ್ಚಿ ಅಲ್ಲೇ ಪಕ್ಕದಲ್ಲಿದ್ದ ಶಿವಶಂಕುವಿನ ಮರದ ಮರೆಯಲ್ಲಿ ಅವಿತುಕೊಂಡಂತೆ ನಿಂತಳು. ಅವರು ಮರೆ ಆದ ಮೇಲೆ ಹೋಗಿ ಕುಂಕುಮ ಇಟ್ಟು ಎಳ್ಳುಂಡೆ ದೀಪಗಳನ್ನು ಹಚ್ಚಿ ಕೈ ಮುಗಿದು, ಅಡ್ಡ ಬಿದ್ದು ಮನೆಗೆ ಹಿಂತಿರುಗಿದಳು.

ಒಬ್ಬರ ಮುಖ ಒಬ್ಬರಿಗೆ ಕಾಣದಂತೆ ರುದ್ರಮ್ಮ ಚನ್ನಕ್ಕ ಇಬ್ಬರೂ ಆದಷ್ಟು ಎಚ್ಚರಿಕೆಯಿಂದಲೇ ನಡೆದುಕೊಂಡರು.

ಹೀಗೆಯೇ ಆರು ದಿನಗಳು ಕಳೆದುವು.

ಅರಿಕೆಯೂ ಯಶಸ್ವಿಯಾಗಿ ನಡೆಯತೊಡಗಿತು.

ಏಳನೆಯ ದಿನ-ಅರಿಕೆಯನ್ನು ತೀರಿಸುವ ಕೊನೆಯ ದಿನ. ಚನ್ನಕ್ಕ ಆ ದಿನ ಸಾಯಂಕಾಲ ಮನೆ ಕೋಣೆ ಸಾರಿಸಿ, ರಂಗೋಲೆ ಹಾಕಿದಳು. ಹೊತ್ತು ಮುಳುಗುವ

ಹೊತ್ತಾಗುತ್ತಲೇ ತನ್ನ ಮನೆ ದೇವರಾದ ತಿರುಪತಿ ತಿಮ್ಮಪ್ಪನಿಗೆ ಎಣ್ಣೆ ದೀಪ ಹಚ್ಚಿ. ದೀಪದ ಕೆಳಗಿನ ದನದ ತೊಪ್ಪೆಯ್ನು ಉಂಡೆಗೆ ಚೆಂಡು ಮಲ್ಲಿಗೆಯ ಸಣ್ಣ ಸಣ್ಣ ಹೂವುಗಳನ್ನು ಸಿಕ್ಕಿಸಿ, ಎರಡು ಗಂಧದ ಕಡ್ಡಿಗಳನ್ನು ತೆಗೆದುಕೊಂಡು, ಕಣ್ಣು ಮುಚ್ಚಿ ಕೈ ಮುಗಿದು "ಎಲ್ಲ ನಿಂದೇ ನಮ್ಮಪ್ಪ" ಎಂದು ದೀಪದ ಕೆಳಭಾಗಕ್ಕೆ ಅವನ್ನು ಜೋಪಾನವಾಗಿ ಸ್ಥಾಪಿಸಿದಳು. ಎಳ್ಳುಂಡೆಗಳನ್ನೂ, ಬೆಂಕಿ ಪೊಟ್ಟಣವನ್ನೂ ತೆಗೆದುಕೊಂಡು, ತೋಟದಿಂದ ತಂದಿದ್ದ ಹೂವನ್ನು ಮಡಿಲು ಕಟ್ಟಿಕೊಂಡಳು. ಹಾಗೆಯೇ ಮನೆಯ ಬಾಗಿಲವರೆಗೂ ಬಂದು ಇಣುಕಿ ನೋಡಿದಳು. ದನಕರುಗಳು. ಆಡು ಕುರಿಗಳು, ಹುಲ್ಲು ಸೊಪ್ಪು ತರುವವರು. ಹೊಲ-ಮಡಿಗಳಿಂದ ಹಿಂತಿರುಗುತ್ತಿದ್ದರು. ಪಡುವಲ ದಿಕ್ಕಿನಲ್ಲಿ ಮೋಡಗಳು ಕಪ್ಪಗೆ ಹೆಪ್ಪುಗಟ್ಟ ತೊಡಗಿದ್ದವು. ಬೀಸಿದ ಗಾಳಿಗೆ ಬೀದಿಯ ಮಣ್ಣಿನ ಕಣಗಳು ಕಣ್ಣಿಗೆ ಬಿದ್ದು ಕಣ್ಣೀರು ಬಂದಂತಾಗಿ, ಕಣ್ಣುಗಳನ್ನು ಉಜ್ಜಿಕೊಳ್ಳುತ್ತ ಚನ್ನಕ್ಕ "ಮಳೆ ಜೋರಾಗಿ ಬರುಪಂಗದೆ ಆದಷ್ಟು ಬೇಗ ನಂದಿ ಬಸವಣ್ಣನ ಗುಡಿಗೆ ಹೋಗಿ ಬರೋದು ವಾಸಿ" ಎಂದು ಮನಸ್ಸಿನಲ್ಲಿ ನಿರ್ಧರಿಸಿ, ದೊಡ್ಡ ಹೆಜ್ಜೆಗಳನ್ನು ಹಾಕುತ್ತ ಹೊರಟಳು.

ರುದ್ರಮ್ಮನೂ ಅಷ್ಟೆ ಮೈ ತೊಳೆದುಕೊಂಡು ಈಶ್ವರನನ್ನು ಧ್ಯಾನಿಸಿ, ವಿಭೂತಿಯನ್ನು ಹಣೆಗೆ ಹಚ್ಚಿಕೊಂಡಳು. ಎಳ್ಳುಂಡೆಗಳನ್ನೂ, ಗಂಧದಕಡ್ಡಿ ತಂದಿದ್ದ ಬಿಡಿ ಹೂವುಗಳನ್ನೂ, ಬಸವಣ್ಣ ದೇವರ ಕತ್ತಿಗೆ ಹಾಕಲು ತಂದಿದ್ದ ಹೂವಿನ ಸರವನ್ನೂ ತೆಗೆದುಕೊಂಡು; ಸಣ್ಣದಾಗಿ ಕುಟುಕಲಾರಂಭಿಸಿದ್ದ ಮಳೆ "ಜೋರಾಗಿ ಬಿಡುತ್ತದೋ ಇಲ್ಲವೋ!" ಎಂದುಕೊಂಡು ನಡೆದಳು.

ಎರಡು-ಮೂರು ನಿಮಿಷಗಳ ನಡಿಗೆ ಅಷ್ಟೆ ದೇವಸ್ಥಾನದ ಬಳಿ ಬಂದಾಗ ಒಳಗೆ ಯಾರೊ ಇದ್ದಾರೆಂದು ಕಾಣುತ್ತಿದ್ದ ಬೆಳಕಿನಿಂದ ತಿಳಿಯಿತು. "ಇನ್ಯಾರು ಆ ಚನ್ನಕ್ಕನೇಯಿರಬೇಕು!" ಎಂದು ತಾತ್ಸಾರ ಸುಳಿದರೂ. ತಾನು ಬಂದಿರುವುದು ಅರಿಕೆಯ ಕೊನೆಯ ದಿನವನ್ನು ತೀರಸಲು ಎಂದು ತಿಳಿದಾಗ ಅದು ಮಾಯವಾಗಿ ಒಂದು ಬಗೆಯ ಭಕ್ತಿ ಮೂಡಿತು. ಮೆಟ್ಟಲು ಹತ್ತಿ ಸದ್ದಾಗದಂತೆ ದೇವಸ್ಥಾನದ ಬಲಗಡೆ ಮೂಲೆಕಡೆಗೆ ಚನ್ನಕ್ಕನಿಗೆ ತಾನು ಬಂದಿರುವುದು ಕಾಣಬಾರದು ಎಂದು ಎಚ್ಚರಿಕೆ ವಹಿಸಿ ನಿಂತುಕೊಂಡಳು. ದೇವಸ್ಥಾನದ ಹಜಾರದಲ್ಲಿ ಹೊರಗೆ, ಕತ್ತಲೆ 'ಗವ್' ಎನ್ನಲಾರಂಭಿಸಿತು. ಮಳೆಯ ಹನಿಗಳೂ ಜಾಸ್ತಿ ಆಗತೊಡಗಿದವು. ಆಗೊಮ್ಮೆ-ಈಗೊಮ್ಮೆ ಗಾಳಿಯೂ 'ಭರೋ' ಎಂದು ಮೊರೆಯಲಾರಂಭಿಸಿತು.

ದೇವರಿಗೆ ಹೂವು ಮುಡಿಸಿ, ದೀಪಗಳನ್ನು ಹಚ್ಚಿ, ಚನ್ನಕ್ಕ ಕೈ ಮುಗಿದು, ಅಡ್ಡಬೀಳುತ್ತ "ಅಯ್ಯೋ ನಮ್ಮಪ್ಪ... ನಾಲ್ಕು ಹೂವಿನ ಮಾತಿಗೆ ಬಾಯಿಗೆ ಬಂದಂಗೆ ಮಾತಾಡಿ, ಅವಮ್ಮನ ಮನ್ಸು ನೋಯ್ಸಿ ನನ್ನ ಮಾನ, ಅವಳ ಮಾನ ಎಲ್ಲ ಬೀದಿಗೆ ಬರುವಂಗೆ ಮಾಡ್ದೆ. ನನ್ನ ತಪ್ಪ ನಿನ್ನ ಹೊಟ್ಟೆಗಾಕ್ಕೋ ಬಸವಣ್ಣ" ಎಂದು ಮೇಲೆದ್ದು ಮತ್ತೊಮ್ಮೆ ಕೈ ಮುಗಿದು, ಬಸವಣ್ಣನ ನಾಲ್ಕು ಪಾದಗಳನ್ನೂ ಕೈಯಲ್ಲಿ ಮುಟ್ಟಿ ಭಯ ಭಕ್ತಿಗಳಿಂದ ಕಣ್ಣಿಗೊತ್ತಿಕೊಂಡು ಹೊರಕ್ಕೆ ಬಂದಳು.

ಎಲ್ಲವನ್ನೂ ಕಿವಿಗೊಟ್ಟು ಆಲಿಸುತ್ತಿದ್ದ ರುದ್ರಮ್ಮ, ಚನ್ನಕ್ಕ ಬರುವುದನ್ನು ಕಂಡು ಕತ್ತಲೆ ಜಾಸ್ತಿಯಿದ್ದ ಹಜಾರದ ಬಲ ಮೂಲೆಯಲ್ಲಿ ಒಂದು 'ಹಿಡಿ'ಯಾಗಿ ನಿಂತುಕೊಂಡಳು.

ಚನ್ನಕ್ಕ ದೇವಸ್ಥಾನದ ಮೆಟ್ಟಿಲುಗಳನ್ನು ಇಳಿದು ಜೋರಾಗಿ ಬಾರಿಸುತ್ತಿದ್ದ ಮಳೆಯಲ್ಲೇ ನಾಲ್ಕು ಹೆಜ್ಜೆ ಮನೆಯ ಕಡೆಗೆ ಹಾಕುವುದರಲ್ಲೇ 'ಸರಕ್ಕನೆ' ರುದ್ರಮ್ಮ ದೇವರ ಗರ್ಭಸ್ಥಾನವನ್ನು ಹೊಕ್ಕಳು.

ಅಲ್ಲಿ ಅವಳು ಕಂಡದ್ದೇನು?

ಉರಿಯುತ್ತಿದ್ದ ನಾಲ್ಕು ಎಳ್ಳುಂಡೆ ದೀಪಗಳ ಜ್ಯೋತಿಯಲ್ಲಿ, ಹೂವಿನ ರಾಶಿಯಲ್ಲೇ ಮುಳುಗಿಹೋದಂತಿದ್ದ ನಂದಿ ಬಸವಣ್ಣನ ವಿಗ್ರಹ!

ಚನ್ನಕ್ಕನ ತೋಟದ ಹೂವುಗಳೇ! ತಾನು ಯಾವ ಹೂವುಗಳಿಗೆಂದು ಮಾರಾಮಾರಿ ಜಗಳವಾಡಿದ್ದಳೋ ಅದೇ ಹೂವುಗಳು?!



ಅವಳಿಗೆ ಅರಿವಿಲ್ಲದಂತೆಯೇ ಕಣ್ಣುಗಳು ನೀರು ತುಂಬಿ ಮುಂಜಾದವು ಹೂವಿನಿಂದ ಅಲಂಕೃತವಾಗಿದ್ದ ಬಸವಣ್ಣನ ವಿಗ್ರಹ ಚನ್ನಕ್ಕನ ಅಂತರಂಗದ ಮೂಕಸಾಕ್ಷಿಯಾಗಿ ಮೂಡಿದಂತೆಯೇ ತಾನು ತಂದಿದ್ದ ಬಿಡಿ ಹೂವುಗಳನ್ನೂ ಹೂವಿನ ಸರವನ್ನೂ ಹಾಕಿ ಬಸವಣ್ಣನನ್ನು ಅಲಂಕರಿಸಿ ಎಳ್ಳುಂಡೆ ದೀಪಗಳನ್ನು ಹಚ್ಚಿ ಕೈ ಮುಗಿದು ಅಡ್ಡಬಿದ್ದಳು ಪ್ರಯತ್ನ ಪಟ್ಟರೂ ಮಾತು ಹೊರಡಲಿಲ್ಲ. ಅವಳ ಅಂತರಂಗದ ನೋವಿನ ಸಂಕೇತವಾಗಿ ಎರಡು ತೊಟ್ಟು ನೀರು ಕಣ್ಣಿಂದ ತುಳುಕು ನೆಲ ಸೇರಿದವು.

ಹಜಾರಕ್ಕೆ ಬಂದಳು. ಮಳೆ ಜೋರಾಗಿ ಬೀಳುತ್ತಿದೆ. ಗಾಳಿಯೂ ತನ್ನ ಕೆಚ್ಚೆಲ್ಲವನ್ನೂ ಉಪಯೋಗಿಸಿ ಮೊರೆಯುತ್ತಿದೆ. ನಿಂತ ಮೇಲೆ ಮನೆ ಸೇರಬೇಕು ಎಂದುಕೊಂಡು ಹಜಾರಕ್ಕೆ ಇಳಿದಾಗ ಯಾರೋ ಹಜಾರದ ಎಡ ಮೂಲೆಯಲ್ಲಿ ನಿಂತಿರುವುದನ್ನು ಕಂಡು ಹೆದರಿ ಕೇಳಿದಳು:

"ಯಾರವರು?"

"ನಾನು ರುದ್ರಮ್ಮ ಚನ್ನಕ್ಕ. ಮನೆ..ಗೋಗುವ, ಅಂತ ಹೊರಟೆ... ಮಳೆ ಜೋರಾಯಿತು... ನಿಂತುಕೊಂಡೆ'

ತಡೆದು ತಡೆದು ಬಂತು ಚನ್ನಕ್ಕನ ಉತ್ತರ.

'ಸುಯ್' ಎಂದು ಗಿಡಮರಗಳು ಭೂಮಿಗೆ ವಾಲುವಂತೆ ಅಬ್ಬರಿಸಿದ ಗಾಳಿಯ ಬಡಿತ ರುದ್ರಮ್ಮನನ್ನು ಹಿಂದಕ್ಕೆ ನೂಕಿದಂತಾಗಿ ಗೋಡೆಗೆ ಒರಗಿಕೊಂಡಳು ಮಳೆಯ ಗಡುಸು. ಹಜಾರಕ್ಕೆ ಸಿಡಿಯುತ್ತಿದ್ದ ನೀರಿನಿಂದಲೇ ಗೊತ್ತಾಯಿತು. ಮಬ್ಬು ಬೆಳಕಿನಲ್ಲೆ ಚನ್ನಕ್ಕ ತನ್ನ ಕಡೆ ನೋಡುತ್ತಿರುವುದು ಗೋಚರವಾಯಿತು. ತಾನು ಅವಳ ಕಡೆ ಕತ್ತೆತ್ತಿ ಮಬ್ಬು ಬೆಳಕಿನ ಪರದೆಯನ್ನು ಭೇದಿಸಿ ನೋಡಿದಳು.

'ಸೂಂಯ್...ಯ್...ಯೂ...'

ಈ ಸಾರಿ ಗಾಳಿ ಮತ್ತಷ್ಟು ರಭಸದಿಂದ ಬೀಸಿತು. ಬೀಸಿದ ಗಾಳಿ ಬಾಗಿಲು ಕಾಣದ ಗರ್ಭಗುಡಿಯನ್ನು ಹೊಕ್ಕು ರುದ್ರಮ್ಮ ಚನ್ನಕ್ಕ ಹಚ್ಚಿಟ್ಟದ ಎಳ್ಳುಂಡೆ ದೀಪಗಳ ಜ್ವಾಲೆಗಳನ್ನು ಅತ್ತ-ಇತ್ತ ನಡುಗಿಸಿತು. ಅವು ಆಕಡೆಯಿಂದ-ಈಕಡೆಗೆ ತುಯ್ದಾಡಿ ಗಾಳಿಯ ರಭಸ ತಡೆಯಲಾರದೆ; "ಅಂತರಂಗದ ಜ್ಯೋತಿಗಳ ಪ್ರಕಾಶದ ಮುಂದೆ ತಮ್ಮದೇನು" ಎಂಬಂತೆ ನಂದಿ ಹೋದವು!

ಕತ್ತಲೆಯಲ್ಲೆ ರುದ್ರಮ್ಮ ಚನ್ನಕ್ಕ ನಿಂತಿದ್ದ ಕಡೆಗೆ ತಾನೂ ಹೆಜ್ಜೆ ಹಾಕಿದಳು!! □

ಮಾತಿನ ಹಂಗು

ರಹಮತ್ ತರೀಕೆರೆ

ಎಂ ಚಿದಾನಂದಮೂರ್ತಿ: ಪತನಗೊಂಡ ಸಂಶೋಧಕ

ಭಾರತೀಯರ ಮೇಲೆ ಬ್ರಿಟಿಷರಿಗಿದ್ದ ಮುಖ್ಯ ಆಕ್ಷೇಪಣೆಗಳಲ್ಲಿ ಒಂದೆಂದರೆ- 'ಇವರಿಗೆ ಚರಿತ್ರೆಯ ಪ್ರಜ್ಞೆಯಿಲ್ಲ' ಎಂಬುದು. ಇದಕ್ಕಾಗಿ ಅವರು ನಮ್ಮ ಅಧಿಕೃತ ಚರಿತ್ರೆ ಕಟ್ಟಿಕೊಡಲು ಯತ್ನಿಸಿದರು. ಅದನ್ನು ಕಟ್ಟಿಕೊಳ್ಳುವ ಕೆಲವು ಶಾಸ್ತ್ರವಿಧಾನಗಳನ್ನೂ ಕಲಿಸಿಕೊಟ್ಟರು. ಅವುಗಳಲ್ಲಿ ಚರಿತ್ರೆಯನ್ನು ಕಟ್ಟಿಕೊಳ್ಳುವ ಕ್ಲಾಸಿಕಲ್ ಸಂಶೋಧನ ವಿಧಾನವೂ ಒಂದು. ಈ ವಿಧಾನದ ಪ್ರಮುಖ ಲಕ್ಷಣಗಳೆಂದರೆ- ವರ್ತಮಾನದಲ್ಲಿ ಸಿಗುವ ಲಿಖಿತ ಮತ್ತು ಸ್ಥಾವರ ದಾಖಲೆಗಳನ್ನು ಇಟ್ಟುಕೊಂಡು ಗತಕಾಲವನ್ನು ಪುನಾರಚನೆ ಮಾಡುವುದು; ಮೂಲವನ್ನು ಹುಡುಕುತ್ತ ಹಿಂದುಹಿಂದಕ್ಕೆ ಹೋಗುವುದು; ಅಸ್ಪಷ್ಟವಾಗಿರುವುದನ್ನು ಸ್ಪಷ್ಟಗೊಳಿಸಿಕೊಳ್ಳುವುದು; ಗತವನ್ನು ವರ್ತಮಾನದ ಜತೆಗೆ ಸಂಬಂಧವಿಲ್ಲದಂತೆ ಕತ್ತರಿಸುವುದು; ಚರಿತ್ರೆಯ ರಚನೆಗೆ ಲಿಖಿತ ದಾಖಲೆಗಳನ್ನು ಮಾತ್ರ ಯೋಗ್ಯ ಸಾಮಗ್ರಿ ಎಂದು ಮಾನ್ಯ ಮಾಡುವುದು; ಜನರ ನಂಬಿಕೆ, ಅವರು ಕಟ್ಟಿಕೊಂಡ ಕತೆ, ಆಚರಿಸುವ ಆಚರಣೆಗಳನ್ನು ಚರಿತ್ರೆಯ ರಚನೆಯಲ್ಲಿ ಅಮುಖ್ಯವೆಂದು ಪಕ್ಕಕ್ಕೆ ಸರಿಸುವುದು, ಆಳುವವರ್ಗದ ಕಾರ್ಯಕಲಾಪಗಳನ್ನೆ ನಿಜವಾದ ಚರಿತ್ರೆಯೆಂದು ತಿಳಿಯುವುದು, ಜನರು ಪ್ರಭುತ್ವಗಳ ವಿರುದ್ಧ ಮಾಡಿದ ಪ್ರತಿಭಟನೆಗಳನ್ನು ಬಿಟ್ಟುಕೊಡುವುದು ಇತ್ಯಾದಿ.

ಈ ವಿಧಾನದ ಪರಿಮಿತಿಯಲ್ಲೇ ನಮ್ಮ ಮೊದಲ ತಲೆಮಾರಿನ ವಿದ್ವಾಂಸರು ಅಪಾರವಾದ ಕೆಲಸ ಮಾಡಿದರು. ನಂತರ ತಮ್ಮ ಶಿಷ್ಯರ ಮೂಲಕ ಇದನ್ನು ಮುಂದಿನ ತಲೆಮಾರಿನವರಿಗೆ ಇದನ್ನು ದಾಟಿಸಿದರು. ಈ ತಲೆಮಾರಿನವರಲ್ಲಿ ಒಬ್ಬರಾದ ಚಿದಾನಂದಮೂರ್ತಿ ಅವರು ಈ ವಿಧಾನದಲ್ಲಿ ಸಾಕಷ್ಟು ಸಾಧನೆ ಮಾಡಿದರು. ಅವರು ಈ ವಿಧಾನದಲ್ಲಿ ಸೃಷ್ಟಿಸಿದ ಉನ್ನತ ಸಂಶೋಧನ ಗ್ರಂಥವೆಂದರೆ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' (೧೯೬೬); ಇದೇ ವಿಧಾನದಲ್ಲಿ ರಚಿಸಿದ ಜನಪ್ರಿಯ ಕೃತಿಯೆಂದರೆ 'ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ'; ಇವುಗಳ ಸಮಸ್ಯೆಯೆಂದರೆ ಇಲ್ಲಿ ಮುಖ್ಯವಾಗಿ ರಾಜರಿದ್ದಾರೆ. ಜನರಿಲ್ಲ. ಗತವಿದೆ. ವರ್ತಮಾನವಿಲ್ಲ. ವೈಭವೀಕರಣವಿದೆ. ವಾಸ್ತವವಿಲ್ಲ. ಹಳತರ ಹಳಹಳಿಕೆಯಿದೆ. ಭವಿಷ್ಯದ ಬದುಕಿಲ್ಲ. ಕೆಲವರ ಕಥನವಿದೆ. ಬಹುಸಂಖ್ಯಾತರ ಬದುಕಿಲ್ಲ. ಉಳ್ಳವರು ಕಟ್ಟಿಸಿದ ಕಟ್ಟಡ ಕಟ್ಟಡಗಳಿವೆ. ಕಟ್ಟಿದ ಕೆಲಸಗಾರರಿಲ್ಲ.

ಚಿದಾನಂದಮೂರ್ತಿ ಮತ್ತು ಅವರಂತೆ ಚಿಂತಿಸುವ ಸಂಶೋಧಕರು ಈ ವಿಧಾನವುಳ್ಳ ಸಂಶೋಧನ ಮಾದರಿಯನ್ನು ತಮ್ಮ ಶಿಷ್ಯರ ತಲೆಮಾರಿಗೆ ಬಳುವಳಿಯಾಗಿ ಕೊಟ್ಟರು. ಈ ಮಾದರಿಯಲ್ಲಿ ಕೆಲಸ ಮಾಡಿದ ಬಹುತೇಕ ವಿದ್ವಾಂಸರು ವಿಶ್ವವಿದ್ಯಾಲಯಗಳಲ್ಲಿದ್ದ ಪ್ರಾಧ್ಯಾಪಕರಾಗಿದ್ದ ಕಾರಣ, ಇದು ಶೈಕ್ಷಣಿಕ ವಲಯದಲ್ಲಿ ವ್ಯಾಪಕವಾಗಿ ಮಾನ್ಯತೆ ಪಡೆಯಿತು. (ಈ ಭಾಗ್ಯ ಜನತೆಯ ಸಂಸ್ಕೃತಿಯನ್ನು ಶೋಧಿಸಿದ ಶಂಬಾ ಜೋಶಿಯವರಿಗೆ ದಕ್ಕಲಿಲ್ಲ) ಈಗಲೂ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ, ಚರಿತ್ರೆ ಇತ್ಯಾದಿಗಳ ಮೇಲೆ ಸಂಶೋಧನೆ ಮಾಡುವವರಲ್ಲಿ ಈ ಸಂಶೋಧನ ಮಾದರಿಯ ಪ್ರಭಾವ ದಟ್ಟವಾಗಿದೆ. ಕ್ಲಾಸಿಕಲ್ ಅಥವಾ ಸಾಂಪ್ರದಾಯಕ ಎನ್ನಬಹುದಾದ ಈ ಸಂಶೋಧನ ಮಾದರಿಯಲ್ಲಿ ಒಂದು ಮುಕ್ತವೆನ್ನಬಹುದಾದ ಗುಣವಿದೆ. ಅದೇನೆಂದರೆ ಒಂದು ವಿಷಯವನ್ನು ಖಚಿತ ಮಾಡಿಕೊಳ್ಳಲು ಸಿಗುವ ಹಲವು ಬಗೆಯ ದಾಖಲೆಗಳನ್ನು ಸಂಗ್ರಹಿಸಿ ಪರಿಶೀಲಿಸುವುದು. ಅವು ಸ್ಪಷ್ಟ ನಿರ್ಣಯಕ್ಕೆ ಬರಲು ಸಹಕರಿಸದಿದ್ದರೆ, ತಾತ್ಕಾಲಿಕವಾದ ಅನುಮಾನಿತ ನಿರ್ಧಾರವನ್ನು ಪ್ರಕಟಿಸುವುದು. ಮುಂದೆ ತಕ್ಕ ದಾಖಲೆ ಸಿಕ್ಕರೆ ಈ ಅನುಮಾನಿತ ನಿರ್ಧಾರವನ್ನು ಮರುಪರಿಶೀಲನೆ ಮಾಡುವುದು. ಇದನ್ನು ಸ್ವತಃ ಚಿಮೂ ಅವರ ಮೊದಲ ಘಟ್ಟದ ಸಂಶೋಧನೆಯಲ್ಲಿ ಕಾಣಬಹುದು. ಆದಿಚುಂಚನಗಿರಿಯಲ್ಲಿ ಸಿಕ್ಕ ಶಾಸನದಲ್ಲಿ ನಾಥ ಎಂಬ ಶಬ್ದದ ಉಲ್ಲೇಖ ಮಾತ್ರದಿಂದ, ಇಲ್ಲಿ ನಾಥಪಂಥವಿತ್ತು ಎಂಬ ನಿರ್ಣಯಕ್ಕೆ ಬರಲು ಅವರು ಹಿಂಜರಿಯುತ್ತಾರೆ. ಮುಂದೆ ಇದಕ್ಕೆ ಸಂಬಂಧಪಟ್ಟ ಹೊಸ ಮಾಹಿತಿಗಳು ಸಿಕ್ಕ ಬಳಿಕ, ತಮ್ಮ ಹಳೆಯ ನಿರ್ಧಾರವನ್ನು ಮರುಪರಿಶೀಲಿಸಿ, ಆದಿ ಚುಂಚನಗಿರಿಯಲ್ಲಿ ನಾಥಪಂಥವಿತ್ತು ಎಂದು ಖಚಿತ ತೀರ್ಮಾನಕ್ಕೆ ಬರುತ್ತಾರೆ. ಇವು ಈ ವಿಧಾನದಲ್ಲೆ ಇರುವ ಪ್ರಾಮಾಣಿಕತೆ, ವಸ್ತುನಿಷ್ಠತೆ ಮುಕ್ತತೆ ಎಂದು ಕರೆಯಲಾಗುವ ಕೆಲವು ಗುಣಗಳು.

ಈ ಮಾದರಿಯಲ್ಲಿ ನಾಲ್ಕು ದಶಕಗಳಷ್ಟು ಕಾಲ ಕೆಲಸ ಮಾಡಿದ ಚಿಮೂ ಅವರು ಕಳೆದೊಂದು ದಶಕದಿಂದ ಹೊಸ ರೂಪಾಂತರ ಪಡೆದಿದ್ದಾರೆ. ಅವರೀಗ ತಮ್ಮ ಸಂಶೋಧನ ಗ್ರಂಥಗಳಿಗಿಂತ ಹೆಚ್ಚಾಗಿ ಸುದ್ದಿಮಾಡುತ್ತಿರುವುದು, ತಮ್ಮ ಪತ್ರಿಕಾ ಹೇಳಿಕೆ, ವಾಚಕರ ವಾಣಿ ಪತ್ರ ಹಾಗೂ ಸಂಘಪರಿವಾರವು ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದ್ವೇಷ ಕಾರುವ ಉಪನ್ಯಾಸಗಳ ಮೂಲಕ ಅವರು ಬಲಪಂಥೀಯ ರಾಜಕೀಯ ಸಿದ್ಧಾಂತದ ಮುಖವಾಣಿ ಪಾತ್ರವನ್ನು ನಿರ್ವಹಿಸಲು ಆರಂಭಿಸಿದ ಬಳಿಕ, ಈ ಹಿಂದೆ ಅನುಸರಿಸುತ್ತಿದ್ದ ಸಂಶೋಧನ ವಿಧಾನದಲ್ಲೇ ಇದ್ದ ಆಕರನಿಷ್ಠೆಯನ್ನೂ ಬಿಟ್ಟುಕೊಟ್ಟು ಸಿದ್ಧಾಂತ ನಿಷ್ಠೆಗೆ ಜಾರಿದ್ದಾರೆ. ಇದನ್ನು ಅವರ 'ವೀರಶೈವ ಧರ್ಮ: ಭಾರತೀಯ ಸಂಸ್ಕೃತಿ' ಮುಂತಾದ ಕೃತಿಗಳಲ್ಲಿ ಕಾಣಬಹುದು. 'ವೀರಶೈವ ಧರ್ಮವು ಹಿಂದೂ ಧರ್ಮದ ಒಂದು ಭಾಗ' ಎಂಬುದು ಅವರ ಒಂದು ಸಿದ್ಧಾಂತ. ಅದಕ್ಕಾಗಿ ಅವರು ವಚನಗಳಲ್ಲಿ ಇರುವ ವೈದಿಕ ಸನಾತನವಾದವನ್ನು ವಿಮರ್ಶಿಸುವ ಉಲ್ಲೇಖಗಳನ್ನೆಲ್ಲ ಬೈಪಾಸು ಮಾಡಿ, ಬಸವತತ್ವದ ಅನನ್ಯತೆಯನ್ನು ಬಲಿಗೊಟ್ಟು, ಬ್ರಾಹ್ಮಣವಾದಕ್ಕೆ ಪೂರಕವಾದ ಒಂದು ರಚನೆಯನ್ನು ಕಟ್ಟಿ ತೋರಿಸುತ್ತಾರೆ. ಅವರ ಹಿಂದಿನ ಕೃತಿಗಳಲ್ಲಿ ಕಾಣುತ್ತಿದ್ದ ಕ್ಲಾಸಿಕಲ್ ಸಂಶೋಧನೆಯ ಪಾಂಡಿತ್ಯ ಮತ್ತ ಶಿಸ್ತುಗಳೂ ಈಗ ಕ್ಷೀಣವಾಗಿ ಒಂದು ಬಗೆಯ ಶೈಥಿಲ್ಯ ಮತ್ತು ಅರಾಜಕತೆ ಕಾಣಿಸಿಕೊಂಡಿದೆ. ಈ ಬೌದ್ಧಿಕ ಪತನಕ್ಕೆ ನಾನಾ ಕಾರಣಗಳಿವೆ. ಅವುಗಳಲ್ಲಿ ಒಂದು ನಿರ್ಣಯವನ್ನು ಗಟ್ಟಿಯಾಗಿ ಇಟ್ಟುಕೊಂಡು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹುಡುಕುವುದೂ ಒಂದು.

ಸಂಶೋಧನೆಯಲ್ಲಿ ಆರಂಭಕ್ಕೆ ತಾತ್ಕಾಲಿಕವಾದ ಒಂದು ಊಹಾವಾದ (ಹೈಪಾಥೀಸಿಸ್) ಇಟ್ಟುಕೊಳ್ಳುವುದು, ಮುಂದೆ ಸಿಗುವ ಮಾಹಿತಿಗಳನ್ನು ವಿಶ್ಲೇಷಣೆ ವ್ಯಾಖ್ಯಾನಗಳ ಮೂಲಕ ಆ ಊಹಾವಾದವನ್ನು ಸಮರ್ಥಿಸಲು ಯತ್ನಿಸುವುದು, ಅದು ಸಾಧ್ಯವಾದಿದ್ದರೆ ಊಹಾವಾದವನ್ನೆ ತಪ್ಪೆಂದು ಕೈಬಿಡುವುದು- ಇವು ಸಮಾಜ ವಿಜ್ಞಾ-

ನಾಲ್ಕು ದಶಕಗಳಷ್ಟು ಕಾಲ ಕೆಲಸ ಮಾಡಿದ ಚಿಮೂ ಅವರು ಕಳೆದೊಂದು ದಶಕದಿಂದ ಹೊಸ ರೂಪಾಂತರ ಪಡೆದಿದ್ದಾರೆ. ಅವರೀಗ ತಮ್ಮ ಸಂಶೋಧನ ಗ್ರಂಥಗಳಿಗಿಂತ ಹೆಚ್ಚಾಗಿ ಸುದ್ದಿಮಾಡುತ್ತಿರುವುದು, ತಮ್ಮ ಪತ್ರಿಕಾ ಹೇಳಿಕೆ, ವಾಚಕರ ವಾಣಿ ಪತ್ರ ಹಾಗೂ ಸಂಘಪರಿವಾರವು ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದ್ವೇಷ ಕಾರುವ ಉಪನ್ಯಾಸಗಳ ಮೂಲಕ ಅವರು ಬಲಪಂಥೀಯ ರಾಜಕೀಯ ಸಿದ್ಧಾಂತದ ಮುಖವಾಣಿ ಪಾತ್ರವನ್ನು ನಿರ್ವಹಿಸಲು ಆರಂಭಿಸಿದ ಬಳಿಕ, ಈ ಹಿಂದೆ ಅನುಸರಿಸುತ್ತಿದ್ದ ಸಂಶೋಧನ ವಿಧಾನದಲ್ಲೇ ಇದ್ದ ಆಕರನಿಷ್ಠೆಯನ್ನೂ ಬಿಟ್ಟುಕೊಟ್ಟು ಸಿದ್ಧಾಂತ ನಿಷ್ಠೆಗೆ ಜಾರಿದ್ದಾರೆ. ಇದನ್ನು ಅವರ 'ವೀರಶೈವ ಧರ್ಮ: ಭಾರತೀಯ ಸಂಸ್ಕೃತಿ' ಮುಂತಾದ ಕೃತಿಗಳಲ್ಲಿ ಕಾಣಬಹುದು. 'ವೀರಶೈವ ಧರ್ಮವು ಹಿಂದೂ ಧರ್ಮದ ಒಂದು ಭಾಗ' ಎಂಬುದು ಅವರ ಒಂದು ಸಿದ್ಧಾಂತ.

ನಗಳ ಸಂಶೋಧನೆಯಲ್ಲಿ ಬಳಕೆಯಲ್ಲಿರುವ ಹಂತಗಳೇ ಆಗಿವೆ. ಆದರೆ ಚಿಮೂ ಅವರು ಈಚೆಗೆ ಈ ವಿಧಾನವನ್ನೂ ಕೈಬಿಟ್ಟಿದ್ದಾರೆ. ಅವರೀಗ ಸಂಶೋಧನೆಯ ಕೊನೆಗೆ ಮೂಡಬೇಕಾದ ಅಂತಿಮ ನಿರ್ಣಯವನ್ನು ಅಂದರೆ ಥೀಸಿಸ್ಸನ್ನು ಸಂಶೋಧನೆಯ ಮೊದಲಿಗೇ ಇಟ್ಟುಕೊಂಡು ಹೊರಡಲಾರಂಭಿಸಿದ್ದಾರೆ. ತಮ್ಮ ಪೂರ್ವನಿರ್ಧಾರ ಅಥವಾ ಪೂರ್ವಗ್ರಹಗಳನ್ನು ಬೆಂಬಲಿಸುವ ದಾಖಲೆಗಳನ್ನಷ್ಟೆ ಅವರು ಹುಡುಕತೊಡಗುತ್ತಾರೆ. ಅವನ್ನು ಹೆಕ್ಕಿ ಜೋಡಿಸಿ, ಈ ಮೊದಲೇ ಮಾಡಿಕೊಂಡಿದ್ದ ನಿರ್ಧಾರವನ್ನು ದೃಢಗೊಳಿಸಿ ವಿರಮಿಸುತ್ತಾರೆ. ಒಂದೊಮ್ಮೆ ತಮ್ಮ ಪೂರ್ವನಿರ್ಧಾರವನ್ನು ಬೆಂಬಲಿಸದ ಮಾಹಿತಿ ಅಥವಾ ದಾಖಲೆ ಸಿಕ್ಕರೆ, ಅದನ್ನು ಉಲ್ಲೇಖಿಸದೆ ಉಪಾಯವಾಗಿ ಕೈಬಿಡುತ್ತಾರೆ ಇಲ್ಲವೇ ಅದನ್ನು ಖೊಟ್ಟಿ, ಪ್ರಕ್ಷಿಪ್ತ ಎಂದು ನಿರಾಕರಿಸುತ್ತಾರೆ. ಒಬ್ಬ ಜಾಣ ವಕೀಲನು ತನ್ನ ಕಕ್ಷಿದಾರರ ಕೇಸನ್ನು ಗೆಲ್ಲಿಸಲು ಮಾಡುವುದು ಇದನ್ನೇ ತಾನೇ?

ಚಿಮೂ ಅವರು ಸಾಧಿಸಲು ಆರಿಸಿಕೊಳ್ಳುತ್ತಿರುವ ಥೀಸಿಸ್ಸುಗಳಾದರೂ ಯಾವುವು? ಈಗಾಗಲೇ ಸಂಘ ಪರಿವಾರವು ತನ್ನ ಕಮ್ಮಟದಲ್ಲಿ ಕಳೆದ ಶತಮಾನದಲ್ಲೇ ರೂಪಿಸಿದಂತಹವು. ಉದಾಹರಣೆಗೆ ಮುಸ್ಲಿಮರು ಮತ್ತು ಕ್ರೈಸ್ತರು ಈ ದೇಶದ ಶತ್ರುಗಳು, ಮುಸ್ಲಿಮರು ಹಿಂದುಗಳ ಮೇಲೆ ಆಕ್ರಮಣ ಮಾಡಿದರು ಇತ್ಯಾದಿ. ಇವಕ್ಕೆ ಪೂರಕವಾದ ಮಾಹಿತಿಗಳನ್ನು ಹುಡುಕುತ್ತ ಜೋಡಿಸುತ್ತ ಹೋಗುವುದೇ ಇತಿಹಾಸದ ಸಂಶೋಧನೆ ಎಂದು ಭಾವಿಸಿರುವ ಒಂದು ಪಡೆ ಭಾರತದಲ್ಲಿದೆ. ಇವರಲ್ಲಿ ಪಿ.ಎನ್. ಓಕ್ ಎಂಬುವರೊಬ್ಬರು ಆಗಿಹೋದರು. ಇವರು ತಾಜಮಹಲು ಮೂಲದಲ್ಲಿ ಒಂದು ಶಿವಾಲಯವಾಗಿತ್ತು ಎಂದು ಲೇಖನ ಬರೆದವರು. ಭೈರಪ್ಪನವರ 'ಆವರಣ' ಕಾದಂಬರಿಯ 'ಹೊಸಶೋಧ'ಗಳು ಇದೇ ಮಾದರಿಯಲ್ಲಿ ರೂಪುಗೊಂಡವು. ಸೂರ್ಯನಾಥ ಕಾಮತ್ ಮುಂತಾದವರ ಐತಿಹಾಸಿಕ ಶೋಧಗಳು ಇದೇ ಮೂಸೆಯಲ್ಲಿ ಜನ್ಮಿಸಿದವು. ಚರಿತ್ರೆ ನಿರ್ಮಾಣದ ಈ ಮಾದರಿಯನ್ನು ನಿರ್ಮಿಸಿಕೊಡುವಲ್ಲಿ ಬ್ರಿಟಿಶರಿಗೆ ೨ ಮುಖ್ಯ ರಾಜಕೀಯ ಉದ್ದೇಶಗಳಿದ್ದವು. ಒಂದು– ತಮ್ಮ ಹಿಂದಿನ ಮೊಗಲ್ ದೊರೆಗಳ ಕ್ರೌರ್ಯಗಳನ್ನು ಚಿತ್ರಿಸುತ್ತ ತಮ್ಮ ಆಳ್ವಿಕೆಯ ಕಡೆ ಜನಗಮನ ಬಾರದೆ ಹೋಗಬೇಕು ಎನ್ನುವುದು. ಎರಡು–ಸಮಾಜವನ್ನು ಹಿಂದು ಮುಸ್ಲಿಂ ಎಂದು ವಿಭಜಿಸಿದರೆ, ತಮ್ಮ ಆಳ್ವಿಕೆ ನಿರಾಳವಾಗಿ ನಡೆಯುತ್ತದೆ ಎನ್ನುವುದು.

ಆದರೆ ಸಂಘಪರಿವಾರವು ಈ ಮಾದರಿಯನ್ನು ಗತ ಮತ್ತು ವರ್ತಮಾನದಲ್ಲಿ ಜಾತಿ ವರ್ಣ ಅಸ್ಪೃಶ್ಯತೆ ಮುಂತಾದ ಕೃತ್ಯಗಳ ಮೂಲಕ ಅದು ಎಸಗಿದ ಮತ್ತು ಎಸಗುತ್ತಿರುವ ಕೃತ್ಯಗಳನ್ನು ಮರೆಮಾಚುವುದಕ್ಕೆ ಮುಂದುವರೆಸಿತು. ದಲಿತರು ಮತ್ತು ಹಿಂದುಳಿದ ಜಾತಿಯವರು ಸಾಮಾಜಿಕ ಸಮಾನತೆಯ ಪ್ರಶ್ನೆ ಎತ್ತಿದಾಗಲ್ಲ, ಮಧ್ಯಕಾಲದ ಮುಸ್ಲಿಂ ದೊರೆಗಳು ಹಿಂದುಗಳ ಮೇಲೆ ಎಸಗಿದ ಘೋರ ಅನ್ಯಾಯದ ಪ್ರಶ್ನೆ ಮುಂದಿಟ್ಟು ಅವರನ್ನು ಒಗ್ಗೂಡಿಸಲು ಅದು ಬಳಸತೊಡಗಿತು. ಹೀಗೆ ಸಾಧ್ಯವಾಗುವ ಒಗ್ಗಟ್ಟಿನ ಮೇಲೆ ಬ್ರಾಹ್ಮಣ ಸನಾತನವಾದಿ ಸಾಂಸ್ಕೃತಿಕ ಯಜಮಾನಿಕೆಯನ್ನು ಹೇರತೊಡಗಿತು. ಹಿಂದುಳಿದ ಜಾತಿಗಳಿಗೆ ಉಪಯೋಗವಾಗುವ ಮಂಡಲ್ ವರದಿಯನ್ನು ಜಾರಿ ಮಾಡಲು ವಿಪಿ ಸಿಂಗರು ಹೊರಟ ಕೂಡಲೆ ಅದ್ವಾನಿಯವರು ಅಯೋಧ್ಯೆಯ ರಥಯಾತ್ರೆ

ಚಿಮೂ ಅವರು ಸಾಧಿಸಲು ಆರಿಸಿಕೊಳ್ಳುತ್ತಿರುವ ಥೀಸಿಸ್ಸುಗಳಾದರೂ ಯಾವುವು? ಈಗಾಗಲೇ ಸಂಘಪರಿವಾರವು ತನ್ನ ಕಮ್ಮಟದಲ್ಲಿ ಕಳೆದ ಶತಮಾನದಲ್ಲೇ ರೂಪಿಸಿದಂತಹವು. ಉದಾಹರಣೆಗೆ ಮುಸ್ಲಿಮರು ಮತ್ತು ಕ್ರೈಸ್ತರು ಈ ದೇಶದ ಶತ್ರುಗಳು, ಮುಸ್ಲಿಮರು ಹಿಂದುಗಳ ಮೇಲೆ ಆಕ್ರಮಣ ಮಾಡಿದರು ಇತ್ಯಾದಿ. ಇವಕ್ಕೆ ಪೂರಕವಾದ ಮಾಹಿತಿಗಳನ್ನು ಹುಡುಕುತ್ತ ಜೋಡಿಸುತ್ತ ಹೋಗುವುದೇ ಇತಿಹಾಸದ ಸಂಶೋಧನೆ ಎಂದು ಭಾವಿಸಿರುವ ಒಂದು ಪಡೆ ಭಾರತದಲ್ಲಿದೆ. ಇವರಲ್ಲಿ ಪಿ.ಎನ್. ಓಕ್ ಎಂಬುವರೊಬ್ಬರು ಆಗಿಹೋದರು. ಇವರು ತಾಜಮಹಲು ಮೂಲದಲ್ಲಿ ಒಂದು ಶಿವಾಲಯವಾಗಿತ್ತು.

ಆರಂಭಿಸಿದ್ದು ಇದೇ ತರ್ಕದಲ್ಲಿ. ಇದೊಂದು ಸೋಶಿಯಲ್ ಇಂಜಿನಿಯರಿಂಗ್.

ನಿರ್ದಿಷ್ಟ ಧರ್ಮ ಅಥವಾ ಧಾರ್ಮಿಕ ಸಮುದಾಯವನ್ನು ದುಷ್ಟೀಕರಿಸುವ, ಅದರಲ್ಲಿ ಯಾವುದೇ ಇತ್ಯಾತ್ಮಕ ಸಂಗತಿಗಳನ್ನು ಗುರುತಿಸಲಾಗದ ಈ ಏಕಮುಖಿಯೂ ದ್ವೇಷಸಾಧಕವೂ ಆದ ಥೀಸಿಸ್ಸುಗಳನ್ನು ಮುಸ್ಲಿಮರ ಬಗ್ಗೆ ಮಾತ್ರವಲ್ಲ, ಭಾರತದ ಯಾವುದೇ ಧರ್ಮ ಮತ ಸಮುದಾಯ ಅಥವಾ ರಾಜರ ಮೇಲೂ ಕಟ್ಟಿತೋರಿಸಬಹುದು. ಉದಾಹರಣೆಗೆ ಕರ್ನಾಟಕದಲ್ಲಿ ಜೈನರನ್ನು ಕೊಂದು ಬಸದಿಗಳನ್ನು ನಾಶಮಾಡುವ ಹಾಗೂ ವೈಷ್ಣವರನ್ನು ತುಳಿದು ವಿಷ್ಣುವಿಗ್ರಹಗಳನ್ನು ಭಂಗಪಡಿಸುವ ಉಗ್ರ ಶಿವಭಕ್ತರನ್ನು ಇಟ್ಟುಕೊಂಡು; ಅವರನ್ನು ನಾಯಕರನ್ನಾಗಿಸಿ ಹುಟ್ಟಿರುವ ಶೈವಕೃತಿಗಳನ್ನು ಮತ್ತು ಅಂಬಿಗರ ಚೌಡಯ್ಯ ಮುಂತಾದವರ ಉಗ್ರತೆಯ ವಚನಗಳನ್ನು ಇಟ್ಟುಕೊಂಡು; ಈಗ ಶೈವಗುಡಿಗಳಾಗಿರುವ ಬಸದಿಗಳನ್ನೂ ಭಗ್ನವಾಗಿರುವ ತೀರ್ಥಂಕರರ ಮೂರ್ತಿಗಳನ್ನೂ ಇಟ್ಟುಕೊಂಡು, ಕರ್ನಾಟಕದ ಶೈವಧರ್ಮವು ಒಂದು ವಿಧ್ವಂಸಕ ಧರ್ಮವೆಂದು ಥೀಸಿಸ್ಸನ್ನು ಕಟ್ಟಿತೋರಿಸಬಹುದು. ತಮಿಳುನಾಡಿನ

ಶೈವದ ವಿಷಯದಲ್ಲಿ ಇದನ್ನು ಇನ್ನೂ ಸುಲಭವಾಗಿ ಕಟ್ಟಬಹುದು. ಕೆಲವರು ಇದನ್ನು ಕಟ್ಟಿತೋರಿಸಿದ್ದಾರೆ ಕೂಡ.

ಸಮಸ್ಯೆಯೆಂದರೆ, ಹೀಗೆ ಕಟ್ಟುವವರು ಅದರಲ್ಲಿ ಅಲ್ಲಮ, ಅಕ್ಕ, ಬಸವಣ್ಣರ ವಚನಗಳು, ಹರಿಹರನ ಪುಷ್ಪರಗಳೆ ಇತ್ಯಾದಿ ಪಾಸಿಟಿವ್ ನಿದರ್ಶನಗಳು ಯಾವುವೂ ಉಲ್ಲೇಖಗೊಳ್ಳದಂತೆ ಎಚ್ಚರವಹಿಸಬೇಕಾಗುವುದು. ಕಾರಣ, ಅವು ಉಲ್ಲೇಖಗೊಂಡರೆ, ಶೈವವು ವಿಧ್ವಂಸಕ ಮತವೆಂಬ ಥೀಸಿಸ್ಸು ಶಿಥಿಲವಾಗಿಬಿಡುತ್ತದೆ. ವರ್ತಮಾನದಲ್ಲೂ, ಕೊಲೆ ಸುಲಿಗೆ, ರೇಪು, ವಂಚನೆಗಳಿಗೆ ಸಂಬಂಧಪಟ್ಟ ವರದಿಗಳನ್ನು ಸಂಗ್ರಹಿಸಿ, ಅವುಗಳಲ್ಲಿ ನಿರ್ದಿಷ್ಟ ಧಾರ್ಮಿಕ ಸಮುದಾಯಕ್ಕೇ ಸೇರಿದವನ್ನು ಆರಿಸಿ, ಆ ಸಮುದಾಯವನ್ನು ಕ್ರಿಮಿನಲ್ ಜನಾಂಗವೆಂದೂ ಅದರ ಧರ್ಮವನ್ನು ಕ್ರಿಮಿನಲ್ ಧರ್ಮವೆಂದೂ ಸುಲಭವಾಗಿ ಸಾಧಿಸಬಹುದು. ಇದನ್ನು ನೆಗಟಿವಿಸಂ ಎನ್ನುತ್ತಾರೆ. ಈ ಮಾದರಿಯಲ್ಲಿ ಚರಿತ್ರೆಯುದ್ದಕ್ಕೂ ಬ್ರಾಹ್ಮಣರನ್ನು ಎಷ್ಟು ದುಷ್ಟರಾಗಿದ್ದರು ಎಂದು ಸಾಧಿಸಿ ತೋರಿಸುವ 'ಪ್ರಗತಿಪರ' ಥೀಸಿಸ್ಸುಗಳೂ ಬಂದಿವೆ. ಅವುಗಳಲ್ಲಿ ಸ್ವಾಮಿ ಧರ್ಮತೀರ್ಥರ 'ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ'ವೂ ಒಂದು.

ಇಂತಹ ಏಕಮುಖಿ ಮತ್ತು ನೇತ್ಯಾತ್ಮಕವಾದಿ ದೃಷ್ಟಿಕೋನದಿಂದ ಕಟ್ಟಿಕೊಂಡ ಸಿದ್ಧಾಂತದ ಮೂಲಕವೇ ಕ್ರಿಸ್ತನನ್ನು ಕೊಂದವರೆಂಬ ನೆಪಕೊಟ್ಟು, ಆರೂವರೆ ಲಕ್ಷ ಯಹೂದಿಗಳನ್ನು ನಾಜಿಗಳು ಬೀದಿಗಳಲ್ಲಿ ಕೊಂದು ಹಾಕಿದರು. ಜನಾಂಗದ್ವೇಷೀ ಸಿದ್ಧಾಂತಗಳು ಕೇವಲ ವೈಚಾರಿಕ ಆಕೃತಿಗಳಾಗಿ ಉಳಿಯುವುದಿಲ್ಲ. ಅವು ರಾಜಕೀಯ ಸಾಮಾಜಿಕ ಕ್ರಿಯೆಗಳಾಗಿ ಅನುವಾದಗೊಳ್ಳುತ್ತವೆ. ಅದರ ಫಲವಾಗಿ ಜನ ಸಾಯುತ್ತಾರೆ. ಚರಿತ್ರೆಯ ತಪ್ಪಿಗೆ ವರ್ತಮಾನ ಬೆಲೆತೆರುತ್ತದೆ. ವರ್ತಮಾನದಲ್ಲಿ ಯಾರೋ ಎಲ್ಲೋ ಮಾಡಿದ ತಪ್ಪಿಗೆ, ಇನ್ಯಾರೊ ಬಲಿಯಾಗಬೇಕಾಗುತ್ತದೆ. ಪರಶುರಾಮನು ಒಬ್ಬ ಕ್ಷತ್ರಿಯ ಮಾಡಿದ ತಪ್ಪಿಗೆ ೨೧ ಸಲ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನೆಲ್ಲ ಕೊಡಲಿಯಲ್ಲಿ ಕಡಿದುಕೊಂಡು ಹೋದ ಪುರಾಣಕಥೆಯು ಜನಾಂಗದ್ವೇಷದ ಒಂದು ರೂಪಕವಾಗಿದೆ. ಗೋಳ್ವಾಳ್ಕರ್ ಮತ್ತು ಸಾವರ್ಕರ್ ಅವರು ಕಟ್ಟಿಕೊಟ್ಟ ಜನಾಂಗದ್ವೇಷೀ ಥೀಸಿಸ್ಸಿನ ಪರಿಣಾಮವಾಗಿ ಭಾರತದಲ್ಲಿ ಗಾಂಧಿಯ ಕೊಲೆಯಾಯಿತು. ಲಕ್ಷಾಂತರ ಹಿಂದೂ ಮುಸ್ಲಿಂ ಕ್ರೈಸ್ತ ಧರ್ಮಗಳಿಗೆ ಸೇರಿದ ಜನ ಜೀವಕಳೆದುಕೊಂಡರು. ಈಚೆಗೆ ಗುಜರಾತಿನಲ್ಲಿ ನಡೆದ ಮುಸ್ಲಿಮರ ನರಮೇಧವೂ ಇದರ ದೂರಗಾಮಿ ಪರಿಣಾಮಗಳಲ್ಲಿ ಒಂದು. ಇಂತಹವೇ ಜೀವವಿರೋಧಿ ಥೀಸಿಸ್ಸುಗಳನ್ನು ಮುಸ್ಲಿಂ ಮೂಲಭೂತವಾದಿಗಳೂ ಕಟ್ಟಿಕೊಂಡು ತಮ್ಮ ಅಧಿಕಾರದಲ್ಲಿ ದೌರ್ಜನ್ಯ ಎಸಗಿದ್ದಾರೆ. ಈ ನೇತ್ಯಾತ್ಮಕ ಮನೋಧರ್ಮದ ಸಿದ್ಧಾಂತಗಳಲ್ಲಿ ಯಾವ ಕಾರಣಕ್ಕೂ ತಾವು ದುಷ್ಟ ಕ್ರೂರ ಎಂದು ನಂಬಿ ದ್ವೇಷಿಸುವ ಧರ್ಮ/ಸಮುದಾಯ/ದೇಶದಲ್ಲಿ ಒಳಿತಿನ ಅಂಶಗಳನ್ನು ನೋಡುವಂತಿಲ್ಲ.

ಇಂತಹುದೇ ಮನೋಧರ್ಮದಿಂದ ಚಿಮೂ ಬಾಬಾಬುಡನಗಿರಿಯು ಹಿಂದುಗಳಿಗೆ ಸೇರಿದ್ದು, ಅದನ್ನು ಮುಸ್ಲಿಮರು ಆಕ್ರಮಿಸಿಕೊಂಡಿದ್ದಾರೆ ಎಂದು ವಾದ ಆರಂಭಿಸಿದ್ದಾರೆ. ತಮ್ಮ ಈ ಪೂರ್ವನಿರ್ಧಾರಕ್ಕೆ ಬೇಕಾದ ಸಾಕ್ಷ್ಯಗಳನ್ನು ಮಾತ್ರ ಆರಿಸಿ ಜೋಡಿಸುತ್ತ, ಬೇಡವಾದ ಸಾಕ್ಷ್ಯಗಳನ್ನು ಉಪಾಯವಾಗಿ ಕೈಬಿಡುತ್ತ, ಸಂಶೋಧ

ನೆಯ ವಿನ್ಯಾಸದಲ್ಲಿ ಮಂಡಿಸುತ್ತಿದ್ದಾರೆ. ಬಾಬಾಬುಡನಗಿರಿಯು ಸೂಫಿಪಂಥಕ್ಕೆ ಸಂಬಂಧಪಟ್ಟದ್ದನ್ನು ಸೂಚಿಸುವ ಮೂರು ಶಾಸನಗಳು ಗಿರಿಯಲ್ಲಿವೆ. ಇವನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯವು -'ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು' ಸಂಪುಟದಲ್ಲಿ- ಪ್ರಕಟಿಸಿದೆ. ಇವುಗಳಲ್ಲಿ ಒಂದು ಶಾಸನದ ಕಾಲದ ಬಗ್ಗೆ ಶಾಸನತಜ್ಞರಾಗಿದ್ದ ಬಿ.ಎಲ್.ರೈಸ್ ಅನುಮಾನ ವ್ಯಕ್ತಪಡಿಸಿದ್ದಾರೆ. ಇದನ್ನು ಮಾತ್ರ ಎತ್ತಿಕೊಂಡು ಚಿಮೂ ಉಲ್ಲೇಖಿಸುತ್ತಾರೆ. ಆದರೆ ಇದೇ ರೈಸ್ ಅನುಮಾನ ವ್ಯಕ್ತಪಡಿಸದಿರುವ ಮಿಕ್ಕ ಎರಡು ಶಾಸನಗಳೂ ಅಲ್ಲಿವೆ. ಅವನ್ನು ಅವರು ಉಲ್ಲೇಖಿಸುವುದಿಲ್ಲ.

೧೯ನೇ ಶತಮಾನದ ಮೊದಲಿಂದ ಶುರುವಾಗುವ ಬ್ರಿಟಿಶ್ ದಾಖಲೆಗಳು (ಮ್ಯಾನುವಲ್ಲುಗಳು, ಅಡ್ಮಿನಿಸ್ಟ್ರೇಟಿವ್ ರಿಪೋರ್ಟುಗಳು, ಆರ್ಕಿಯಾಲಜಿಕಲ್ ರಿಪೋರ್ಟುಗಳು, ಮುಜರಾಯಿ ಇಲಾಖಾ ವರದಿಗಳು ಹಾಗೂ ಗೆಜೆಟಿಯರುಗಳು) ನೂರಾರಿವೆ. ಅವನ್ನು ಕೂಡ ಅವರು ಪ್ರಸ್ತಾಪಿಸುವುದಿಲ್ಲ. ಕಾರಣ ಇವೆಲ್ಲವೂ ಈ ಬೆಟ್ಟವನ್ನು ಬಾಬಾಬುಡನಗಿರಿ ಎನ್ನುತ್ತವೆ. ದತ್ತಪೀಠ ಎನ್ನುವುದಿಲ್ಲ. ಒಂದು ಧರ್ಮಕ್ಕೆ ಸೇರಿದ್ದನ್ನು ಇನ್ನೊಂದು ಧರ್ಮದವರು ಆಕ್ರಮಿಸಿಕೊಂಡಿದ್ದಾರೆ ಎಂದು ಹೇಳುವುದಿಲ್ಲ. ಬದಲಿಗೆ ಎರಡೂ ಧರ್ಮದ ಜನರು ಹೋಗುವ ಪವಿತ್ರ ಜಾಗವೆಂದು ಹೇಳುತ್ತವೆ. ದರ್ಗಾದ ಅಧಿಪತಿ ಶಾಖಾದ್ರಿ ಎನ್ನುತ್ತವೆ. ಅದರ ಅರ್ಚಕ ಫಕೀರನೆಂದು ಹೇಳುತ್ತವೆ. ಅವು ದತ್ತಜಯಂತಿಯ ಸುದ್ದಿ ಎತ್ತುವುದಿಲ್ಲ. ಇವನ್ನೆಲ್ಲ ಪ್ರಸ್ತಾಪಿಸಿದರೆ ಚಿಮೂ ಕಟ್ಟಿಕೊಂಡಿರುವ ಪೂರ್ವನಿರ್ಧಾರ ಸಹಜವಾಗಿಯೇ ಬಿದ್ದುಹೋಗುತ್ತದೆ. ಏಕಮುಖಿ ದೃಷ್ಟಿಕೋನದಲ್ಲಿ ಕಟ್ಟಲಾಗುವ ಥೀಸಿಸ್ಸುಗಳು ಆಯಾ ಕಾಲದಲ್ಲಿ ಕೆಲವು ವರ್ಗಗಳ ರಾಜಕೀಯ ಅಗತ್ಯಗಳನ್ನು ಪೂರೈಸಬಹುದು. ಆದರೆ ಅವುಗಳ ಮೂಲಕ ಸಮಾಜದ ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳುವುದಾಗಲಿ, ಸಮಾಜವನ್ನು ಅರ್ಥಪೂರ್ಣವಾಗಿ ಕಟ್ಟುವುದಾಗಲಿ ಸಾಧ್ಯವಿಲ್ಲ.

ಚಿಮೂ ಕಳೆದ ಕೆಲವು ವರ್ಷಗಳಿಂದ ಇಂತಹ ಏಕಮುಖಿ ಮನೋಧರ್ಮದ ಕಪ್ಪು ಬಿಳುಪಿನ ಸರಳೀಕೃತ ಥೀಸಿಸ್ಸುಗಳನ್ನು ಸೃಷ್ಟಿಸುವಲ್ಲಿ ನಿರತರಾಗಿದ್ದಾರೆ. ಉದಾಹರಣೆಗೆ ಭಾರತದ ಕ್ರೈಸ್ತರು ಮತ್ತು ಮುಸ್ಲಿಮರ ಬಗ್ಗೆ ಅವರು ಚಲಾವಣೆಗೆ ಬಿಡುತ್ತಿರುವ ಥೀಸಿಸ್ಸುಗಳು. ಟಿಪ್ಪುಸುಲ್ತಾನನ ಬಗ್ಗೆ, ದೀನದಾರರ ಬಗ್ಗೆ, ಬಾಬಾಬುಡನಗಿರಿಯ ಬಗ್ಗೆ, ಹಂಪಿಯ ಬಗ್ಗೆ, ಅವರು ಮಾಡಿದ ಮಾಡುತ್ತಿರುವ ಬರೆಹಗಳು ಈ ರಾಜಕೀಯ ವಿನ್ಯಾಸದ ಬೇರೆಬೇರೆ ಅಧ್ಯಾಯಗಳು.

ನಿಜವಾದ ಸಂಶೋಧನೆ ಇರುವುದು ಲಿಖಿತ ದಾಖಲೆಗಳನ್ನು ಇಟ್ಟುಕೊಂಡು ಒಂದು ಅನುಭಾವಿ ಸ್ಥಳವು ಯಾವ ಧರ್ಮಕ್ಕೆ ಸೇರಿದ್ದು ಎಂದು ತೀರ್ಮಾನ ಕೊಡುವುದರಲ್ಲಿ ಅಲ್ಲ. ಇದು ಇಂತಹ ಧರ್ಮಕ್ಕೆ ಸೇರಿದ್ದು, ಅವರದನ್ನು ಬಿಟ್ಟುಕೊಡಬೇಕು, ಎಂಬ ನಿರ್ಣಯ ಮಾಡುವುದೇ ಕರ್ನಾಟಕದ ಅನುಭಾವಿ ಸಂಸ್ಕೃತಿಗೆ ಬಾಹಿರ. ಬಾಬಾಬುಡನಗಿರಿ, ಶಿಶುನಾಳ ಶರೀಫ, ಕಬೀರದಾಸ, ಸಾಯಿಬಾಬ, ಬೀಳಗಿಯ ಡೊಂಗ್ರಿಸಾಬ (ಇಡೀ ದರ್ಗಾ ಇಲ್ಲಿ 'ಹಿಂದು'ಗಳ ಕೈಯಲ್ಲಿದೆ) ತಿಂತಿಣಿ, ಕೊಡೇಕಲ್ಲು, ಸಾವಳಗಿ, ಶಿರಹಟ್ಟಿ ಮುಂತಾದ ಸೂಫಿ, ಅವಧೂತ, ಆರೂಢ ಸ್ಥಳಗಳನ್ನು ಸಾಂಪ್ರದಾಯಕ ಧರ್ಮಗಳ ಪರಿಭಾಷೆ ಮತ್ತು ನುಡಿಗಟ್ಟುಗಳನ್ನು ಬಳಸಿ ವಿಶ್ಲೇಷಿಸುವುದೇ ಅಪಚಾರ. ಮೂಲತಃ ಕರ್ನಾಟಕದ ಜನಸಮುದಾಯಗಳು ಮುಖ್ಯವಾಗಿ ದುಡಿಯುವ ವರ್ಗಗಳು, ತಮ್ಮ ಜಾತಿಮತಗಳನ್ನು ದಾಟಿಹೋಗಿ ಕಟ್ಟಿರುವ ಸಂಸ್ಕೃತಿಗೆ ಚಿಮೂ ಮತ್ತು ಅವರ ಸಂಶೋಧನ ವಿಧಾನವು ಬಾಹಿರವಾಗಿದೆ. ಅವರಿಗೆ ಕರ್ನಾಟಕದ ಪ್ರಭುಸಂಸ್ಕೃತಿಯ ಬಗ್ಗೆ ತಿಳಿವಳಿಕೆಯಿದೆ.

ಜನಸಂಸ್ಕೃತಿಯ ಬಗ್ಗೆ ಅಜ್ಞಾನ ಮತ್ತು ಅಸಡ್ಡೆಯಿದೆ. ಒಂದು ಆಕ್ರಮಣಕ್ಕೆ ಇನ್ನೊಂದು ಸಿಲುಕಿದೆ ಎಂಬುದು ಅವರ ನಂಬಿಕೆ. ಎರಡೂ ಕೂಡಿ ಮೂರನೆಯದೊಂದು ಹುಟ್ಟಿಸಿವೆ ಅಥವಾ ಎರಡೂ ಕೂಡಿ ಜತೆಯಲ್ಲಿ ಇರಬಲ್ಲವು ಎಂಬ ಸಂಕರ ಸಂಸ್ಕೃತಿಯ ಬಗ್ಗೆ ಅವರಿಗೆ ನಂಬಿಕೆಯಿಲ್ಲ. ಚರಿತ್ರೆಯಲ್ಲಿ ಧರ್ಮಗಳ ಹೆಸರಲ್ಲಿ ಅಪಾರ ಸಂಘರ್ಷಗಳಾಗಿರುವುದು, ಆಕ್ರಮಣಗಳಾಗಿರುವುದು ಸುಳ್ಳಲ್ಲ; ಅಧಿಕಾರಸ್ಥರ ಜತೆಗೂಡುವ ಎಲ್ಲ ಸಿದ್ಧಾಂತ, ಮತ, ಧರ್ಮಗಳಿಗೆ ದಮನಿಸುವ ಗುಣ ಬಂದುಬಿಡುತ್ತದೆ. ಈ ದಮನವು ಸನಾತನವಾದ, ಫಾರಸಿ, ಉರ್ದು ಸಂಸ್ಕೃತ, ಇಂಗ್ಲಿಷು, ಶೈವರು ಕ್ರೈಸ್ತರು, ವೈಷ್ಣವರು, ಮುಸ್ಲಿಮರು, ನಾಜಿಗಳು, ಕಮ್ಯುನಿಸ್ಟರ -ಈ ಮುಂತಾದ ಎಲ್ಲರಿಂದಲೂ ಆಗಿದೆ. ಆದರೆ ಈ ಸಂಘರ್ಷ ಆಕ್ರಮಣಗಳಾಚೆ ಸಮಾನ ಮನಸ್ಕ ಚಿಂತನೆಗಳು ತತ್ವಜ್ಞಾನಗಳು ಸಂಸ್ಕೃತಿಗಳು ಸಂಗೀತದ ರಾಗಗಳು, ಜನರು ಭಾಷೆಗಳು ಕೊಡುಕೊಳೆ ಕೂಡ ಮಾಡಿವೆ. ಹೀಗೆ ಕೊಡುಕೊಳೆ ಮಾಡಿದ ಸಂಕರ ಸಂಸ್ಕೃತಿಯು ಭಾರತದ ದೊಡ್ಡ ಆಸ್ತಿಯಾಗಿದೆ. ಅದು ಮತೀಯವಾದ ವಿಭಜಕವಾದ ಹಿಂದು ಮುಸ್ಲಿಂ ಎಂಬ ನುಡಿಗಟ್ಟಲ್ಲಿ ನೋಡಿದರೆ ಕಾಣುವುದಿಲ್ಲ.

ಸಾಂಸ್ಕೃತಿಕ ಕುರುಡುತನ ಸಂಘಪರಿವಾರಕ್ಕೆ ಇದೆ. ಆದರೆ ನಮ್ಮ ಹಿರಿಯ ಸಂಶೋಧಕರೂ ಗೌರವಕ್ಕೆ ಪಾತ್ರರೂ ಆದ ಚಿಮೂ ಅವರಿಗೂ ಈ ಕುರುಡುತನ ಬಂದರೆ ಏನು ಮಾಡಬೇಕು? ಬಲಪಂಥೀಯ ರಾಜಕಾರಣವು ಧರ್ಮದಂತಹ ಭಾವನಾತ್ಮಕ ವಿಷಯಗಳನ್ನು ಇಟ್ಟುಕೊಂಡು ಭಾವನೆ ಕೆರಳಿಸಿ ರಾಜಕೀಯ ಲಾಭಗಳಿಸಬೇಕೆಂದು ಹೂಡಿರುವ ಆಟವನ್ನು ಗೊತ್ತಿದ್ದೂ, ಅದನ್ನು ಬೆಂಬಲಿಸುವವರ ಜತೆ ಏನು ಸಂವಾದ ಮಾಡಬೇಕು, ಹೇಗೆ ಸಂವಾದ ಮಾಡಬೇಕು? ಇಡಿಯಾಗಿ ನೋಡುವ ದೃಷ್ಟಿಕೋನವನ್ನೇ ಕಳೆದುಕೊಂಡುಬಿಟ್ಟರೆ, ತಾತ್ವಿಕವಾಗಿ ಭಿನ್ನಾಭಿಪ್ರಾಯ ವ್ಯಕ್ತಪಡಿಸುವವರಿಂದ ಏನನ್ನೂ ಕಲಿಯಲು ತಯಾರಿಲ್ಲದಿದ್ದರೆ, ಅಂತಹವರ ಜತೆ ಏನು ತಾನೇ ಬೌದ್ಧಿಕ ಸಂವಾದ ಮಾಡಬಹುದು?

ಅದನ್ನು ಮುಸ್ಲಿಂ ಮೂಲಭೂತವಾದ ಮತ್ತು ಹಿಂದೂ ಕೋಮುವಾದದ ಕಣ್ಣಲ್ಲಿ ನೋಡಿದರೆ ಅದು ಅರ್ಥವಾಗುವುದಿಲ್ಲ.

ಹೀಗೆ ಕಾಣಲು ಮತ್ತು ಅರ್ಥಮಾಡಿಕೊಳ್ಳಲು ಸಾಧ್ಯವಾಗದ ಸಾಂಸ್ಕೃತಿಕ ಕುರುಡುತನ ಸಂಘಪರಿವಾರಕ್ಕೆ ಇದೆ. ಆದರೆ ನಮ್ಮ ಹಿರಿಯ ಸಂಶೋಧಕರೂ ಗೌರವಕ್ಕೆ ಪಾತ್ರರೂ ಆದ ಚಿಮೂ ಅವರಿಗೂ ಈ ಕುರುಡುತನ ಬಂದರೆ ಏನು ಮಾಡಬೇಕು? ಬಲಪಂಥೀಯ ರಾಜಕಾರಣವು ಧರ್ಮದಂತಹ ಭಾವನಾತ್ಮಕ ವಿಷಯಗಳನ್ನು ಇಟ್ಟುಕೊಂಡು ಭಾವನೆ ಕೆರಳಿಸಿ ರಾಜಕೀಯ ಲಾಭಗಳಿಸಬೇಕೆಂದು ಹೂಡಿರುವ ಆಟವನ್ನು ಗೊತ್ತಿದ್ದೂ, ಅದನ್ನು ಬೆಂಬಲಿಸುವವರ ಜತೆ ಏನು ಸಂವಾದ ಮಾಡಬೇಕು, ಹೇಗೆ ಸಂವಾದ ಮಾಡಬೇಕು? ಇಡಿಯಾಗಿ ನೋಡುವ ದೃಷ್ಟಿಕೋನವನ್ನೇ ಕಳೆದುಕೊಂಡುಬಿಟ್ಟರೆ, ತಾತ್ವಿಕವಾಗಿ ಭಿನ್ನಾಭಿಪ್ರಾಯ ವ್ಯಕ್ತಪಡಿಸುವವರಿಂದ ಏನನ್ನೂ ಕಲಿಯಲು ತಯಾರಿಲ್ಲದಿದ್ದರೆ, ಅಂತಹವರ ಜತೆ ಏನು ತಾನೇ ಬೌದ್ಧಿಕ ಸಂವಾದ ಮಾಡಬಹುದು?

ದಾಖಲೆಗಳ ಮೂಲಕ ಗತಕಾಲದ ಚರಿತ್ರೆಯ ನಿರ್ಮಾಣ ಮಾಡುವ ಕ್ಲಾಸಿಕಲ್ ಸಂಶೋಧನೆಯ ಚೌಕಟ್ಟನಲ್ಲಾಗಲಿ, ಜನಸಮುದಾಯಗಳು ಪಂಥಗಳೂ ನಿರ್ಮಿಸಿರುವ ಸಂಕರಶೀಲತೆಯ ಸಾಂಸ್ಕೃತಿಕ ಸಂಶೋಧನೆಯ ಚೌಕಟ್ಟಿನಲ್ಲಾಗಲಿ, ಚಿಮೂ ಅವರ ಜತೆ ವಾಗ್ವಾದ ಸಂವಾದ ಮಾಡುವುದು ಸಾಧ್ಯವಿಲ್ಲ; ಹಾಗೆ ಮಾಡುವುದರಿಂದ ಉಪಯೋಗವೂ ಇಲ್ಲ. ಯಾಕೆಂದರೆ ಮೂಲದೃಷ್ಟಿಕೋನವೇ ಕುಬ್ಜವೂ ಅಮಾನುಷವೂ ಆಗಿರುವ ಅವರ ವಿಧಾನದಲ್ಲಿ ವಾದ ಹೂಡಿ ಗೆಲ್ಲುವುದು ಸಾಧ್ಯವೇ ಇಲ್ಲ. ಮಕ್ಕಳ ಹಠ ಅವರದು. ಏನನ್ನೂ ಹೇಳಿದರೂ ಅವರು ಅದಕ್ಕೆ ಬದಲಿಯಾದ ಇನ್ನೊಂದನ್ನು ಅವರು ಹೇಳುತ್ತಾರೆ. ಅವರು ಬಳಸುವ ಹಿಂದೂ ಮುಸ್ಲಿಂ ಎಂಬ ಪರಿಭಾಷೆ ಗಮನಿಸಿ. ಅವಕ್ಕೆ ಮತೀಯವಾಗಿ ವಿಭಜಕವಾದ ಒಂದರ್ಥವಿದ್ದರೆ, ಸಾಂಸ್ಕೃತಿಕವಾಗಿ ಇನ್ನೊಂದರ್ಥವೂ ಇದೆ. ಬಿಜೆಪಿ ಚಿಂತನೆ ಒಪ್ಪುವವರೆಲ್ಲ ಹಿಂದೂಗಳು ಎಂದು ನಂಬುವುದಾದರೆ, ಈ ದೇಶದಲ್ಲಿ ಅದನ್ನು ಒಪ್ಪದವರ ಸಂಖ್ಯೆ ಹೆಚ್ಚಿದೆ. ಅವರನ್ನೆಲ್ಲ ಏನೆಂದು ಕರೆಯುವುದು?

ದಲಿತ ಸಂಘರ್ಷ ಸಮಿತಿಯವರು, ಅಹಿಂದದವರು ಅಷ್ಟೇಕೆ ಬಸವವಾದಿ ಲಿಂಗಾಯತರು ಕೂಡ ಇದರಲ್ಲಿ ಸೇರುವುದಿಲ್ಲ. ಬಸವಣ್ಣ ಹಿಂದುವೊ ಅಲ್ಲವೊ? ಹಿಂದುವಾದರೆ ಅವನು ವೇದಶಾಸ್ತ್ರ ಪುರಾಣ ಮಹಾಭಾರತ ರಾಮಾಯಣಗಳನ್ನು ಕುರಿತು ಮಾಡುವ ಕಟುವಿಮರ್ಶೆಗೆ ಏನರ್ಥ? ಹಾಗೆಯೇ ಮುಸ್ಲಿಂ ಅಥವಾ ಇಸ್ಲಾಂ ಕೂಡ ಚಿಮೂ ಹೇಳುವಂತೆ ಏಕರೂಪಿಯಲ್ಲ. ಸೂಫಿಯಂತೂ ಇಸ್ಲಾಮಿಕ್ ಎನ್ನುವುದೇ ಸರಿಯಲ್ಲ. ಬಾಬಾಬುಡನಗಿರಿಯು ಇಸ್ಲಾಮಿಗೆ ಸಂಬಂಧಪಟ್ಟದ್ದಲ್ಲ ಎಂದು ಮುಸ್ಲಿಂ ಮೌಲವಿಗಳು ಘೋಷಿಸಿದ್ದಾರೆ. ಯಾಕೆಂದರೆ ಸೂಫಿಸಂಪ್ರದಾಯವನ್ನು ಅವರು ಇಸ್ಲಾಮೆಂದು ಒಪ್ಪುವುದಿಲ್ಲ. ಆದರೂ ಚಿಮೂ ಬಾಬಾಬುಡನಗಿರಿಯಲ್ಲಿ ಇಸ್ಲಾಮೀಕರಣ ನಡೆದಿದೆ ಎಂದೇ ಹೇಳುತ್ತಾರೆ. ಎಲ್ಲವನ್ನು ಹಿಂದು ಮುಸ್ಲಿಂ ಎಂಬ ಕಪಾಟುಗಳಲ್ಲಿ ವಿಂಗಡಿಸುವುದು ಸಂಸ್ಕೃತಿ ಸೂಕ್ಷ್ಮತೆ ಇಲ್ಲದವರು ಮಾಡುವ ಕೆಲಸ. ಚಿಮೂ ಅವರಿಗೆ ನಿಜವಾಗಿಯೂ ನಮ್ಮ ಅವಧೂತ ಅನುಭಾವಿ ಸೂಫಿ ಸಂಸ್ಕೃತಿಯ ಬಗ್ಗೆ ತಿಳಿವಳಿಕೆಯಿಲ್ಲವೊ? ಸೂಫಿ

ಸಂಸ್ಕೃತಿಯು ಇಸ್ಲಾಮಿಕ್ ಮೂಲಭೂತವಾದಕ್ಕೆ ಪ್ರತಿಯಾದ ಪರಂಪರೆ ಎಂಬುದು ಗೊತ್ತಿಲ್ಲವೊ? ಇದೂ ಗೊತ್ತಾಗುತ್ತಿಲ್ಲ.

ಕ್ಲಾಸಿಕಲ್ ಸಂಶೋಧನ ಮಾದರಿಯಿಂದ ಸಂಘಪರಿವಾರದ ಚರಿತ್ರೆಕಾರ ಮತ್ತು ಮುಖವಾಣಿ ಆಗಿ ರೂಪಾಂತರ ಹೊಂದಿದ ಬಳಿಕ ಅವರಲ್ಲಿ ಉಂಟಾಗಿರುವ ದೊಡ್ಡ ಪತನವಿದು. ಇದು ಅವರು ಬೇಕೆಂದೇ ಆವಾಹನೆ ಮಾಡಿಕೊಂಡಿರುವ ಪತನವೊ, ಸಂಘಪರಿವಾರದ ವಕ್ತಾರರಾದ ಬಳಿಕ ಸಂಭವಿಸಿರುವ ಪರಿವರ್ತನೆಯೋ, ಈ ಲಕ್ಷಣಗಳು ಅವರಲ್ಲಿ ಮೊದಲಿಂದಲೂ ಇದ್ದು ಈ ಮುಪ್ಪಿನ ದಿನಗಳಲ್ಲಿ ಅವು ಹೊರಗೆ ಬಂದವೊ, ಅಮಾಯಕರಾದ ಅವರನ್ನು ಸಂಘಪರಿವಾರವು ಸೆಳೆದುಕೊಂಡು ತನ್ನ ಅಸ್ತ್ರವನ್ನಾಗಿ ಮಾಡಿಕೊಂಡಿತೊ, ಸ್ವಭಾವತಃ ಭಾವುಕರಾದ ಅವರು ಅರಿಯದೆ ಈ ವಾದಕ್ಕೆ ಬಿದ್ದರೊ, ತಮ್ಮ ವೈಯಕ್ತಿಕ ಬಿಕ್ಕಟ್ಟುಗಳಿಗೆ ಈ ಬಗೆಯ ಆಕ್ರಮಣಶೀಲ ರಾಜಕೀಯ ಸಿದ್ಧಾಂತಗಳಲ್ಲಿ ಪರಿಹಾರವನ್ನು ಕಂಡುಕೊಳ್ಳುತ್ತಿದ್ದಾರೊ, ಜನಪ್ರಿಯತೆಗಾಗಿ ಹೀಗೆ ಮಾಡುತ್ತಿದ್ದಾರೊ ತಿಳಿಯುವುದಿಲ್ಲ. ವಿಶೇಷವೆಂದರೆ ಮತ್ತೆಮತ್ತೆ ತಾವೊಬ್ಬ ಸತ್ಯಶೋಧಕನೆಂದು ಅವರು ಘೋಷಿಸಿಕೊಳ್ಳುತ್ತಾರೆ.

ಇದು ಕೂಡ ತಾವು ಹೇಳುವುದರ ಬಗ್ಗೆ ಅವರ ಒಳಗಿನ ಆತ್ಮಸಾಕ್ಷಿಯು ಉಂಟುಮಾಡಿರುವ ಅಲುಗಾಟದ ಪ್ರತೀಕವಾಗಿದೆ; ತಮ್ಮ ಮಾತುಗಳನ್ನು ಜನ ನಂಬುತ್ತಿಲ್ಲವೆಂದು ಹುಟ್ಟಿರುವ ಅನುಮಾನ ಅವಿಶ್ವಾಸಗಳ ಫಲವಾಗಿದೆ. ರಾಜಕೀಯ ಉದ್ದೇಶದಿಂದ ಹಿಂದೂಗಳ ಮೇಲಿನ ಆಕ್ರಮಣದ ಕಥನವನ್ನು ಮುಸ್ಲಿಮರು ಇಸ್ಲಾಂ ಅನಾಗರಿಕ ಬರ್ಬರವೆಂಬುದನ್ನು ಹರಡುತ್ತಿರುವವರನ್ನು ಅರ್ಥಮಾಡಿಕೊಳ್ಳಬಹುದು. ಕನಿಷ್ಠ ಈ ವಾದವನ್ನು ರೂಪಿಸಿದ ವರಿಗೆ ಅದರ ಸತ್ಯಾಸತ್ಯತೆಯಾದರೂ ಗೊತ್ತಿರುತ್ತದೆ. ಶೋಚನೀಯ ಸಂಗತಿ ಎಂದರೆ ಈ ಸಿದ್ಧಾಂತಗಳನ್ನು ನಡುವೆ ನುಗ್ಗಿ ಪ್ರಾಮಾಣಿಕವಾಗಿ ನಂಬಿಬಿಡುವ ಅಮಾಯಕರದು. ಮೂರ್ತಿಯವರು ಈ ಸಿದ್ಧಾಂತವನ್ನು ಮನಸಾ ನಂಬಿದ್ದರೆ ಅವರು ಮುಗ್ಧರು. ಅವರಿಗೆ ಬಾಬಾಬುಡನಗಿರಿಯಲ್ಲಿರುವ ದತ್ತಸೂಫಿ ಪರಂಪರೆಗಳ ಬಗ್ಗೆ ಗೊತ್ತಿಲ್ಲವೆಂದ ' ಅವರು ಅಜ್ಞಾನದಲ್ಲಿದ್ದಾರೆ ಎಂದರ್ಥ.

ಎಲ್ಲ ಗೊತ್ತಿದ್ದೂ ಅವರು ಉದ್ದೇಶಪೂರ್ವಕವಾಗಿ ರಾಜಕೀಯ ಕಾರಣದಿಂದ ವಾದ ಹೂಡುತ್ತಿದ್ದಾರೆ ಎಂದರೆ ಅವರದು ಕೆಟ್ಟಮನಸ್ಸು. ಯಾಕೆಂದರೆ ಇಂತಹ ವಾದಗಳ ಪರಿಣಾಮ ಅವರಿಗೆ ಗೊತ್ತಿದೆ. ಗುಜರಾತಿನ ಘಟನೆಗಳಾದ ಮೇಲಂತೂ ಅದು ಎಲ್ಲರಿಗೂ ಗೊತ್ತಾಗಿದೆ- ಬಲಪಂಥೀಯ ಜನಾಂಗ ದ್ವೇಷೀ ಸಿದ್ಧಾಂತಗಳಿಗೆ ತಾತ್ವಿಕ ಸಮರ್ಥನೆ ಒದಗಿಸುವುದು ಎಂದರೆ, ಒಂದು ವರ್ಗದ ಹಿತಾಸಕ್ತಿ ರಕ್ಷಿಸುವ ರಾಜಕೀಯ ಪಕ್ಷಕ್ಕೆ ಯಶಸ್ಸು ತರುವುದು ಮಾತ್ರವಲ್ಲ; ಒಂದು ಜನಾಂಗದ ಮಾರಣ ಹೋಮಕ್ಕೆ ಮುನ್ನುಡಿ ಬರೆಯುವುದು ಎಂದು. ಒಂದು ಸಮುದಾಯವನ್ನು ಅದು ನಿರ್ದಿಷ್ಟ ಧರ್ಮಕ್ಕೆ ಸೇರಿದ್ದು ಎಂಬ ಕಾರಣದಿಂದಲೇ ಕೊಲ್ಲಬೇಕು ಎಂದು ತಿಳಿದವರಿಗೆ ಬೆಂಬಲ ಕೊಡುವುದು ಪರೋಕ್ಷವಾಗಿ ಕೊಲೆಯನ್ನು ಮಾಡಿದಂತೆ. ನಮ್ಮ ಕಾಲದ ಒಬ್ಬ ಹಿರಿಯ ಸಂಶೋಧಕರ ಈ ಬಗೆಯ ರೂಪಪರಿವರ್ತನೆ ಅಥವಾ ಪತನವನ್ನು ಕಂಡರೆ ದುಃಖವಾಗುತ್ತದೆ. ಸಂಶೋಧನೆಯಲ್ಲಿ ತೊಡಗಿರುವ, ಅವರ ಪುಸ್ತಕಗಳನ್ನು ಓದುವ, ತರಗತಿಗಳಲ್ಲಿ ಚರ್ಚಿಸುವ, ಅವರನ್ನು ತಾತ್ವಿಕ ಭಿನ್ನಮತಗಳ ನಡುವೆಯೂ ಗೌರವಿಸುವ ಎಲ್ಲರಿಗೂ ಇದರಿಂದ ನಿರಾಶೆಯಾಗಿದೆ. ಪತನಗೊಂಡ ಚಿಂತಕ ಮತ್ತು ಸಂಶೋಧಕ ಕೆಟ್ಟ ರಾಜಕಾರಣಿಗಿಂತಲೂ ಅಪಾಯಕಾರಿ ಇರುತ್ತಾರೆ.

ರಾಜಕೀಯ ಉದ್ದೇಶದಿಂದ ಹಿಂದೂಗಳ ಮೇಲಿನ ಆಕ್ರಮಣದ ಕಥನವನ್ನು ಮುಸ್ಲಿಮರು ಇಸ್ಲಾಂ ಅನಾಗರಿಕ ಬರ್ಬರವೆಂಬುದನ್ನು ಹರಡುತ್ತಿರುವವರನ್ನು ಅರ್ಥಮಾಡಿಕೊಳ್ಳಬಹುದು. ಕನಿಷ್ಠ ಈ ವಾದವನ್ನು ರೂಪಿಸಿದ ವರಿಗೆ ಅದರ ಸತ್ಯಾಸತ್ಯತೆಯಾದರೂ ಗೊತ್ತಿರುತ್ತದೆ. ಶೋಚನೀಯ ಸಂಗತಿ ಎಂದರೆ ಈ ಸಿದ್ಧಾಂತಗಳನ್ನು ನಡುವೆ ನುಗ್ಗಿ ಪ್ರಾಮಾಣಿಕವಾಗಿ ನಂಬಿಬಿಡುವ ಅಮಾಯಕರದು.

ಎರಡು 'ಸಣ್ಣಸಂಗತಿ'ಗಳನ್ನು ಹೇಳಿ ಈ ವಿಷಾದ ಲೇಖನ ಮುಗಿಸಬಹುದು. ೧. ಚಿಮೂ ಹಂಪಿಗೆ ಬಂದು ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದರಷ್ಟೆ. ಅವರು ನದಿಗೆ ಹಾರಿದಾಗ ತುಂಗಭದ್ರೆಯಲ್ಲಿ ಹೊಸ ಕದಡು ನೀರು ಬಂದಿತ್ತು. ಅದು ಅವರ ಹೊಟ್ಟೆಸೇರಿತು. ಬೆಸ್ತರು ಅವರನ್ನು ಎಳೆದು ಹೊರಹಾಕಿದ ಮೇಲೆ, ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು. ವೈದ್ಯರು ರಾತ್ರಿಯಿಡೀ ಅವರು ಕುಡಿದ ಕೊಳಕು ನೀರನ್ನು ವಾಂತಿ ಮಾಡಿಸಿದರು. ಆ ರಾತ್ರಿ ನಿದ್ದೆಗೆಟ್ಟು ಅವರ ಸೇವೆ ಮಾಡಿದ ವ್ಯಕ್ತಿಗಳಲ್ಲಿ ಹಂಪಿಯ ಕರೀಂಸಾಬ್ ಒಬ್ಬರು. ಮುಸ್ಲಿಮರು ಆಕ್ರಮಣ ಮಾಡಿ ನಾಶಮಾಡಿದ ಸಾಮ್ರಾಜ್ಯ ಎಂದು ಚಿಮೂ ಪ್ರತಿಪಾದಿಸುವ ವಿಜಯನಗರದಲ್ಲಿ, ಅವರನ್ನು ಸಾವಿನಿಂದ ಉಳಿಸುವ ಯತ್ನದಲ್ಲಿ ನಿದ್ದೆಗೆಟ್ಟ ಹುಡುಗನಿಗೆ ಚಿಮೂ ಅವರ ಧರ್ಮ ಯಾವುದು ಎಂಬ ಪ್ರಶ್ನೆ ಬರಲಿಲ್ಲ. ವೈದ್ಯರಿಗೂ ಚಿಮೂ ಜಾತಿಯ ಪ್ರಶ್ನೆ ಕಾಡಲಿಲ್ಲ.

ಜನಾಂಗದ್ವೇಷಿಯಾಗಿರುವ ಚಿಮೂ ಅವರ ಜೀವ ವುಳಿಸುವಲ್ಲಿ ಮುಸ್ಲಿಂ ತರುಣನೊಬ್ಬ ಭಾಗಿಯಾಗುವ ಈ ವ್ಯಂಗ್ಯದ ನಾಟಕವನ್ನು ಹಂಪಿಯ ವಿರೂಪಾಕ್ಷನೇ ಏರ್ಪಡಿಸಿರಬೇಕು. ಅವರು ಮುಸ್ಲಿಮರ ವಧೆಯ ಮುನ್ನುಡಿಯಂತಿರುವ ವಾಚಕರವಾಣಿ ಪತ್ರಗಳನ್ನು ನೋಡುವಾಗೆಲ್ಲ ಆ ರಾತ್ರಿ ನೆನಪಾಗುತ್ತದೆ. ೨. ಚಿಮೂ ದಾವಣಗೆರೆ ಜಿಲ್ಲೆಯವರು. ಈ ಜಿಲ್ಲೆಯ ಒಂದು ಲಂಬಾಣಿ ಕುಟುಂಬವು ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಒಂದು ಕಾಫಿ ತೋಟಕ್ಕೆ ಮಕ್ಕಳ ಸಮೇತ ದುಡಿಯಲು ಹೋಗಿತ್ತು. ತಂದೆತಾಯಿಗಳು ಮಕ್ಕಳನ್ನು ಬಿಟ್ಟು ದುಡಿಯಲು ಹೋದಾಗ, ಮನೆಯಲ್ಲಿದ್ದ ಚಿಕ್ಕಹುಡುಗಿಯನ್ನು ಅಪಹರಿಸಿ, ಅವಳ ಮೇಲೆ ಅತ್ಯಾಚಾರ ಮಾಡಿ, ಕೊಂದು ಹಾಕಲಾಯಿತು. ಹಾಗೆ ಮಾಡಿರುವುದು ಎಸ್ಟೇಟಿನ ಒಡೆಯನ ಮಗನೂ ಅವನ ಗೆಳೆಯರೂ ಎಂದು ಹೇಳಲಾಗಿದೆ. ಈಗ ಆ ಕುಟುಂಬ ಹೊಟ್ಟೆಪಾಡಿಗೆ ದುಡಿಯಲು ಹೋಗಿ ತಮ್ಮ ಪ್ರಾಯದ ಮಗಳನ್ನು ಕಳೆದುಕೊಂಡು ಮರಳಿ ಮನೆಗೆ ಬಂದಿದೆ. ಊರಲ್ಲಿ ಬದುಕಲು ಗತಿಯಿಲ್ಲ. ದುಡಿಯಲು ಹೋದರೆ ಹೀಗಾಗುತ್ತದೆ. ಈಗದು ಏನು ಮಾಡಬೇಕು? ಕರ್ನಾಟಕದ ಹಿರಿಯ ಚಿಂತಕರಾದ ಚಿಮೂ ಮತ್ತು ನಾವು ಎಲ್ಲರೂ ಸೇರಿ ಕರ್ನಾಟಕದ ದುಡಿಯುವ ಜನ ಬದುಕಲು ಪಡುತ್ತಿರುವ ಬವಣೆ, ಅನುಭವಿಸುತ್ತಿರುವ ದುರಂತಗಳ ಬಗ್ಗೆ ಚಿಂತನೆ ಮಾಡಬೇಕು. ಬಾಬಾಬುಡನಗಿರಿ ದರ್ಗಾವನ್ನು ವಿಮೋಚನೆ ಮಾಡಿ ವಿಎಚ್‌ಪಿಗೆ ವಹಿಸುವುದರಿಂದ ಇಂತಹ ದುರಂತಗಳನ್ನು ಇಲ್ಲವಾಗಿಸಲು ಸಾಧ್ಯವೇ?

ಜನಾಂಗದ್ವೇಷದಿಂದ ಎಂದಾದರೂ ಈ ಸಮೃದ್ಧವಾದ ನಾಡನ್ನು ಕಟ್ಟಲು ಸಾಧ್ಯವಾಗಿದೆಯೇ? ಅಪಾರ ಸಜ್ಜನಿಕೆಯ, ಮೃದುಮಾತಿನ, ವೈಯಕ್ತಿಕವಾಗಿ ಮಾನವೀಯ ಸಂಬಂಧಗಳನ್ನು ಗೌರವದಿಂದ ನಡೆಸಿಕೊಳ್ಳುವ ಚಿಮೂ, ಸಂಘಪರಿವಾರದ ಜೀವವಿರೋಧಿ ಚಿಂತನೆಗೆ ತಮ್ಮ ಕೊನೆಗಾಲದಲ್ಲಿ ಯಾಕೆ ಬಿದ್ದರೋ ಹೇಗೆ ಬಿದ್ದರೋ ಗೊತ್ತಿಲ್ಲ. ಅವರು ಸಂಶೋಧಕರಾಗಿ ಮಾತ್ರವಲ್ಲ, ಮನುಷ್ಯರಾಗಿಯೂ ಮಾನವೀಯ ಸಂವೇದನೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಇದನ್ನು ವೇದನೆಯಿಂದ ಹೇಳಬೇಕಾಗಿದೆ. □



'ಸಂವಾದ' ದೊರೆಯುವ ಸ್ಥಳ

☞ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
✛ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು- ೫೬೦ ೦೦೧, ☎ : ೨೨೨೦೩೫೮೦
✛ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೦೩೮೨, ✛ಸ್ಟೇಷನ್ ರಸ್ತೆ, ಗುಲ್ಬರ್ಗ-೨ ☎ : ೪೨೪೩೦೨
✛ಕೆ.ಎಸ್.ರಾವ್.ರಸ್ತೆ, ಮಂಗಳೂರು-೧, ☎ : ೨೪೪೧೦೧೬, ✛ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೮೯೪
☞ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ೧೧೮/೩ ಮೊದಲ ಮಹಡಿ ೨ನೇ ಮುಖ್ಯ ರಸ್ತೆ, (ನಟರಾಜ್ ಟಾಕೀಸ್ ಪಕ್ಕ) ಶೇಷಾದ್ರಿಪುರಂ ಬೆಂ-೨೦
☞ಕೆ.ಎಸ್.ಅರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು

ನಿರ್ಣಾಯಕ ಹಂತದಲ್ಲಿ ದಲಿತ ಕ್ರೈಸ್ತ ಚಳವಳಿ

ವೈ. ಮರಿಸ್ವಾಮಿ

ಸ್ವಾತಂತ್ರ್ಯ ನಂತರದ ಆರು ದಶಕಗಳ ನಂತರವೂ ದಲಿತ ಕ್ರೈಸ್ತ ಸಮುದಾಯವು ಮೀಸಲಾತಿಯ ಸಾಮಾಜಿಕ ನ್ಯಾಯದಿಂದ ವಂಚಿತವಾಗಿದೆ. ಭಾರತದ ಮತ್ತಿನ್ಯಾವ ಸಮುದಾಯವೂ ಈ ರೀತಿಯ ಸುಧೀರ್ಘ ಕಾಲದ ವಂಚನೆಗೆ ಒಳಗಾಗಿಲ್ಲ. ಇದರ ಪರಿಣಾಮವಾಗಿ ಭಾರತದಲ್ಲಿ ಎರಡು ಕೋಟಿಗಿಂತಲೂ ಅಧಿಕ ಸಂಖ್ಯೆಯಲ್ಲಿರುವ ದಲಿತ ಕ್ರೈಸ್ತ ಸಮುದಾಯವಿದಂದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹೇಳಹೆಸರಿಲ್ಲದಂತಾಗಿದೆ.

ದಲಿತ ಕ್ರೈಸ್ತರಿಗೆ ಇತರೆ ಧರ್ಮೀಯ ದಲಿತರಿಗಿರುವ ಪರಿಶಿಷ್ಟ ಜಾತಿಯ ಮೀಸಲಾತಿ ಹಾಗೂ ಸಂವಿಧಾನಾತ್ಮಕ ರಕ್ಷಣೆಗಾಗಿ ೧೯೫೦ರಿಂದಲೇ ಅಲ್ಲಲ್ಲಿ ಹೋರಾಟ ಪ್ರತಿಭಟನೆಗಳು ನಡೆದಿದ್ದರೂ ಕೂಡ ದಲಿತ ಕ್ರೈಸ್ತ ಚಳವಳಿ ೧೯೯೦ರ ದಶಕದಲ್ಲಿ ಕರ್ನಾಟಕವೂ ಒಳಗೊಂಡಂತೆ, ರಾಷ್ಟ್ರದ ಅನೇಕ ರಾಜ್ಯಗಳಲ್ಲಿ ತೀವ್ರವಾಗಿ ಕಾಣಿಸಿಕೊಂಡಿತು. ದಲಿತ ಚಳವಳಿ ಅದಕ್ಕೆ ಒತ್ತಾಸೆಯಾಗಿ ನಿಂತುಕೊಂಡಿತ್ತು. ರಾಜ್ಯದ ಬೆಂಗಳೂರು, ಮಂಗಳೂರು ಸೇರಿದಂತೆ ಅನೇಕ ಕಡೆಗಳಲ್ಲಿ ಬೃಹತ್ ರ್‍ಯಾಲಿ ಸಮಾವೇಶ, ವಿಚಾರ ಸಂಕಿರಣಗಳು ನಡೆದವು. ನವದೆಹಲಿಯಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಸೇರಿದ ದಲಿತ ಕ್ರೈಸ್ತರು ಮೀಸಲಾತಿಗಾಗಿ ಕೇಂದ್ರ ಸರ್ಕಾರವನ್ನು ಆಗ್ರಹಿಸಿ ಹಲವಾರು ಹೋರಾಟಗಳನ್ನು ನಡೆಸಿದರು. ಪಿ.ವಿ. ನರಸಿಂಹರಾವ್, ವಿ.ಪಿ. ಸಿಂಗ್ ಮತ್ತು ಹೆಚ್.ಡಿ ದೇವೇಗೌಡರು ಪ್ರಧಾನಿಗಳಾಗಿದ್ದ ಸಂದರ್ಭದಲ್ಲಿ, ಇನ್ನೇನು ದಲಿತ ಕ್ರೈಸ್ತರಿಗೆ ನ್ಯಾಯ ಸಿಕ್ಕೇ ಬಿಟ್ಟಿತು ಎನ್ನುವಂತಹ ಸನ್ನಿವೇಶ ನಿರ್ಮಾಣವಾಗಿ, ಕೊನೆಗೆ ಅದು ವಿಫಲವಾಯಿತು. ಇದಕ್ಕೆ ಆ ಸಂದರ್ಭದಲ್ಲಿ ನಡೆದ ಅನಿರೀಕ್ಷಿತ ರಾಜಕೀಯ ಸ್ಥಿತ್ಯಂತರಗಳೇ ಕಾರಣ.

೧೯೯೬ ರ ನಂತರ ದಲಿತ ಕ್ರೈಸ್ತ ಚಳವಳಿ ತನ್ನ ತೀವ್ರತೆಯನ್ನು ಕಳೆದುಕೊಂಡಿತಾದರೂ, ಚಳವಳಿಯಲ್ಲಿ ತೊಡಗಿಸಿಕೊಂಡಿದ್ದ ಅನೇಕ ಮುಖಂಡರು ಮತ್ತು ಧಾರ್ಮಿಕ ಗುರುಗಳು ತಮ್ಮದೇ ಆದ ಛಾಪನ್ನು ಮೂಡಿಸುವುದರ ಮೂಲಕ ಕ್ರೈಸ್ತ ಧರ್ಮ ಸಭೆಗಳಲ್ಲಿ ದಲಿತ ಕ್ರೈಸ್ತ ಪ್ರಜ್ಞೆ ಹಾಗೂ ಐಡೆಂಟಿಟಿಯನ್ನು ನೆಲೆಯೂರಿಸಿದರು. ದಲಿತ ಕ್ರೈಸ್ತ ಸಮುದಾಯಕ್ಕೆ ಕೆಲವು ರಾಜ್ಯಗಳಲ್ಲಿ ಧರ್ಮಾಧ್ಯಕ್ಷರ (ಬಿಷಪ್) ಹುದ್ದೆಗಳು ಕೂಡ ದೊರೆತವು. ಭಾರತೀಯ ಕ್ಯಾಥೋಲಿಕರ ಧರ್ಮಾಧ್ಯಕ್ಷ್ಯರ ಸಮ್ಮೇಳನವು (ಕ್ಯಾಥೋಲಿಕ್ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯ) ದಲಿತ ಕ್ರೈಸ್ತರ ಹೋರಾಟಕ್ಕೆ ಮಣಿದು- ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗಗಳ ಶಿಕ್ಷಣ ಹಾಗೂ ಸಮಗ್ರ ಅಭಿವೃದ್ಧಿಗಾಗಿ ಆಯೋಗವನ್ನು ರಚಿಸಿತು. ಸಂಘಟಿತರಾಗುವುದರ ಮುಖಾಂತರ ಸರ್ಕಾರದಿಂದ ನಿರೀಕ್ಷಿತ ಬೆಂಬಲವನ್ನು ಪಡೆಯಲಾಗದಿದ್ದರೂ ಕ್ರೈಸ್ತ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕೇಂದ್ರಗಳಲ್ಲಿದ್ದ ಬ್ರಾಹ್ಮಣ್ಯಕ್ಕೆ ಸೆಡ್ಡು ಹೊಡೆದ ದಲಿತ ಕ್ರೈಸ್ತರು, ಹೊಸ ಬದಲಾವಣೆಗೆ ನಾಂದಿ ಹಾಡಿದರು.

ಆದರೆ ಕರ್ನಾಟಕದ ಧರ್ಮಸಭೆ ಮಾತ್ರ ತನ್ನ ಮನುವಾದಿ ಧೋರಣೆಯಿಂದ ಹಿಂದೆ ಸರಿಯಲಿಲ್ಲ. ದಲಿತ ಕ್ರೈಸ್ತ ಚಳವಳಿ ಪ್ರಖರವಾಗಿದ್ದ ಸಂದರ್ಭದಲ್ಲಿ ಕೇವಲ ಅನುಕಂಪದ ಮಾತುಗಳನ್ನಾಡಿ ಕೈತೊಳೆದುಕೊಂಡ ಧರ್ಮಾಧ್ಯಕ್ಷರುಗಳು ತದನಂತರ ವ್ಯವಸ್ಥಿತವಾಗಿ ದಲಿತ ಕ್ರೈಸ್ತರನ್ನು ಹಣಿಯುವ ಕುತಂತ್ರ ಮಾಡಿಕೊಂಡು ಬಂದಿದ್ದಾರೆ. ಆದುದರಿಂದ ಇಡೀ ದಕ್ಷಿಣ ಭಾರತದಲ್ಲಿ ದಲಿತ ಧರ್ಮಾಧ್ಯಕ್ಷರಿಲ್ಲದ,

ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗಗಳ ಆಯೋಗ ಅಸ್ತಿತ್ವದಲ್ಲಿಲ್ಲದ ಏಕೈಕ ರಾಜ್ಯ ಕರ್ನಾಟಕವಾಗಿದೆ. ದಲಿತ ಕ್ರೈಸ್ತರ ಹೋರಾಟಕ್ಕೆ ಕನಿಷ್ಟ ಬೆಂಬಲ ನೀಡದ ಧರ್ಮಸಭೆ-ರಾಜ್ಯದ ಕ್ಯಾಥೋಲಿಕ್ ಧರ್ಮ ಸಭೆಯಾಗಿದೆ.

೧೯೯೮ರ ನಂತರ ದಲಿತ ಕ್ರೈಸ್ತ ಚಳವಳಿ ತನ್ನ ಪ್ರಖರತೆಯನ್ನು ಕಳೆದುಕೊಳ್ಳತೊಡಗಿದಂತೆ ಕೇಂದ್ರ ಸರ್ಕಾರವು, ಈ ಸಮುದಾಯದ ಅಸ್ತಿತ್ವವನ್ನೇ ನಿರ್ಲಕ್ಷಿಸಿತು. ಚಳವಳಿಯಲ್ಲಿ ತೊಡಗಿಸಿಕೊಂಡಿದ್ದ ಅನೇಕ ಮುಖಂಡರು ಎನ್‌ಜಿಓಗಳ ಗಾಳಕ್ಕೆ ಬಿದ್ದು, ಸಮುದಾಯದ ಹಿತಾಸಕ್ತಿಗಳನ್ನು ಬಲಿ ಹಾಕಿದರು. ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲಿ ಮತ್ತೊಮ್ಮೆ ದಲಿತ ಕ್ರೈಸ್ತ ಚಳವಳಿಯನ್ನು ರಾಷ್ಟ್ರಮಟ್ಟದಲ್ಲಿ ಬಲಪಡಿಸಲು ಕರ್ನಾಟಕ ದಲಿತ ಕ್ರೈಸ್ತ ಒಕ್ಕೂಟವೂ ಒಳಗೊಂಡಂತೆ ವಿವಿಧ ರಾಜ್ಯಗಳ ದಲಿತ ಕ್ರೈಸ್ತ ಸಂಘಟನೆಗಳನ್ನು ಒಗ್ಗೂಡಿಸಿ 'ದಲಿತ ಕ್ರೈಸ್ತರ ರಾಷ್ಟ್ರೀಯ ಮಂಡಳಿ' (ನ್ಯಾಷನಲ್ ಕೌನ್ಸಿಲ್ ಫಾರ್ ದಲಿತ್ ಕ್ರಿಶ್ಚಿಯನ್ಸ್) ಎನ್ನುವ ವಿಸ್ತೃತ ವೇದಿಕೆಯನ್ನು ೨೦೦೫ರಲ್ಲಿ ರೂಪಿಸಲಾಯಿತು.

ಈ ವೇದಿಕೆಯು ಅಸ್ತಿತ್ವಕ್ಕೆ ಬಂದ ನಂತರ ೨೪ರ ಆಗಸ್ಟ್ ೨೦೦೫ರಂದು ನವದೆಹಲಿಯಲ್ಲಿ ಬೃಹತ್ ರ್‍ಯಾಲಿಯನ್ನು ಸಂಘಟಿಸುವುದರ ಮುಖಾಂತರ ದಲಿತ ಕ್ರೈಸ್ತರ ಸಾಮಾಜಿಕ ನ್ಯಾಯದ ಹೋರಾಟಕ್ಕೆ ಪುನರ್ ಚಾಲನೆ ದೊರೆಯಿತು. ತದನಂತರ ರಾಜ್ಯ ಮಟ್ಟದಲ್ಲೂ ವಿವಿಧ ರೀತಿಯ ಹೋರಾಟಗಳಿಗೆ ಚಾಲನೆ ದೊರೆಯಿತು. ಹೋರಾಟದ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರವು ಜಸ್ಟೀಸ್ ರಂಗನಾಥ್ ಮಿಶ್ರಾ ಆಯೋಗಕ್ಕೆ ದಲಿತ ಕ್ರೈಸ್ತರ ಮೀಸಲಾತಿ ವಿಷಯವನ್ನು ಒಪ್ಪಿಸಿ, ಸೂಕ್ತ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಕೇಳಿಕೊಂಡಿತು.

ಈ ಆಯೋಗದ ಬೆನ್ನಿಗೆ ಬಿದ್ದ ಎನ್.ಸಿ.ಡಿ.ಸಿ ಮತ್ತು ರಾಜ್ಯ ಮಟ್ಟದ ಸಂಘಟನೆಗಳು ದಲಿತ ಕ್ರೈಸ್ತರ ಅತಂತ್ರ ಬದುಕಿನ ವಾಸ್ತವಿಕ ಚಿತ್ರಣವನ್ನು ಮನಗಾಣಿಸಲು ಯಶಸ್ವಿಯಾದವು. ಧರ್ಮವನ್ನು ಪರಿಗಣಿಸದೆ ಜಾತಿಯ ಆಧಾರದ ಮೇಲೆ ಹಿಂದು, ಸಿಖ್ ಮತ್ತು ಬೌದ್ಧ ದಲಿತರಂತೆ

> **೧೯೯೮ರ ನಂತರ ದಲಿತ ಕ್ರೈಸ್ತ ಚಳವಳಿ ತನ್ನ ಪ್ರಖರತೆಯನ್ನು ಕಳೆದುಕೊಳ್ಳತೊಡಗಿದಂತೆ ಕೇಂದ್ರ ಸರ್ಕಾರವು, ಈ ಸಮುದಾಯದ ಅಸ್ತಿತ್ವವನ್ನೇ ನಿರ್ಲಕ್ಷಿಸಿತು. ಚಳವಳಿಯಲ್ಲಿ ತೊಡಗಿಸಿ ಕೊಂಡಿದ್ದ ಅನೇಕ ಮುಖಂಡರು ಎನ್‌ಜಿಓಗಳ ಗಾಳಕ್ಕೆ ಬಿದ್ದು, ಸಮುದಾಯದ ಹಿತಾಸಕ್ತಿಗಳನ್ನು ಬಲಿ ಹಾಕಿದರು. ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲಿ ಮತ್ತೊಮ್ಮೆ ದಲಿತ ಕ್ರೈಸ್ತ ಚಳವಳಿಯನ್ನು ರಾಷ್ಟ್ರ ಮಟ್ಟದಲ್ಲಿ ಬಲಪಡಿಸಲು ಕರ್ನಾಟಕ ದಲಿತ ಕ್ರೈಸ್ತ ಒಕ್ಕೂಟವೂ ಒಳಗೊಂಡಂತೆ ವಿವಿಧ ರಾಜ್ಯಗಳ ದಲಿತ ಕ್ರೈಸ್ತ ಸಂಘಟನೆಗಳನ್ನು ಒಗ್ಗೂಡಿಸಿ 'ದಲಿತ ಕ್ರೈಸ್ತರ ರಾಷ್ಟ್ರೀಯ ಮಂಡಳಿ' ಎನ್ನುವ ವಿಸ್ತೃತ ವೇದಿಕೆಯನ್ನು ೨೦೦೫ರಲ್ಲಿ ರೂಪಿಸಲಾಯಿತು.**

ದಲಿತ ಕ್ರೈಸ್ತರಿಗೆ ಮತ್ತು ದಲಿತ ಮುಸಲ್ಮಾನರಿಗೆ ಮೀಸಲಾತಿಯನ್ನು ಕಲ್ಪಿಸಿಕೊಡುವಂತೆ ಈ ಆಯೋಗವು ಕಾಂಗ್ರೆಸ್ ನೇತೃತ್ವದ ಕೇಂದ್ರದ ಯು.ಪಿ.ಎ. ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಜಸ್ಟೀಸ್ ರಂಗನಾಥ್ ಮಿಶ್ರಾ ಆಯೋಗವು ಪರಿಶಿಷ್ಟ ಜಾತಿಗಳ ಮೀಸಲಾತಿ ಕಾಲಂನಲ್ಲಿ (೧೯೫೦ರ ರಾಷ್ಟ್ರಪತಿ ಶಾಸನ) ಧರ್ಮ ಎನ್ನುವ ಪದವನ್ನೇ ತೆಗೆದು ಹಾಕುವಂತೆ ಸೂಚಿಸಿದೆ.

ನ್ಯಾಯಾಂಗದ ಬಾಗಿಲು ತಟ್ಟುವುದರ ಮುಖಾಂತರವೂ ದೀರ್ಘಕಾಲದಿಂದ ಬಾಕಿವುಳಿದಿರುವ ಸಾಮಾಜಿಕ ನ್ಯಾಯವನ್ನು ಪಡೆಯುವ ಪ್ರಯತ್ನವೂ ಎನ್.ಸಿ.ಡಿ.ಸಿ. ಯಿಂದ ನಡೆಯುತ್ತಿದೆ. ೧೯೮೫ರಲ್ಲಿ ಸೂಸೈ ಎನ್ನುವ ದಲಿತ ಕ್ರೈಸ್ತ ಚಮ್ಮಾರನಿಗೆ ತಮಿಳುನಾಡಿನ ಸರ್ಕಾರವು ಧರ್ಮದ ಆಧಾರದ ಮೇಲೆ ಚರ್ಮಕುಟೀರ ಮಂಜೂರು ಮಾಡುವುದನ್ನು ಪ್ರತಿಭಟಿಸಿ ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ದಾಖಲಿಸಲಾಗಿತ್ತು. ಕ್ರೈಸ್ತರಲ್ಲೂ ಜಾತಿ ತಾರತಮ್ಯ ಜೀವಂತವಾಗಿದೆ. ಎನ್ನುವುದನ್ನು ಸಾಕ್ಷಿ ಸಮೇತ ನಿರೂಪಿಸಲು ಸಾಧ್ಯವಾಗದ ಕಾರಣ ಸೂಸೈಗೆ ಜಯ ಲಭಿಸಲಿಲ್ಲ. ಕೇಂದ್ರ ಸರ್ಕಾರ ಈ ಕಾರಣವನ್ನೇ ನೆಪವನ್ನಾಗಿಟ್ಟುಕೊಂಡು ನುಣುಚಿಕೊಳ್ಳುವ ಪ್ರಯತ್ನಕ್ಕೆ ಸೂಸೈ ತೀರ್ಪು ವರವಾಗಿ ಪರಣಮಿಸಿತು. ಈ ಹಿನ್ನೆಲೆಯಲ್ಲಿ ಫ್ರಾಂಕ್ಲಿನ್ ಸೀಜರ್ ಎನ್ನುವ ದಲಿತ ಕ್ರೈಸ್ತ ಮುಖಂಡರೊಬ್ಬರು ೨೦೦೪ರಲ್ಲಿ 'ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ವೇದಿಕೆ' (Forum for public Interest Litigation) ಮೂಲಕ ಮತ್ತೊಂದು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ದಾಖಲಿಸಿದರು.

ತಮಿಳುನಾಡಿನ ತಿರುಚನಾಪಳ್ಳಿ ಜಿಲ್ಲೆಯ ಫ್ರಾಂಕ್ಲಿನ್ ಸೀಜರ್ ಸಲ್ಲಿಸಿದ ಮೊಕದ್ದಮೆಯು ದಲಿತ ಕ್ರೈಸ್ತರ ಮೇಲೆ ನಡೆಯುತ್ತಿರುವ ಜಾತಿ ದೌರ್ಜನ್ಯ, ಅಸ್ಪೃಶ್ಯತೆ ಆಚರಣೆ, ಸಾಮಾಜಿಕ ಬಹಿಷ್ಕಾರದಂಥ ನೂರಾರು ಸತ್ಯ ಪ್ರಕರಣಗಳ ವಿವರಗಳನ್ನು ಒಳಗೊಂಡಿದ್ದುದನ್ನು ಗಂಭೀರವಾಗಿ ಪರಿಗಣಿಸಿದ ಸುಪ್ರೀಂಕೋರ್ಟ್ ಇದುವರೆಗೆ ೧೧ ಸಲ ಮೊಕದ್ದಮೆಯನ್ನು ಆಲಿಸಿದೆ. ಮುಂದಿನ ವಿಚಾರಣೆಯು ಜನವರಿ ೧೮, ೨೦೦೮ರಂದು ನಡೆಯಲಿದ್ದು, ಕೇಂದ್ರ ಸರ್ಕಾರ ವಿಳಂಬ ಮಾಡದೆ ಸ್ಪಷ್ಟವಾಗಿ ತನ್ನ ನಿಲುವನ್ನು ಸ್ಪಷ್ಟ ಪಡಿಸಬೇಕಾದ ಸಂದರ್ಭ ಬಂದಿದೆ.

ದಲಿತ ಕ್ರೈಸ್ತರಿಗೆ ಮೀಸಲಾತಿ ಕಲ್ಪಿಸಿ ಕೊಡುವ ಸಂಬಂಧ ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗದ ಅಭಿಪ್ರಾಯವೇನು ಎಂಬುದನ್ನು ತಿಳಿದುಕೊಂಡು ವರದಿ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದಾಗ. ಈ ಆಯೋಗದ ಅಧ್ಯಕ್ಷರಾದ ಬೂಟಾಸಿಂಗ್ ಮತ್ತಿತರ ಸದಸ್ಯರಿಗೆ ಸುಮಾರು ಹತ್ತು ಲಕ್ಷ ಪೋಸ್ಟ್ ಕಾರ್ಡ್ ಕಳುಹಿಸುವ ಆಂದೋಲನ ನಡೆಯಿತು. ಜೊತೆಗೆ ವಿವಿಧ ರಾಜ್ಯಗಳ ದಲಿತ ಕ್ರೈಸ್ತ ಪ್ರತಿನಿಧಿಗಳು ಖುದ್ದಾಗಿ ಆಯೋಗಕ್ಕೆ ಭೇಟಿ ನೀಡಿ, ಧರ್ಮದ ಆಧಾರದ ಮೇಲೆ ದಲಿತರನ್ನು ಒಡೆದಾಳುತ್ತಿರುವ ೧೯೫೦ರ ರಾಷ್ಟ್ರಪತಿ ಶಾಸನಕ್ಕೆ ತಿದ್ದುಪಡಿ ತಂದು, ದಲಿತ ಕ್ರೈಸ್ತರಿಗಾಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಮನವಿ ಸಲ್ಲಿಸಿದರು. ಬೂಟಾಸಿಂಗ್ ಕುಟುಂಬದ ಅರ್ಧದಷ್ಟು ದಲಿತರು ಕ್ರೈಸ್ತರಾಗಿರುವುದರಿಂದ, ದಲಿತ ಕ್ರೈಸ್ತರ ಸಮಸ್ಯೆ ತಮಗೆ ಆಳವಾಗಿ ತಿಳಿದಿದೆ ಎಂದು ನಿಯೋಗದ ಸದಸ್ಯರಿಗೆ ತಿಳಿಸಿದ ಬೂಟಾಸಿಂಗ್‌ರವರು, ಜಸ್ಟೀಸ್ ರಂಗನಾಥ ಮಿಶ್ರಾ ಆಯೋಗದ ಶಿಫಾರಸ್ಸನ್ನು ತಾವು ದೃಢೀಕರಿಸುವುದಾಗಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

ಸಂವಾದ ಮತ್ತು ದಲಿತ ಪ್ರಗತಿಪರ ಸಂಘಟನೆಗಳ ಬೆಂಬಲದ ಕ್ರೋಢೀಕರಣದ ಪರಿಣಾಮವಾಗಿ ದಲಿತ ಕ್ರೈಸ್ತರಿಗೆ ಸಾಮಾಜಿಕ ನ್ಯಾಯದ ಹೋರಾಟವೀಗ ನಿರ್ಣಾಯಕ ಹಂತ ತಲುಪಿದೆ. ದಲಿತ ಕ್ರೈಸ್ತರಿಗೆ ಮೀಸಲಾತಿಯನ್ನು ವಿರೋಧಿಸುವ ಬಿ.ಜೆ.ಪಿ. ಮತ್ತು ಸಂಘಪರಿವಾರ ಕೂಡ ಧರ್ಮದ ಆಧಾರದ ಮೇಲೆ ದಲಿತರನ್ನು ಒಡೆಯುವ ವೋಟ್ ಬ್ಯಾಂಕ್ ರಾಜಕಾರಣವನ್ನು ತೀವ್ರಗೊಳಿಸಿವೆ. ಈ ಹಿನ್ನೆಲೆಯಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಿಂತ ಮುಂಚೆ ಎಲ್ಲಾ ಜಾತ್ಯತೀತ ಸಂಘಟನೆಗಳ ಮತ್ತು ರಾಜಕೀಯ ಮುಖಂಡರುಗಳೊಂದಿಗೆ ಸಂವಾದ ನಡೆಸಿ, ಪ್ರತಿಭಟನೆ, ಸಮಾವೇಶಗಳನ್ನು ಸಂಘಟಿಸುವುದರ ಮೂಲಕ ಜನಾಭಿಪ್ರಾಯವನ್ನು ರೂಪಿಸಿ, ಚಳವಳಿಯನ್ನು ಮತ್ತಷ್ಟು ತೀವ್ರಗೊಳಿಸಬೇಕಾಗಿದೆ.

ಜನವರಿ ೧೮ರ ಮುಂದಿನ ವಿಚಾರಣೆ ನಡೆಯುವುದರೊಳಗೆ ಕೇಂದ್ರ ಸರ್ಕಾರ ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗದ ವರದಿಯನ್ನು ಸಹ ಸುಪ್ರೀಂಕೋರ್ಟಿಗೆ ಸಲ್ಲಿಸಬೇಕಾಗಿದೆ.

ದಲಿತ ಕ್ರೈಸ್ತರ ಬೇಡಿಕೆಗೆ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯನ್ನು ಹೊರತು ಪಡಿಸಿ ಇತರ ಎಲ್ಲಾ ರಾಜಕೀಯ ಪಕ್ಷಗಳು ಪೂರಕವಾದ ನಿಲುವನ್ನು ತೆಗೆದು ಕೊಂಡಿವೆ. ಸಿ.ಪಿ.ಐ, ಸಿ.ಪಿ.ಐ(ಎಂ) ಪಕ್ಷಗಳು ಪ್ರಧಾನ ಮಂತ್ರಿಗಳಿಗೆ ಎರಡು ಬಾರಿ ಪತ್ರವನ್ನು ಬರೆದು ಬೆಂಬಲವನ್ನು ವ್ಯಕ್ತಪಡಿಸಿವೆ. ಬಹುಜನ ಸಮಾಜ ಪಕ್ಷದ ಮಾಯಾ ವತಿಯವರು ಎರಡು ಬಾರಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದದ್ದಲ್ಲದೆ, ಒಂದು ಬಾರಿ ಖುದ್ದಾಗಿ ಭೇಟಿ ಮಾಡಿ ಆದಷ್ಟು ಶೀಘ್ರವಾಗಿ ದಲಿತಕ್ರೈಸ್ತರಿಗೆ ನ್ಯಾಯ ಒದಗಿಸಬೇಕೆಂದು ವಿನಂತಿಸಿಕೊಂಡಿದ್ದಾರೆ. ಸಾಮಾಜಿಕ ನ್ಯಾಯದಲ್ಲಿ ಬಿ.ಎಸ್.ಪಿ. ನಂಬಿಕೆಯಿಟ್ಟಿರುವುದರಿಂದ, ವೋಟ್ ರಾಜಕಾರಣಕ್ಕಾಗಿ ತಾವು ದಲಿತ ಕ್ರೈಸ್ತರ ಹೋರಾಟವನ್ನು ಬೆಂಬಲಿಸುವುದರ ಬದಲು ಸೈದ್ಧಾಂತಿಕ ಕಾರಣದಿಂದ ಬೆಂಬಲಿಸುತ್ತಿರುವುದಾಗಿ ಮಾಯಾವತಿಯವರು ದಲಿತ ಕ್ರೈಸ್ತರ ನಿಯೋಗಕ್ಕೆ ಸ್ಪಷ್ಟನೆ ನೀಡಿದ್ದಾರೆ.

ಫಾರ್ವರ್ಡ್ ಬ್ಲಾಕ್, ಡಿ.ಎಂ.ಕೆ, ಎ.ಐ.ಡಿ.ಎಂ.ಕೆ, ಆರ್.ಜೆ.ಡಿ.ಯಂಥ ಪಕ್ಷಗಳಲ್ಲದೆ ಬಿಜೆಪಿ ನೇತೃತ್ವದ ಎನ್.ಡಿ.ಎ. ಭಾಗವಾಗಿರುವ ಜೆ.ಡಿ(ಯು) ಮತ್ತು ಶಿರೋಮಣಿ ಅಕಾಲಿದಳದಂಥ ಪಕ್ಷಗಳು ಬಿ.ಜೆ.ಪಿ. ನಿಲುವಿಗೆ ವ್ಯತಿರಿಕ್ತವಾಗಿ ದಲಿತ ಕ್ರೈಸ್ತರ ಬೆಂಬಲಕ್ಕೆ ನಿಂತಿವೆ. ಬಿ.ಜೆ.ಪಿ.ಯೊಂದನ್ನು ಹೊರತು ಪಡಿಸಿ ಇತರೆ ಎಲ್ಲಾ ರಾಜಕೀಯ ಪಕ್ಷಗಳು ದಲಿತ ಕ್ರೈಸ್ತರ ಮೀಸಲಾತಿ ಪರವಾಗಿದ್ದರೂ ಕಾಂಗ್ರೆಸ್ ಎನ್ನುವ ಮನುವಾದಿ ಪಕ್ಷ ಈ ವಿಷಯದಲ್ಲಿ ಧೃಡವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತಿಲ್ಲ. ಈ ವಿಷಯದ ಆಧಾರದ ಮೇಲೆ ಕಾಂಗ್ರೆಸ್ ಪಕ್ಷ ಇಬ್ಭಾಗವಾಗುವುದು ನನಗಿಷ್ಟವಿಲ್ಲ, ಸ್ವಲ್ಪ ಸಮಯ ತೆಗೆದುಕೊಂಡು ಪಕ್ಷದಲ್ಲಿ ಒಮ್ಮತ ಮೂಡಿಸಿ, ಒಂದು ಸಕಾರಾತ್ಮಕ ತೀರ್ಮಾನಕ್ಕೆ ಬರುವುದಾಗಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಕಳೆದ ಫೆಬ್ರವರಿ ತಿಂಗಳಿನಲ್ಲಿ ತಮ್ಮನ್ನು ಭೇಟಿ ಮಾಡಿದ ದಲಿತ ಕ್ರೈಸ್ತ ಮುಖಂಡರಿಗೆ ಮತ್ತು ಧರ್ಮಾಧ್ಯಕ್ಷರುಗಳಿಗೆ ತಿಳಿಸಿದ್ದರು. ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರು ಹಲವು ಬಾರಿ ದಲಿತ ಕ್ರೈಸ್ತರ ನಿಯೋಗಕ್ಕೆ ನ್ಯಾಯ ಒದಗಿಸಿ ಕೊಡುವ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಆದಾಗ್ಯೂ ಕಾಂಗ್ರೆಸ್ ತನ್ನ ನಿಲುವಿಗೆ ಬದ್ಧವಾಗದೇ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದನ್ನು ಪ್ರತಿಭಟಿಸಿ, ವಿಶ್ವಮಾನವ ಹಕ್ಕುಗಳ ದಿನವಾದ ಡಿಸೆಂಬರ್ ೧೦ ರಂದು ಕರ್ನಾಟಕದ ತುಮಕೂರು, ಬೀದರ್ ಜಿಲ್ಲೆಗಳನ್ನೊಳಗೊಂಡಂತೆ ೧೨ ರಾಜ್ಯಗಳಲ್ಲಿ ಏಕಕಾಲಕ್ಕೆ ಪ್ರತಿಭಟನೆ ನಡೆಸಿದ ದಲಿತ ಕ್ರೈಸ್ತ ಸಂಘಟನೆಗಳು, ಕೂಡಲೇ ಜಸ್ಟೀಸ್ ರಂಗನಾಥ್ ಮಿಶ್ರಾ ವರದಿಯನ್ನು ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಲ್ಲದೆ, ಕಾಂಗೆಸ್‌ನ ವಂಚನೆಯನ್ನು ಖಂಡಿಸಿ ಮುಂಬರುವ ಚುನಾವಣೆಗಳಲ್ಲಿ ತಕ್ಕ ಪಾಠ ಕಲಿಸುವುದಾಗಿ ಎಚ್ಚರಿಸಿದವು. ದಲಿತ, ಜಾತ್ಯತೀತ ಮತ್ತು ಪ್ರಗತಿಪರ ಸಂಘಟನೆಗಳು ದಲಿತ ಕ್ರೈಸ್ತರೊಂದಿಗೆ ಧ್ವನಿಗೂಡಿಸಿದ್ದರಿಂದ, ವಿಷಯದ ಗಂಭೀರತೆಯನ್ನು ಅರಿತ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರವು ರಾಜಕೀಯ ವ್ಯವಹಾರಗಳ ಸಮಿತಿಯು ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಟ್ಟಿದೆ. ಈ ಸಮಿತಿಯಲ್ಲಿ ಪ್ರಣವ್ ಮುಖರ್ಜಿ, A.K. ಅಂಟಣಿ, ಲಾಲೂ ಪ್ರಸಾದ್ ಯಾದವ್, ರಾಮ್‌ವಿಲಾಸ್ ಪಾಸ್ವಾನ್ ಮುಂತಾದ ಘಟನುಘಟಿಗಳಿದ್ದಾರೆ.

ಹೋರಾಟ, ಪೋಸ್ಟ್ ಕಾರ್ಡ್ ಆಂದೋಲನ, ನ್ಯಾಯಾಂಗಕ್ಕೆ ಮೊರೆ, ರಾಜಕೀಯ ಮುಖಂಡರ ಮನವೊಲಿಸುವಿಕೆ, ವಿವಿಧ ಆಯೋಗಗಳೊಂದಿಗೆ ಸಂವಾದ ಮತ್ತು ದಲಿತ ಪ್ರಗತಿಪರ ಸಂಘಟನೆಗಳ ಬೆಂಬಲದ ಕ್ರೋಢೀಕರಣದ ಪರಿಣಾಮವಾಗಿ ದಲಿತ ಕ್ರೈಸ್ತರಿಗೆ ಸಾಮಾಜಿಕ ನ್ಯಾಯದ ಹೋರಾಟವೀಗ ನಿರ್ಣಾಯಕ ಹಂತ ತಲುಪಿದೆ. ದಲಿತ ಕ್ರೈಸ್ತರಿಗೆ ಮೀಸಲಾತಿಯನ್ನು ವಿರೋಧಿಸುವ ಬಿ.ಜೆ.ಪಿ. ಮತ್ತು ಸಂಘಪರಿವಾರ ಕೂಡ ಧರ್ಮದ ಆಧಾರದ ಮೇಲೆ ದಲಿತರನ್ನು ಒಡೆಯುವ ವೋಟ್ ಬ್ಯಾಂಕ್ ರಾಜಕಾರಣವನ್ನು ತೀವ್ರಗೊಳಿಸಿವೆ. ಈ ಹಿನ್ನೆಲೆಯಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಿಂತ ಮುಂಚೆ ಎಲ್ಲಾ ಜಾತ್ಯತೀತ ಸಂಘಟನೆಗಳ ಮತ್ತು ರಾಜಕೀಯ ಮುಖಂಡರುಗಳೊಂದಿಗೆ ಸಂವಾದ ನಡೆಸಿ, ಪ್ರತಿಭಟನೆ, ಸಮಾವೇಶಗಳನ್ನು ಸಂಘಟಿಸುವುದರ ಮೂಲಕ ಜನಾಭಿಪ್ರಾಯವನ್ನು ರೂಪಿಸಿ, ಚಳವಳಿಯನ್ನು ಮತ್ತಷ್ಟು ತೀವ್ರಗೊಳಿಸಬೇಕಾಗಿದೆ. ಕರ್ನಾಟಕದ ಕ್ಯಾಥೋಲಿಕ್ ಧರ್ಮಸಭೆ ಬ್ರಾಹ್ಮಣ್ಯದಿಂದ ಹೊರಬಂದು, ಆತ್ಮಾವಲೋಕನ ಮಾಡಿಕೊಂಡು ದಲಿತ ಕ್ರೈಸ್ತರ ಬೆಂಬಲಕ್ಕೆ ನಿಲ್ಲುವುದರ ಮೂಲಕ ಕ್ರಿಸ್ತನ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾಗಿದೆ! □

ಪರಿವರ್ತನೆಯ ಆಶಾಕಿರಣ ಬರಾಕ್ ಒಬಾಮ

ರಮೇಶ್ ಟಿ

ಇನ್ನೊಂದು ವರ್ಷದೊಳಗೆ ಬರಾಕ್ ಒಬಾಮಾ ಎಂಬ ಕರಿಯನೊಬ್ಬ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಗಾದಿಯನ್ನೇರುವುದನ್ನು ಈ ಜಗತ್ತಿನ ಕೋಟಿಗಟ್ಟಲೆ ಜನರು ಬಹಳಷ್ಟು ನಿರೀಕ್ಷೆ ಹಾಗೂ ಕಾತರದೊಂದಿಗೆ ಎದುರು ನೋಡುತ್ತಿರಬಹುದು. ಅಸಾಧ್ಯವೆನ್ನುವುದನ್ನು ಅನಿವಾರ್ಯವಾಗಿ ಪರಿವರ್ತಿಸಿ ತೋರಿಸಿದ ಐಯೋವಾ ಫಲಿತಾಂಶ ಮತ್ತು ಪರಿವರ್ತನೆಯ ಅನಿವಾರ್ಯವನ್ನು ಜನರಿಗೆ ಮನದಟ್ಟು ಮಾಡಿಕೊಡುವ ಒಬಾಮಾರ ಕ್ರಾಂತಿಕಾರಕ ಭಾಷಣಗಳು ಆ ನಿರೀಕ್ಷೆ ಮತ್ತು ಕಾತರಗಳಿಗೆ ಮತ್ತಷ್ಟು ತೀವ್ರತೆಯನ್ನು ನೀಡುತ್ತದೆ.

ಈ ಕರಿಯ ಒಬಾಮಾ ನಾಲಗೆಯನ್ನು ಝಳಪಿಸುವಾಗ ಮಾರ್ಟಿನ್ ಲೂಥರ್ ಕಿಂಗ್‌ರ ಶಬ್ದ ಮಾಧುರ್ಯ ಮತ್ತು ಸ್ಮರಣ ಶೀಲತೆಯ ಜೊತೆಗೆ ಜಾನ್ ಎಫ್. ಕೆನಡಿಯವರನ್ನು ನೆನಪಿಗೆ ತರುವ ವರ್ಣನೆ. ಅಮೆರಿಕದ ಜನರು ಸ್ವತಃ ತಮ್ಮ ಬಗ್ಗೆ ಮತ್ತು ತಮ್ಮ ದೇಶದ ಬಗ್ಗೆ ಮತ್ತೆ ಮತ್ತೆ ಅಭಿಮಾನವನ್ನು ಮೆಲುಕುತ್ತಿರುವಂತೆ ಮಾಡುವ ರೊನಾಲ್ಡ್ ರೇಗನ್‌ರ ಕಲೆಯೂ ಈ ಮನುಷ್ಯನಿಗೆ ಕರಗತವಾಗಿದೆ. ಪ್ರಜ್ವಲತೆ ಮತ್ತು ಪ್ರಾಮಾಣಿಕತೆಯಿಂದ ಕೂಡಿದ ಅವರ ಮಂದಹಾಸಕ್ಕೆ ಜನಮನದ ಮೇಲೆ ಪರಿಣಾಮ ಬೀರುವ ಧಾರಾಳ ಸಾಮರ್ಥ್ಯವಿದೆ. ಒಬಾಮಾ ಇನ್ನು ಗೆಲ್ಲಲಿ, ಗೆಲ್ಲದೇ ಇರಲಿ, ಆದರೆ, ಅಮೆರಿಕದ ರಾಜಕಾರಣದಲ್ಲಿ ಅವರು ಬದಲಾವಣೆ ಮತ್ತು ಹೊಸತನದ ಬಿರುಗಾಳಿಯೊಂದನ್ನು ಎಬ್ಬಿಸಿದ್ದಾರೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಐಯೋವಾ ನಂತರ ಒಬಾಮಾ ಕ್ರಮಿಸಬೇಕಾಗಿರುವ ಮೈಲಿಗಲ್ಲುಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಲೇ, ನಾವು ಅಮೆರಿಕಕ್ಕೆ ಮತ್ತು ಅಮೆರಿಕದ ಕನಸಿಗೆ ಗೌರವ ಸಲ್ಲಿಸೋಣ. ಈ ವರ್ಷಾಂತ್ಯದಲ್ಲಿ ಡೆಮೊಕ್ರಾಟಿಕ್ ಪಕ್ಷವು ಅಂತಿಮವಾಗಿ ಓರ್ವ ಕರಿಯನನ್ನು ಇಲ್ಲವೇ ಓರ್ವ ಸ್ತ್ರೀಯನ್ನು ತನ್ನ ಅಧ್ಯಕ್ಷೀಯ ಅಭ್ಯರ್ಥಿಯನ್ನಾಗಿ ಆರಿಸಲಿರುವುದು ಬಹುತೇಕ ಖಚಿತಗೊಂಡಿದೆ. ಒಂದು ವಿಷಯವಿಲ್ಲಿ ಗಮನಾರ್ಹ ಕೀನ್ಯದಲ್ಲಿ ಜನಿಸಿ ಇಂಡೋನೇಷ್ಯ ಮತ್ತು ಹವಾಯಿಗಳಲ್ಲಿ ಬೆಳೆದ ಓರ್ವ ಕರಿಯ ಮುಸ್ಲಿಮ್ ತಂದೆ ಮತ್ತು ಕಾನ್ಸಾಸ್ ಮೂಲದ ಶ್ವೇತ ವರ್ಣೀಯ ಕ್ರೈಸ್ತ ತಾಯಿಯ ಪುತ್ರ ಈ ಪ್ರತಿಭಾವಂತನಿಗೆ ಅಧ್ಯಕ್ಷೀಯ ಅಭ್ಯರ್ಥಿತ್ವ ನಾಮಕರಣ ಸ್ಪರ್ಧೆಯಲ್ಲಿ ನಿರೀಕ್ಷೆಗೂ ಮೀರಿದ ಗೆಲವು ತಂದುಕೊಟ್ಟ ಐಯೋವಾ, ೯೬% ಬಿಳಿಯರಿರುವ ಪ್ರದೇಶ!

ಜನಾಂಗೀಯ ದ್ವೇಷ ಮತ್ತು ವರ್ಣ ತಾರತಮ್ಯದ ತಡೆಗೋಡೆಗಳನ್ನು ಕೆಡವಿ ಮುಂದೆ ಬಂದ ವೃತ್ತಾಂತವನ್ನು ತನ್ನ ವ್ಯಕ್ತಿತ್ವದ ಮೂಲಕವೇ ಸಾರಿ ಹೇಳುತ್ತಿರುವ ಒಬಾಮಾರಲ್ಲಿ ಅಮೆರಿಕದ ಶ್ರೇಷ್ಠ ಅಧ್ಯಕ್ಷರಾಗಿ ಪರಿವರ್ತನೆಗೊಳ್ಳುವ ಸಾಮರ್ಥ್ಯವಿದೆ ಎಂದರೆ ಅತಿಶಯೋಕ್ತಿ ಆಗಲಾರದು.

ಅಮೆರಿಕದೊಳಗೆ ನಡೆಯುವ ಯಾವುದೇ ಬೆಳವಣಿಗೆ ಅಥವಾ ಏರುಪೇರು ಸ್ವತಃ ಅಮೆರಿಕಕ್ಕೆ ಚಿಕ್ಕ ವಿಷಯವಾಗಿ ಕಂಡರೂ ಜಗತ್ತಿನ ಪಾಲಿಗೆ ಮಾತ್ರ ಅದು ಸಹಜವಾಗಿಯೇ ದೊಡ್ಡ ವಿಷಯವಾಗುತ್ತದೆ. ಆದ್ದರಿಂದ ಅಮೆರಿಕವನ್ನು ಮುನ್ನಡೆಸುವವರಾರು ಎಂಬ ವಿಚಾರವು ನಮಗೂ ಅಮೆರಿಕನ್ನರಷ್ಟೇ ಮುಖ್ಯವಾಗಿ ಪರಿಣಮಿಸುತ್ತದೆ.

ಅಮೆರಿಕವು ಇದ್ದಲೇ ಇರಲು ಇಷ್ಟಪಟ್ಟರೆ, ಅಥವಾ ಯಾವುದೇ ಚಲನಶೀಲ ತೀರ್ಮಾನಗಳನ್ನು ಕೈಗೊಳ್ಳಲು ನಿರಾಕರಿಸಿದರೆ, ಸದ್ಯದ ಮಟ್ಟಿಗಂತೂ ಈ ವಿಶ್ವಕ್ಕೆ ಮುಂದುವರಿಯಲು ಸಾಧ್ಯವಿಲ್ಲ ಎಂಬುದು ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟದಂತಹ ವಿಚಾರಗಳಲ್ಲಿ ಪದೇಪದೇ ಸಾಬೀತಾಗಿದೆ. ಇನ್ನು ಅಮೆರಿಕವೆಲ್ಲಾದರೂ ಒಂದು ತಪ್ಪು ಹೆಜ್ಜೆಯನ್ನು ಮುಂದಿರಿಸಿದರೆ ಘೋರ ದುರಂತ ಮತ್ತು ದುರದೃಷ್ಟಗಳ ಸುನಾಮಿಯನ್ನು ತಪ್ಪಿಸಲು ಸದ್ಯದ ಮಟ್ಟಿಗಂತೂ ಈ ಜಗತ್ತಿನ ಇನ್ನಾವುದೇ ಶಕ್ತಿಯಿಂದಲೂ ಸಾಧ್ಯವಿಲ್ಲ ಎಂಬುದು ಕೂಡಾ ಇರಾಕ್ ಯುದ್ಧದಂತಹ ಅನೇಕ ಘಟನೆಗಳಲ್ಲಿ ದೃಢಪಟ್ಟಿದೆ. ಇದೇ ಕಾರಣಕ್ಕಾಗಿ ಅಮೆರಿಕವು ಆಕರ್ಷಕ ವ್ಯಕ್ತಿತ್ವವೊಂದನ್ನು ಮುಂದಿರಿಸಿದಾಗಲೂ, ಅಮೆರಿಕಕ್ಕೆ ಹೊರತಾದ ಜಗತ್ತು ಸಂಭ್ರಮಿಸದೇ ಇರಲು ಸಾಧ್ಯವಿಲ್ಲ ಎನ್ನಬಹುದು.

ಈ ಕಾರಣಕ್ಕಾಗಿಯೇ, ಐಯೋವಾ ಕಾಕಸಸ್ ಮತ್ತು ನ್ಯೂಹ್ಯಾಂಪ್‌ಶೈರ್ ಪ್ರೈಮರಿಗಳಲ್ಲಿ ಬರಾಕ್ ಒಬಾಮಾ ಅಥವಾ ಹಿಲರಿ ಕ್ಲಿಂಟನ್ ಮುನ್ನಡೆ ಅಥವಾ ಹಿನ್ನಡೆಯನ್ನು ಸಾಧಿಸುವುದು ನಮ್ಮೆಲ್ಲರ ಪಾಲಿಗೂ ಚರ್ಚಾ ವಿಷಯವಾಗುತ್ತದೆ. ತಲೆ ತಲಾಂತರದಿಂದ ಬಿಳಿಯರ ಹೊರತು ಇನ್ನಾರ ಆಡಳಿತವನ್ನೂ ಕಂಡಿರದ ಅಮೆರಿಕದ ಜನತೆಯು ಇದೀಗ ಓರ್ವ ಕರಿಯನ ಬಗ್ಗೆ ಒಲವು ತೋರಿಸಲಾರಂಭಿಸಿದೆ ಎಂಬ ಅಂಶವು ಐಯೋವಾ ಕಾಕಸಸ್ ಫಲಿತಾಂಶದಿಂದ ಸಾಬೀತಾದಾಗ ಅಲ್ಲಿನ ಈ ಅಭೂತಪೂರ್ವ ಬದಲಾವಣೆಯ ಬಿರುಗಾಳಿಯನ್ನು ಕಂಡು ನಾವು ಸಂತೋಷಪಟ್ಟುಕೊಳ್ಳದೇ ಇರಲು ಸಾಧ್ಯವೇ?

ಇಡೀ ಜಗತ್ತಿನಲ್ಲೇ ಸಂಚಲನ ಮೂಡಿಸಿದ ಆ ಘಟನೆಯ ಬಗ್ಗೆ ವರ್ಣನೆಯನ್ನು ಸ್ವತಃ ಒಬಾಮಾರ ಬಾಯಿಯಿಂದಲೇ ಕೇಳೋಣ: "ಇತಿಹಾಸ ಈ ನಿರ್ಣಾಯಕ ಕ್ಷಣವು ಅಸಾಧ್ಯ ಅಚ್ಚರಿಯೊಂದನ್ನು ಜಗತ್ತಿನ ಮುಂದಿರಿಸಿದೆ. ಈ ದೇಶವನ್ನು ಪ್ರೀತಿಸುವ ಜನತೆ ಈ ದೇಶದ ಗತಿಯನ್ನೇ ಬದಲಿಸಬಹುದು ಎನ್ನುವುದು ಇದರಿಂದ ಸಾಬೀತಾಗಿದೆ" ಇದು ಬರಾಕ್ ಒಬಾಮಾರ ಐಯೋವಾ ವಿಜಯ ಭಾಷಣದ ಒಂದು ತುಣುಕು.



ಅಮೆರಿಕವು ಇದ್ದಲೇ ಇರಲು ಇಷ್ಟಪಟ್ಟರೆ, ಅಥವಾ ಯಾವುದೇ ಚಲನಶೀಲ ತೀರ್ಮಾನಗಳನ್ನು ಕೈಗೊಳ್ಳಲು ನಿರಾಕರಿಸಿದರೆ, ಸದ್ಯದ ಮಟ್ಟಿಗಂತೂ ಈ ವಿಶ್ವಕ್ಕೆ ಮುಂದುವರಿಯಲು ಸಾಧ್ಯವಿಲ್ಲ ಎಂಬುದು ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟದಂತಹ ವಿಚಾರಗಳಲ್ಲಿ ಪದೇಪದೇ ಸಾಬೀತಾಗಿದೆ. ಇನ್ನು ಅಮೆರಿಕವೆಲ್ಲಾದರೂ ಒಂದು ತಪ್ಪು ಹೆಜ್ಜೆಯನ್ನು ಮುಂದಿರಿಸಿದರೆ ಘೋರ ದುರಂತ ಮತ್ತು ದುರದೃಷ್ಟಗಳ ಸುನಾಮಿಯನ್ನು ತಪ್ಪಿಸಲು ಸದ್ಯದ ಮಟ್ಟಿಗಂತೂ ಈ ಜಗತ್ತಿನ ಇನ್ನಾವುದೇ ಶಕ್ತಿಯಿಂದಲೂ ಸಾಧ್ಯವಿಲ್ಲ ಎಂಬುದು ಕೂಡಾ ಇರಾಕ್ ಯುದ್ಧದಂತಹ ಅನೇಕ ಘಟನೆಗಳಲ್ಲಿ ದೃಢಪಟ್ಟಿದೆ. ಇದೇ ಕಾರಣಕ್ಕಾಗಿ ಅಮೆರಿಕವು ಆಕರ್ಷಕ ವ್ಯಕ್ತಿತ್ವವೊಂದನ್ನು ಮುಂದಿರಿಸಿದಾಗಲೂ, ಅಮೆರಿಕಕ್ಕೆ ಹೊರತಾದ ಜಗತ್ತು ಸಂಭ್ರಮಿಸದೇ ಇರಲು ಸಾಧ್ಯವಿಲ್ಲ ಎನ್ನಬಹುದು.

ಅಮೆರಿಕದ ರಾಜಕಾರಣದಲ್ಲಿ ಇಂತಹ ಬದಲಾವಣೆಯ ಬಿರುಗಾಳಿಯೊಂದನ್ನು ನಾವು ಈ ಹಿಂದೆ ಎಂದೂ ನೋಡಿಯೇ ಇಲ್ಲ ಎಂದು ಕಣ್ಮುಚ್ಚಿ ಹೇಳಬಹುದು.

ಘಾಸಿಗೊಂಡಿರುವ ಅಮೆರಿಕನ್ನರ ಮನಸ್ಸಿಗೆ ಸಾಂತ್ವನದ ಜೊತೆಗೆ ಭರವಸೆಯನ್ನು ನೀಡುವ ಒಬಾಮಾರ ಸಂದೇಶವು ಸದ್ಯೋಭವಿಷ್ಯದಲ್ಲೇ ವಿಶ್ವವು ಅಮೆರಿಕದಿಂದ ನಿರೀಕ್ಷಿಸಬಹುದಾದ ಪರಿವರ್ತನೆಗಳು ಬಹಳಷ್ಟಿವೆ ಎಂಬುದನ್ನು ಸಾರಿ ಹೇಳುತ್ತದೆ. ಆದ್ದರಿಂದಲೇ ಅಮೆರಿಕದ ಮಾಧ್ಯಮಗಳು ಈ ಸನ್ನಿವೇಶವನ್ನು "ಪರಿವರ್ತನೆ ಬರುತ್ತಿದೆ... ದಾರಿ ಬಿಡಿ" ಎಂದು ವರ್ಣಿಸಿದವು.

ಅಮೆರಿಕದ ಹಾಲಿ ಅಧ್ಯಕ್ಷ ಜಾರ್ಜ್ ಡಬ್ಲ್ಯೂ. ಬುಷ್‌ರ ವಿಕೃತ ಹಾಗೂ ಇಸ್ರೇಲ್ ಪರ ಆಡಳಿತ ಮತ್ತು ವಿದೇಶಾಂಗ ನೀತಿಗಳಿಂದ ಅಮೆರಿಕದೊಳಗೂ ಹೊರಗೂ ಉಂಟಾಗಿರುವ ಹಾನಿಯನ್ನು ಹೋಗಲಾಡಿಸಲು ವರ್ಷಗಳಲ್ಲ, ಅನೇಕ ದಶಕಗಳೇ ಬೇಕಾಗಿವೆ ಎಂದು ನಂಬಿರುವ ಮತ್ತು ಅಂತಹ ಬದಲಾವಣೆಯ ಅಲೆಯೊಂದಕ್ಕೆ ದಶಕಗಳಿಂದ ಕಾದು ಕುಳಿತಿರುವ ಜನತೆಯ ಪಾಲಿಗೆ ಒಬಾಮಾ ಒಂದು ಶುಭ ಸಂಕೇತವಾಗಿದ್ದಾರೆ.

ದಕ್ಷ ಮತ್ತು ಸಮರ್ಥ ಆಡಳಿತ ನೀತಿಯನ್ನು ಮುಂದಿರಿಸುವುದಾಗಿ ಹಿಲರಿ ಕ್ಲಿಂಟನ್ ವಾಗ್ದಾನವಿತ್ತರೆ, ಇತ್ತ ಒಬಾಮಾರ ಧ್ವನಿ ಇನ್ನಷ್ಟು ಆಕರ್ಷಕವಾಗಿದೆ: "ಅಮೆರಿಕವೇ! ನಿನ್ನ ಮುಂದೆ ವಾಗ್ದಾನಿತ ನೆಲೆಯೊಂದಿದೆ. ನಾನು ನಿನಗೆ ಅದರ ದಾರಿಯನ್ನು ತೋರಿಸಿ ಕೊಡುತ್ತೇನೆ."

ಅತ್ತ ಹಿಲರಿ, ಪ್ರಸಕ್ತ ಜಾರ್ಜ್ ಡಬ್ಲ್ಯೂ. ಬುಷ್‌ರ ಎಲ್ಲ ಪಾಪಗಳಿಂದ ಅಮೆರಿಕನ್ನರಿಗೆ ವಿಮೋಚನೆ ನೀಡಿ ತನ್ನ ಪತಿ ಬಿಲ್ ಕ್ಲಿಂಟನ್‌ರ ಸುವರ್ಣ ಕಾಲವನ್ನು ಮರುಸ್ಥಾಪಿಸುವ ಭರವಸೆ ನೀಡಿದರೆ, ಇತ್ತ ಒಬಾಮಾ, ಬುಷ್ ಕ್ಲಿಂಟನ್‌ಗಳಿಬ್ಬರ ಆಕ್ರಮಣಕಾರಿ ಹಾಗೂ ಯುದ್ಧ ವ್ಯಾಮೋಹಿ ನೀತಿಗಳಿಗೆ ಹೊರತಾದ ಆಶಾದಾಯಕ ಸ್ಪರ್ಶವೊಂದನ್ನು ಆಡಳಿತಕ್ಕೆ ನೀಡುವ ವಾಗ್ದಾನ ನೀಡುತ್ತಾರೆ.

ಬಿಲ್ ಕ್ಲಿಂಟನ್ ಮತ್ತು ಜಾರ್ಜ್ ಬುಷ್‌ರ ನೇತೃತ್ವದ ಬಹುತೇಕ ಎರಡು ದಶಕಗಳ ಅವಧಿಯಲ್ಲಿ ಅಮೆರಿಕದ ಆಡಳಿತ ಕಂಡ ಪ್ರತಿಕೂಲ ತಿರುವುಗಳು ಹೆಕ್ಕಿ ತೋರಿಸುವ ಒಬಾಮಾರ ಚಾಕಚಕ್ಯತೆಯು ಅವರ ನಾಯಕತ್ವ ಸಾಮರ್ಥ್ಯಕ್ಕೆ ಮೆರುಗು ನೀಡುವಂತಿದೆ ಎನ್ನುತ್ತಾರೆ ವಿಶ್ಲೇಷಕರು.

ವಿಯೆಟ್ನಾಮ್‌ನಿಂದ ಮೊದಲ್ಗೊಂಡು ಒಂದಾದ ಮೇಲೊಂದರಂತೆ ನಡೆಯುತ್ತಿರುವ ವಿನಾಶಕಾರಿ ಆಕ್ರಮಣ ಮತ್ತು ಯುದ್ಧಗಳಿಂದ ಬೇಸತ್ತಿರುವ ಹೊಸ ತಲೆಮಾರಿನ ಅಮೆರಿಕನ್ನರಿಗೆ ಸದ್ಯದ ಮಟ್ಟಿಗಂತೂ ವರ್ಣ ಮತ್ತು ಜನಾಂಗೀಯ ತಾರತಮ್ಯವನ್ನು ಬದಿಗಿಟ್ಟು ಜಬಾಮಾರನ್ನು ಆಲಿಂಗಿಸುವುದೇ ಅತ್ಯುತ್ತಮವೆಂದು ಕಂಡುಬಂದರೆ, ಈ ಆಯ್ಕೆಯನ್ನು ಇತರರೂ ಕಾತರದಿಂದಲೇ ಎದುರು ನೋಡುತ್ತಿದ್ದಾರೆ. ಹೀಗಾಗಿ ಬಿಲ್ ಕ್ಲಿಂಟನ್‌ರ ಆಡಳಿತಾವಧಿಯಲ್ಲೇ ಅಮೆರಿಕನ್ನರ ಮನದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದ ಹಿಲರಿ ಕ್ಲಿಂಟನ್‌ರಿಗಿಂತ ಡೆಮೊಕ್ರಾಟರು ಒಬಾಮಾರಿಗೆ ಪ್ರಾಶಸ್ತ್ಯ ನೀಡುವುದಾದರೆ, ಅಚ್ಚರಿ ಪಡಬೇಕಾಗಿಲ್ಲ.

ದಿಟ್ಟ ಮತ್ತು ಸ್ವತಂತ್ರ ನಿಲುವು ಅಥವಾ ನೀತಿಯೊಂದನ್ನು ಮುಂದಿರಿಸಿ, ಜನರನ್ನು ಮಾನಸಿಕವಾಗಿಯೂ, ಬೌದ್ಧಿಕವಾಗಿಯೂ ಅದರತ್ತ ಸೆಳೆಯುವುದೇ ನಾಯಕತ್ವ, ಸಮರ್ಥ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನೀತಿಗಳನ್ನು ಮುಂದಿರಿಸುವುದು, ಅವುಗಳು ಏಕೆ ಅಗತ್ಯ ಎಂಬುದನ್ನು ವಿಶದೀಕರಿಸುವುದು ಮತ್ತು ಇತರರೂ ಅವುಗಳನ್ನು ತಮ್ಮ ವೈಯಕ್ತಿಕ ಅಭಿಪ್ರಾಯವಾಗಿ ಸ್ವೀಕರಿಸಿಕೊಳ್ಳುವಂತೆ ಮನವೊಲಿಸುವುದು–ಇವೆಲ್ಲ ಅಂಶಗಳನ್ನೂ ಒಬಾಮಾರ ಭಾಷಣದ ಸಾಲುಗಳು ಒಳಗೊಂಡಿವೆ.

ಒಬಾಮಾರಿಗೆ ಮತ ನೀಡುವುದೆಂದರೆ ಜೂಜಾಡಿ ಸರ್ವಸ್ವವನ್ನೂ ಕಳೆದುಕೊಂಡಂತೆ ಎಂಬ ಬಿಲ್ ಕ್ಲಿಂಟನ್‌ರ ಕಠಿಣ ಭಾಷೆಯ ಎಚ್ಚರಿಕೆಯನ್ನು ಅಮೆರಿಕನ್ನರು ಐಯೋವಾದಲ್ಲಿ ಕಡೆಗಣಿಸಬೇಕಾದರೆ, ಅವರ ಮೇಲೆ ಒಬಾಮಾರ ಬಾಷಣಗಳು ಬೀರಿರುವ ಪರಿಣಾಮ ಎಷ್ಟು ಆಳವಾದುದೆಂಬುದನ್ನು ಊಹಿಸಬಹುದು.

ಬುಷ್‌ರ ಆಡಳಿತಾವಧಿಯು ಜನಗತ್ತಿನ ಮುಂದೆ ಅಮೆರಿಕದ ಕ್ರೂರಾತಿ ಕ್ರೂರ ಮತ್ತು ವಿಕೃತ ಮುಖವನ್ನು ಪ್ರದರ್ಶಿಸಿದ್ದು ಮಾತ್ರವಲ್ಲದೆ, ಸಾಕ್ಷಾತ್ ಅಮೆರಿಕನ್ನರಿಗೊಂದು ಬೆಳ್ಳಿರೇಖೆಯ ಅಗತ್ಯ ಹಿಂದೆಂದಿಗಿಂತಲೂ ಅಧಿಕವಾಗಿದೆ.

(ಸೌಜನ್ಯ: ವಾರ್ತಾ ಭಾರತಿ) □

ಐಯೋವಾ ನಂತರ ಒಬಾಮಾ ಕ್ರಮಿಸಬೇಕಾಗಿರುವ ಮೈಲಿಗಲ್ಲುಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಲೇ, ನಾವು ಅಮೆರಿಕಕ್ಕೆ ಮತ್ತು ಅಮೆರಿಕದ ಕನಸಿಗೆ ಗೌರವ ಸಲ್ಲಿಸೋಣ. ಈ ವರ್ಷಾಂತ್ಯದಲ್ಲಿ ಡೆಮೊಕ್ರಾಟಿಕ್ ಪಕ್ಷವು ಅಂತಿಮವಾಗಿ ಓರ್ವ ಕರಿಯನನ್ನು ಇಲ್ಲವೇ ಓರ್ವ ಸ್ತ್ರೀಯನ್ನು ತನ್ನ ಅಧ್ಯಕ್ಷೀಯ ಅಭ್ಯರ್ಥಿಯನ್ನಾಗಿ ಆರಿಸಲಿರುವುದು ಬಹುತೇಕ ಖಚಿತಗೊಂಡಿದೆ. ಒಂದು ವಿಷಯವಿಲ್ಲಿ ಗಮನಾರ್ಹ. ಕೀನ್ಯದಲ್ಲಿ ಜನಿಸಿ ಇಂಡೋನೇಷ್ಯ ಮತ್ತು ಹವಾಯಿಗಳಲ್ಲಿ ಬೆಳೆದ ಓರ್ವ ಕರಿಯ ಮುಸ್ಲಿಮ್ ತಂದೆ ಮತ್ತು ಕಾನ್ಸಾಸ್ ಮೂಲದ ಶ್ವೇತ ವರ್ಣೀಯ ಕ್ರೈಸ್ತ ತಾಯಿಯ ಪುತ್ರ ಈ ಪ್ರತಿಭಾವಂತನಿಗೆ ಅಧ್ಯಕ್ಷೀಯ ಅಭ್ಯರ್ಥಿತ್ವ ನಾಮಕರಣ ಸ್ಪರ್ಧೆಯಲ್ಲಿ ನಿರೀಕ್ಷೆಗೂ ಮೀರಿದ ಗೆಲವು ತಂದುಕೊಟ್ಟ ಐಯೋವಾ, ೯೬% ಬಿಳಿಯರಿರುವ ಪ್ರದೇಶ! ಒಬಾಮಾರಲ್ಲಿ ಅಮೆರಿಕದ ಶ್ರೇಷ್ಠ ಅಧ್ಯಕ್ಷರಾಗಿ ಪರಿವರ್ತನೆಗೊಳ್ಳುವ ಸಾಮರ್ಥ್ಯವಿದೆ

ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಬರಗೂರರ ಶಬರಿ ಕಟ್ಟಿದ ಕನಸು

ಡಾ॥ ಸಣ್ಣರಾಮ

ಬಂಡಾಯದ ದನಿ ಬರಗೂರು ರಾಮಚಂದ್ರಪ್ಪನವರ ಶ್ರೇಷ್ಠ ಕಾದಂಬರಿ ಶಬರಿ. ಬುಡಕಟ್ಟಿನ ಸ್ಥಿತ್ಯಂತರವನ್ನು ಕಟ್ಟುತ್ತ ಪರ್ಯಾಯಗಳ ಶೋಧನೆಯನ್ನು ಮಾಡುವ ಕೃತಿ. ಬುಡಕಟ್ಟುಗಳ ಬದುಕನ್ನು ಕುರಿತ ಕಾದಂಬರಿಗಳು ಕನ್ನಡ ಸಾಹಿತ್ಯದಲ್ಲಿ ತುಂಬಾ ವಿರಳ. ಬಂದವು ಕೆಲವೇ ಆದರೂ ಬುಡಕಟ್ಟಿನ ಸಾಂಸ್ಕೃತಿಕ ಲೋಕದ ಅನಾವರಣಗಳಾಗಿವೆ. ಆಧುನಿಕ ಸಂದರ್ಭದಲ್ಲಿ ಬುಡಕಟ್ಟುಗಳ ಸ್ಥಿತಿ-ಗತಿಗಳನ್ನು, ಅವರ ಹತ್ತು ಹಲವಾರು ಸಮಸ್ಯೆಗಳಿಗೆ ಪರ್ಯಾಯಗಳನ್ನು ಹುಡುಕಾಡುವ ಕೃತಿಗಳು ಇಲ್ಲವೇ ಇಲ್ಲ. ಶಬರಿ ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಮಹತ್ವದ ಭೂಮಿಕೆಯನ್ನು ನಿಭಾಯಿಸುತ್ತದೆ.

ಕಾದಂಬರಿ ಪುರಾಣದಿಂದ ಆಧುನಿಕ ಕಾಲದವರೆಗಿನ ವಿಶಾಲವಾದ ಹರವನ್ನು ಅಂತರ್ಗತಿಸಿಕೊಂಡಿದೆ. ಇದೊಂದು ಪುರಾಣ ಮುರಿದು ಕಟ್ಟುವ ಕ್ರಿಯೆ. ಪುರಾಣದ ಶಬರಿಯ ಶಕ್ತಿಯನ್ನು ಆಧುನಿಕ ಕಾಲದ ಬುಡಕಟ್ಟಿನ ಶಬರಿಗೆ ತುಂಬುವ ಕ್ರಿಯೆ. ಪುರಾಣದ ಶಬರಿಯಿಂದ ಆಧುನಿಕ ಶಬರಿ ಶಕ್ತಿಯನ್ನು ಪಡೆದರೂ ಅವಳ ಪಡಿಯಚ್ಚಾಗದೆ ಪುರಾಣದ ಶಬರಿಯಿಂದ ಸಿಡಿದು ತನ್ನ ಕಾಲಘಟ್ಟ ಚಿಂತನೆಗಳಿಗೆ ನೆಲೆಯಾಗಿ ಸಮಸ್ಯೆಗಳಿಗೆ ಪರ್ಯಾಯಗಳನ್ನು ಹುಡುಕುವುದು ಗಮನಾರ್ಹ ಸಂಗತಿ. ಇವರಿಬ್ಬರು 'ಕಾಯುವ ಕ್ರಿಯೆ'ಯಲ್ಲಿ ನಿರತರಾಗಿದ್ದಾರೆ. ಶಬರಿ ಕಾದಂಬರಿಯಲ್ಲಿ ಕಾಯುವ ಕ್ರಿಯೆ ಇಡೀ ಕಾದಂಬರಿಯ ನಿಯಂತ್ರಕ ಶಕ್ತಿಯಾಗಿದೆ. ಕಾದಂಬರಿಯ ಧ್ವನಿ ಶಕ್ತಿಯೂ ಕೂಡ ಈ ಕಾಯುವ ಕ್ರಿಯೆಯೇ ಆಗಿದೆ.

ಇಬ್ಬರೂ ಶಬರಿಯರು ಕಾಯುತ್ತಾರೆ. 'ಕಾಯುವ ಕ್ರಿಯೆ' ಪುರಾಣ ಮತ್ತು ಆಧುನಿಕ ಕಾಲಘಟ್ಟಗಳಲ್ಲಿ ಭಿನ್ನ ಅರ್ಥವನ್ನು ಪಡೆಯುತ್ತದೆ. ಪುರಾಣದ ಶಬರಿ ತನ್ನ ಬುಡಕಟ್ಟಿನ ನಾಯಕ ಶ್ರೀರಾಮಚಂದ್ರನ ಆಗಮನಕ್ಕಾಗಿ ಕಾಯುತ್ತಿದ್ದಾಳೆ. ತನ್ನ ನಾಯಕನ ದರ್ಶನದಲ್ಲಿ ಅವಳ ಬಿಡುಗಡೆಯಿದೆ ಎಂದು ನಂಬಿದ್ದಾಳೆ. ಈಕೆ ಸಂತುಷ್ಟೆ. ಕಾಡಿನಲ್ಲಿ ತನ್ನ ನೆಲದಲ್ಲಿ ತಾನು ಬಯಸಿದ್ದನ್ನು ಬಿತ್ತಿ-ಬೆಳೆದು, ಪ್ರಕೃತಿ ಸಹಜವಾದ ಬದುಕು ನಡೆಸಿದವಳು. ತಾನು ಬೆಳೆದ ರಸವತ್ತಾದ ಹಣ್ಣನ್ನು ತಾನು ತಿಂದು, ಅದೇ ಎಂಜಲು ಹಣ್ಣುಗಳನ್ನು ತನ್ನ ನಾಯಕನಿಗೂ ತಿನ್ನಿಸಿ ಅವನ ಸಂತೋಷದಲ್ಲಿ ಬಿಡುಗಡೆಯನ್ನು ಕಂಡವಳು. ಇಲ್ಲಿ "ಕಾಯುವುದು"- ಅಂದರೆ ನಿರೀಕ್ಷಿಸುವುದು, ತಾಳು, ನಿಧಾನಿಸು, ದಾರಿನೋಡು, waiting ಎಂಬ ಅರ್ಥಗಳಿವೆ. ಪುರಾಣದ ಶಬರಿಯ ಕಾಯುವಿಕೆಯಲ್ಲಿ ಧ್ಯಾನವಿದೆ, ಬಿಡುಗಡೆಯ ಧ್ವನಿಯಿದೆ. ಆಧುನಿಕ ಶಬರಿಯೂ ಕಾಯುತ್ತಿದ್ದಾಳೆ. ಇಲ್ಲಿ ಕಾಯುವುದು-ಅಂದರೆ ಕುದಿಯುವುದು, ಬಿಸಿಯಾಗುವುದು, ಬೇಯುವುದು ಎಂದರ್ಥ. ಪರಂಪರಾಗತವಾಗಿ ಬಂದ ನೆಲೆಯನ್ನು ಕಳೆದುಕೊಂಡು ಇವಳು, ತನ್ನ ಕಾಡಿನಲ್ಲಿ ತಾನೇ ಅನಾಥಳಾದವಳು. ಭೂಮಾಲೀಕರಿಂದ ಶೋಷಣೆಗೊಳಗಾಗಿ ನೊಂದವಳು. ಪುರೋಹಿತಶಾಹಿ ಕಟ್ಟಿಕೊಟ್ಟ ಮೂಢನಂಬಿಕೆಯ ಬೆಂಕಿಯ ಕೆಂಡವನ್ನು ಮಡಿಲಲ್ಲಿ ಕಟ್ಟಿಕೊಂಡು ಬೆಂದವಳು. ದಾಸ್ಯ-ಮೂಢನಂಬಿಕೆಗಳಿಂದ ಬಿಡುಗಡೆ ಪಡೆಯಲು ಕಾಯುತ್ತಿದ್ದಾಳೆ. ಅಂದರೆ ಕುದಿಯುತ್ತಿದ್ದಾಳೆ.

ಒಂದು ಶ್ರೇಷ್ಠ ಕೃತಿ ವಾಚ್ಯದ ವಿರುದ್ಧ ದಿಕ್ಕಿನಲ್ಲಿ ಬೆಳೆದು ಅರ್ಥ ಪರಂಪರೆಯನ್ನು ಹುಟ್ಟುಹಾಕಿ ಸಹೃದಯರನ್ನು ವಿಸ್ಮಯ ಲೋಕಕ್ಕೆ ಎಳೆದೊಯ್ಯುತ್ತದೆ. ಈ ಹಿನ್ನೆಲೆಯಲ್ಲಿ ಶಬರಿ ಒಂದು ಅದ್ಭುತ ಕ್ರಿಯಾಶೀಲ ಕಾದಂಬರಿ. ಕಾಯುವ ಕ್ರಿಯೆ ಇಲ್ಲಿ ಪ್ರತಿಮೆಯಾಗಿ ಬಳಕೆಯಾಗಿದೆ. ಕಾಯುವುದು ಎಂದರೆ ತಾಟಸ್ಥ್ಯ ಜಡತ್ವ ಜಡ್ಡುಗಡ್ಡುವಿಕೆ, ಎಂಬ ಅರ್ಥವು ಇದೆ. ಆದರೆ ಈ ಶಬರಿಯರ ಕಾಯುವಿಕೆ ಆ ಬಗೆಯದಲ್ಲ. ಪುರಾಣದ ಶಬರಿಯ ಕಾಯುವಿಕೆಯಲ್ಲಿ ಧ್ಯಾನದ ಶಕ್ತಿ ಇದ್ದರೆ, ಆಧುನಿಕ ಶಬರಿಯ ಕಾಯುವಿಕೆಯಲ್ಲಿ ಎಚ್ಚರದ, ಜಾಗೃತಿಯಿದೆ. ಅದು ಗೌತಮಬುದ್ಧನ ಜಾಗೃತಸ್ಥಿತಿ. ಜಗತ್ತಿನ ಅನಂತವನ್ನು ಗ್ರಹಿಸುವ, ಪ್ರತಿಕ್ರಯಿಸುವ ಜಾಗೃತಿ. ಇಂತಹ ಜಾಗೃತ ಸ್ಥಿತಿಯಲ್ಲಿ ಮಾತ್ರ ಜಗತ್ತಿನ ಸಮಸ್ತವನ್ನು ನೋಡಲು ಸಾಧ್ಯ ಮತ್ತು ಕೆಡಕಿನೊಂದಿಗೆ ಸಂಘರ್ಷಿಸಲು ಸಾಧ್ಯ. ಆದ್ದರಿಂದ ಕಾದಂಬರಿಯಲ್ಲಿ ಕಾಯುವಿಕೆ ಅಂದರೆ ಚಲನಾಶೀಲತೆಯೇ ಆಗಿದೆ. ತನ್ನ ಸಮುದಾಯದ ಸಮಸ್ಯೆಗಳೊಂದಿಗೆ ಮುಖಾಮುಖಿಯಾಗುವಿಕೆಯೇ ಆಗಿದೆ. ಕಾದಂಬರಿ ತನ್ನಂತರಂಗದಲ್ಲಿ ಈ ಬಗೆಯ ಕ್ರಿಯೆಗಳನ್ನು ಕಟ್ಟಿಕೊಟ್ಟಿರುವುದು ಇದಕ್ಕೆ ಸಾಕ್ಷಿ. ಇದೇ ಕಾದಂಬರಿಯ ಧ್ವನಿ ಶಕ್ತಿ. ಪ್ರತಿಭಾವಂತ ಲೇಖಕ ಶಕ್ತಿಶಾಲಿಯಾದ ಪ್ರತಿಮೆಯನ್ನು ಕಟ್ಟುತ್ತಾನೆ ಮತ್ತು ಸಮರ್ಥವಾಗಿ ದುಡಿಸಿಕೊಳ್ಳುತ್ತಾನೆ. ಶಬರಿಯಲ್ಲಿ ಕಾಯುವಕ್ರಿಯೆಯಲ್ಲಿ ಕಟ್ಟಿಕೊಟ್ಟಿರುವ ಧ್ವನಿಶಕ್ತಿ ಅದ್ಭುತವಾಗಿದೆ.

ಕಾದಂಬರಿ ಪ್ರಸ್ತುತ ಬುಡಕಟ್ಟುಗಳು ಎದುರಿಸುತ್ತಿರುವ ಬಿಕ್ಕಟ್ಟಿಗೆ ಪರ್ಯಾಯವನ್ನು ಕಟ್ಟಿಕೊಟ್ಟಿದೆ. ಭಾರತೀಯ ಸಮಾಜ ಅತ್ಯಂತ ಸಂಕೀರ್ಣವಾದುದು. ಬಹಳ ಸ್ಥೂಲವಾಗಿ ಇದನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದು ಜಾತಿಯ ಸಮುದಾಯ ಮತ್ತೊಂದು ಬುಡಕಟ್ಟು ಸಮುದಾಯ. ಜಾತಿಯ ಸಮುದಾಯದಲ್ಲಿ ಅನೇಕ ಶ್ರೇಣಿಗಳಿವೆ. ಕೆಳಜಾತಿಗಳು ಮೇಲುಜಾತಿಗಳಿಂದ ಶೋಷಣೆಗೊಳಗಾದರೆ ಬುಡಕಟ್ಟುಗಳು ಕೆಳಜಾತಿಗಳಾದಿಯಾಗಿ ಶೋಷಣೆಗೊಳಗಾದವರು. ಆದ್ದರಿಂದಲೇ ಬುಡಕಟ್ಟುಗಳು ತಮ್ಮ ಸಮುದಾಯವಲ್ಲದ ಜನರನ್ನು ಅನುಮಾನದಿಂದ ನೋಡುತ್ತಾರೆ, ಮತ್ತು ಅವರಿಂದ ದೂರ ಇರಲು ಬಯಸುತ್ತಾರೆ. ಕಾದಂಬರಿಯ ಸೂರ್ಯ ಮತ್ತು ನವಾಬರು ಬುಡಕಟ್ಟಲ್ಲದ ಶೋಷಕ ಸಮುದಾಯದಿಂದ ಬಂದವರು. ಬಹಳ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಇವರು ಎಷ್ಟೇ ಸಾಚರಾಗಿ ಬುಡಕಟ್ಟಿನ ಅಂತರಂಗವನ್ನು ಪ್ರವೇಶಿಸಿದರೂ, ಬುಡಕಟ್ಟಿನ ಬಿಡುಗಡೆ ಇವರಿಂದ ಸಾಧ್ಯವಿಲ್ಲ. ಬುಡಕಟ್ಟುಗಳ ಬಗ್ಗೆ ಅಪಾರ ಕಾಳಜಿ ಇದ್ದ ನೆಹರೂರವರು ಬುಡಕಟ್ಟುಗಳ ಅಭಿವೃದ್ಧಿಗೆ ಪಂಚಶೀಲತತ್ವವನ್ನು ರೂಪಿಸಿದ್ದಾರೆ. ಅದರಲ್ಲಿ ಒಂದೆಂದರೆ ಬುಡಕಟ್ಟುಗಳನ್ನು ಮುಖ್ಯವಾಹಿನಿಗೆ ತರಲು ಅವರೊಳಗಿನವರನ್ನೇ ತರಬೇತುಗೊಳಿಸಬೇಕು ಎಂಬುದು. ಇದು

ಪುಸ್ತಕ ಅವಲೋಕನ

ಶಬರಿ
ಲೇ: ಬರಗೂರು ರಾಮಚಂದ್ರಪ್ಪ
ಬೆಲೆ: ರೂ. ೫೦/-
ಪ್ರಕಾಶಕರು: ಅಂಕಿತ ಪುಸ್ತಕ, ಬೆಂಗಳೂರು

ಇಬ್ಬರೂ ಶಬರಿಯರು ಕಾಯುತ್ತಾರೆ. 'ಕಾಯುವ ಕ್ರಿಯೆ' ಪುರಾಣ ಮತ್ತು ಆಧುನಿಕ ಕಾಲಘಟ್ಟಗಳಲ್ಲಿ ಭಿನ್ನ ಅರ್ಥವನ್ನು ಪಡೆಯುತ್ತದೆ. ಪುರಾಣದ ಶಬರಿ ತನ್ನ ಬುಡಕಟ್ಟಿನ ನಾಯಕ ಶ್ರೀರಾಮ ಚಂದ್ರನ ಆಗಮನಕ್ಕಾಗಿ ಕಾಯುತ್ತಿದ್ದಾಳೆ. ತನ್ನ ನಾಯಕನ ದರ್ಶನದಲ್ಲಿ ಅವಳ ಬಿಡುಗಡೆಯಿದೆ ಎಂದು ನಂಬಿದ್ದಾಳೆ. ಈಕೆ ಸಂತುಷ್ಟೆ. ಕಾಡಿನಲ್ಲಿ ತನ್ನ ನೆಲದಲ್ಲಿ ತಾನು ಬಯಸಿದ್ದನ್ನು ಬಿತ್ತಿ-ಬೆಳೆದು, ಪ್ರಕೃತಿ ಸಹಜವಾದ ಬದುಕು ನಡೆಸಿದವಳು. ತಾನು ಬೆಳೆದ ರಸವತ್ತಾದ ಹಣ್ಣನ್ನು ತಾನು ತಿಂದು, ಅದೇ ಎಂಜಲು ಹಣ್ಣುಗಳನ್ನು ತನ್ನ ನಾಯಕನಿಗೂ ತಿನ್ನಿಸಿ ಅವನ ಸಂತೋಷದಲ್ಲಿ ಬಿಡುಗಡೆಯನ್ನು ಕಂಡವಳು. ಇಲ್ಲಿ "ಕಾಯುವುದು"- ಅಂದರೆ ನಿರೀಕ್ಷಿಸುವುದು, ತಾಳು, ನಿಧಾನಿಸು, ದಾರಿ ನೋಡು, waiting ಎಂಬ ಅರ್ಥಗಳಿವೆ. ಪುರಾಣದ ಶಬರಿಯ ಕಾಯುವಿಕೆಯಲ್ಲಿ ಧ್ಯಾನವಿದೆ, ಬಿಡುಗಡೆಯ ಧ್ವನಿಯಿದೆ. ಆಧುನಿಕ ಶಬರಿಯೂ ಕಾಯುತ್ತಿದ್ದಾಳೆ.

ಸತ್ಯವೂ ಕೂಡ. ಬುಡಕಟ್ಟುಗಳು ಹೊರ ಸಮುದಾಯವನ್ನು ನಂಬುವುದಿಲ್ಲ ಅಲ್ಲದೆ ಅವರಿಂದ ತಮ್ಮ ಬಿಡುಗಡೆ ಸಾಧ್ಯವಿಲ್ಲವೆಂದು ಭಾವಿಸುತ್ತಾರೆ. ಒಂದೊಮ್ಮೆ ಸೂರ್ಯ ಮತ್ತು ನವಾಬರು ಹೋರಾಟದ ನೇತೃತ್ವವನ್ನು ವಹಿಸಿಕೊಂಡು ಅವರ ಬಿಡುಗಡೆ ಮಾಡಿಸಿದ್ದೇ ಆಗಿದ್ದರೆ ಅದೊಂದು ದೊಡ್ಡ ಅಪಚಾರವೇ ಆಗುತ್ತಿತ್ತು. ಹಾಗಾಗದೆ ಕಾದಂಬರಿಯಲ್ಲಿ ಬುಡಕಟ್ಟಿನವರಲ್ಲದ ಸೂರ್ಯ ಮತ್ತು ನವಾಬರು ಬುಡಕಟ್ಟಿಗೆ ಅಕ್ಷರ ಬೆಳಕನ್ನು, ಹೋರಾಟದ ಕಿಚ್ಚನ್ನು ಹೊತ್ತಿಸುತ್ತಾರಷ್ಟೇ. ಅವರು ಯಾವ ಹೋರಾಟದ ನೇತೃತ್ವವನ್ನು ವಹಿಸಿಕೊಳ್ಳುವುದಿಲ್ಲ. ಮದುವೆಯಾದ ಹೆಣ್ಣು ಮೊದಲನೆಯ ದಿನ ದೇವಸ್ಥಾನಕ್ಕೆ ಹೋಗಬೇಕೆಂಬ ಪದ್ಧತಿಯನ್ನು ಮುರಿದಿದ್ದು ಗೌರಿ. ಬಹುರಾಷ್ಟ್ರೀಯ ಕಂಪನಿಗಳು ಭೂಕಬಳಿಸಿದಾಗ ಅವರ ವಿರುದ್ಧ ಹೋರಾಟದ ನೇತೃತ್ವ ವಹಿಸಿಕೊಳ್ಳುವುದು ಶಬರಿ. ಸ್ವಲ್ಪ ಎಚ್ಚರ ತಪ್ಪಿದರೂ ಕಾದಂಬರಿ ಬುಡಕಟ್ಟಿನ ಅಂತರಂಗದಿಂದ ದೂರ ಸರಿಯುತ್ತಿತ್ತು. ಕೃತಕವೆನಿಸುತ್ತಿತ್ತು.

ಕಾದಂಬರಿಯಲ್ಲಿ ಕಂಡು ಬರುವ ಮತ್ತೊಂದು ಗಮನಾರ್ಹ ಸಂಗತಿ ಎಂದರೇ ಹೋರಾಟದ ಪರ್ಯಾಯ ನೆಲೆಗಳ ಹುಡುಕಾಟ. ಬರಗೂರರು ಕರ್ನಾಟಕದ ಚಳವಳಿಗಳನ್ನು ಬಹಳ ಹತ್ತಿರದಿಂದ ಕಂಡವರು. ಇಂದು ಚಳವಳಿಗಳು ನೆಲೆ ಕಳೆದುಕೊಂಡಿರುವುದನ್ನು ಬಲ್ಲವರು. ಚಳವಳಿಗಳು ದಿಕ್ಕು ತಪ್ಪಲು ಕಾರಣವನ್ನು ಖಚಿತವಾಗಿ ಗ್ರಹಿಸಿದ್ದಲ್ಲದೆ ಪರ್ಯಾಯ ದಿಕ್ಕನ್ನು ತೋರಿದ್ದಾರೆ. ಕರ್ನಾಟಕದಲ್ಲಿ ಲೋಹಿಯಾ, ಗಾಂಧಿ, ಅಂಬೇಡ್ಕರ್, ಮಾರ್ಕ್ಸ್, ಮಾವೋ ಹೀಗೆ ಹಲವು ಸಿದ್ಧಾಂತಗಳ ಅಡಿಯಲ್ಲಿ ಚಳವಳಿಗಳು ರೂಪಿತಗೊಂಡಿವೆ. ಹೋರಾಟಗಳು ನಡೆಯುತ್ತಿವೆ. ಶಬರಿ ಇಂದಿನ ತುರ್ತಿನ ಚರ್ಚೆಯನ್ನು ಪ್ರಾರಂಭಿಸಿದೆ.

ಇಂದಿನ ಹೋರಾಟಕ್ಕೆ ಸೃಜನಶೀಲ ಸಿದ್ಧಾಂತವಿರಬೇಕೆಂಬುದು ಲೇಖಕರ ಅಭಿಪ್ರಾಯ. ಸೃಜನಶೀಲ ಸಿದ್ಧಾಂತವೆಂದರೆ ಕಾಲಕ್ಕನುಗುಣವಾಗಿ ಚಳವಳಿಯ ಸ್ವರೂಪವನ್ನು ಬದಲಾಯಿಸುವುದು ಎಂದು. ಯಾವುದೋ ಕಾಲದಲ್ಲಿ, ಯಾವುದೋ ಪ್ರದೇಶದಲ್ಲಿ, ಯಾವುದೋ ಸಮಾಜಕ್ಕಾಗಿ ಹುಟ್ಟಿದ ಸಿದ್ಧಾಂತವನ್ನು ಯಥಾವತ್ತಿಗೆ ನಮ್ಮ ಸಂದರ್ಭಕ್ಕೆ ತಂದು ಅನ್ವಯಿಸುವುದು ಸಮಯೋಚಿತವಲ್ಲ. ಸಿದ್ಧಾಂತಗಳ ಕೇಂದ್ರ ಆಶಯಕ್ಕೆ ಬದ್ಧವಾಗಿ ಬೇರೆಬೇರೆ ಸಂದರ್ಭಕ್ಕನುಗುಣವಾಗಿ ಹೋರಾಟದ ಸ್ವರೂಪವನ್ನು ರೂಪಿಸುವುದು ಸೃಜನಶೀಲ ಹೋರಾಟವೆನಿಸಿಕೊಳ್ಳುತ್ತದೆ. ಇಂದು ಚಳವಳಿ ಕಟ್ಟಲು ಬೇಕಾಗಿರುವುದು ಈ ಬಗೆಯ ತಾತ್ವಿಕ ಸೃಜನಶೀಲತೆ ಎಂಬುದು ಗಮನಾರ್ಹ.

ಜನಮುಖಿಯಾದ ಲೇಖಕ ವರ್ತಮಾನದಲ್ಲಿ ನಿಂತು ಭೂತವನ್ನು ಗ್ರಹಿಸಿ ಭವಿಷತ್ತನ್ನು ಕಟ್ಟುತ್ತಾನೆ. ಬರಗೂರವರು ಆ ಬಗೆಯ ಚಿಂತಕರು. ೨೧ನೇ ಶತಮಾನ ಚಳವಳಿಯ ದೃಷ್ಟಿಯಿಂದ ಶರಣಾಗತಿಯ ಶತಮಾನ. ಜಾಗತೀಕರಣ ಚಳವಳಿಯ ಅಂತರಂಗ ಭೇದಿಸಿ ಶಿಥಿಲಗೊಳಿಸುವ ಶಕ್ತಿಯನ್ನು ಹೊಂದಿದೆ. ಆದ್ದರಿಂದ ಇಂದು ಚಳವಳಿಯನ್ನು ಕಟ್ಟುವುದು, ಹೋರಾಟವನ್ನು ರೂಪಿಸುವುದು ಸಾಧ್ಯವಿಲ್ಲದಂತಾಗಿದೆ. ಏಕೆಂದರೆ ಯಾವುದೇ ಹೋರಾಟಕ್ಕೆ ಗುರಿ ಸ್ಪಷ್ಟವಾಗಿರಬೇಕು. ಜಾಗತೀಕರಣ ಶೋಷಣೆಯ ಅನಂತ ವಲಯಗಳನ್ನು ಹುಟ್ಟುಹಾಕಿದೆ. ಈ ವಲಯಗಳು ಹೋರಾಟಗಾರರ ಅರಿವಿನ ವ್ಯಾಪ್ತಿಯನ್ನು ಮೀರಿ ಬೆಳೆದಿವೆ. ಆದ್ದರಿಂದ ಯಾರ ವಿರುದ್ಧ ಹೋರಾಡಬೇಕು? ಹೇಗೆ ಹೋರಾಡಬೇಕೆಂಬ ಗೊಂದಲದಲ್ಲಿ ಹೋರಾಟಗಾರರಿದ್ದಾರೆ.



ಪ್ರಶ್ನೆ

ಕದನ'
'ಸಾಮಾಜಿಕ
ನ್ಯಾಯ'
ಸಂಬಂಧದಲಿ
'ವೆಂಕಟಮ್ಮನ ಹಳ್ಳಿ'
ಮಾರಣ ಹೋಮ
'ಕಳಿಂಗ'ವಾದದ್ದು
ಯಾರಿಗೆ?

○ ಟಿ.ಎಸ್. ರಾಜೇಂದ್ರ ಪ್ರಸಾದ್

ಇದುವರೆಗೆ ಜಾತಿಯ ವಿರುದ್ಧ, ಶೋಷಣೆಯ ವಿರುದ್ಧ, ಪುರೋಹಿತಶಾಹಿ ವಿರುದ್ಧ, ಪ್ರಭುತ್ವದ ವಿರುದ್ಧ, ಹೋರಾಡುತ್ತಿದ್ದ ಚಳವಳಿಗಾರರಿಗೆ ಈ ಎಲ್ಲವೂ ಏಕತ್ರಗೊಂಡ ಐಟಿ-ಬಿಟಿ ಕಂಪನಿಗಳು, ಕಾಲ್‌ಸೆಂಟರ್‌ಗಳು ಮತ್ತು ಕೆಲವೇ ಕೆಲವರನ್ನು ಆಗರ್ಭ ಶ್ರೀಮಂತರನ್ನಾಗಿ ಮಾಡಿ, ಕೋಟ್ಯಾಂತರ ಜನರನ್ನು ನಿರ್ಗತಿಕರನ್ನಾಗಿ ಮಾಡುತ್ತಿರುವ ವ್ಯವಸ್ಥೆ ವಿರುದ್ಧ. ಯಾರ ವಿರುದ್ಧ ಹೋರಾಡಬೇಕೋ? ತಿಳಿಯದೆ ಗೊಂದಲದ ಗೂಡಾಗಿದ್ದಾರೆ. ಸೂರ್ಯನ ಬದಕಿನ ಮೂಲಕ ಕಾದಂಬರಿ ಹೋರಾಟದ ದಿಕ್ಕಿನೆಡೆಗೆ ಬೊಟ್ಟು ಮಾಡುತ್ತದೆ..

ಇದುವರೆಗೆ ಜಾತಿಯ ವಿರುದ್ಧ, ಶೋಷಣೆಯ ವಿರುದ್ಧ, ಪುರೋಹಿತಶಾಹಿ ವಿರುದ್ಧ, ಪ್ರಭುತ್ವದ ವಿರುದ್ಧ, ಹೋರಾಡುತ್ತಿದ್ದ ಚಳವಳಿಗಾರರಿಗೆ ಈ ಎಲ್ಲವೂ ಏಕತ್ರಗೊಂಡ ಐಟಿ-ಬಿಟಿ ಕಂಪನಿಗಳು, ಕಾಲ್‌ಸೆಂಟರ್‌ಗಳು ಮತ್ತು ಕೆಲವೇ ಕೆಲವರನ್ನು ಆಗರ್ಭ ಶ್ರೀಮಂತರನ್ನಾಗಿ ಮಾಡಿ, ಕೋಟ್ಯಾಂತರ ಜನರನ್ನು ನಿರ್ಗತಿಕರನ್ನಾಗಿ ಮಾಡುತ್ತಿರುವ ವ್ಯವಸ್ಥೆ ವಿರುದ್ಧ. ಯಾರ ವಿರುದ್ಧ ಹೋರಾಡಬೇಕೋ? ತಿಳಿಯದೆ ಗೊಂದಲದ ಗೂಡಾಗಿದ್ದಾರೆ. ಸೂರ್ಯನ ಬದಕಿನ ಮೂಲಕ ಕಾದಂಬರಿ ಹೋರಾಟದ ದಿಕ್ಕಿನೆಡೆಗೆ ಬೊಟ್ಟು ಮಾಡುತ್ತದೆ. ಹೋರಾಟ ವ್ಯಕ್ತಿ ಕೇಂದ್ರಿತವಾಗಿರಬಾರದು, ಅದು ಜನಮೂಲಿಯವಾಗಿರಬೇಕು. ವ್ಯವಸ್ಥೆಯನ್ನು ಸುಡುವ ಕಿಡಿ ಜನಮೂಲದಿಂದಲೇ ಹುಟ್ಟಿಕೊಳ್ಳಬೇಕು. ಸಮಸ್ತ ಶೋಷಿತರು ಜಾಗೃತಗೊಂಡು ಏಕಮುಖವಾಗಿ ಹೋರಾಡಿದಾಗ ಮಾತ್ರ ಯಶಸ್ಸು ಕಾಣಲು ಸಾಧ್ಯವಾದೀತು ಎಂಬುದು ಕಾದಂಬರಿಯ ಅಂತರಾರ್ಥ. ಸೂರ್ಯ ಮಾಡಿದ್ದು ಇದ್ದನ್ನೇ. ಶಬರಿಗೆ ಶೋಷಣೆಯ ಕೇಂದ್ರದ ಅರಿವನ್ನಷ್ಟೇ ಮೂಡಿಸುತ್ತಾನೆ. ಸೂರ್ಯನ ಬೆಳಕಲ್ಲಿ ಶಬರಿ ಶೋಷಣೆಯ ಕೇಂದ್ರವನ್ನು ಕಾಣುತ್ತಾಳೆ. ಅದಕ್ಕಾಗಿ ತನ್ನ ಬಳಗವನ್ನು, ಇತರೆ ಜಾತಿಯವರನ್ನು ಒಟ್ಟುಗೂಡಿಸುತ್ತಾಳೆ. ಹೋರಾಟಕ್ಕೆ ಅಡಿಗಲ್ಲನ್ನು ಹಾಕುತ್ತಾಳೆ. ಜಾಗತೀಕರಣಕ್ಕೆ ಶಬರೀಕರಣವೇ ಉತ್ತರ.

ಕಾದಂಬರಿಯಲ್ಲಿ ಪ್ರಜಾಪ್ರಭುತ್ವವೂ ಸೂಚ್ಯವಾಗಿ ಚರ್ಚಿತವಾಗಿದೆ. ಭಾರತದ ಸಾಮಾಜಿಕ ರಚನೆಗೆ ಪ್ರಜಾಪ್ರಭುತ್ವದ ಮಾದರಿ ಅತ್ಯಂತ ಅನುಕೂಲಕಾರಿ. ಹಾಗೆಂದ ಮಾತ್ರಕ್ಕೆ ಇಲ್ಲಿ ಎಲ್ಲವೂ ಸರಿಯಾಗಿದೆ ಎಂದೇನೂ ಅರ್ಥವಲ್ಲ. ಪ್ರಜಾಪ್ರಭುತ್ವದ ಬೇರಿನಲ್ಲಿ ಹೋರಾಟದ ಮೊಳಕೆಯೂ ಇದೆ. ಅದನ್ನು ಚಿವುಟಿ ಹಾಕುವ ಕ್ರೂರತ್ವವೂ ಇದೆ. ಸೂರ್ಯ ಬುಡಕಟ್ಟಿನ ನೆಲೆಗೆ ಬಂದು ಹೋರಾಟವನ್ನು ರೂಪಿಸುವುದಕ್ಕೆ ಸಾಧ್ಯವಾಗುವುದು ಪ್ರಜಾಪ್ರಭುತ್ವದಿಂದಲೇ, ಇದು ಪ್ರಜಾಪ್ರಭುತ್ವದ ಬಹುದೊಡ್ಡ ಶಕ್ತಿ. ಇದೇ ಪ್ರಜಾಪ್ರಭುತ್ವದಲ್ಲಿ ನಿರಪರಾಧಿ ಸೂರ್ಯನ ಮೇಲೆ ಸುಳ್ಳು ಆರೋಪದ ಮೇಲೆ ಬಂಧಿಸಿ, ಸಮಾಜದ ರಕ್ಷಣೆ ಮಾಡುವ ಪೊಲೀಸರೇ ಕೊಲೆ ಮಾಡುವುದು ಪ್ರಜಾಪ್ರಭುತ್ವದ ಬಹುದೊಡ್ಡ ವ್ಯಂಗ್ಯ. ಭಾರತದ ಪ್ರಜಾಪ್ರಭುತ್ವ ಫ್ಯೂಡಲ್ ಸಿಸ್ಟಂನಿಂದ ಇನ್ನೂ ಹೊರಬರದಿರುವುದನ್ನು ಕಾದಂಬರಿಕಾರರು ಧ್ವನಿ ಬದ್ಧವಾಗಿ ಕಟ್ಟಿಕೊಡುತ್ತಾರೆ.

ಕಾದಂಬರಿಯಲ್ಲಿ ಹುಚ್ಚೀರನ ಪಾತ್ರ ಒಂದು ಅದ್ಭುತ ಸೃಷ್ಟಿ. ಹುಚ್ಚೀರ ಕೇವಲ ಒಂದು ಪಾತ್ರವಲ್ಲ. ಅದು ಸೃಷ್ಟಿಯ ಅಂತರ್ಗತವಾಗಿರುವ ಜಾಗೃತ ದೃಷ್ಟಿ. ಅದನ್ನು 'ಕಾಲ'ವೆಂದು ಬೇಕಾದರೂ ಕರೆಯಬಹುದು. ಮತ್ತೊಂದು ನೆಲೆಯಲ್ಲಿ ಅದನ್ನು ಪ್ರಾಕೃತಿಕ ನ್ಯಾಯವೆಂತಲು ಕರೆಯಬಹುದು. ಸೃಷ್ಟಿ ಎಲ್ಲ ವೈಪರೀತ್ಯ ನೋಡುತ್ತಲೇ ಕಟ್ಟ ಕಡೆಗೆ ತನ್ನ ನ್ಯಾಯವನ್ನು ಪ್ರಕಟಪಡಿಸುತ್ತದೆ. ಅಂತಹ ಸೃಷ್ಟಿಯ ದೃಷ್ಟಿ ಈ ಹುಚ್ಚೀರ. ಕಾದಂಬರಿಯ ಪ್ರಾರಂಭದಿಂದ ಘಟಿಸುವ ಎಲ್ಲಾ ಘಟನೆಗಳಲ್ಲಿಯೂ ಇದ್ದು ಕಟ್ಟಕಡೆಗೆ ಸತ್ಯವನ್ನು ಬಹಿರಂಗ ಪಡಿಸುತ್ತಾನೆ. ಅವನು ಬಹಿರಂಗ ಪಡಿಸುವ ಸತ್ಯದ ಬೆಳಕಲ್ಲಿ ಬುಡಕಟ್ಟು ತಮ್ಮ ಮೇಲಿನ ಶೋಷಣೆಯ ಕೇಂದ್ರವನ್ನು ಅರಿಯುತ್ತಾರೆ. ಹೋರಟಕ್ಕೆ ಸಜ್ಜುಗೊಳ್ಳುತ್ತಾರೆ.

ಹೀಗೆ ಅನೇಕ ಅರ್ಥಗಳನ್ನು ಕಟ್ಟಿಕೊಡುವ ಶಬರಿಯ ಶಬರಿಯು ತನ್ನ ಸಮುದಾಯದ ಬಿಡುಗಡೆಯ ಕನಸು ಕಾಣುತ್ತ ಕಾಯುತ್ತಿದ್ದಾಳೆ. ಕಾಲ ತನ್ನ ನ್ಯಾಯವನ್ನು ಸ್ಫೋಟಿಸುವವರೆಗೆ ಕಾಯುತ್ತಿದ್ದಾಳೆ. ಕಾಯುತ್ತಲೇ ಇದ್ದಾಳೆ. □

ವೈಚಾರಿಕ ಶೂನ್ಯ
ತುಂಬುತ್ತಿರುವ ಸಂವಾದ ಕ್ಕೆ

ತುಂಬು ಹೃದಯದ
ಶುಭ ಹಾರೈಕೆಗಳು

ಶ್ರೀ ರವಿಶಂಕರ್, ಗುತ್ತಿಗೆದಾರರು
ಮೈಸೂರು

ಆರಕ್ಕೆ ಕಾಲಿಟ್ಟ ಸಂವಾದ ಕ್ಕೆ

ಶುಭ ಹಾರೈಸುವವರು

ಶ್ರೀ ಹೆಚ್.ಸಿ ಸಿದ್ದೇಗೌಡ,
ಗುತ್ತಿಗೆದಾರರು, ಕೆ.ಆರ್.ಎಸ್

ಕಾಲವಾದ ಕಾಲುಗಳು

ಅರುಣ್ ಜೋಳದ ಕೂಡ್ಲಿಗಿ

-೧-

ಅದು ದೇಹಗಳಿಲ್ಲದ
ಬರಿ ಕಾಲುಗಳ ಜಾತ್ರೆ!
ಕಾಲು ಜಂಗುಳಿಯಲ್ಲಿ
ಜೋಡಿ ಕಾಲುಗಳು
ಅದಲು ಬದಲಾಗಿವೆ!

-೨-

ಒಣ ಮೀನಿನಂಥಾ
ಸುಕ್ಕುಗಟ್ಟಿದ ಕಾಲುಗಳು
ಮುದಿತನವ ಸಾರಿ ಹೇಳುತ್ತಿವೆ!
ಕಾಲುಂಗುರು ಚೈನು
ಹೆಣ್ತನವ ಬಿಕರಿಗಿಟ್ಟಿವೆ!
ಮಸುಕು ಮಸುಕಾದ ಕಲೆ
ಕಡುಗಪ್ಪು ಕಾಲುಗಳಲ್ಲಿ
ಜೀತದ ಸರಪಳಿಯ ಸದ್ದು ಮಾಡುತ್ತಿವೆ!



-೩-

ಅದೆಷ್ಟೋ ಪಾದಗಳು
ಚಪ್ಪಲಿ ಶೂಕಂಪನಿಗಳ
ಹೆಸರ ಉಲಿಯುತ್ತಿವೆ!
ಇನ್ನೆಷ್ಟೋ ಬರಿಪಾದಗಳು
ಸುಡುವ ಡಾಂಬರು ರಸ್ತೆಯೊಂದಿಗೆ
ಸುಟ್ಟುಕೊಳ್ಳುವಿಕೆಯಲ್ಲಿಯೇ
ಚೌಕಾಸಿ ಮಾಡುತ್ತಿವೆ!

-೪-

ಜಾತ್ರೆ ಮುಗಿಯುತ್ತಲೂ
ನೊಂದ ಕಡುಗಪ್ಪ ಕಾಲುಗಳು
ಬಿಳಿ ದೇಹಗಳು
ಸೋತ ತಾಯಂದಿರ ಕಾಲುಗಳು
ಪುರುಷ ದೇಹಗಳ
ಮಿಲನಕ್ಕೆ ಕಾತರಿಸುತ್ತಿವೆ!

-೫-

ದೇಹದ ನಿಟ್ಟುಸಿರ ನಿತ್ಯವೂ
ಕೇಳಿಸಿಕೊಂಡ ಲೆಕ್ಕವಿಲ್ಲದಷ್ಟು
ಕಾಲುಗಳು
ದೇಹಗಳಿಗೆ ಸಿಗದಿರಲೆಂದು
ದೂರ ದೂರದವರೆಗೆ ಪಯಣ ಬೆಳಸಿ
ಕೊನೆಯುಸಿರೆಳೆದಿವೆ!
ಕಾಲುಗಳೇ ಸಿಗದ
ಅದೆಷ್ಟೋ ದೇಹಗಳ
ಕ್ಷಿಲಾ ದ್ವನಿಯೊಂದು
ಅಲೆ ಅಲೆಯಾಗಿ
ಮನುಕುಲದ ಮೇ
ಸವಾರಿ ಮಾಡುತ್ತಿದೆ



ಜಾತಿಬದ್ಧ ಸಂಗೀತ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

'ಆಜ ನಾಚ್ಲೇ' ಎನ್ನೋ ಹಾಡನ್ನು ರಚಿಸಿದವನು ದಲಿತರನ್ನು ಅಣಕಿಸಿದ ಎಂದಲ್ಲ ಅಚ್ಚರಿ ಪಡುವುದೇನೂ ಇಲ್ಲ. ಆಜ ನಾಚ್ಲೆ ಹಾಡನ್ನು ರಚಿಸಿದವ ಸಿಎನ್ಆರ್‌ಗೆ ಹೇಳುವುದೇನೆಂದರೆ ಒಬ್ಬ ಮೋಚಿ ತನ್ನ ಕನಸುಗಳನ್ನು ಬದಿಗಿಟ್ಟು ವಿಧಿ ಲಿಖಿತ ಭವಿಷ್ಯದಿಂದ ಅಡ್ಡಸರಿಯಬಾರದು. ತನ್ನ ಮೈಲಿಗೆಯ ಧರ್ಮ ಕೆಲಸವನ್ನು ಬಿಟ್ಟು ಚಿನ್ನದ ಆಚಾರಿ ಕೆಲಸ ಮಾಡುವುದನ್ನು ನಿಂದಿಸಬೇಕು. ಅಂದರೆ ಆ ಸಿನಿಮಾಕ್ಕೆ ಹಾಡು ರಚಿಸಿದವ ಮೋಚಿಗಳು ಯಾವತ್ತೂ ಬೂಟು ಪಾಲಿಷ್, ಚಪ್ಪಲಿ ರಿಪೇರಿ ಮಾಡುತ್ತಾ ಇಡೀ ಬದುಕನ್ನು ದೂಡುತ್ತಿರುವುದನ್ನು ಕಂಡಿದ್ದಾನೆ. ಆದ್ದರಿಂದ ದಲಿತರು ತಮ್ಮ ಸ್ಥಾನಮಾನವನ್ನು ಬದಲಿಸಿಕೊಂಡು ಚಿನ್ನದ ಆಚಾರಿಯಾಗುವುದನ್ನು ಅಣಕಿಸಬೇಕು. ಜಾತಿ ವ್ಯವಸ್ಥೆಯು ವೃತ್ತಿ ಮತ್ತು ಪರಿಶುದ್ಧ ರಕ್ತದ ಮೇಲೆ ನಿಂತಿರುವುದರಿಂದ ವೃತ್ತಿ ಶ್ರೇಣಿಯಲ್ಲಿ ಯಾವುದೇ ಬದಲಾವಣೆ ಸ್ಥಾಪಿತ ಜಾತಿ ವ್ಯವಸ್ಥೆಗೆ ಮಾರಕವಾಗುತ್ತದೆ.

ಅನು : ಡೊಮಿನಿಕ್. ಡಿ

'ಚಪ್ಪಲ್ ಪರ್ ಚಮಿನೆ ಚಲೀ, ಸ್ಯಾಂಡಲ್ ಪರ್ ದೊಬಿಯ ಹಾವ್ ಮೋರ್ ರಾಮ, ಬಾದಲ್ ಗಾಯ್ಲೆ ದುನಿಯ' ಎನ್ನುವ ಹಾಡು ೭೦ರ ಆರಂಭದಲ್ಲಿ ಪೂರ್ವ ಉತ್ತರ ಪ್ರದೇಶದಲ್ಲೆಲ್ಲಾ ಜನಪ್ರಿಯವಾಗಿತ್ತು. ಅದರರ್ಥ 'ಓ ನನ್ನ ದೇವರೆ, ಮಹಿಳೆಯರೀಗ ಚಪ್ಪಲಿಗಳನ್ನು ಧರಿಸುವುದರಿಂದ ಜಗತ್ತು ಬದಲಾಗಿಬಿಟ್ಟಿದೆ'. ಇಂಥ ದುರುಳ ಆಲೋಚನೆ ಸಂಗೀತಗಾರನಿಗೇಕೆ ಬಂತು?

ಇಲ್ಲಿ ಗಮನಿಸಬೇಕಾಗಿರುವ ಸಂಗತಿ ಎಂದರೆ ಮೇಲಿನ ಶೀರ್ಷಿಕೆಯ ಹಾಡನ್ನು ರಚಿಸಿದ ಸಂಗೀತಗಾರನ ನರಮಂಡಲದ ಕೇಂದ್ರದಲ್ಲಿ ದಲಿತ ಮಹಿಳೆಯರು ಚಪ್ಪಲಿ ಧರಿಸುವುದನ್ನು ಸಹಿಸಲು ಸಾಧ್ಯವಾಗುವುದಿಲ್ಲ. ಶತಮಾನಗಳಿಂದಲೂ ದಲಿತರು ಚಪ್ಪಲಿ ಧರಿಸದೆ ಬರೀಗಾಲಲ್ಲಿ ನಡೆಯುವ ಸಿದ್ಧ ಮಾದರಿಯ ರೂಪವನ್ನು ಮುಖ್ಯವಾಹಿನಿ ಸಮಾಜ ಇಂದೂ ಸಹ ಬಯಸುತ್ತಿದೆ. ಆದರೆ ೭೦ರ ದಶಕದಲ್ಲಿ ದಲಿತರು ಸರ್ಕಾರಿ ಉದ್ಯೋಗವನ್ನು ಪಡೆದು ವೇತನವನ್ನು ತಮ್ಮ ಮನೆಗಳಿಗೆ ಮನಿ ಆರ್ಡರ್ ಮಾಡುತ್ತಿದ್ದರು. ಇದರಿಂದಾಗಿ ಮನೆಯವರು ದಲಿತೇತರರ ಸವಲತ್ತು ಎಂದು ಪರಿಗಣಿಸಿದ್ದನ್ನು ಕೊಳ್ಳತೊಡಗಿದರು.

ಆಕ್ಸ್‌ಫರ್ಡ್ ವಿದ್ಯಾಭ್ಯಾಸ ಪಡೆದ ಎಂ.ಎನ್.ಶ್ರೀನಿವಾಸ್ ತನ್ನ ಹಾಸ್ಯಾಸ್ಪದ ಸಂಸ್ಕೃತೀಕರಣ ಸಿದ್ಧಾಂತವನ್ನು ಮಂಡಿಸತೊಡಗಿದಾಗ ಮೇಲಿನ ಜಾತಿ ಆಧಾರಿತ ಸಿದ್ಧಮಾದರಿಗಳ ಸಿಟ್ಟನ್ನು ಎದುರಿಸುವಂತಾಯಿತು. ಆತನ ಪ್ರಕಾರ ಸೂಟು-ಬೂಟು ಧರಿಸುವ ಅಥವಾ ಟೇಬಲ್ ಮ್ಯಾನರ್ಸ್‌ಗಳನ್ನು ಅನುಸರಿಸುವ ಒಬ್ಬ ದಲಿತ ಬ್ರಾಹ್ಮಣರ ಮಾದರಿಯನ್ನು ಅನುಸರಿಸಬೇಕಂತೆ. ಆದರೆ ಬ್ರಾಹ್ಮಣರನ್ನು ಅನುಸರಿಸುವುದೆಂದರೆ ಜನಿವಾರ ಧರಿಸಿ, ಗಂಧವನ್ನು ಹಣೆಗೆ ತೀಡಿಕೊಂಡು ಸಸ್ಯಹಾರಿಯಾಗುವುದು. ಆದರೆ ಸೂಟು-ಬೂಟು ಧರಿಸಿ, ಟೇಬಲ್ ಮ್ಯಾನರ್ಸ್ ಬ್ರಿಟಿಷರಿಗೆ ಸೇರಿದವೇ ಹೊರತು ಬ್ರಾಹ್ಮಣರಿಗೆ ಅಲ್ಲವಲ್ಲ!

ಆದ್ದರಿಂದ 'ಆಜ ನಾಚ್ಲೇ' ಎನ್ನೋ ಹಾಡನ್ನು ರಚಿಸಿದವನು ದಲಿತರನ್ನು ಅಣಕಿಸಿದ ಎಂದಲ್ಲಿ ಅಚ್ಚರಿ ಪಡುವುದೇನೂ ಇಲ್ಲ. ಆಜ ನಾಚ್ಲೇ ಹಾಡನ್ನು ರಚಿಸಿದವ ಸಿಎನ್ಆರ್‌ಗೆ ಹೇಳುವುದೇನೆಂದರೆ ಒಬ್ಬ ಮೋಚಿ ತನ್ನ ಕನಸುಗಳನ್ನು ಬದಿಗಿಟ್ಟು ವಿಧಿ ಲಿಖಿತ ಭವಿಷ್ಯದಿಂದ ಅಡ್ಡಸರಿಯಬಾರದು. ತನ್ನ ಮೈಲಿಗೆಯ ಧರ್ಮ ಕೆಲಸವನ್ನು ಬಿಟ್ಟು ಚಿನ್ನದ ಆಚಾರಿ ಕೆಲಸ ಮಾಡುವುದನ್ನು ನಿಂದಿಸಬೇಕು. ಅಂದರೆ ಆ ಸಿನಿಮಾಕ್ಕೆ ಹಾಡು ರಚಿಸಿದವ ಮೋಚಿಗಳು ಯಾವತ್ತೂ ಬೂಟು ಪಾಲಿಷ್ ಮಾಡುತ್ತ, ಚಪ್ಪಲಿ ರಿಪೇರಿ ಮಾಡುತ್ತಾ ಇಡೀ ಬದುಕನ್ನು ದೂಡುತ್ತಿರುವುದನ್ನು ಕಂಡಿದ್ದಾನೆ. ಆದ್ದರಿಂದ ದಲಿತರು ತಮ್ಮ ಸ್ಥಾನಮಾನವನ್ನು ಬದಲಿಸಿಕೊಂಡು ಚಿನ್ನದ ಆಚಾರಿಯಾಗುವುದನ್ನು ಅಣಕಿಸಬೇಕು.

ಜಾತಿ ವ್ಯವಸ್ಥೆಯು ವೃತ್ತಿ ಮತ್ತು ಪರಿಶುದ್ಧ ರಕ್ತದ ಮೇಲೆ ನಿಂತಿರುವುದರಿಂದ ವೃತ್ತಿ ಶ್ರೇಣಿಯಲ್ಲಿ ಯಾವುದೇ ಬದಲಾವಣೆ ಸ್ಥಾಪಿತ ಜಾತಿ ವ್ಯವಸ್ಥೆಗೆ ಮಾರಕವಾಗುತ್ತದೆ. ಇಲ್ಲಿಯವರೆಗೆ ತಿರಸ್ಕೃತವಾದ ಉದ್ಯೋಗಗಳನ್ನು ದಲಿತರು ಇಂದು ಪಡೆದುಕೊಳ್ಳುತ್ತಿದ್ದಾರೆ. ಇದನ್ನು ಸಹಿಸದ ಜಾತಿ ವ್ಯವಸ್ಥೆ ಅವರಿಗೆ ಅಡ್ಡಗಾಲು ಹಾಕಲು ಹವಣಿಸುತ್ತಿದೆ.

ಆದ್ದರಿಂದ ಈ ವಿಚಾರವೇ ಆಜ ನಾಚ್ಲೆ ಸಂಗೀತಗಾರನಿಂದ ಸೃಜನಶೀಲವಾಗಿ ಮನೋಕಲ್ಪನೆಯಲ್ಲಿ ಮೂಡಿ ಬಂದದ್ದು. ಈ ನಿಟ್ಟಿನಲ್ಲಿ ಆಜ ನಾಚ್ಲೆ ಎನ್ನೋದು ಜಾತಿಯತೆಯ ಪ್ರಜ್ಞಾ ಪೂರ್ವಕ ಎನ್ನುವುದಕ್ಕಿಂತಲೂ ಅದೊಂದು ಅಪ್ರಜ್ಞಾಪೂರ್ವಕವಾಗಿದ್ದು ಎಲ್ಲೋ ನೆನಪಿನಾಳದಲ್ಲಿ ಬೇರುಬಿಟ್ಟಿದ್ದು ಸಿಎನ್ಎಸ್‌ನ ಮೂಲಕ ಅದು ಆಗೊಮ್ಮೆ ಈಗೊಮ್ಮೆ ಹೊರ ಬರುತ್ತಿರುತ್ತದೆ. ಯಾವುದು ಒಂದು ಸಾಮಾಜಿಕ ಸಮಸ್ಯೆಯಾಗಿತ್ತೋ ಅದು ಈಗ ಆಳವಾದ ಮನೋ ಸಮಸ್ಯೆಯಾಗಿಬಿಟ್ಟಿದೆ.

ಮೋಚಿಗಳು ಸೇರಿದಂತೆ ದಲಿತ ಸಮುದಾಯಗಳ ಪರವಾಗಿ ದಲಿತ ಗುಂಪುಗಳು ಆ ಸಿನಿಮಾ ನಿರ್ಮಾಪಕನ ವಿರುದ್ಧ ತಿರುಗಿ ಬಿದ್ದದ್ದು ಸರಿಯಾಗಿಯೇ ಇದೆ.

ಆದರೆ ಅಲ್ಲೊಂದು ದ್ವಂದ್ವವಿದೆ. ಮೋಚಿಗಳು ರಸ್ತೆಬದಿಯಲ್ಲಿ ಬೂಟು ಪಾಲಿಷ್ ಮಾಡುವುದನ್ನು ಕಂಡಾಗ ಈ ದಲಿತ ನಾಯಕರಿಗೆ ಅದೇ ರೀತಿಯ ನೋವು ಕಾಡುವುದೇ?

ಭಾರತದಲ್ಲಿ ಬೂಟು ಪಾಲಿಷ್ ಮಾಡುವ ಕೆಲಸಕ್ಕೆ ಅಂಟಿಕೊಂಡಿರುವ ಕಳಂಕವನ್ನು ಅರಿತಾಗ ಮೋಚಿಗಳು ಅನುಭವಿಸುವ ನೋವು ಎಲ್ಲಾ ದಲಿತ ನಾಯಕರನ್ನು ಕಾಡಬೇಕಲ್ಲವೇ? ಈ ಪ್ರಶ್ನೆಗೆ ತರ್ಕಬದ್ಧ ಉತ್ತರವನ್ನು ಕಂಡುಕೊಳ್ಳದಿದ್ದಲ್ಲಿ ಆಜ ನಾಚ್ಲೆಗೆ ತೋರುವಂಥ ಪ್ರತಿಕ್ರಿಯೆಗಳು ಅರ್ಥವಿಲ್ಲದಂತಾಗಿ ಸಂದೇಹಾತ್ಮಕವಾಗುತ್ತದೆ.

ಯಾವುದೇ ಸಾಮಾಜಿಕ ಗುಂಪು ತನ್ನ ಬಗ್ಗೆಯೇ ಆತ್ಮವಿಶ್ಲೇಷಣೆಯ ಶ್ರೀಮಂತಿಕೆಯನ್ನು ಪ್ರದರ್ಶಿಸದಿದ್ದಲ್ಲಿ ಅದು ಪ್ರಗತಿಯನ್ನು ಕಾಣಲು ಸಾಧ್ಯವಾಗುವುದಿಲ್ಲ. ವರ್ತಮಾನದ ದಲಿತ ಚಳವಳಿಗಳು ಈ ತೆರನ ಸ್ವ ವಿಮರ್ಶೆಯ ಶಕ್ತಿಯನ್ನು ಕಳೆದುಕೊಂಡಿವೆ. ಅಂದರೆ ಅವು ಡಾ. ಅಂಬೇಡ್ಕರ್‌ರವರ ಹಾದಿಯಿಂದ ಪಕ್ಕ ಸರಿದಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಅಂಬೇಡ್ಕರವರು ವ್ಯವಸ್ಥೆಯ ವಿರುದ್ಧ ಸಿಡಿದೇಳುತ್ತಲೇ ನಾವು ಒಳಗಿನಿಂದಲೇ ಸುಧಾರಿಸಲು ಕರೆ ನೀಡಿದ್ದರು. ಸಾಮಾಜಿಕವಾಗಿ ನಕಾರಾತ್ಮಕ ಆಚರಣೆಯಾದ ಸತ್ತ ಪ್ರಾಣಿಗಳ ಮಾಂಸ ತಿನ್ನುವುದನ್ನು ಬಿಡಬೇಕೆಂದು ಅವರು ನಮ್ಮನ್ನು ಒತ್ತಾಯಿಸಿದ್ದರು. ಅವರು ಅನೇಕ ಶಿಕ್ಷಣ ಕೇಂದ್ರಗಳನ್ನು ತೆರೆಯುವ ಮೂಲಕ ಸಮುದಾಯಗಳಿಗೆ 'ಶಿಕ್ಷಿತರಾಗಿ' ಎನ್ನೋ ಮೊದಲ ಘೋಷಣೆಯನ್ನು ನೀಡಿದರು.

ಎರಡು ಮಹಾ ಚಳವಳಿಗೆ ನಾನು ಸಾಕ್ಷಿಯಾಗಿದ್ದೇನೆ. ನಾನು ಪಾಸಿ ಎನ್ನೋ ಉಪ ದಲಿತ ಪಂಗಡಕ್ಕೆ ಸೇರಿದ್ದು, ಹಿರಿಯ ದಲಿತರು ನಮ್ಮ ಓಣಿಗೆ ಬಂದು ಹಂದಿ ಸಾಕುವುದನ್ನು ನಿಲ್ಲಿಸಬೇಕೆಂದು ನಿವೇದಿಸಿಕೊಳ್ಳುತ್ತಿದ್ದರು. ಪಕ್ಕದಲ್ಲಿದ್ದ ಚಮ್ಮಾರ ಕೇರಿಗೆ ಈ ಹಿರಿಯ ದಲಿತರು ಸಾಗಿ ಅಲ್ಲಿ ಸತ್ತ ಪ್ರಾಣಿಗಳನ್ನು ಎತ್ತಿ ಅವುಗಳ ಚರ್ಮ ತೆಗೆಯುವುದನ್ನು ನಿಲ್ಲಿಸಲು ಹೇಳುತ್ತಿದ್ದರು. ೭೦ರ ದಶಕದ ಮಧ್ಯಾವಧಿಗೆ ಪೂರ್ವ ಉತ್ತರ ಪ್ರದೇಶದಲ್ಲಿ ಈ ಎರಡು ಮಾಹಾ ಚಳಚಳಿಗಳಿಂದಾಗಿ ದಲಿತರೊಳಗೆ ಹುದುಗಿದ್ದ ಶಕ್ತಿಯನ್ನು ಸಂಘಟಿಸಿದವು.

ಹಾಗಾದರೆ ಇಂದು ಮೋಚಿಗಳು ಅಥವಾ ಕಸತೆಗೆಯುವವರ ಬಳಿಗೆ ಸಾಗಿ ಜಾಗೃತಿ ಮೂಡಿಸಿ ಜಾತೀಯತೆಯ ಕಳಂಕವಿಲ್ಲದ ದುಡಿಮೆಗಳತ್ತ ಪಲ್ಲಟವಾಗುವಂತೆ ಸೂಚಿಸುವ ಅಂಥ ದಲಿತ ಚಳುವಳಿ ಇದೆಯಾ? ನನ್ನ ಮುಂದಿನ ವಾರದ ಅಂಕಣಗಳು ಅದು ಎಷ್ಟು ಸುಲಭ ಎನ್ನುವುದನ್ನು ಹೇಳಲಿವೆ.

ನಮ್ಮ ಕಪಟತನ

ಆಜ ನಾಜ್ಲೆ ಎನ್ನೋ ಹಾಡಿನಲ್ಲಿ ಮೋಚಿ ಪದ ಬಳಸಿದ್ದು ನಮಗೆ ನೋವನ್ನುಂಟುಮಾಡಿತು. ಪ್ರತಿಭಟನೆಗಳು ಸಕಾರಾತ್ಮಕ ಫಲಿತಾಂಶವನ್ನು ನೀಡಿತು, ಹಾಡಿನಲ್ಲಿದ್ದ ಶಬ್ದವನ್ನು ತೆಗೆದು ಹಾಕಿ ಕ್ಷಮೆಯನ್ನು ಕೋರಲಾಯಿತು. ಆದರೆ ಎಲ್ಲಾ ಮೋಚಿಗಳು ರಸ್ತೆ ಬದಿ ಹೇಗಿದ್ದರೋ ಹಾಗೆಯೇ ಉಳಿದಿದ್ದಾರೆ. ಇದು ನಮಗೆ ಘಾಸಿಯಾಗುವುದಿಲ್ಲವೇ?

ನಾವೆಷ್ಟು ಕಪಟಿಗಳು! ಭಾರತಾದ್ಯಂತ ದಲಿತರೇ ಬೂಟು ಪಾಲಿಷ್ ಮಾಡುವುದು ಮತ್ತು ಚಪ್ಪಲಿ ರಿಪೇರಿ ಮಾಡುತ್ತಿರುವುದು. ಹೀಗಿರುವಾಗ ಕೇವಲ ಮೋಚಿ ಪದ ಬಳಸಿದ್ದು ನಮಗೆ ನೋವನ್ನುಂಟುಮಾಡಿತು. ಯಾವುದೇ ಸಂದರ್ಭವನ್ನು ಹೊರತು ಪಡಿಸಿದರೂ ಸಹ ಮೋಚಿ ಎನ್ನುವುದು ಒಂದು ಬೈಗುಳ ಪದ. ದಲಿತೇತರ ಮಗು ತನ್ನ ಪೋಷಕರಲ್ಲಿ ದಲಿತರ ಬಗ್ಗೆ ವಿಚಾರಿಸಿತು ಎಂದಿಟ್ಟುಕೊಳ್ಳೋಣ. ಎಲ್ಲಾ ತೆರನಾಗಿ ಯೋಚಿಸಿದರೂ ಸಹ ಆ ಪೋಷಕರು ರಸ್ತೆಗುಡಿಸುವ ವ್ಯಕ್ತಿ ಅಥವಾ ರಸ್ತೆ ಬದಿ ಕುಳಿತಿರುವ ಮೋಚಿಯನ್ನು ತೋರಿಸುತ್ತಾರಷ್ಟೆ. ಅಂಥ ಮಗು ದಲಿತರ ಬಗ್ಗೆ ಒಂದು ರೀತಿಯ ಗ್ರಹಿಕೆಯಲ್ಲಿ ಬೆಳೆಯುತ್ತದೆ. ಹಾಗೆಯೇ ಕಸಗುಡಿಸುವವರ ಮತ್ತು ಮೋಚಿಗಳ ಮಕ್ಕಳು ಸಹ ಕೆಲವು ಗ್ರಹಿಕೆಗಳಲ್ಲಿ ಬೆಳೆಯುತ್ತಾರೆ.

ನಮಗೆ ತಿಳಿದಿರುವಂತೆ ಜಾತಿ ಎನ್ನೊದು ವೃತ್ತಿ ಮತ್ತು ಪರಿಶುದ್ಧ ರಕ್ತವನ್ನು ಕುರಿತದ್ದೇ ಆಗಿದೆ. ಯಾವಾಗ ವೃತ್ತಿ ಮತ್ತು ಜಾತಿ ಸಂಬಂಧ ಇಲ್ಲವಾಗುತ್ತದೋ ಆಗ ಜಾತಿ ವ್ಯವಸ್ಥೆ ಎನ್ನೋದೂ ಸಹ ಇರಲಾಗುವುದಿಲ್ಲ. ಎಲ್ಲೀ ತನಕ ಜಾತಿ ವ್ಯವಸ್ಥೆ ಇರುತ್ತೋ ಅಲ್ಲೀ ತನಕ ಅದು ದಲಿತರನ್ನು ಬೇಟೆಯಾಡುತ್ತದೆ. ಗುಡಿಸೋದು, ಸ್ವಚ್ಛ ಮಾಡೋದು, ಶೌಚಾಲಯ ತೊಳೆಯೋದು, ಬೂಟು ಪಾಲಿಷ್ ಮಾಡೋದು ಮುಂತಾದುವು ದಲಿತರನ್ನು ಗುರುತಿಸುವ ಜನಪ್ರಿಯ ಸಂಗತಿಗಳು.

ಬದಲಾವಣೆಗಳು ಖಂಡಿತ ಆಗಿವೆ ನಿಜ. ಆದರೆ ಗುಡಿಸೋದು ಮತ್ತು ಬೂಟು ಪಾಲಿಷ್ ಮಾಡೋದು ಜಾತಿಯನ್ನು ಬಿಡದೆ, ಇನ್ನೂ ಸಹ ಜಾತಿ ಗಂಟಿದ ವೃತ್ತಿಗಳಾಗೇ ಉಳಿದಿವೆ. ಇಂಥ ಅವಮಾನಕರ ಕೆಲಸದಿಂದ ಮುಕ್ತರಾಗದ ಹೊರತು ಸಮಾಜದಲ್ಲಿ ಒಂದು ಸಮುದಾಯ ಗೌರವದಿಂದ ಬದುಕಲಾಗದು. ಆದರೆ ಸಮುದಾಯವೊಂದು ಗುಡಿಸೋದರಿಂದ, ಬೂಟು ಪಾಲಿಷ್ ಮಾಡೋದರಿರಿದ ಬಿಡಿಸಿಕೊಳ್ಳಲು ಸುಲಭ ಸಾಧ್ಯವೇ?

ಕಳೆದ ಒಂದು ವಾರದಿಂದ ನಾನು ಕೆಲವು ಮೋಚಿಗಳನ್ನು ಮತ್ತು ಗುಡಿಸುವವರನ್ನು ನನ್ನ ಸ್ಥಳದಲ್ಲಿ ಗಮನಿಸುತ್ತಿದ್ದೇನೆ. ಒಬ್ಬ ಮೋಚಿ ದಿನವೊಂದಕ್ಕೆ ರೂ ೧೨೫/- ರಿಂದ ೧೫೦/- ರತನಕ ಗಳಿಸುತ್ತಾನೆ. ಹಾಗೆಯೇ ಒಬ್ಬ ಗುಡಿಸುವ ವ್ಯಕ್ತಿಯು ಸಹ ತನ್ನ ಮನೆಯವರಂತೆ ಗಳಿಸುತ್ತಾನೆ/ಳೆ. ಗುಡಿಸೋದು ಮತ್ತು ಬೂಟು ಪಾಲಿಷ್ ಮಾಡೋದನ್ನು ಪರಿಗಣಿಸುವಾಗ ಅವು ಪಟ್ಟಣ ಮತ್ತು ನಗರ ಪ್ರದೇಶಗಳ ಒಂದು ವಿದ್ಯಮಾನ ಎನ್ನೊದನ್ನು ಕಾಣುತ್ತೇವೆ. ಆದ್ದರಿಂದ ಈ ಕೆಲಸಗಳಿಂದ ಅವರನ್ನು ಬಿಡಿಸಲು ಕಷ್ಟವೇ?

ನನ್ನ ಸ್ಥಳದಲ್ಲಿ ಸುಮಾರು ನೂರು ಮಂದಿ ಐಸ್ ಕ್ರೀಮ್ ಮಾರುವವರಿದ್ದಾರೆ. ಇವರಲ್ಲಿ ಅನೇಕರು ಬಿಹಾರ ಮತ್ತು ಉತ್ತರ ಪ್ರದೇಶಗಳಿಂದ ವಲಸೆ ಬಂದವರಾಗಿದ್ದಾರೆ. ಅವರು ಐಸ್‌ಕ್ರೀಮ್ ಮಾರುವ ಕೆಲಸದಿಂದ ದಿನವೊಂದಕ್ಕೆ ರೂ. ೧೫೦/- ಕಮಿಷನ್ ಪಡೆಯುತ್ತಾರೆ. ನಾನೊಂದು ದಿನ ರಸ್ತೆಬದಿಯಲ್ಲಿ ನಿಂತೆ. ಒಂದು ಆಟೋ ಅಥವಾ ಕಾರು ನಿಮಿಷಕ್ಕೊಮ್ಮೆ ಅತ್ತ ಹಾದು ಹೋಗುತ್ತಿದ್ದವು. ಅವರೆಲ್ಲಾ ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಉತ್ತರ ಖಂಡ ಪ್ರದೇಶಗಳಿಂದ ವಲಸೆ ಬಂದವರೇ! ಈ ಕಾರು ಚಾಲಕ ಮೋಚಿ ಮತ್ತು ಕಸಗುಡಿಸುವವರಷ್ಟೇ ಗಳಿಸುತ್ತಾನೆ. ಹಾಗೆಯೇ ಆಟೋ ಚಾಲಕನೂ ಸಹ!

ನಮಗೆ ತಿಳಿದಿರುವಂತೆ ಜಾತಿ ಎನ್ನೊದು ವೃತ್ತಿ ಮತ್ತು ಪರಿಶುದ್ಧ ರಕ್ತವನ್ನು ಕುರಿತದ್ದೇ ಆಗಿದೆ. ಯಾವಾಗ ವೃತ್ತಿ ಮತ್ತು ಜಾತಿ ಸಂಬಂಧ ಇಲ್ಲವಾಗುತ್ತದೋ ಆಗ ಜಾತಿ ವ್ಯವಸ್ಥೆ ಎನ್ನೋದೂ ಸಹ ಇರಲಾಗುವುದಿಲ್ಲ. ಎಲ್ಲೀ ತನಕ ಜಾತಿ ವ್ಯವಸ್ಥೆ ಇರುತ್ತೋ ಅಲ್ಲೀ ತನಕ ಅದು ದಲಿತರನ್ನು ಬೇಟೆಯಾಡುತ್ತದೆ. ಗುಡಿಸೋದು, ಸ್ವಚ್ಛ ಮಾಡೋದು, ಶೌಚಾಲಯ ತೊಳೆಯೋದು, ಬೂಟು ಪಾಲಿಷ್ ಮಾಡೋದು ಮುಂತಾದುವು ದಲಿತರನ್ನು ಗುರುತಿಸುವ ಜನಪ್ರಿಯ ಸಂಗತಿಗಳು. ಬದಲಾವಣೆಗಳು ಖಂಡಿತ ಆಗಿವೆ ನಿಜ. ಆದರೆ ಗುಡಿಸೋದು ಮತ್ತು ಬೂಟು ಪಾಲಿಷ್ ಮಾಡೋದು ಜಾತಿಯನ್ನು ಬಿಡದೆ, ಇನ್ನೂ ಸಹ ಜಾತಿ ಗಂಟಿದ ವೃತ್ತಿಗಳಾಗೇ ಉಳಿದಿವೆ. ಇಂಥ ಅವಮಾನಕರ ಕೆಲಸದಿಂದ ಮುಕ್ತರಾಗದ ಹೊರತು ಸಮಾಜದಲ್ಲಿ ಒಂದು ಸಮುದಾಯ ಗೌರವದಿಂದ ಬದುಕಲಾಗದು.

ಮೇಲೆ ಹೇಳಿದ ಕೆಲಸಗಳಲ್ಲದೆ ಇನ್ನು ಹಲವಾರು ಕೆಲಸಗಳನ್ನು ದೆಹಲಿಗೆ ವಲಸೆ ಬಂದಿರುವವರು ಮಾಡುತ್ತಾರೆ. ಮೋಚಿಗಳು ಮತ್ತು ಕಸಗುಡಿಸುವವರಿಗಿಂತ ಅಧಿಕ ಹಣವನ್ನು ಹಣ್ಣು ತರಕಾರಿ ಮಾರುವವರು ಗಳಿಸುತ್ತಾರೆ. ಪ್ಲಂಬರ್‌ಗಳು, ಎಲೆಕ್ಟ್ರಿಷಿಯನ್ಸ್ ಮತ್ತು ಟೀ ಮಾರುವವರು, ಮೋಚಿಗಳು ಮತ್ತು ಕಸಗುಡಿಸುವವರಿಗಿಂತ ಅಧಿಕ ಹಣವನ್ನು ಗಳಿಸುತ್ತಾರೆ. ದಲಿತರನ್ನೊಳಗೊಂಡಂತೆ ನೆರೆಯ ರಾಜ್ಯಗಳಿಂದ ವಲಸೆ ಬಂದಿರುವ ಅನೇಕರು ಇಂಥ ದುಡಿಮೆಯಲ್ಲಿ ತೊಡಗಿದ್ದಾರೆ. ಅವರೆಲ್ಲಾ ನಿಜವಾಗಿಯೂ ಶ್ರಮಜೀವಿಗಳಾಗಿದ್ದು ಹೆಚ್ಚು ಕಷ್ಟ ಪಡುತ್ತಾರೆ ನಿಜ. ಅವರು ವಾಸಿಸಲು ಸ್ವಲ್ಪ ನೆಲೆ ಹುಡುಕಿಕೊಳ್ಳಬೇಕು. ಅನೇಕ ಸಲ ಇಂಥವರು ಕೊಳಗೇರಿಗಳಲ್ಲಿ ನಿಂತ ನಂತರವೇ ನಗರದಲ್ಲಿ ಕೆಲಸ ಹುಡುಕಿಕೊಳ್ಳುವುದು. ಅನೇಕರು ಯಾವುದೇ ವಿದ್ಯೆ ಅಥವಾ ಕೌಶಲ್ಯವಿಲ್ಲದೆ ಕೂಲಿಗಾರರಾಗಿ ದುಡಿಯುತ್ತಾರೆ. ಅನೇಕ ತಿಂಗಳಕಾಲ ಇವರು ಏನನ್ನೂ ಕೂಡಿಡಲಾಗದು. ಕಾರಣ ವಾಸ ಸ್ಥಳಕ್ಕಾಗಿ ಅವರು ಖರ್ಚುಮಾಡಬೇಕಾಗುತ್ತದೆ.

ಈಗಾಗಲೇ ಮೋಚಿಗಳು ಮತ್ತು ಕಸಗುಡಿಸುವವರು ನಗರಗಳಲ್ಲಿ ನೆಲೆ ಕಂಡುಕೊಂಡವರಾಗಿದ್ದಾರೆ. ಅವರಿಗೆಲ್ಲಾ ರೇಷನ್ ಕಾರ್ಡ್ ಮತ್ತು ಮತದಾರರ ಗುರುತು ಚೀಟಿಯನ್ನು ಹೊಂದಿದವರಾಗಿದ್ದಾರೆ. ಇವರೇಕೆ ಜಾತಿಗೊಡವೆ ಇಲ್ಲದ ಕೆಲಸಗಳಿಗೆ ಪಲ್ಲಟರಾಗಬಾರದು. ಚಾಲಕ ಅಥವಾ ಐಸ್‌ಕ್ರೀಮ್ ಮಾರಾಟಗಾರರಾಗಲು ತಗಲುವ ವೆಚ್ಚವಾದರೂ ಎಷ್ಟು?

ಐಸ್‌ಕ್ರೀಮ್ ಮಾರಾಟಗಾರನಾಗಲು ರೂ.೧೦೦೦ ಮೊತ್ತವನ್ನು ಐಸ್‌ಕ್ರೀಮ್ ಕಂಪನಿಯಲ್ಲಿ ಠೇವಣಿ ಇಡಬೇಕಾಗುತ್ತದೆ. ಹಾಗೆಯೇ ಹಣ್ಣು ಅಥವಾ ತರಕಾರಿ ಮಾರಾಟ ಮಾಡಲು ತಗಲುವ ವೆಚ್ಚವೆಂದರೆ ರೂ. ೧೦೦೦/- ಅಷ್ಟೆ. ಈ ಸಮಸ್ಯೆಗೆ ಸುಲಭವಾದ ಪರಿಹಾರೋಪಾಯವಿದೆ. ಮೋಚಿಗಳು ಮತ್ತು ಕಸಗುಡಿಸುವವರಿಗೆ ಒಂದು ಖಾಯಂ ಉದ್ಯೋಗವಿದೆ. ಇವರ‍್ಯಾರು ಗ್ರಾಮೀಣ ಪ್ರದೇಶದಲ್ಲಿರುವ ದಲಿತರಂತೆ ಬಿಕ್ಕಟ್ಟನ್ನು ಎದುರಿಸಿ ವಲಸೆ ಹೋಗುವುದಿಲ್ಲ.

ಹೀಗಿರುವಾಗ ನಮಗೆ ಅಗತ್ಯವಾಗಿರುವುದೇನೆಂದರೆ ಮೋಚಿಗಳು ಮತ್ತು ಕಸಗುಡಿಸುವವರ ನಡುವೆ ಒಂದು ವಿಸ್ತೃತವಾದ ಸುಧಾರಣೆಯಾಗಬೇಕಿದೆ. ಇದೇ ತೆರನ ಬದಲಾವಣೆಯನ್ನು ೮೦ರ ದಶಕದಲ್ಲಿ ಹಳ್ಳಿಗಳಲ್ಲಿನ ದಲಿತರು ಕಂಡರು. ಹಿಂದಿಗಿಂತಲು ಇಂದು ಅಧಿಕ ದಲಿತ ಸಂಘಟನೆಗಳು ನಗರಗಳಲ್ಲಿರುವಾಗ ನಮಗೆ ಅಗತ್ಯವಾದುದಾರೂ ಏನಿದೆ. ಈ ದಲಿತ ಸಂಘಟನೆಗಳು ಈಗ

ಬೇಲಾಳ ಸ್ಮರಣೆ

[illegible] ಏನಿದೆ?

ಸಾಮಾಜಿಕ ಬದಲಾವಣೆಯಲ್ಲಿ ತೊಡಗುವ [illegible] ಘೋಷಣೆಗಳನ್ನು ಕೂಗುವುದು ಸುಲಭವಲ್ಲವೇ? ದುರಂತವೆಂದರೆ ಇಂಥ ಘೋಷಣೆಗಳನ್ನು ಕೂಗುವುದರಲ್ಲೆ ಅನೇಕರಿಗೆ ಸಂತಸವಿದೆ. ಈ ಕಪಟತನ ಶುದ್ಧ ಮತ್ತು ಸರಳವಾದುದು.

೧೯೯೫-೧೯೯೭ರ ನಡುವೆ ನಾನೊಬ್ಬ ಬರಹಗಾರನಾಗಲು ಹೆಣಗುತ್ತಿದ್ದೆ. ನಾನಾಗ ದೆಹಲಿಯಲ್ಲಿ ಯಾವುದೇ ಆಶ್ರಯ ಇಲ್ಲದವನಾಗಿದ್ದೆ. ೧೯೮೭-೯೧ರ ನಡುವೆ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ನನ್ನನ್ನು ಹತ್ತಿರದಿಂದ ಬಲ್ಲ ನನ್ನ ಸಹಪಾಠಿಗಳು ಮತ್ತು ಸ್ನೇಹಿತರು ನಾನು ವಿ.ವಿ ಅಥವಾ ಕಾಲೇಜಿನಲ್ಲಿ ಉಪನ್ಯಾಸಕ ವೃತ್ತಿಯನ್ನು ತೆಗೆದುಕೊಳ್ಳದೆ ದಡ್ಡನಾದೆ ಎಂದು ಭಾವಿಸಿದ್ದರು. ಮಂಡಲೋತ್ತರ ಸಂದರ್ಭದಲ್ಲಿ ನನ್ನ ಕರಿಯರ್‌ನ ಉತ್ತುಂಗದಲ್ಲಿರುವಾಗ ನಾನು ದಲಿತ ಶಿಕ್ಷಣಾಂದೋಲನದ ಭಾಗವಾಗಲು ಅತ್ತ ಸರಿದುಬಿಟ್ಟೆ.

ಕೆಲವು ರಾಜಕಾರಣಿಗಳು ಮತ್ತು ಅಧಿಕಾರಿಗಳ ವರ್ತನೆಯಿಂದ ಆ ಆಂದೋಲನ ವಿಭಾಗವಾದಾಗ ನಾನು ಬೇಸತ್ತು ದೆಹಲಿಗೆ ಹಿಂತಿರುಗಿ ಬರೆಯಲು ತೊಡಗಿದೆ.

ದೆಹಲಿಯ ಪಾಲಿಸಿ ಗ್ರೂಪ್‌ನವರ ಬೆಂಬಲದಿಂದ **ದಲಿತ ಡಾಟಾ ಬ್ಯಾಂಕ್ - ೧** ಎನ್ನೋ ಮೊದಲ ಕೃತಿಯನ್ನು ರಚಿಸಿದೆ. ಅದನ್ನು ೧೯೯೬ರಲ್ಲಿ ಮುಗಿಸಿದ ನಾನು ಎಲ್ಲೂ ಹೋಗದೆ ಸುಮ್ಮನಿದ್ದೆ. ಆ ಸಂದರ್ಭದಲ್ಲಿ ನಾನು ಎರಡು ವರ್ಷಗಳ ಕಾಲ ದೆಹಲಿಯ ಜೆ.ಎನ್.ಯು.ನ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದೆ.

ನನ್ನ ಗೋಳನ್ನು ಗಮನಿಸಿದ ಉದ್ದಲೋಕ್ ಭಟ್ಟಾಚಾರ್ಯ ವಿ.ವಿ.ಯ ಹೊರ ವಲಯದಲ್ಲಿದ್ದ ತನ್ನ ಬಾಡಿಗೆ ಮನೆಗೆ ನನ್ನನ್ನು ಕರೆದೊಯ್ದು, ಅಲ್ಲಿದ್ದ ಸರ್ವೆಂಟ್ ಕೋಣೆಯೊಂದನ್ನು ನನಗೆ ನೀಡಿದ. ಅಲ್ಲಿ ಒಂದು ವರ್ಷಗಳ ಕಾಲ ನಿಂತೆ.

ಈ ಅನಿಶ್ಚಿತ ಏರ್ಪಾಟುಗಳ ನಡುವೆ ಇರುವಾಗಲೇ ಮತ್ತೆ ೧೯೯೮ರಲ್ಲಿ ನನಗೆ ಎಲ್ಲೂ ದಿಕ್ಕು ಕಾಣಲಿಲ್ಲ. ಹೀಗಿರುವಾಗ ಉಪನ್ಯಾಸಕನಾಗಿ ಕಾಲೇಜು ಅಥವಾ ವಿ.ವಿ.ಗೆ ಹೋಗುವುದು ಅಥವಾ ನನ್ನ ಹಳ್ಳಿಗೆ ಹಿಂತಿರುಗುವುದು ಇಷ್ಟೇ ನನ್ನೆದುರಿಗಿದ್ದ ಆಯ್ಕೆಗಳು. ನನಗಾವುದು ಇಷ್ಟವಾಗಲಿಲ್ಲ. ನಾನು ಬರವಣಿಗೆಯಲ್ಲಿ ಬೆಳೆಯಲು ಇಷ್ಟ ಪಟ್ಟ ಕಾರಣ ದೆಹಲಿಯಲ್ಲೇ ಉಳಿದುಕೊಳ್ಳುವ ಅಗತ್ಯವಿತ್ತು.

ಈಗ ಜೆ.ಎನ್.ಯು.ನಲ್ಲಿ ಬೋಧಕ ವೃತ್ತಿಯಲ್ಲಿರುವ ನನ್ನ ಸ್ನೇಹಿತ ರೋಶನ್ ಡಿಸೋಜ ಬೇಲಾ ಮಾಲಿಕ್‌ಳೊಂದಿಗೆ ಮಾತನಾಡಿ ನನಗೊಂದು ಉಳಿದುಕೊಳ್ಳೋ ವ್ಯವಸ್ಥೆ ಕಲ್ಪಿಸಿದ. ನಾನು ಬೇಲಾಳಿಗೆ ಭೇಟಿಯಾದೆ. ಆಗ ಆಕೆ ಪಿ.ಎಚ್.ಡಿ ಮಾಡುತ್ತಿದ್ದಳು. ಪರಿಸರ ಚರಿತ್ರೆಯಲ್ಲಿ ಮೊದಲ ವಿದ್ಯಾರ್ಥಿನಿಯಾಗಿ ಆಕೆ ಚರಿತ್ರೆ ಅಧ್ಯಯನ ಕೇಂದ್ರದಲ್ಲಿ ಸೇರಿಕೊಂಡಿದ್ದಳು. ಸೈನ್ಯಾಧಿಕಾರಿಯ ಮಗಳಾದ ಆಕೆಯೊಬ್ಬಳು ಮೂಲತಃ ವಿಚಾರವಂತೆಯಾಗಿದ್ದಳು. ಸಹಜವಾಗಿಯೇ ಸ್ನೇಹ ಜೀವಿಯಾದ ಆಕೆ

೧೯೯೫-೧೯೯೭ರ ನಡುವೆ ನಾನೊಬ್ಬ ಬರಹಗಾರನಾಗಲು ಹೆಣಗುತ್ತಿದ್ದೆ. ನಾನಾಗ ದೆಹಲಿಯಲ್ಲಿ ಯಾವುದೇ ಆಶ್ರಯ ಇಲ್ಲದವನಾಗಿದ್ದೆ. ೧೯೮೭-೯೧ರ ನಡುವೆ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ನನ್ನನ್ನು ಹತ್ತಿರದಿಂದ ಬಲ್ಲ ನನ್ನ ಸಹಪಾಠಿಗಳು ಮತ್ತು ಸ್ನೇಹಿತರು ನಾನು ವಿ.ವಿ ಅಥವಾ ಕಾಲೇಜಿನಲ್ಲಿ ಉಪನ್ಯಾ ಸಕ ವೃತ್ತಿಯನ್ನು ತೆಗೆದುಕೊಳ್ಳದೆ ದಡ್ಡನಾದೆ ಎಂದು ಭಾವಿಸಿದ್ದರು. ಮಂಡಲೋತ್ತರ ಸಂದರ್ಭದಲ್ಲಿ ನನ್ನ ಕರಿಯರ್‌ನ ಉತ್ತುಂಗದಲ್ಲಿರುವಾಗ ನಾನು ದಲಿತ ಶಿಕ್ಷಣಾಂದೋ ಲನದ ಭಾಗವಾಗಲು ಅತ್ತ ಸರಿದುಬಿಟ್ಟೆ. ಕೆಲವು ರಾಜಕಾರಣಿಗಳು ಮತ್ತು ಅಧಿಕಾರಿಗಳ ವರ್ತನೆಯಿಂದ ಆ ಆಂದೋಲನ ವಿಭಾಗವಾದಾಗ ನಾನು ಬೇಸತ್ತು ದೆಹಲಿಗೆ ಹಿಂತಿರುಗಿ ಬರೆಯಲು ತೊಡಗಿದೆ. ದೆಹಲಿಯ ಪಾಲಿಸಿ ಗ್ರೂಪ್‌ನವರ ಬೆಂಬಲದಿಂದ ದಲಿತ ಡಾಟಾ ಬ್ಯಾಂಕ್-೧ ಎನ್ನೋ ಮೊದಲ ಕೃತಿಯನ್ನು ರಚಿಸಿದೆ. ಅದನ್ನು ೧೯೯೬ರಲ್ಲಿ ಮುಗಿಸಿದ ನಾನು ಎಲ್ಲೂ ಹೋಗದೆ ಸುಮ್ಮನಿದ್ದೆ. ಆ ಸಂದರ್ಭದಲ್ಲಿ ನಾನು ಎರಡು ವರ್ಷಗಳ ಕಾಲ ದೆಹಲಿಯ ಜೆ.ಎನ್.ಯು.ನ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದೆ. ನನ್ನ ಗೋಳನ್ನು ಗಮನಿಸಿದ ಉದ್ದಲೋಕ್ ಭಟ್ಟಾಚಾರ್ಯ ವಿ.ವಿ.ಯ ಹೊರ ವಲಯದಲ್ಲಿದ್ದ ತನ್ನ ಬಾಡಿಗೆ ಮನೆಗೆ ನನ್ನನ್ನು ಕರೆದೊಯ್ದು, ಅಲ್ಲಿದ್ದ ಸರ್ವೆಂಟ್ ಕೋಣೆಯೊಂದನ್ನು ನನಗೆ ನೀಡಿದ. ಅಲ್ಲಿ ಒಂದು ವರ್ಷಗಳ ಕಾಲ ನಿಂತೆ.

ಕರುಣಾ ಸ್ವಭಾವದವಳು. ಉದ್ದನಿಲುವಿನ ಆಕೆ ಎಂಥವರನ್ನು ಆಕರ್ಷಿಸುತ್ತಿದ್ದಳು. ಅಲ್ಲದೆ ಆಕೆ ಜನಪ್ರಿಯ ವ್ಯಕ್ತಿಯಾಗಿದ್ದಳು. ಆಕೆ ಸ್ಟೀಫನ್ ಕಾಲೇಜಿನಲ್ಲಿ ಸ್ವಲ್ಪಕಾಲ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದಳು.

ನನ್ನ ಸ್ಥಿತಿಯನ್ನು ಅರಿತ ಆಕೆ, ಪೂರ್ವ ದೆಹಲಿಯಲ್ಲಿದ್ದ ತನ್ನ ಎರಡು ಕೋಣೆಯ ಪ್ಲಾಟ್‌ವೊಂದರಲ್ಲಿ ತನ್ನೊಡನೆ ನಿಲ್ಲಲು ನನ್ನನ್ನು ಆಹ್ವಾನಿಸಿದಳು. ಆಗ ಆಕೆ ಥಾಮಸ್ ಮ್ಯಾಥ್ಯು ಎನ್ನೋ ವ್ಯಕ್ತಿಯೊಡನಿದ್ದಳು. ಆತ ಟಾಮ್ಮಿ ಎಂದೇ ಪ್ರೀತಿಯಿಂದ ಕರೆಯಲ್ಪಟ್ಟಿದ್ದ ಆತನನ್ನು ಬೇಲಾ ನಂತರದಲ್ಲಿ ಮದುವೆಯಾಗಿದಳು. ನಾನು ಅಲ್ಲಿಗೆ ಹೋದಾಗ ಆಕೆ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ಗೆ ಚರಿತ್ರೆ ಮತ್ತು ಪರಿಸರ ವಿಷಯದ ಸಂಪಾದನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಳು.

ನನಗೆ ಆಕೆಯ ಮನೆ ಪ್ಯಾರಡೈಸ್ ಆಗಿತ್ತು. ನಾನು ವಿದ್ಯಾರ್ಥಿಯಾಗಿದ್ದಾಗ ಬಜಾಜ್ ಚೇತಕ್‌ನ್ನು ಜೆ.ಎನ್.ಯು.ನಲ್ಲಿ ಓಡಿಸುತ್ತಿದ್ದೆ ಮತ್ತು ದೆಹಲಿಯಲ್ಲಿ ಸಿಗುತ್ತಿದ್ದ ಒಳ್ಳೊಳ್ಳೆ ಬೂಟು ಮತ್ತು ಶರ್ಟ್‌ಗಳನ್ನು ಹಾಕಿಕೊಳ್ಳುತ್ತಿದ್ದೆ. ನನಗೆ ಮೊದಲನೇ ಸಲ ಆಕೆಯ ಮನೆಯಲ್ಲಿದ್ದ ದೂರವಾಣಿಗೆ ಮುಕ್ತ ಅವಕಾಶ ದೊರೆಯಿತು. ನಾನಲ್ಲಿ ಕಂಪ್ಯೂಟರ್ ಕಲಿತುಕೊಂಡೆ. ಅಲ್ಲದೆ ಇಂಟರ್‌ನೆಟ್ ಜಾಲಾಡಲಾರಂಭಿಸಿದೆ. ಆಕೆಯ ಮನೆಯಲ್ಲಿ ಎಷ್ಟೊಂದು ಪುಸ್ತಕಗಳಿದ್ದವು! ನನಗೆ ಅವುಗಳನ್ನು ಓದಲು ವಿಪುಲವಾದ ಸಮಯವೂ ದೊರೆಯಿತು. ಐದು ದಿನ ಪತ್ರಿಕೆಗಳನ್ನು ಓದುವ ಖುಷಿಯೂ ನನಗೆ ಅಲ್ಲಿ ದೊರೆಯಿತು.

ಬೇಲಾ-ಟಾಮ್ಮಿ ಇಂಗ್ಲಿಷ್ ಮೀಡಿಯಂನಲ್ಲಿ ಓದಿದವರು. ನನಗೆ ಇಂಗ್ಲಿಷ್ ಕಲಿಯುವ ಅವಕಾಶವೂ ದೊರಕಿತು. ಅವರಿಂದಲೇ ಟೇಬಲ್ ಮ್ಯಾನರ್ಸ್ ಸಹ ಕಲಿತುಕೊಂಡೆ. ಕೇವಲ ಒಂದೇ ವಾರದಲ್ಲಿ ನಾನು ಮನೆಯನ್ನು ನಿಭಾಯಿಸಲು ಕಲಿತುಕೊಂಡೆ. ನಾನು ಮಧ್ಯಾಹ್ನ ಅಥವಾ ರಾತ್ರಿ ಯಾವ ಊಟ ಮಾಡೋದು ಎಂದು ನಿರ್ಧರಿಸಲಾರಂಭಿಸಿದೆ. ನನಗಾಗ ಹಣದ ಕೊರತೆ ಕಾಣಲಿಲ್ಲ. ನಾನೇನಾದರೂ ಹೊರಗೆ ಹೋಗಬೇಕೆಂದಾಗ ಆಕೆನೇ ತನ್ನ ಪರ್ಸ್ ನೀಡಿ ಬೇಕಷ್ಟನ್ನು ತೆಗೆದುಕೊಳ್ಳಲು ಹೇಳುತ್ತಿದ್ದಳು. ಇದ್ಯಾವುದಕ್ಕೂ ಯಾವುದೇ ರೀತಿಯ ಕಂಡಿಷನ್ ಅಥವಾ ನಿರೀಕ್ಷೆಗಳು ಇರಲಿಲ್ಲ.

ಆಕೆ ಬೇಗನೆ ದಲಿತ ಭಾವನೆಗಳನ್ನು ಗ್ರಹಿಸಿ ನನಗೆ ಬರೆಯಲು ಪ್ರೋತ್ಸಾಹಿಸಿದಳು. ಆಕೆಯ ಮೂಲಕ ನನಗೆ ದೆಹಲಿಯ ಕುಲೀನರು ಪರಿಚಯವಾದರು. ೧೯೯೯ರಲ್ಲಿ ನಾನು ದಲಿತ್ ಡೈರಿಯನ್ನು ಬರೆಯಲಾರಂಭಿಸಿದಾಗ ನನ್ನ ಮೊದಲ ಬರಹಗಳನ್ನು ತಿದ್ದುತ್ತಿದ್ದಳು. ನಾನು ಆಕೆಯ ಮನೆಯಿಂದ ಹೊರ ಬಂದಾಗ ನನಗೆ ಅರ್ಧ ಡಜನ್ ಬೆಡ್‌ಗಳನ್ನು ಮತ್ತು ತಲೆದಿಂಬು, ಅಡುಗೆ ಪಾತ್ರೆ ಮುಂತಾದುವನ್ನು ನೀಡಿದ್ದಳು. ಆಕೆಯ ಜೀವಿತಾವಧಿಯಲ್ಲಿ ಸಹಾಯ ಪಡೆದ ನನ್ನಂಥವರು ಬಹುಮಂದಿ ಇದ್ದಾರೆ. ಹೀಗಿರುವಾಗ ಯಾವುದೇ ಗದ್ದಲವಿಲ್ಲದೆ ಡಿಸೆಂಬರ್ ೧೭ರಂದು ಆಕೆ ತನ್ನ ಕೊನೆಯುಸಿರನ್ನು ಬಿಟ್ಟಳು. ಸೆಪ್ಟೆಂಬರ್ ೨೦೦೬ರಲ್ಲಿ ಆಕೆ ಕುಸಿದುಬಿದ್ದು ಕೋಮಾ ಸ್ಥಿತಿಗೆ ಹೋದಳು. ಟಾಮ್ಮಿ ಆಕೆಯನ್ನು ಆತ್ಮೀಯವಾಗಿ, ಆಕೆಗೆ ಬದ್ಧನಾಗಿ ಸೇವೆ ಮಾಡಿದ್ದ.

ನಾನೆಷ್ಟು ಕಳೆದುಕೊಂಡಿದ್ದೇನೆಂದು ಪದಗಳಲ್ಲಿ ನಾನು ಹಿಡಿದಿಡಲಾಗದು. ಬೇಲಾ ಎಂದೂ ಸಹ ನನ್ನ ಬದುಕಿನ ಭಾಗವಾಗಿಯೇ ಇರುತ್ತಾಳೆ. □

ಶಿಕ್ಷಣ ಪ್ರಕ್ರಿಯೆಯಲ್ಲಿ ಕನ್ನಡ ಭಾಷೆಯ ಬಳಕೆ

(೨೧ನೇ ಪುಟದಿಂದ)

ವಿರುವುದು. ಇದಕ್ಕೆ ಪೂರಕವಾಗಿ ಡಾ॥ ಡಿ.ಎನ್. ಶಂಕರ ಭಟ್, ಡಾ॥ ಕೆ.ವಿ. ನಾರಾಯಣ, ಪ್ರೊ॥ ಲಿಂಗದೇವರು ಹಳೆಮನೆ, ಮತ್ತು ಡಾ॥ ಕೆ.ವಿ ತಿರುಮಲೇಶ್ ಮುಂತಾದವರ ಅಧ್ಯಯನಗಳನ್ನು ಆಧರಿಸಿಕೊಂಡು ಇವತ್ತಿನ ಕನ್ನಡ ಭಾಷಾ ಶಿಕ್ಷಣದ ಅಗತ್ಯಗಳನ್ನು ಮತ್ತು ಭಾಷಾ ಬಳಕೆಯ ನೈಜ ನೆಲೆಗಳನ್ನು ರೂಪಿಸಿಕೊಳ್ಳಬಹುದು.

೫. ಮುಕ್ತಾಯ

ಭಾಷಾ ಬೋಧನೆ/ಕಲಿಕೆಯ ಪ್ರಕ್ರಿಯೆಯಲ್ಲಿ ಭಾಷಿಕ ಬಳಕೆಯ ವಿಭಿನ್ನ ಸಾಧ್ಯತೆಗಳನ್ನು ರೂಢಿಸಿಕೊಳ್ಳುವ ಕ್ರಮ/ವಿಧಾನವನ್ನು ಕುರಿತು ಸಾಕಷ್ಟು ಚರ್ಚೆ ನಡೆದಿರುವುದು. ಇವುಗಳನ್ನು ಇವತ್ತಿನ ಕನ್ನಡ ಭಾಷಾ ಶಿಕ್ಷಣದ ಪ್ರಕ್ರಿಯೆಯಲ್ಲಿ ಭಾಷಾ ಬಳಕೆ ಮತ್ತು ಕ್ರಿಯೆಯ ನೈಜ ನೆಲೆಗಳನ್ನು ರೂಪಿಸಿಕೊಳ್ಳುವುದಕ್ಕೆ ಬಳಸುವ ನಿಟ್ಟಿನಲ್ಲಿ ಯೋಚಿಸಬೇಕಾಗಿದೆ. ಈ ಪ್ರಕ್ರಿಯೆಯು ಕೇವಲ ವ್ಯಾಕರಣಾತ್ಮಕ ನಿಲುವುಗಳಿಂದ ಅರ್ಥೈಸಿಕೊಳ್ಳುವುದಲ್ಲ. ಭಾಷೆಯ ಬೇರೆ ಬೇರೆ ಬಳಕೆಯ ಸನ್ನಿವೇಶಗಳ ನೆಲೆ-ನಿಲುವುಗಳನ್ನು ಆಧರಿಸಿಕೊಂಡು ತೀರ್ಮಾನಿಸುವ ಜರೂರು ಇರುವುದು. ಯಾಕೆಂದರೆ, ಭಾಷೆಯನ್ನು ಸೃಜನಶೀಲವಾಗಿ, ವ್ಯವಹಾರಿಕವಾಗಿ ಸಾಂಸ್ಕೃತಿಕ ಸಂವೇದನೆಯನ್ನು ಪ್ರತಿನಿಧಿಸುವ ಮಾಧ್ಯಮವಾಗಿ ರೂಢಿಸಿಕೊಳ್ಳಲು ವ್ಯಾಕರಣ ಮತ್ತು ಭಾಷಿಕ ರಚನಾ ವಿನ್ಯಾಸಗಳನ್ನು ಕರಗತ ಮಾಡಿ ಕೊಂಡರೆ ಸಾಲದು. ಈ ಮಟ್ಟಿನ ಭಾಷಿಕ ಸಾಮರ್ಥ್ಯವು ಭಾಷೆಯ ಸಾಮಾನ್ಯ ಕೌಶಲಗಳಿಂದ ಲಭಿಸತಕ್ಕದು.

ಅವುಗಳೆಂದರೆ, ಕೇಳುವ, ಮಾತನಾಡುವ, ಓದುವ ಮತ್ತು ಬರೆಯುವ. ಆದರೆ, ಇವತ್ತಿನ ಭಾಷಾ ಬಳ ಕೆಯ ಅಗತ್ಯಗಳನ್ನು ಪೂರೈಸಲು ಇಷ್ಟು ಸಾಲದು. ಆದ್ದರಿಂದ, Higher Order Skill ಗಳಾದ Cohesion, Coherent ಮತ್ತು Comprehension ಮುಂತಾದವುಗಳ ಸಹಾಯದಿಂದ ಭಾಷಾ ಬಳಕೆಯ ನೆಲೆಗಳನ್ನು ಮರು ರೂಪಿಸಿಕೊಳ್ಳುವ ಅಗತ್ಯ ಇರುವುದನ್ನು ಮನಗಾಣಬೇಕಾಗಿದೆ. ಆದ್ದರಿಂದ, ಲಿಪಿಕ್ರಾಂತಿ, ಪದರಚನೆ ಮತ್ತು ವಾಕ್ಯರಚನಾ ನಿಯಮಗಳನ್ನು ಮರು ಸ್ಥಾಪಿಸಬೇಕಾಗಿದೆ.

ಈ ಎಲ್ಲ ಸಾಧ್ಯತೆಗಳನ್ನು ಅಳವಡಿಸಿಕೊಳ್ಳು ವುದರ ಮೂಲಕ ಕನ್ನಡ ಭಾಷೆಯ ಕೊರತೆಗಳನ್ನು ನಿಭಾಯಿಸುವುದಕ್ಕೆ ಸಾಧ್ಯವಾಗಬಹುದು. ಕನ್ನಡ ಭಾಷೆಗೆ ಯಾವುದೆ ಜ್ಞಾನ/ತಿಳುವಳಿಕೆಯನ್ನು ಅಭಿವ್ಯಕ್ತಿಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಧೋರಣೆಯನ್ನು ಕಿತ್ತೊಗೆದು ಯೋಚಿಸುವ ಅಗತ್ಯವಿದೆ. ಕನ್ನಡದ ಮೂಲದಿಂದಲೆ ಎಲ್ಲ ತಿಳುವಳಿಕೆ/ಜ್ಞಾನವನ್ನು ಪರಿಕಲ್ಪಿಸಿಕೊಳ್ಳುವ ಸಾಧ್ಯತೆ ಗಳು ಕೂಡಲೆ ಸಾಧ್ಯವಾಗದೆ ಇರಬಹುದು ಆದರೆ, ಕನ್ನಡವು ಎರವಲು ಪ್ರಕ್ರಿಯೆಯಿಂದ ಈ ಕೊರತೆ ಯನ್ನು ನೀಗಿಸಿಕೊಳ್ಳಬಹುದು. ಯಾವುದೇ ಮಡಿವಂತಿ ಕೆಯ ಮುಲಾಜನ್ನು ಲೆಕ್ಕಿಸದೆ ಎರವಲು ಪದಗಳನ್ನು ತನ್ನ ಜಾಯಮಾನಕ್ಕೆ ಒಗ್ಗಿಸಿಕೊಳ್ಳಬೇಕು.

> **ಭಾಷೆಯನ್ನು ಸೃಜನಶೀಲವಾಗಿ, ವ್ಯವಹಾರಿಕವಾಗಿ, ಸಾಂಸ್ಕೃತಿಕ ಸಂವೇದನೆಯನ್ನು ಪ್ರತಿನಿಧಿಸುವ ಮಾಧ್ಯಮವಾಗಿ ರೂಢಿಸಿಕೊಳ್ಳಲು ವ್ಯಾಕರಣ ಮತ್ತು ಭಾಷಿಕ ರಚನಾ ವಿನ್ಯಾಸಗಳನ್ನು ಕರಗತ ಮಾಡಿಕೊಂಡರೆ ಸಾಲದು. ಈ ಮಟ್ಟಿನ ಭಾಷಿಕ ಸಾಮರ್ಥ್ಯವು ಭಾಷೆಯ ಸಾಮಾನ್ಯ ಕೌಶಲಗಳಿಂದ ಲಭಿಸತಕ್ಕದು.**

ಇಂಗ್ಲಿಷ್ ಭಾಷೆಯು ಎಲ್ಲ ತಿಳುವಳಿಕೆಯನ್ನು ರೂಢಿಸಿಕೊಂಡ ಕ್ರಮವನ್ನು ವಿಶ್ಲೇಷಿಸಿದರೆ, ಇದು ನಮಗೆ ಸ್ಪಷ್ಟವಾಗುವುದು. ಇಂಗ್ಲಿಷ್ ಭಾಷೆಯು ಸಾವಿ ರಾರೂ ಪದಗಳನ್ನು ಬೇರೆ ಬೇರೆ ಭಾಷೆಯಿಂದ ಎರ ವಲು ಪಡೆದುಕೊಂಡು ತನ್ನ ಜಾಯಮಾನಕ್ಕೆ ಒಗ್ಗಿಸಿಕೊಂಡಿರುವುದು ಗಮನಾರ್ಹ. ಈ ಭಾಷಾ ಬಳಕೆಯು ವಿಸ್ತರಗೊಂಡಷ್ಟು ಅನ್ಯ ಭಾಷೆಗಳು ಆಕ್ರಮಿಸಿಕೊಳ್ಳಬಹುದಾದ ಬಳಕೆಯ ಸಾಧ್ಯತೆಯನ್ನು ನಿರಾಕರಿಸುವ ಧೋರಣೆಯನ್ನು ಹುಟ್ಟು ಹಾಕುವುದು. ಈ ಧೋರಣೆಯು ಕನ್ನಡವನ್ನು ಬಳಸಿ ಬೆಳಸಲು ಸಹಾಯಕಾರಿ. ಈ ಎಲ್ಲ ಚರ್ಚೆಗಳು ಶಿಕ್ಷಣ ಪ್ರಕ್ರಿಯೆಯಲ್ಲಿ ಕನ್ನಡ ಭಾಷಾ ಬಳಕೆಯ ನೆಲೆಗೆ ಪೂರಕವಾಗಬಹುದಾದವುಗ ಳಾಗಿವೆ. ಈ ನೆಲೆಗಳೇ ಅಂತಿಮ ಅನ್ನುವ ಯಾವುದೇ ಅಹಮ್ಮು ಈ ಲೇಖನದ್ದಲ್ಲ ಶಿಕ್ಷಣವು ಭಾಷೆಯನ್ನು ಎಲ್ಲ ಕ್ರಿಯಾತ್ಮಕ ವಲಯಗಳಲ್ಲಿ ಪರಿಣಾಮಕಾರಿಯಾಗಿ ಬಳಸಲು ಭಾಷಿಕ ಸಾಮರ್ಥ್ಯವನ್ನು ರೂಪಿಸಿಕೊಡುವ ವ್ಯವಸ್ಥೆಯಾದುದ್ದರಿಂದ, ಆ ಪ್ರಕ್ರಿಯೆಗೆ ಪೂರಕವಾದ ಚರ್ಚೆಗಳನ್ನು ತಾತ್ವಿಕಗೊಳಿಸುವ (Philosophise) ನೆಲೆಗಳನ್ನು ಚರ್ಚಿಸಲಾಗಿದೆ. □

ಕನ್ನಡ ಮನಸ್ಸು ಮತ್ತು ಯು.ಆರ್. ಅನಂತಮೂರ್ತಿ

(೧೩ನೇ ಪುಟದಿಂದ)

ನೀಡಿದ್ದಾರೆ. ದೇಶಾದ್ಯಂತ ತಮ್ಮ ಸೃಜನಶೀಲತೆ ಮತ್ತು ಚಿಂತನೆಗಳ ಮೂಲಕ ಖ್ಯಾತರಾಗಿದ್ದಾರೆ, ಸಾಗರದಾಚೆಗೂ ತಲುಪಿದ್ದಾರೆ. ಕನ್ನಡ ಮನಸ್ಸನ್ನು ಬರೀ ಭಾವುಕತೆಯಲ್ಲಿ ಕಳೆದು ಹೋಗದಂತೆ ಅರಿವಿನ ಅಗಲ ವಿಸ್ತರಿಸುತ್ತಾ ಹೋಗುವಂತೆ ಮಾಡುತ್ತಿದ್ದಾರೆ.

ಇಷ್ಟೆಲ್ಲದರ ನಡುವೆ..: ವಿವಾದಗಳಿಗೂ ಯು.ಆರ್ ಅವರಿಗೂ ಹಿಂದಿನಿಂದಲೂ ಕೊನೆಯಿಲ್ಲದ ನಂಟು. 'ಸಂಸ್ಕಾರ ದಲ್ಲಿ ಬ್ರಾಹ್ಮಣ್ಯದ ಸ್ವಪಚತನವನ್ನು ಅನಾವರಣಗೊಳಿಸಿದಾಗಿನಿಂದ ಹಿಡಿದು, ಡಾಲರ್ಸ್ ಕಾಲೋನಿಯ ಮನೆಯ ತನಕ, ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದಗಿನಿಂದ ತೊಡಗಿ ಇಂಗ್ಲಿಶಿನಿಂದಲೇ ಮೇಲೇರಿ ಕನ್ನಡ ಮಾಧ್ಯಮದ ಪರ ಮಾತನಾಡುತ್ತಾರೆ ಎಂದು ಆರೋಪಿಸುವವರೆಗೆ ವಿವಾದದ ಸರಪಣಿ ಅವರನ್ನು ಹೆಣೆದುಕೊಂಡಿದೆ.

ಸಾಹಿತಿ ಅಸಂಖ್ಯಾತ ಪಾತ್ರಗಳನ್ನು ಸೃಜಿಸಿರುತ್ತಾನೆ. ಅವುಗಳಲ್ಲಿ ಯಾವೊಂದೇ ಪಾತ್ರದ ಜೊತೆಗೆ ಸಾಹಿತಿಯ ವ್ಯಕ್ತಿತ್ವವನ್ನು ಸಮೀಕರಿಸಿ ನೋಡುವುದು ಸೂಕ್ತವಾದ ಸಹೃದಯತನವಲ್ಲ. ಆದರೂ ರೂಪಕದಲ್ಲಿ ಹೇಳುವುದಾದರೆ ಅನಂತಮೂರ್ತಿಯವರ ಬದುಕನ್ನು ಅವರದೇ ನೀಳ್ಗತೆ 'ಬರ'ದ ಜಿಲ್ಲಾಧಿಕಾರಿ ಪಾತ್ರದೊಂದಿಗೆ ತುಲನೀಕರಿಸಬಹುದೆನಿಸುತ್ತದೆ. ಈ ಕತೆಯಲ್ಲಿ ಜಿಲ್ಲಾಧಿಕಾರಿಗೆ ತನ್ನ ಸುತ್ತಲೂ ತೀವ್ರವಾದ ಬರ ಹಬ್ಬಿಕೊಂಡಿದ್ದರೂ ಅದರ ಬಿಸಿ ಮಾತ್ರ ಅವನಿಗೆ ಭೌತಿಕವಾಗಿ ತಟ್ಟುವುದಿಲ್ಲ.

ಆದರೂ ಸಂವೇದನಶೀಲನಾಗಿರುವುದರಿಂದ ಗಾಢವಾಗಿ ನೋವು ತಿನ್ನುತ್ತಾನೆ. ಒಳಗೊಳಗೆ ಚಡಪಡಿಸುತ್ತಾನೆ. ಬರಪೀಡಿತರಿಗೆ ಸರ್ಕಾರಿ ನೆರವು ತಲುಪಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತಾನೆ. ಆದರೆ ರಾಜಕೀಯ ವ್ಯವಸ್ಥೆಯೊಳಗಿನ ಸಂದುಗಳು ಮತ್ತು ಕೋಮುದ್ವೇಷ ಇದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಒಬ್ಬ ಸಾಹಿತಿಯಾಗಿ ವಿದ್ವಾಂಸರಾಗಿ ಅನಂತಮೂರ್ತಿಯವರಿಗೆ ಸಾಂಸ್ಕೃತಿಕ ಲೋಕದಿಂದ ದಕ್ಕಬೇಕಾದ ಎಲ್ಲಾ ಸ್ಥಾನ ಮಾನ ಸವಲತ್ತುಗಳು ಯೋಗ್ಯತಾನುಸಾರವೇ ದಕ್ಕಿವೆ. ಈ ನಿಟ್ಟಿನಿಂದ ಅವರದು ನಿರುಮ್ಮಳವಾದ ಬದುಕು.

ಆದರೂ ಅವರಿಗೆ ನೆಮ್ಮದಿ ಸಾಧ್ಯವಿಲ್ಲ. ಕಾರಣ ಅವರಿಗೆ ಸಾಮಾಜಿಕ ಪರಿವರ್ತನೆ ಕುರಿತಂತೆ ಇರುವ ಮಹತ್ವಾಕಾಂಕ್ಷೆ, ಸುತ್ತಲಿನ ಬದುಕು ಹಸನಾಗಬೇಕೆಂಬ ಪ್ರಾಮಾಣಿಕ ಕಳಕಳಿ. ಇದಕ್ಕಾಗಿ ಪರಿಶ್ರಮಿಸಬೇಕಾದದ್ದು ಲೇಖಕ ಹಾಗೂ ಚಿಂತಕನ ಹೊಣೆಗಾರಿಕೆ ಎಂಬ ಒಳಎಚ್ಚರ. ಹೀಗಾಗಿ ಮಲ್ಲೆಪುರಂ ಜಿ. ವೆಂಕಟೇಶ್ ಅನಂತಮೂರ್ತಿಯವರನ್ನು ಕುರಿತು ಬರೆದಿರುವ ಈ ಸಾಲುಗಳೊಂದಿಗೆ ಈ ಲೇಖನವನ್ನು ಮುಕ್ತಾಯಗೊಳಿಸುವುದು ಸೂಕ್ತವೆನಿಸುತ್ತದೆ.

"ನಮ್ಮ ಸಮಾಜದ ಅನ್ಯಹಿಂಸಾಪ್ರತಿಭೆ-ಪರಾವಲಂಬಿ ಭ್ರಾಮಕ ಪ್ರತಿಭೆಗಳು ನಮ್ಮ ಮೇಲೆ ಒಂದೇ ಸಮನೆ ಈಗ ಧಾಳಿ ಇಡುತ್ತಿರುವಾಗ ಅವುಗಳಿಂದ ತಪ್ಪಿಸಿಕೊಳ್ಳಲು ಮಾಂತ್ರಿಕ ಪ್ರತಿಭೆ ಅಥವಾ ಮೂಲ ಪ್ರತಿಭೆಯ ಆಶ್ರಯಕ್ಕೆ ಹೋಗುವುದು ನಮಗೆ ಅನಿವಾರ್ಯ ಆಗಿದೆ. ಅಂಥಾ ಮಾಂತ್ರಿಕ ಪ್ರತಿಭೆಯನ್ನು ನಾನು ಅನಂತಮೂರ್ತಿಯವರಲ್ಲಿ ಕಂಡಿದ್ದೇನೆ". ಇವು ಅನಂತಮೂರ್ತಿ ಟೀಕಾಕಾರರು ಒಪ್ಪುವ ಅವರ ವೈಚಾರಿಕ ವ್ಯಕ್ತಿತ್ವದ ವ್ಯಾಖ್ಯಾನವಾಗಿದೆ. □

ಬುದ್ಧಾಯಣ

೩೦

ಹುಟ್ಟೇ ಬ್ರಾಹ್ಮಣ್ಯವಲ್ಲ ಪ್ರಜ್ಞೆಯೇ ಭೂಷಣ

'ಗೆಳೆಯಾ, ನಾಮ ರೂಪಗಳನ್ನು ತನ್ನ ಎಣೆ ಇಲ್ಲದ ಸಾಧನೆಗಳಿಂದ ದಾಟಿದಾತನೇ ಭಿಕ್ಷು, ಆತನಿಗೆ ಜಾತಿ ಆಗಲಿ ಲಿಂಗಭೇದವಾಗಲಿ ಇಲ್ಲ ಆತ ಯಾವುದೇ ಅನಾದಿ ಕಾಲದ ರೂಢಿಗತ ಧರ್ಮಗ್ರಂಥಕ್ಕೆ ಶರಣು ಅಲ್ಲ, ಭಿಕ್ಷುವಿಗೆ ಸತ್ಯ, ಸರಳತೆ, ಸಮಾನತೆಯೇ ಧರ್ಮಗ್ರಂಥ. ಅದೇ ಅವನ ಸಾಧನೆ ಮತ್ತು ಘನತೆ. ಆತ ಆತ್ಮವನ್ನಾಗಲಿ, ಪರಮಾತ್ಮವನ್ನಾಗಲಿ, ದೇವರನ್ನಾಗಲಿ, ಪುರ್ನಜನ್ಮವನ್ನಾಗಲಿ, ಕರ್ಮ ಸಿದ್ಧಾಂತವನ್ನಾಗಲಿ, ಪೌರೋಹಿತ್ಯವನ್ನಾಗಲಿ ಅಡ್ಡಿ ಎಂದು ಭಾವಿಸುತ್ತಾನೆ. ಏಕೆಂದರೆ, ಮನಸ್ಸಿಗೆ ಮನಸ್ಸೇ ಒಡೆಯ. ಮನಸ್ಸಿಗೆ ಮನಸ್ಸೇ ಆಶ್ರಯ'

ಸಿ. ಎಚ್. ರಾಜಶೇಖರ್

ನಿರಂತರ ಅಲೆಮಾರಿಯಾಗಿದ್ದ ಬುದ್ಧನು ತನ್ನ ಅಸಂಖ್ಯಾತ ಭಿಕ್ಷುಗಳೊಂದಿಗೆ ಒಂದು ಕಡೆಯಿಂದ ಮತ್ತೊಂದು ಕಡೆ ಪಯಣಿಸುವಾಗ ಮಾರ್ಗ ಮಧ್ಯದಲ್ಲಿ ಭಿಕ್ಷುಗಳು ಕೇಳುತ್ತಿದ್ದ ಪ್ರಶ್ನೆಗಳಿಗೆ ಶಾಂತ ಚಿತ್ತನಾಗಿ ಉತ್ತರಿಸುತ್ತಾ ಮುಂದೆ ಸಾಗುತ್ತಿದ್ದ. ಅಂತಹ ಒಂದು ಸಂದರ್ಭದಲ್ಲಿ ಬುದ್ಧನನ್ನುದ್ದೇಶಿಸಿ ಭಿಕ್ಷುವೊಬ್ಬ ಹೀಗೆ ಪ್ರಶ್ನಿಸುತ್ತಾನೆ:

'ಗುರುದೇವಾ, ಬ್ರಾಹ್ಮಣ ಎಂದರೆ ಯಾರು? ಅವನ ಕರ್ತವ್ಯಗಳೇನು? ಆಚಾರ ಮತ್ತು ನಂಬಿಕೆಗಳೇನು? ಬ್ರಾಹ್ಮಣ ಎಂಬ ಪದ ಅದೊಂದು ಪದವಿಯೋ ಅಥವಾ ಜನ್ಮಕ್ಕಂಟಿದ ಉಪಾದಿಯೋ?'

'ಗೆಳೆಯಾ, ವೇದ ಉಪನಿಷತ್ ಮುಂತಾದ ವೈದಿಕ ಧರ್ಮ ಗ್ರಂಥಗಳ ಪ್ರಕಾರ ಯಾವಾತ ಈ ಹಿಂದಿನ ಹತ್ತು ತಲೆಮಾರುಗಳಲ್ಲಿ ಬ್ರಾಹ್ಮಣ ಕುಲದಲ್ಲಿ ಹುಟ್ಟುತ್ತಾನೋ ಅವನೇ ಬ್ರಾಹ್ಮಣ. ಪುರೋಹಿತ್ಯಕ್ಕೆ ಅವನಷ್ಟೇ ಅರ್ಹ, ವರ್ಣಾಶ್ರಮದ ಪ್ರಕಾರ ಅವರನು ಮನುಜರಲ್ಲಿ ಶ್ರೇಷ್ಠ. ಭೂ ಲೋಕದ ಪ್ರತ್ಯಕ್ಷ ದೇವರು, ಮೊದಲ ಪೂಜೆ, ಮೊದಲ ದಕ್ಷಿಣೆ ಮತ್ತು ಮೊದಲ ಸನ್ಮಾನ ಆತನಿಗೆ ಸಲ್ಲಬೇಕು'.

'ಜನನ, ವಿವಾಹ ಮತ್ತು ಮರಣ ಇವುಗಳಿಗೆ ಸಂಬಂಧಿಸಿದ ಕರ್ಮಗಳನ್ನು ಮಾಡುವುದೇ ಇವನ ಕರ್ತವ್ಯ ಆ ಮೂಲಕ ದೊರೆಯುವ ದಕ್ಷಿಣೆ ಮತ್ತು ಕಾಣಿಕೆಯಿಂದಲೇ ಅವನ ಉಪ ಜೀವನ'

'ಅನಾದಿ ಕಾಲದಿಂದಲೂ ರೂಢಿಸಿಕೊಂಡು ಬಂದ ನಂಬಿಕೆಯ ಪ್ರಕಾರ ಅವರಿಗೆ ಆತ್ಮ, ಪರಮಾತ್ಮ ಮತ್ತು ದೇವರು ಹಾಗೂ ಸ್ವರ್ಗ, ನರಕಗಳಲ್ಲಿ ಪ್ರಶ್ನಾತೀತ ನಂಬಿಕೆ. ಪ್ರತಿ ವ್ಯಕ್ತಿಯ ಕಷ್ಟ, ನಷ್ಟ, ಉನ್ನತಿ, ಅವನತಿ, ಮೇಲು-ಕೀಳಿಗೆ ಪೂರ್ವಜನ್ಮದ ಕರ್ಮವೇ ಕಾರಣ. ಆದ್ದರಿಂದ ಈ ಕರ್ಮ ಸಿದ್ಧಾಂತದಿಂದ ಬಿಡುಗಡೆ ಪಡೆಯಬೇಕಾದರೆ ಮತ್ತೆ ಪುರೋಹಿತ ಅನಿವಾರ್ಯ'

'ಬ್ರಾಹ್ಮಣ ಎಂಬುದು ಒಂದು ಪದವಿ ಅಲ್ಲ. ಅದೊಂದು ಜನ್ಮಕ್ಕಂಟಿದ ಉಪಾದಿ, ಎಲ್ಲಾ ಅನಿವಾರ್ಯಗಳ ಮೊತ್ತವೇ ಬ್ರಾಹ್ಮಣ್ಯ'

'ಗುರುದೇವಾ, ಭಿಕ್ಷು ಎಂದರೆ ಯಾರು? ಅವನ ಸಾಧನೆ ಮತ್ತು ಘನತೆಗಳೇನು? ಅವನು ವರ್ಣಾಶ್ರಮ ಧರ್ಮವನ್ನು ಏಕೆ ತಿರಸ್ಕರಿಸುತ್ತಾನೆ? ಕರ್ಮ ಸಿದ್ಧಾಂತದಲ್ಲಿ ಅವನಿಗೇಕೆ ನಂಬಿಕೆ ಇಲ್ಲ? ಭಿಕ್ಷುವೆಂಬ ಪದ ಅದೊಂದು ಪದವಿಯೋ? ಅಥವಾ ಜನ್ಮಕ್ಕಂಟಿದ ಉಪಾದಿಯೋ?'

'ಗೆಳೆಯಾ, ನಾಮ ರೂಪಗಳನ್ನು ತನ್ನ ಎಣೆ ಇಲ್ಲದ ಸಾಧನೆಗಳಿಂದ ದಾಟಿದಾತನೇ ಭಿಕ್ಷು. ಆತನಿಗೆ ಜಾತಿ ಆಗಲಿ ಲಿಂಗಭೇದವಾಗಲಿ ಇಲ್ಲ ಆತ ಯಾವುದೇ ಅನಾದಿ ಕಾಲದ ರೂಢಿಗತ ಧರ್ಮ ಗ್ರಂಥಕ್ಕೆ ಶರಣು ಅಲ್ಲ, ಭಿಕ್ಷುವಿಗೆ ಸತ್ಯ, ಸರಳತೆ, ಸಮಾನತೆಯೇ ಧರ್ಮಗ್ರಂಥ. ಅದೇ ಅವನ ಸಾಧನೆ ಮತ್ತು ಘನತೆ. ಆತ ಆತ್ಮವನ್ನಾಗಲಿ, ಪರಮಾತ್ಮವನ್ನಾಗಲಿ, ದೇವರನ್ನಾಗಲಿ, ಪುರ್ನಜನ್ಮವನ್ನಾಗಲಿ, ಕರ್ಮ ಸಿದ್ಧಾಂತವನ್ನಾಗಲಿ, ಪೌರೋಹಿತ್ಯವನ್ನಾಗಲಿ ಅಡ್ಡಿ ಎಂದು ಭಾವಿಸುತ್ತಾನೆ. ಏಕೆಂದರೆ, ಮನಸ್ಸಿಗೆ ಮನಸ್ಸೇ ಒಡೆಯ. ಮನಸ್ಸಿಗೆ



ಮನಸ್ಸೇ ಆಶ್ರಯ'

'ಬ್ರಾಹ್ಮಣನಾಗುವುದು ಕೇವಲ ಜಾತಿಯಿಂದ. ಆದರೆ ಭಿಕ್ಷುವಾಗುವುದು ತನ್ನ ವೈಯಕ್ತಿಕ ವಿವೇಚನೆಯಿಂದ. ಬ್ರಾಹ್ಮಣನಿಗೆ ಜಾತಿಯ ಉಪಾದಿ ಇದೆ. ಆದರೆ ಭಿಕ್ಷುವು ಜಾತಿಯಿಂದ ಸಿಡಿದೆದ್ದ ಕ್ರಾಂತಿಕಾರಿ.'

'ಗುರುದೇವಾ, ಬ್ರಾಹ್ಮಣ್ಯ ನಾಶವಾಗುತ್ತದೆಯೇ? ಅಥವಾ ಎಲ್ಲವೆ? ಏಕೆ ಮತ್ತು ಹೇಗೆ?'

'ಗೆಳೆಯಾ, ಒಂದು ಸಾರಿ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನು ಯಾವಗಲೂ ಬ್ರಾಹ್ಮಣನೆ. ಏಕೆಂದರೆ, ಅದೊಂದು ವರ್ಗವಲ್ಲ, ನಿಂತ ನೀರು. ಯಾವ ಪಾಪ ಮತ್ತು ಅಪರಾಧವೂ ಅವನ ಬ್ರಾಹ್ಮಣ್ಯವನ್ನು ನಾಶ ಮಾಡಲಾರದು. ಏಕೆಂದರೆ, ಅದೊಂದು ವಿವೇಚನಾರಹಿತವೂ ಮತ್ತು ಸ್ವಯಂಕೃತ ಅಪರಾಧವೂ ಆಗಿದೆ.'

'ಗುರುದೇವಾ, ಭಿಕ್ಷುತನ ಶಾಶ್ವತವೇ? ಅಥವಾ ಅದು ನಾಶ ಹೊಂದುತ್ತದೆಯೇ? ಏಕೆ? ಮತ್ತು ಹೇಗೆ?'

'ಗೆಳೆಯಾ, ಒಂದು ಸಾರಿ ಭಿಕ್ಷು ಆದವನು ಯಾವಾಗಲೂ ಭಿಕ್ಷುವೇನಲ್ಲ. ಒಬ್ಬ ತನ್ನ ಉನ್ನತ ಸಾಧನೆಯಿಂದ ಮಾತ್ರ ಭಿಕ್ಷುವಾಗುತ್ತಾನೆ. ಆದುದರಿಂದ ಆತ ಮುಂದೆ ಭಿಕ್ಷುವಿನ ಯೋಗ್ಯತೆಗೆ ಸಲ್ಲದ ನಡತೆ ಬೆಳೆಸಿಕೊಂಡರೆ ಅವನ ಭಿಕ್ಷುತನ ನಾಶವಾಗುತ್ತದೆ.'

'ಗುರುದೇವಾ, ಒಬ್ಬ ಬ್ರಾಹ್ಮಣನಿಂದ ನಾವು ನಿರೀಕ್ಷಿಸುವುದು ಏನನ್ನು?'

'ಗೆಳೆಯಾ, ಬ್ರಾಹ್ಮಣನಾಗಲೂ ಯಾವ ಮಾನಸಿಕ ಅಥವಾ ನೈತಿಕ ಪ್ರಶಿಕ್ಷಣವೂ ಬೇಕಿಲ್ಲ. ಆದರೆ ಅವನು ಧರ್ಮಗ್ರಂಥಗಳನ್ನು ಓದಿರಬೇಕೆಂಬುದಷ್ಟನ್ನೇ ಅವನಿಂದ ನಿರೀಕ್ಷಿಸಲಾಗುತ್ತದೆ ಅಷ್ಟೆ'

'ಗುರುದೇವಾ, ಒಬ್ಬ ಭಿಕ್ಷುವಿನ ಜೀವಾಳವೇನು?'

'ಗೆಳೆಯಾ, ಮಾನಸಿಕ ಮತ್ತು ನೈತಿಕ ಪ್ರಶಿಕ್ಷಣವೇ ಭಿಕ್ಷುವಿನ ಜೀವಾಳ'

'ಗುರುದೇವಾ, ಸ್ವತ್ತಿನ ಮೇಲಿನ ಸ್ವಾಮ್ಯ ಬ್ರಾಹ್ಮಣನಿಗಿದೆ, ಆದರೆ ಭಿಕ್ಷುವಿಗೆ ಏಕೆ ಇಲ್ಲ.?'

'ಗೆಳೆಯಾ, ಇತಿಹಾಸದಿಂದ ಪಾಠ ಕಲಿಯದಾತನೆ ಮೂರ್ಖ, ಇತಿಹಾಸವೇ ಜ್ಞಾನದ ಸಾಗರ, ಅನಾದಿ ಕಾಲದಿಂದಲೂ ಬ್ರಾಹ್ಮಣನ ಹೋರಾಟದ ಮೂಲ ಮಂತ್ರವೆಂದರೆ ಸ್ವತ್ತಿನ ಮೇಲೆ ಸ್ವಾಮ್ಯವನ್ನು ಸಾಧಿಸುವುದು. ಅದಕ್ಕಾಗಿ ಆತ ಮಾಡದ ಅನೈತಿಕತೆ ಇಲ್ಲ. ಗಾಳಿಗೆ ತೂರದ ತತ್ತ್ವ ಸಿದ್ಧಾಂತಗಳಿಲ್ಲ. ಆತ ಸತ್ಯಕ್ಕೆ ಬೆನ್ನು ತೋರಿದ್ದು, ಸಮಾನತೆಯನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದು ಇಟ್ಟಿದ್ದು. ತನ್ನ ನಿರಂತರ ಸುಖಾಪೇಕ್ಷೆಗಾಗಿ ಆತನ ಪರಮ ಸಾಧನೆಯೇ ಸುಖ, ಆತನ ಪ್ರಕಾರ ಜಗತ್ತಿನ ಸಕಲ ಸುಖಕ್ಕೆಲ್ಲ ಪ್ರಥಮ ಒಡೆಯ ಬ್ರಾಹ್ಮಣನೇ ಆದ್ದರಿಂದ ಬ್ರಾಹ್ಮಣನಿಗೆ ಅಪರಿಮಿತ ಆಸ್ತಿ ಮತ್ತು ಸುಖ ಪಡೆಯಲು ಸ್ವಾತಂತ್ರ್ಯವಿದೆ'

'ಆದರೆ ಭಿಕ್ಷುವಿಗೆ ಅದು ಸಾಧ್ಯವಿಲ್ಲ. ಏಕೆಂದರೆ, ಒಬ್ಬ ಭಿಕ್ಷುವಿನ ಮೂಲ ಪ್ರತಿಜ್ಞೆಯೇ ಸ್ವತ್ತಿನ ಮೇಲಿನ ಸ್ವಾಮ್ಯವನ್ನು ತೊರೆಯುವುದು. ಸತ್ಯ ಸರಳತೆ, ನಿರ್ಮೋಹ, ಸರ್ವಸಮಾನತೆ ಮತ್ತು ಹಂಚಿ ತಿನ್ನುವುದು ಹಾಗೂ ಜ್ಞಾನ ಮತ್ತು ವಿವೇಕದ ತಳಹದಿಯಲ್ಲಿ ಸಕಲ ಸೂಕೋಲೆಯಿಂದ ಬಿಡುಗಡೆ ಭಿಕ್ಷುವಿನ ಅಂತಿಮ ಆಶಯ'

'ಗುರುದೇವಾ, ಬ್ರಾಹ್ಮಣ ಏಕೆ ಬದಲಾವಣೆಗೆ ಹೆದರುತ್ತಾನೆ?'



'ಗುರುದೇವಾ, ಒಬ್ಬ ಭಿಕ್ಷುವಿನ ಜೀವಾಳವೇನು?' 'ಗೆಳೆಯಾ, ಮಾನಸಿಕ ಮತ್ತು ನೈತಿಕ ಪ್ರಶಿಕ್ಷಣವೇ ಭಿಕ್ಷುವಿನ ಜೀವಾಳ' 'ಗುರುದೇವಾ, ಸ್ವತ್ತಿನ ಮೇಲಿನ ಸ್ವಾಮ್ಯ ಬ್ರಾಹ್ಮಣನಿಗಿದೆ, ಆದರೆ ಭಿಕ್ಷುವಿಗೆ ಏಕೆ ಇಲ್ಲ.?' 'ಗೆಳೆಯಾ, ಇತಿಹಾಸದಿಂದ ಪಾಠ ಕಲಿಯದಾತನೆ ಮೂರ್ಖ, ಇತಿಹಾಸವೇ ಜ್ಞಾನದ ಸಾಗರ, ಅನಾದಿ ಕಾಲದಿಂದಲೂ ಬ್ರಾಹ್ಮಣನ ಹೋರಾಟದ ಮೂಲ ಮಂತ್ರವೆಂದರೆ ಸ್ವತ್ತಿನ ಮೇಲೆ ಸ್ವಾಮ್ಯವನ್ನು ಸಾಧಿಸುವುದು. ಅದಕ್ಕಾಗಿ ಆತ ಮಾಡದ ಅನೈತಿಕತೆ ಇಲ್ಲ. ಗಾಳಿಗೆ ತೂರದ ತತ್ತ್ವಸಿದ್ಧಾಂತಗಳಿಲ್ಲ. ಆತ ಸತ್ಯಕ್ಕೆ ಬೆನ್ನುತೋರಿದ್ದು, ಸಮಾನತೆಯನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದು ಇಟ್ಟಿದ್ದು. ತನ್ನ ನಿರಂತರ ಸುಖಾಪೇಕ್ಷೆಗಾಗಿ ಆತನ ಪರಮ ಸಾಧನೆಯೇ ಸುಖ, ಆತನ ಪ್ರಕಾರ ಜಗತ್ತಿನ ಸಕಲ ಸುಖಕ್ಕೆಲ್ಲ ಪ್ರಥಮ ಒಡೆಯ ಬ್ರಾಹ್ಮಣನೇ ಆದ್ದರಿಂದ ಬ್ರಾಹ್ಮಣನಿಗೆ ಅಪರಿಮಿತ ಆಸ್ತಿ ಮತ್ತು ಸುಖ ಪಡೆಯಲು ಸ್ವಾತಂತ್ರ್ಯವಿದೆ'

'ಗೆಳೆಯಾ, ಇದು ಸಣ್ಣ ವಿಷಯವೇನಲ್ಲ. ಯೋಚನೆಯ ವಿಷಯದಲ್ಲಿ ಆಗಲಿ, ಕಾರ್ಯದ ವಿಷಯದಲ್ಲಾಗಲಿ, ಆಸ್ತಿಯು ಮನುಷ್ಯನ ಮಾನಸಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಬಹಳವಾಗಿ ಮಿತಿಗೊಳಿಸುತ್ತದೆ. ಅವರೆಡರ ಮಧ್ಯೆ ಘರ್ಷಣೆ ನಿರಂತರ. ಬ್ರಾಹ್ಮಣ ಎಂದಿಗೂ ಘರ್ಷಣೆ ಮತ್ತು ವಿಷಯದ ಮೇಲಿನ ಸಂಘರ್ಷವನ್ನು ಬಯಸುವುದಿಲ್ಲ. ಏಕೆಂದರೆ, ಏಕೆದರೆ ಅವನು ಎಂದಿಗೂ ಬಸಲಾವಣೆಯನ್ನು ಬಯಸುವುದಿಲ್ಲ. ಅವನ ಪಾಲಿಗೆ ಬದಲಾವಣೆ, ಬಿಡುಗಡೆ ಮತ್ತು ಸ್ವಾತಂತ್ರ್ಯವೆಂದರೆ: ಅಧಿಕಾರದ ನಷ್ಟ! ಆಸ್ತಿಯ ನಷ್ಟ! ಸುಖದ ನಷ್ಟ! ಮತ್ತು ಜನ್ಮದಿಂದಲೇ ಅಂಟಿಕೊಂಡು ಬಂದ ಪದವಿಯ ನಷ್ಟ!!'

'ಗುರುದೇವಾ, ಆದರೆ ಭಿಕ್ಷುವು ಸ್ವತ್ತಿನ ಮೇಲಿನ ಸ್ವಾಮ್ಯವನ್ನು ಕಳೆದುಕೊಳ್ಳುವುದರಿಂದ ಏನನ್ನು ಪಡೆಯುತ್ತಾನೆ?' ಅವನಿಗೇಕೆ ಈ ನಿರ್ಬಂಧನ?'

'ಗೆಳೆಯಾ, ಆಸ್ತಿ ಇಲ್ಲದ ಭಿಕ್ಷುವು ಮಾನಸಿಕವಾಗಿಯೂ, ನೈತಿಕವಾಗಿಯೂ, ಸ್ವತಂತ್ರ. ಏಕೆಂದರೆ, ಅವನು ಪ್ರಾಮಾಣಿಕತೆಗೆ ಮತ್ತು ವಿಶ್ವಾಸರ್ಹತೆಗೆ ಅಡ್ಡಿಯಾಗುವಂತ ಯಾವ ವೈಯಕ್ತಿಕ ಆಸಕ್ತಿಯೂ ಅವನಲ್ಲಿರುವುದಿಲ್ಲ. ಹಾಗಾಗಿ ಈ ನಿರ್ಮೋಹಿಯಾ ಪ್ರತಿ ನುಡಿಯ ಪ್ರತಿ ಹಂತ ಮತ್ತು ಹೆಜ್ಜೆಯೂ ಹೊಸ ಬದುಕಿಗೆ, ಹೊಸ ಬದಲಾವಣೆಗೆ ಮಾದರಿಯಾಗುತ್ತದೆ. ಆ ಕ್ರಾಂತಿಕಾರಿ ಹೆಜ್ಜೆಯೇ ಅವನ ಸಾಧನೆ, ಆ ಸಾಧನೆಯ ಹಿಂದೆ ಬಹು ಜನರ ಹಿತ ಅಡಗಿದೆ. ಅದನ್ನೆ ಭಿಕ್ಷುವಿಗೆ ವಿಧಿಸುವ ನಿರ್ಬಂಧನ. ಇದೇ ಕಲ್ಯಾಣಕಾರಿ.'

'ಗುರುದೇವಾ, ಬ್ರಾಹ್ಮಣರು ಯಾವಾಗ ಒಂದಾಗುತ್ತಾರೆ ಮತ್ತು ಏಕೆ?'

'ಗೆಳೆಯಾ, ಪ್ರತಿ ಬ್ರಾಹ್ಮಣನೂ ಒಬ್ಬೊಬ್ಬ ವಿಶಿಷ್ಟ ವ್ಯಕ್ತಿ, ಯಾವುದೇ ಧಾರ್ಮಿಕ ಸಂಸ್ಥೆಗೆ ಅವನು ಅಧೀನವಾಗಿಲ್ಲ. ಬ್ರಾಹ್ಮಣನು ಹೇಳಿದ್ದೇ ನ್ಯಾಯ. ವಿಧಿಸಿದ್ದೇ ಕಾನೂನು. ಹೇಳಿದ್ದೇ ನೈತಿಕತೆ. ಆದರೆ ಅಂತಹ ಬ್ರಾಹ್ಮಣನ ವೈಯಕ್ತಿಕ ಹಿತಾಸಕ್ತಿಗೆ ಎಲ್ಲಿ ಮತ್ತು ಯಾವಾಗ ಕುಂದು ಉಂಟಾಗುತ್ತದೋ ಆಗ ಅವರು ಒಂದಾಗುತ್ತಾರೆ.'

'ಗುರುದೇವಾ, ಭಿಕ್ಷುವು ಯಾವ ಸಿದ್ಧಾಂತಕ್ಕೆ ಒಳಗಾಗಿರುತ್ತಾರೆ? ಏಕೆ? ಅದರಿಂದ ಸಮಾಜಕ್ಕಾಗುವ ಒಳಿತೇನು?'

'ಗೆಳೆಯಾ, ಪ್ರತಿ ಭಿಕ್ಷುವು ಸತ್ಯ, ಸರಳತೆ, ಬದಲಾವಣೆ ಮತ್ತು ಮನಃ ಸಾಕ್ಷಿ ಎಂಬ ಸಿದ್ಧಾಂತಕ್ಕೆ ಒಳಗಾಗಿರುತ್ತಾನರೆ. ಏಕೆಂದರೆ, ಅದರಲ್ಲಿಯೇ ಬಹು ಜನರ ಬಿಡುಗಡೆ ಮತ್ತು ಸ್ವಾತಂತ್ರ್ಯ ಅಡಗಿದೆ. ಇದರಿಂದ ಸಮಾಜಕ್ಕೆ ಒಳಿತಾಗುವುದಿಲ್ಲವೇ...?!'

'ಹೌದು... ಗುರುದೇವಾ, ನಿಜಕ್ಕೂ ಸರಿಸಾಟಿ ಇಲ್ಲದ ಚಿಂತಕ ಮತ್ತು ಅಸಾಮಾನ್ಯ ಸಮಾಜ ಸುಧಾರಕ... ನೀನು. ಅನರ್ಥವನ್ನೆ ಅರ್ಥವೆಂದು ಆಚರಣೆಗೆ ತಂದ. ತುಕ್ಕು ಹಿಡಿದ ಸಿದ್ಧಾಂತವನ್ನೆ ಮಹಾನ್ ತತ್ವವೆಂದು ಪ್ರತಿಪಾದಿಸಿದ ಪಟ್ಟಭದ್ರರ ಹಿತಾಸಕ್ತಿಗೆ ಪೆಟ್ಟು ಕೊಟ್ಟ ಕ್ರಾಂತಿಕಾರಿ ನೀನು. ಸ್ವಾರ್ಥಕ್ಕೂ ನಿಸ್ವಾರ್ಥಕ್ಕೂ ಇರುವ ಅಂತರ ಮತ್ತು ಘನತೆಯನ್ನು ಎತ್ತಿ ತೋರಿದ ಧೀಮಂತ ಸಾಧಕ ನೀನು!!. ನಿನ್ನ ವಿಚಾರಸರಣಿ ನನ್ನ ಕಣ್ ತೆರೆಸಿತು ಗುರುವೆ... ನಿನಗೆ ವಂದನೆ!!' ಎಂದ ಆ ಭಿಕ್ಷುವು ಕೃತಜ್ಞತೆಯಿಂದ ಬುದ್ಧನಿಗೆ ತಲೆಬಾಗಿ ನಮಿಸಿದ. □

'SAMVADA' Kannada Monthly, Feb 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ವಜ್ರ ಮಹೋತ್ಸವ

ಸ್ವಾತಂತ್ರ್ಯದೊಂದಿಗೆ ಸಮೃದ್ಧಿ

೬೦ನೆಯ ವರ್ಷದ ಸ್ವಾತಂತ್ರೋತ್ಸವದ ವೈಶಿಷ್ಟ್ಯಗಳು

ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ೧೫೦ ವರ್ಷಗಳು (೧೮೫೭-೨೦೦೭)

ಸ್ವತಂತ್ರ ಭಾರತವಾಗಿ ೬೦ ವರ್ಷಗಳು

ಶಹೀದ್ ಭಗತ್ ಸಿಂಗ್ ಜನ್ಮ ಶತಮಾನೋತ್ಸವ ಹಾಗೂ ೭೫ನೇ ಪುಣ್ಯ ಸ್ಮರಣೆ ಭಾರತ ಸ್ವಾತಂತ್ರ್ಯ ಸಂಗ್ರಾಮ ಸದಾ ಸ್ಫೂರ್ತಿದಾಯಕ. ಈ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆಯು ಅತ್ಯಮೂಲ್ಯ ಸ್ವಾತಂತ್ರ್ಯ ಯೋಧರ ತ್ಯಾಗ, ಬಲದಾನಗಳ ಸ್ಫೂರ್ತಿಯೊಂದಿಗೆ ಕರ್ನಾಟಕದ ಸಮಗ್ರ ಪ್ರಗತಿಯೇ ಪ್ರಥಮ ಧ್ಯೇಯ.

ಸ್ವಾತಂತ್ರ ಭಾರತದಲ್ಲಿ ಕರ್ನಾಟಕದ ಐತಿಹಾಸಿಕ ಹೆಜ್ಜೆಗಳು

ಗ್ರಾಮ ವಾಸ್ತವ್ಯ: ಕುಗ್ರಾಮಗಳಲ್ಲಿ ವಾಸ್ತವ್ಯ ಹೂಡಿ ಬಡಜನರ ತೊಂದರೆಗಳನ್ನು ಖುದ್ದಾಗಿ ಆಲಿಸಿ ಸಂಕಷ್ಟ ಪರಿಹರಿಸುವ ವಿನೂತನ ಕ್ರಮ.

ಭಾಗ್ಯಲಕ್ಷ್ಮಿ ಯೋಜನೆ: ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ ಇಬ್ಬರು ಹೆಣ್ಣು ಮಕ್ಕಳಿಗೆ ತಲಾ ೧೦.೦೦೦ ರೂ. ನಿಶ್ಚಿತ ಠೇವಣಿ.

ಕೃಷಿಕರಿಗೆ ಆರ್ಥಿಕ ಚೈತನ್ಯ: ಶೇ. ೪ ರ ಬಡ್ಡಿದರದಲ್ಲಿ ಕೃಷಿ ಸಾಲ-೧,೫೦೦ ಕೋಟಿ ರೂ. ಗಳಿಗೂ ಹೆಚ್ಚು ಕೃಷಿ ಸಾಲ ವಿತರಣೆ. ಮೀನುಗಾರರಿಗೆ ಹಾಗೂ ನೇಕಾರರಿಗೂ ಈ ಸೌಲಭ್ಯ ವಿಸ್ತರಣೆ.

ಶಿಕ್ಷಣ ವಲಯಕ್ಕೆ ಆದ್ಯತೆ: ೧೩೬೭೮ ಪ್ರಾಥಮಿಕ ಶಾಲಾ ಶಿಕ್ಷಕರು, ೮೦೮೮ ಪ್ರೌಢಶಾಲಾ ಶಿಕ್ಷಕರ ನೇಮಕ ಮತ್ತು ೭೫೯ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳ ನೇಮಕ, ೨೪೬೩ ಗ್ರಾಮೀಣ ಗ್ರಂಥಾಲಯಗಳ ಸ್ಥಾಪನೆ, ೧೬೭ ಸರ್ಕಾರಿ ಪ್ರಥಮ ದರ್ಜೆ ಕಾಲೇಜು . ೭ ಎಂಜಿನಿಯರಿಂಗ್ ಕಾಲೇಜುಗಳು ಮತ್ತು ೨೧ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ ಸ್ಥಾಪನೆಗೆ ಕ್ರಮ.

ಜನತಾದರ್ಶನ: ಜನ ಸಾಮಾನ್ಯರಿಗೆ ಒದಗಿ ಬಂದ ಸುವರ್ಣಾವಕಾಶ-ಆಡಳಿತ ಯಂತ್ರಕ್ಕೆ ಹೊಸ ಆವೇಗ-ಸ್ಥಳದಲ್ಲೇ ಪರಿಹಾರ ಲಭಿಸಿ ಸಮಾಧಾನ.

ಇ-ಆಡಳಿತ: ಗ್ರಾಮೀಣ ಗಣಕೀಕರಣ ಯೋಜನೆ-ನೆಮ್ಮದಿ ಕಾರ್ಯಕ್ರಮಕ್ಕೆ ಚಾಲನೆ. ೮೦೦ ಗ್ರಾಮೀಣ ಟೆಲಿ ಕೇಂದ್ರಗಳ ಸ್ಥಾಪನೆ.

ಲಾಟರಿ ಮತ್ತು ಸಾರಾಯಿ ನಿಷೇಧ: ಸರ್ಕಾರದ ಬೊಕ್ಕಸಕ್ಕೆ ತಗಲುವ ನಷ್ಟ ಲೆಕ್ಕಿಸದೆ ಸಾರಾಯಿ ಶಾಪದಿಂದ ವಿಮೋಚನೆ. ಲಾಟರಿ ವ್ಯವಹಾರ ನಿಷೇಧ-ದಿಟ್ಟ ಹೆಜ್ಜೆಯ ಸ್ಪಷ್ಟ ಸಂದೇಶ.

ಕರ್ನಾಟಕ ವಾರ್ತೆ
Karnataka Information